1–00 ಪಿ.ಎಂ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾತನಾಡುತ್ತೇನೆ, ನಾನು ಇನ್ನೂ ಪ್ರಾರಂಭವೇ ಮಾಡಿಲ್ಲ, ನಮಗೆ ಸ್ವಲ್ಪ, ಒಂದು ಅರ್ಧ ಗಂಟೆ ಆದಮೇಲೆ ಹೇಳಿ, ಮೊದಲೇ ಹೇಳಿದರೆ ಹೇಗೆ?

ಅಧ್ಯಕ್ಷರು :– ನಿಮ್ಮೊಬ್ಬರಿಗಲ್ಲ, ಎಲ್ಲರೂ ಅಷ್ಟೆ, ಯಾರೇ ಆಗಲಿ ಅರ್ಧ ಗಂಟೆ ಮೇಲೆ ಮಾತನಾಡಬಾರದು.

ಶ್ರೀ ದಿನೇಶ್ ಗುಂಡೂರಾವ್ :– ಹಿರಿಯರದ್ದೆಲ್ಲಾ ಆದಮೇಲೆ ನಮಗೂ ಮಾತನಾಡಲು ಅವಕಾಶ ಕೊಡಬೇಕು. ಅವರಿಗೆ ಕಾಲಮಿತಿ ಹಾಕಬೇಕು. ಎಲ್ಲರಿಗೂ ಅವಕಾಶ ಕೊಡಬೇಕು.

ಅಧ್ಯಕ್ಷರು :– ಮುಂದಿನವರ ಗಲಾಟೆಯಲ್ಲಿ ಹಿಂದಿನವರೆಲ್ಲಾ ತಬ್ಬಲಿಗಳಾಗಿ ಬಿಟ್ಟಿದ್ದೀರಿ.

9. ವಿತ್ತೀಯ ಕಾರ್ಯಕಲಾಪ :

2007–2008ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಬೇಡಿಕೆಗಳ ಬಗ್ಗೆ ಇಲ್ಲಿ ಸಮಗ್ರವಾಗಿ ಚರ್ಚೆಗೆ ತಾವು ಎಲ್ಲಾ ಇಲಾಖೆಗಳ ಬೇಡಿಕೆಗಳನ್ನು ಒಟ್ಟಿಗೆ ಹಾಕಿದ್ದೀರಿ. ಸಾಮಾನ್ಯವಾಗಿ ಹಿಂದೆ ಒಂದೊಂದೂ ಇಲಾಖೆಯ ಬೇಡಿಕೆ ಚರ್ಚೆಯಾದಮೇಲೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಟ್ಟು ಮತದಾನವನ್ನು ಪಡೆಯುತ್ತಿದ್ದದ್ದು ಮೊದಲಿನಿಂದಲೂ ಬಂದ ಬಹಳ ವರ್ಷದ ಪದ್ಧತಿ. ಸಧ್ಯ ಸಂತೋಷ ಎಂದರೆ ಏನೂ ಚರ್ಚೆಯಾಗದೇ ಹೋದ ಸಾರಿ ಮುಂದೆ ಹೋದಂತೆ ಈ ಸಾರಿ ಆಗಿಲ್ಲ. ಏನೂ ಯಾವ ಬೇಡಿಕೆಯೂ ಚರ್ಚೆಯಾಗದೇ ಹೋದ ಸಲ ಹೋದಂತೆ ಈ ಸಲ ಹೋಗಲಿಲ್ಲ. ಅಷ್ಟಕ್ಕಾದರೂ ಸಂತೋಷ ಪಡಬೇಕಾಗಿದೆ. ತಾವು ಎಲ್ಲಾ ಇಲಾಖೆಯನ್ನು ಒಟ್ಟಿಗೆ ಹಾಕಿದ್ದೀರಿ. ಆದರೂ ಸಂತೋಷ. ಈಗ ಮುಖ್ಯವಾಗಿ ಕಂದಾಯ ಸಚಿವರು ತಮ್ಮ ಇಲಾಖೆಯು ವಿಚಾರದಲ್ಲಿ ಮಾತನಾಡುವಾಗ ತಹಶೀಲ್ದಾರರು, ಶಿರಸ್ತೇದಾರರು, ಕಂದಾಯ ನಿರೀಕ್ಷಕರು, ಗ್ರಾಮಲೆಕ್ಕಿಗರು, ಗ್ರಾಮಸಹಾಯಕರು, ತಾಲ್ಲೂಕು ಕಛೇರಿಯೇನಿದೆ, ಅದು ಬಹಳ ಸತ್ಯವಾಗಿರಬೇಕು. ತಾಲ್ಲೂಕು ಕಛೇರಿ ಏನಿದೆ, ಅದು ಬಹಳ ಪ್ರಾಮಾಣಿಕವಾಗಿ, ಸತ್ಯವಾಗಿ ತೀರ ಜನರ ಹತ್ತಿರ ಇರತಕ್ಕದ್ದು. ಅದು ಜನರ ಜೊತೆಯಲ್ಲಿ ಸೇರಿ ಬಹಳ ಹತ್ತಿರವಾಗಿರತಕ್ಕ ಒಂದು ಕಾರ್ಯಾಲಯ, ಸರ್ಕಾರಕ್ಕೆ ಏನಾದರೂ ಸರ್ಕಾರದ ಕಾರ್ಯಕ್ರಮಗಳು ಜಾರಿ ಆಗಲಿಲ್ಲವೆಂದರೆ ಅಲ್ಲಿಂದಲೇ ಶುರು ಆಗಬೇಕಾಗಿರತಕ್ಕದ್ದು. ಇದು ಹೆಚ್ಚಿನ ರೀತಿಯಲ್ಲಿ ಸರ್ಕಾರ ತಾಲ್ಲೂಕು ಕಾರ್ಯಾಲಯಗಳನ್ನು

ಚುರುಕುಗೊಳಿಸಬೇಕು ಮತ್ತು ಜನರ ಹತ್ತಿರಕ್ಕೆ ತರುವ ವ್ಯವಸ್ಥೆ ಮಾಡಬೇಕು. ನಾವು ಶಾಸನ ಸಭೆಗೆ ಚುನಾಯಿತರಾಗಿದ್ದೇವೆ. ನಾವು ಈ ಸಭೆಯಲ್ಲಿ ಕಾಲಕಾಲಕ್ಕೆ ತೀರ್ಮಾನ ಮಾಡಿಕೊಂಡಿರುವ ರೀತಿಯಲ್ಲಿ ಸಭೆಯನ್ನು ಕರೆಯಬೇಕಾಗುತ್ತದೆ.

(ಈ ಹಂತದಲ್ಲಿ ಶ್ರೀಮತಿ ಭಾಗೀರಥಿ ಮರುಳಸಿದ್ದನಗೌಡರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ವರ್ಷದಲ್ಲಿ ಕನಿಷ್ಟ 60 ದಿವಸಗಳ ಕಾಲ ಶಾಸನ ಸಭೆ ನಡೆಯಬೇಕು. 60 ದಿನಕ್ಕಿಂತ ಹೆಚ್ಚಾಗಿ ಬೇಕಾದರೂ ನಡೆಯಬಹುದು. ನಾವು ಯಾವ್ಯಾವ ತಿಂಗಳಿನಲ್ಲಿ ಸಭೆ ನಡೆಸಬೇಕು ಎಂದು ದಿನಾಂಕವನ್ನು ನಿಗದಿ ಮಾಡಿದ್ದೇವೆ. ಇತ್ತೀಚಿನ ದಿನಗಳಲ್ಲಿ ಶಾಸನ ಸಭೆಗೆ ನಾವು ಮಹತ್ವ ಕೊಡುತ್ತಿಲ್ಲ. ಈ ಸದನದಲ್ಲಿ ಅನೇಕ ಸಂದರ್ಭದಲ್ಲಿ ಶಾಸಕರ ಕೊರತೆಯೂ ಕಾಣುತ್ತದೆ. ಈ ರೀತಿ ಆದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಶಾಸನಸಭೆ ಮತ್ತು ಲೋಕಸಭೆ ಬಹಳ ಮಹತ್ತರವಾದದ್ದು. ಶಕ್ತಿಯುತವಾದದ್ದು. ಇದನ್ನು ನಾವು ಯಾರೂ ನಿಶ್ಯಕ್ತಿಯಿಂದ, ಶಕ್ತಿಯನ್ನು ಕಳೆಯುವಂಥ ಪರಿಸ್ಥಿತಿಗೆ ಹೋಗಬಾರದು. ಇದು ಒಂದೇ ನಮಗೆ ಇರತಕ್ಕದ್ದು. ಇದನ್ನು ವರ್ಷದಲ್ಲಿ ನಾಲ್ಕು ಸಲ ಕರೆಯಬೇಕೆಂದು ಇದ್ದೇವೆ. ಆದರೆ ಸರ್ಕಾರ ಮಸೂದೆಯನ್ನೂ ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಈ ಸದನವನ್ನೂ ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಸದನದ ನಾಯಕರಾದ ಮುಖ್ಯಮಂತ್ರಿಯವರು ಸದನದಲ್ಲಿ ಇರಬೇಕು. ಆ ಪೀಠದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು ಕುಳಿತುಕೊಳ್ಳುತ್ತಿದ್ದರು. ಅವರು ಎಂದೂ ಸದನಕ್ಕೆ ತಪ್ಪಿಸಿಕೊಳ್ಳಲಿಲ್ಲ. ಈ ರೀತಿ ಅನೇಕರು ಇಲ್ಲಿ ಇತಿಹಾಸವನ್ನು ನಿರ್ಮಾಣ ಮಾಡಿದ್ದಾರೆ. ಇತ್ತೀಚಿನ ಮಾನ್ಯ ವೀರೇಂದ್ರ ಪಾಟೀಲರ ಕೊನೆಯ ದಿನಗಳಲ್ಲಿ ಅವರಿಗೆ ಪಾರ್ಶ್ವವಾಯು ಆಗಿದ್ದಾಗ ಸದನಕ್ಕೆ ಗೌರವ ಕೊಡಬೇಕೆಂದು ಸದನದಲ್ಲಿ ಬಂದು ಕುಳಿತುಕೊಳ್ಳುತ್ತಿದ್ದರು. ಇವತ್ತು ನಮಗೆ ಯಾವ ಸದನಕ್ಕೆ ಎಷ್ಟು ಶಕ್ತಿಯನ್ನು ಕೊಡಬೇಕು ಅದು ಇಲ್ಲಿ ಬರುತ್ತಿಲ್ಲ. ಇದು ನಿಜಕ್ಕೂ ಮನಸ್ಸಿಗೆ ನೋವು ಆಗತಕ್ಕದ್ದು. ಇದೇ ಮುಂದುವರೆದರೆ ಪ್ರಜಾತಂತ್ರಕ್ಕೆ ಅಪಾಯವಾಗುತ್ತದೆ. ಬಹಳ ಹೆಚ್ಚಿನ ಬೆಲೆಯನ್ನು ನಾವು ಕೊಡಬೇಕಾಗುತ್ತದೆ ಎಂಬ ಮಾತನ್ನು ತಮಗೆ ಗಂಭೀರವಾಗಿ ತಿಳಿಸುತ್ತಿದ್ದೇನೆ.

ಅಂತ್ಯ ಸಂಸ್ಕಾರ ನಿಧಿ ಯೋಜನೆ, ಇದು ಸಾಮನ್ಯ ವಿಚಾರ ನನಗೆ ಅನ್ನಿಸುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಬದುಕಿದಾಗ ನಾವು ಅವರಿಗೇನು ಕೊಡಬೇಕಾಗಿಲ್ಲ. ಬದುಕಿದಾಗ

ನಾವು ಕೇಳಿದ್ದೇವೆ, ಹೋರಾಟ ಮಾಡುತ್ತೇವೆ, ಹೇಳುತ್ತೇವೆ, ಏನಾದರೂ ಸರ್ಕಾರದಲ್ಲಿ ಬದುಕಿರುವ ಜನರ ಭವಿಷ್ಯಕ್ಕಾಗಿ ಚಿಂತನೆ ಇಲ್ಲ. ಹೋಗಲಿ, ಸತ್ತವರ ಬಗ್ಗೆಯಾದರೂ ಚಿಂತನೆ ಬೇಕಲ್ಲಾ? ಎಷ್ಟು ಗ್ರಾಮಗಳಿಗೆ ಸ್ಮಶಾನ ಇದೆ? ಸ್ಮಶಾನ ಇಲ್ಲದೇ ಇರತಕ್ಕ ನೂರಾರು ಗ್ರಾಮಗಳು, ಅಲ್ಲಿ ಹೆಣವನ್ನು ಹೂಳಬೇಕಾದರೆ ಜಾತಿ, ಜಾತಿ ವ್ಯಾಜ್ಯ, ಅನೇಕ ರೀತಿಯ ಕೊಲೆಗಳು, ಸರ್ಕಾರ ಇಲ್ಲಿ ಏನು ಮಾಡಿದ್ದೀರಿ ? ಅಂತ್ಯ ಸಂಸ್ಕಾರ ನಿಧಿಯನ್ನು ಕಾರ್ಯರೂಪಕ್ಕೆ ತರಲು ಪರಿಣಾಮಕಾರಿಯಾಗಿ, ಪ್ರಾಮಾಣಿಕವಾಗಿ ಮಾಡಿ, ಪ್ರತಿ ಗ್ರಾಮ, ಹಳ್ಳಿಯಲ್ಲಿ ಅದಕ್ಕಾಗಿ ಸಂಪೂರ್ಣವಾಗಿ ಸ್ಮಶಾನಗಳನ್ನು ಮೀಸಲಿಡತಕ್ಕ ವ್ಯವಸ್ಥೆಯನ್ನು ಸರ್ಕಾರ ಪರಿಣಾಮಕಾರಿಯಾಗಿ ಮಾಡಬೇಕು. ಯಾವುದೇ ಕಾರಣಕ್ಕೂ ತಪ್ಪಿಸಿಕೊಳ್ಳುವಂತೆ ಇಲ್ಲ. ಆ ದೃಷ್ಟಿಯಿಂದ ಸ್ಮಶಾನಗಳೂ ಆಗಬೇಕಾದ್ದು ಕರ್ತವ್ಯ. ಶವ ಸಂಸ್ಕಾರಕ್ಕೆ ನೀವು ಕೊಡತಕ್ಕ ಹಣ, ಇದು ಒಳ್ಳೆಯ ಯೋಜನೆ. ಶವ ಸಂಸ್ಕಾರಕ್ಕೆ ಒಂದು ಸಾವಿರ ರೂಪಾಯಿ ಏನು ಕೊಡುತ್ತಿದ್ದೀರಿ, ಈ ಶವ ಸಂಸ್ಕಾರದ ವ್ಯವಸ್ಥೆ ಪರಿಣಾಮಕಾರಿಯಾಗಿ ಅವರಿಗೆ ಹಣ ತಲುಪಬೇಕು, ತಕ್ಷಣ ದೊರಕಬೇಕು. ಸ್ಮಶಾನ ಮತ್ತು ಶವ ಸಂಸ್ಕಾರ ಇದರ ಬಗ್ಗೆ ಸರ್ಕಾರ ಕಠಿಣವಾದ ಕ್ರಮ ಕೈಗೊಳ್ಳಬೇಕು. ಇದರ ಜೊತೆಗೆ ವೃದ್ಧಾಪ್ಯ ವೇತನ ಮತ್ತು ಅಂಗವಿಕಲರ ವೇತನವನ್ನು ನೀವು ಜಾಸ್ತಿ ಮಾಡಿದ್ದೀರಿ. ಸಂತೊಷ, ಆದರೆ, ಅದರಲ್ಲಿ ನೀವು ಒಂದು ನೀತಿಯನ್ನು ಹಾಕಿದ್ದೀರಿ. ಮಕ್ಕಳು ಇರಬಾರದು, ಇನ್ನೊಬ್ಬರು ಇರಬಾರದು, ಆಸರೆ ಇರಬಾರದು, ಜಮೀನು ಇರಬಾರದು ಎಂದು ಹಾಕಿದ್ದೀರಿ. ಆದರೆ ಇಂದಿನ ದಿನಗಳಲ್ಲಿ ವಯಸ್ಸಾದ ಮನುಷ್ಯರಿಗೆ ಎಷ್ಟೋ ಜನ ಮಕ್ಕಳು ತಂದೆ, ತಾಯಿಯರನ್ನು ಸಾಕುವುದಿಲ್ಲ. ಹೊರಗಡೆ ಹಾಕುತ್ತಾರೆ. ನಾನು ಹೇಳಬಾರದು. ತಾವು ಮಹಿಳೆಯರು ಪೀಠದಲ್ಲಿ ಕುಳಿತಿದ್ದೀರಿ. ಸೊಸೆಯರು ಬಂದರಂತೂ ದೇವರೇ ಕಾಪಾಡಬೇಕು. ಅದನ್ನು ನೀವು ಒಪ್ಪುತ್ತೀರೋ ಬಿಡುತ್ತೀರೋ ಬೇರೆ ವಿಚಾರ. ಮಗ ಮದುವೆಯಾಗುವುದಕ್ಕೆ ಮುಂಚೆ ತಾಯಿ, ತಂದೆಯ ಜೊತೆಯಲ್ಲಿ ತಾಯಿಯೇ ದೈವ, ತಂದೆಯ ದೈವ ಎಂದು ಹೇಳಿ ಇರುತ್ತಾನೆ. ಮದುವೆಯಾದ ಮೂರು ತಿಂಗಳಿನಲ್ಲೇ ತಾಯಿ-ತಂದೆ ದೆವ್ವ ಎನ್ನುವಂತೆ ನಡೆದುಕೊಳ್ಳುತ್ತಾನೆ. ಇದು ಸಾಮಾನ್ಯವಾಗಿ ಅತ್ಯಂತ ವ್ಯವಸ್ಥಿತವಾಗಿ ನಡೆಯುತ್ತಿದೆ.

ಛೇರ್ಮನ್ :- ಮಾನ್ಯ ಸದಸ್ಯರು ದಯವಿಟ್ಟು ಯೋಚನೆ ಮಾಡಿ ಮಾತನಾಡಬೇಕು. ಎಲ್ಲರನ್ನೂ ಒಂದೇ ರೀತಿ ಪರಿಗಣಿಸುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಸಾಮಾನ್ಯವಾಗಿ ಆ ರೀತಿ ಮಾಡುತ್ತಾರೆ, ಎಲ್ಲರೂ ಅಲ್ಲ. ಎಲ್ಲರೂ ಎಂದು ನಾನು ಹೇಳುತ್ತಿಲ್ಲ. ಸಾಮಾನ್ಯವಾಗಿ ನಡೆಯತಕ್ಕಂಥ ಪರಿಸ್ಥಿತಿಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಹೆಚ್. ಆಂಜನೇಯ :- ಮಾನ್ಯ ಅಧ್ಯಕ್ಷರೆ....

ಶ್ರೀ ವಾಟಾಳ್ ನಾಗರಾಜ್ :- ದಯವಿಟ್ಟು ಕುಳಿತುಕೊಳ್ಳಿ, ಆಮೇಲೆ ಮಾತನಾಡುವಿರಂತೆ.

ಛೇರ್ಮನ್ :- ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ :- ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಇತ್ತೀಚಿನ ದಿನಗಳಲ್ಲಿ ಅತ್ಯಂತ ಗಂಭೀರವಾದಂತಹ ಪರಿಸ್ಥಿತಿಯಾಗಿದೆ. 20 ವರ್ಷದ ಮೇಲಿನ ಮಗ, ಹೆಂಡತಿ, ಗಂಡ ಇವರ್‍ಯಾರೂ ಇರಕೂಡದು ಎಂದು ಹೇಳಿದ್ದೀರಿ. ಮಕ್ಕಳು ತಂದೆಯನ್ನು ನೋಡಿಕೊಳ್ಳುವುದಿಲ್ಲ ಮತ್ತು ತಾಯಿಯನ್ನೂ ಸಹ ನೋಡಿಕೊಳ್ಳುವುದಿಲ್ಲ. ಈ ಪರಿಸ್ಥಿತಿಯಲ್ಲಿ, ಈ ವ್ಯವಸ್ಥೆಯಲ್ಲಿ ಈ ಷರತ್ತನ್ನು ಬಿಡಬೇಕು. ಅದರಲ್ಲೂ ನೀವು 65 ವರ್ಷ ಎಂದು ಹಾಕಿದ್ದೀರಿ, 60 ವರ್ಷ ಎಂದಿದ್ದರೆ ಸಾಕಾಗಿತ್ತು. ಇವತ್ತಿನ ವ್ಯವಸ್ಥೆಯಲ್ಲಿ, ಈ ಆಹಾರ ಪದ್ಧತಿಯಲ್ಲಿ ಅಂಕಿ ಅಂಶಗಳನ್ನು ತೆಗೆದು ನೋಡಿದಾಗ 65 ವರ್ಷ ಬದುಕುವವರು ಶೇಕಡ 20 ಭಾಗದಷ್ಟೂ ಇಲ್ಲ. ನನಗನಿಸುತ್ತದೆ, ದಯಮಾಡಿ ಇವೆಲ್ಲಾ ಷರತ್ತುಗಳನ್ನು ತೆಗೆಯಬೇಕು. ಎಲ್ಲಾ ಷರತ್ತುಗಳನ್ನು ತೆಗೆದು, ವಯಸ್ಸಿನ ಮಿತಿಯನ್ನು 65 ರಿಂದ 60 ವರ್ಷಕ್ಕೆ ಇಳಿಸಿ, 60ನೇ ವಯಸ್ಸು ದಾಟಿದವರಿಗೆ ಯಾವುದೇ ಷರತ್ತು ಇಲ್ಲದೇ ತಾವು ಸಂಪೂರ್ಣವಾಗಿ ವೃದ್ಧಾಪ್ಯ ವೇತನ, ಅಂಗವಿಕಲರ ವೇತನ, ವಿಧವಾ ವೇತನಗಳನ್ನು ನೀಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇದೆಲ್ಲವನ್ನೂ ಕಾರ್ಯಭಾರ ಮಾಡತಕ್ಕದ್ದು ಒಂದು ಸರ್ಕಾರ. ಮಾನ್ಯ ಯಡಿಯೂರಪ್ಪನವರೆ, ಸದ್ಯ ಇವತ್ತು ನೀವು ನಗುತ್ತಿದ್ದೀರಿ. ನನಗೆ ಬಹಳ ಸಂತೋಷವಾಗಿದೆ. ಇದುವರೆಗೂ ನೀವು ನಕ್ಕಿರಲಿಲ್ಲ, ಬಹಳ ಮೌನಕ್ಕೆ ಶರಣಾಗಿದ್ದೀರಿ. ದಿವಸಗಳಾದ ಮೇಲೆ ತಮ್ಮ ಈ ನಗು ಮುಖವನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಯಾವಾಗಲೂ ನೀವು ನಗುತ್ತಿರಿ. ಅಕ್ಟೋಬರ್ 3 ಆದ ಮೇಲೂ ನೀವು ನಗಬೇಕು. ನೀವು ಚಿಂತೆ ಮಾಡುವುದಕ್ಕೆ ಹೋಗಬೇಡಿ. ಯಾವುದಕ್ಕೂ ಚಿಂತೆ ಪಡಬೇಡಿ. ಆವತ್ತು ನೀವೇ ಹೇಳಿದಂತೆ ಹಣೆಬರಹ ! ನೀವ್ಯಾಕೆ ತಲೆಕೆಡಿಸಿಕೊಳ್ಳುತ್ತೀರಿ ? ಚಿಂತೆ ಪಡುವುದಕ್ಕೆ ಹೋಗಬೇಡಿ, ಭದ್ರವಾಗಿ ಇರಿ. ಅದರ ಬಗ್ಗೆ ನೀವು ಯಾವುದೂ ತಲೆಕೆಡಿಸಿಕೊಳ್ಳುವುದು ಬೇಕಾಗಿಲ್ಲ. ಮತ್ತೊಂದು ಪ್ರಮುಖವಾದ ವಿಚಾರವೆಂದರೆ, ಇದೆಲ್ಲಾ ಜಾರಿಗೊಳಿಸುವಾಗ ಉಸ್ತುವಾರಿ ಮಾಡುವವರು ಯಾರು? ಶಾಸಕರುಗಳೇ, ಸಾಮಾನ್ಯವಾಗಿ ಆಯಾ ಕ್ಷೇತ್ರದ ಶಾಸಕರುಗಳು ಇದರ ಉಸ್ತುವಾರಿ ಮಾಡುತ್ತಾರೆ. ಶಾಸಕರುಗಳಿಗೆ ಅಧಿಕಾರಿಗಳು ಗೌರವ ಕೊಡುತ್ತಿಲ್ಲ. ನಿಜಕ್ಕೂ ನನಗನ್ನಿಸುತ್ತದೆ, ಈ ಅಧಿಕಾರಿಗಳು ಎಲ್ಲೆ ಮೀರಿದ್ದಾರೆ. ಐಎಎಸ್ ಇರಬಹುದು, ಐಪಿಎಸ್ ಇರಬಹುದು, ಕೆಎಎಸ್ ಇರಬಹುದು, ಶಾಸಕರುಗಳು ಯಾವುದೇ ಪಕ್ಷದವರು ಇರಬಹುದು,

ಆಯಾ ಕ್ಷೇತ್ರದ ಶಾಸಕರುಗಳ ಬಗ್ಗೆ ಅಧಿಕಾರಿಗಳು ಪ್ರಾಮಾಣಿಕವಾದಂತಹ ಗೌರವ ಕೊಡುತ್ತಿಲ್ಲ. ಶಾಸಕರುಗಳಿಗೆ ಯಾವ ರೀತಿ ಗೌರವ ಕೊಡಬೇಕು, ಅವರ ಜೊತೆಯಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂದು ಇದುವರೆಗೂ ಕನಿಷ್ಠ 41 ಆದೇಶಗಳು ಹೊರಟಿವೆ. ಎಷ್ಟೇ ಆದೇಶಗಳು ಬಂದರೂ, ಈ ಆದೇಶಗಳನ್ನೆಲ್ಲಾ ಅಧಿಕಾರಿಗಳು ಗಾಳಿಗೆ ತೂರಿದ್ದಾರೆ. ಇದು ಒಳ್ಳೆಯದಲ್ಲ, ಒಳ್ಳೆಯ ಸೂಚನೆಯಲ್ಲ. ಅಧಿಕಾರಿಗಳು ಪರಿಣಾಮಕಾರಿಯಾಗಿ ಶಾಸಕರುಗಳಾದ ನಮ್ಮ ಜೊತೆಯಲ್ಲಿ ಸೇರಿ ನಮ್ಮ ಕೆಲಸಕ್ಕೆ ಎಲ್ಲಾ ರೀತಿಯ ಸಹಾಯ ಮತ್ತು ಸಹಕಾರವನ್ನು ಮಾಡಬೇಕಾದುದು ಅವರ ಕರ್ತವ್ಯ. ಬೆಂಗಳೂರು ಇಂದು ಮಹಾನಗರವಾಗಿದೆ. ಈ ಬೆಂಗಳೂರು ಮಹಾನಗರ ಯಾವುದೋ ಒಂದು ವರ್ಗದ ಜನರ ನಗರವಲ್ಲ. ಇದು ಇಡೀ ಕರ್ನಾಟಕದ ರಾಜಧಾನಿಯಾಗಿದೆ. ಇದು ಕರ್ನಾಟಕದ ಸಮಗ್ರ ಜನತೆಗೆ ಸೇರಿದಂತಹ ರಾಜಧಾನಿಯಾಗಿದೆ. ಇಲ್ಲಿ ಶಾಸನ ಸಭೆ ಇದೆ, ಶಾಸಕರ ಭವನಗಳಿವೆ, ಮಂತ್ರಿಗಳ ಬಂಗಲೆಗಳಿವೆ ಮತ್ತು ಅಧಿಕಾರಿಗಳೂ ಸಹ ಇದ್ದಾರೆ. ಎಲ್ಲರೂ ಸಹ ಬೆಂಗಳೂರಿನಲ್ಲೇ ಇದ್ದಾರೆ. ಆದರೆ ಇವತ್ತು ಬೆಂಗಳೂರಿನ ಪರಿಸ್ಥಿತಿ ಏನಾಗಿದೆ? ಇವತ್ತು ಇಲ್ಲಿಯ ಪರಿಸರ ಸಂಪೂರ್ಣವಾಗಿ ನಾಶವಾಗಿದೆ, ಇಲ್ಲಿಯ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ನಾಶವಾಗಿದೆ. ಬೆಂಗಳೂರು ಇಂದು ಭಯೋತ್ಪಾದನಾ ನಗರವಾಗಿ ಬೆಳೆಯುತ್ತಿದೆ. ಯಾವತ್ತೂ ಈ ಪರಿಸ್ಥಿತಿ ಇರಲಿಲ್ಲ. ಬೆಂಗಳೂರಿನಲ್ಲಿ ಅಂತಹ ಪರಿಸ್ಥಿತಿ ಇರಲೇ ಇಲ್ಲ. ಅದು ಈಗ ಭಯೋತ್ಪಾದನಾ ನಗರವಾಗಿ ಬೆಳೆಯುತ್ತಿದೆ. ಇನ್ನು ವಲಸೆ ಬಗ್ಗೆ ತಮಗೆ ಹೇಳುವುದಾದರೆ, 1956 ರಿಂದ ಇಲ್ಲಿಗೆ ವಿಪರೀತವಾದಂತಹ ವಲಸೆಯಾಗುತ್ತಿದೆ. ಈ ವಲಸೆ ತಪ್ಪಿಸುವುದರಲ್ಲಿ ಸಂಪೂರ್ಣವಾಗಿ ಸರ್ಕಾರ ವಿಫಲವಾಗಿದೆ. ಬೆಂಗಳೂರಿನ ಸಂಚಾರಿ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ. ಮೆಟ್ರೋ ರೈಲ್ ಬರುತ್ತದೆಂದು ಹೇಳಿ ದಿಕ್ಕಾಪಾಲಾಗಿ ಎಲ್ಲೆಲ್ಲೋ ಭೂಮಿ ಅಗೆಯುತ್ತದ್ದಾರೆ. ಯಾವ್ಯಾವ ಕಡೆ ಅವರು ರೈಲನ್ನು ಭೂಗತದಲ್ಲಿ ತೆಗೆದುಕೊಂಡು ಹೋಗುತ್ತಾರೋ ಗೊತ್ತಾಗುತ್ತಿಲ್ಲ. ಮುಂದೆ ಪರಿಸ್ಥಿತಿ ಏನಾಗುತ್ತದೆ ಎಂದು ಗೊತ್ತಾಗುತ್ತಿಲ್ಲ. ಬೆಂಗಳೂರು ನಗರದಲ್ಲಿ 900 apartments ಕಟ್ಟಲಾಗಿದೆ. ಇಲ್ಲಿ ಯಾರು ಇರುತ್ತಾರೆ? ಆ appartment ಗಳಲ್ಲಿ ಸಂಪೂರ್ಣವಾಗಿ ಹೊರಗಡೆಯಿಂದ ಬಂದಿರತಕ್ಕಂಥವರೇ ವಾಸವಾಗಿದ್ದಾರೆ. ಈ apartment ಗಳನ್ನು ಕಟ್ಟಿದವರು ಯಾರು? ಮಾನ್ಯ ಜಯಕುಮಾರ್‌ರವರು ದಯವಿಟ್ಟು ಇದನ್ನು ಗಮನಿಸಬೇಕು. ಈ apartment ಗಳನ್ನು ಕಟ್ಟಿದವರು ಯಾರು? ಸ್ವಲ್ಪ ಹೆಚ್ಚು ಕಡಿಮೆ ಬೆಂಗಳೂರಿನಲ್ಲಿ 900 ಅಪಾರ್ಟ್‌ಮೆಂಟ್‌ಗಳಿವೆ. ಅದರಲ್ಲಿ 150–160 ಅಪಾರ್ಟ್‌ಮೆಂಟ್‌ಗಳನ್ನು ಅಕ್ರಮವಾಗಿ ಯಾವುದೇ ಲೈಸೆನ್ಸ್ ಇಲ್ಲದೆ ಕಟ್ಟಲಾಗಿದೆ. ಇಲ್ಲಿ ಇರುವವರೆಲ್ಲರೂ ಹೊರಗಡೆಯಿಂದ

ಬಂದಿರತಕ್ಕಂಥವರಾಗಿದ್ದಾರೆ. ಇಲ್ಲಿರತಕ್ಕಂಥ 2 ರೂಂ, ಒಂದು ಸಣ್ಣ ಹಾಲ್ ಬೆಲೆ ಬಹಳ ಹೆಚ್ಚು, ಅದರ ಬೆಲೆ 50 ಲಕ್ಷ ರೂ.ಗಳಿಂದ 1 ಕೋಟಿ ರೂ.ಗಳವರೆಗೆ ಇದೆ. ಸಾಮಾನ್ಯ ಜನ ಇದನ್ನು ಖರೀದಿಸಲು ಸಾಧ್ಯವೇ? ನೀವು ಇದನ್ನು ಏಕೆ ನೋಡಲಿಲ್ಲ? ಇದರ ಬಗ್ಗೆ ನೀವು ಏಕೆ ಪರಿಶೀಲನೆ ಮಾಡಲಿಲ್ಲ? ಎಲ್ಲಿಯ ಪರಿಸ್ಥಿತಿ ಏನು? ಸಾಮಾನ್ಯ ಜನಕ್ಕೆ ಇದು ಎಟಕುತ್ತದೆಯೇ? ಹೊರಗಡೆಯಿಂದ ಇಲ್ಲಿಗೆ ಬಂದು apartments ಕಟ್ಟಿಕೊಂಡಿದ್ದಾರೆ. ದೊಡ್ಡ ದೊಡ್ಡದಾಗಿ ಅಪಾರ್ಟ್‌ಮೆಂಟ್‌ಗಳನ್ನು ಕಟ್ಟಿ ಅವರು ಸಾವಿರಾರು ಕೋಟಿಗಳನ್ನು ಲೂಟಿ ಮಾಡುತ್ತಿದ್ದಾರೆ. ನಮ್ಮ ಜಮೀನು, ನಮ್ಮ ನೀರು, ನಮ್ಮ ವ್ಯವಸ್ಥೆಯಲ್ಲಿ ಇದನ್ನು ಕಟ್ಟಿಕೊಂಡು ಈ ತರಹ ಅವರು ಮಾಡುತ್ತಿದ್ದಾರೆ. ಇದರ ಬಗ್ಗೆ ತಾವು ಪರಿಣಾಮಕಾರಿಯಾಗಿ ಕ್ರಮ ತೆಗೆದುಕೊಳ್ಳಬೇಕಾಗಿದೆ. ಬಿಡಿಎ ನಿವೇಶನಗಳನ್ನು ಯಾರ್ಯಾರಿಗೆ ಹಂಚಿದ್ದೀರಿ? 15 ವರ್ಷ ಸ್ಥಳೀಯರಾಗಿ ವಾಸವಾಗಿರತಕ್ಕವರಿಗೆ ಬಿಡಿಎ ನಿವೇಶನಗಳನ್ನು ಹಂಚುತ್ತೇವೆಂದು ನೀವು ಹೇಳಬಹುದು. ಇಲ್ಲಿಯ ಎಷ್ಟು ಜನಕ್ಕೆ ಅದು ಸಿಕ್ಕಿದೆ? ಬಿಡಿಎ ನಿವೇಶನ ನೂರಕ್ಕೆ ಸ್ವಲ್ಪ ಹೆಚ್ಚು ಕಡಿಮೆ 60–70 ಭಾಗ ಹೊರಗಡೆಯವರಿಗೇ ಸಿಕ್ಕಿದೆ. ನಮ್ಮ ರಾಜ್ಯದವರಿಗೆ, ಇಲ್ಲಿರತಕ್ಕವರಿಗೆ ಅದು ಸಿಗದಿರತಕ್ಕದ್ದು ಬಹಳ ನೋವಿನ ಪ್ರಸಂಗವಾಗಿದೆ. ಇದರ ಬಗ್ಗೆ ತಾವು ಚಿಂತನೆಯನ್ನು ಮಾಡಬೇಕು. ಇನ್ನು ಬೆಂಗಳೂರಿನ ಆಸ್ಪತ್ರೆಗಳ ಬಗ್ಗೆ ಹೇಳುವುದಾದರೆ, ಅವುಗಳಲ್ಲಿ ಕೆಲವು ಚೆನ್ನಾಗಿವೆ, ಕೆಲವು ಚೆನ್ನಾಗಿಲ್ಲ. ಈ ಆಸ್ಪತ್ರೆಗಳನ್ನು ಚೆನ್ನಾಗಿ ಪರಿಣಾಮಕಾರಿಯಾಗಿ ನೋಡಿಕೊಳ್ಳಬೇಕಾದುದು ನಮ್ಮ ಕರ್ತವ್ಯವಾಗಿತ್ತು. ಅದನ್ನು ಅತ್ಯಂತ ಜವಾಬ್ದಾರಿಯಿಂದ ನೀವು ನೋಡಿಕೊಳ್ಳಬೇಕು. ನೀವು ಇಲ್ಲಿಯ ಕೆಲವು ಆಸ್ಪತ್ರೆಗಳಿಗೆ ನೀವು ಹೋಗಿ ನೋಡಿ. ಕೆಲವು ಆಸ್ಪತ್ರೆಗಳಲ್ಲಿ ಒಳಗಡೆ ರೋಗಿಗಳಿಗೆ ಕೊಡತಕ್ಕ ಬ್ರೆಡ್, ಹಾಲುಗಳ ಗುಣಮಟ್ಟ ಸರಿಯಿರುವುದಿಲ್ಲ. ಅಲ್ಲಿ ವ್ಯವಸ್ಥೆ ಶುಚಿಯಾಗಿರದೇ ಜಿರಲೆಗಳು ಓಡಾಡುತ್ತಿರುತ್ತವೆ. ಅದೆಲ್ಲವನ್ನೂ ನೋಡಿದರೆ ಅದೊಂದು ನರಕವೇ ಸರಿ. ನಮ್ಮ ಸರ್ಕಾರಿ ಆಸ್ಪತ್ರೆಗಳ ಪರಿಸ್ಥಿತಿಯನ್ನು ನರಕಕ್ಕೆ ಹೋಲಿಸಬಹುದಾಗಿದೆ. ಇದರ ಬಗ್ಗೆ ಪರಿಣಾಮಕಾರಿಯಾಗಿ ನೋಡತಕ್ಕಂಥದ್ದು ತಮ್ಮ ಕರ್ತವ್ಯವಾಗಿದೆ. ಅದನ್ನು ನೀವು ಮಾಡಬೇಕಾಗುತ್ತದೆ. ಬೆಂಗಳೂರಿಗೆ ಕುಡಿಯುವ ನೀರನ್ನು ಪೂರೈಸಲು ಇನ್ನೂ ಈಗ ಎಷ್ಟು ಹಂತ ಆಗಬೇಕಾಗುತ್ತದೆ? ಬೆಂಗಳೂರು ಈಗ ಬಹಳವಾಗಿ ಬೆಳೆದಿದೆ. ಈ ಬೆಂಗಳೂರು ಈಗ 'ಮಹಾ ಬೆಂಗಳೂರು' ಆಗಿದೆ ಎಂದು ನೀವೇ ಹೇಳಿದ್ದೀರಿ. ಈ ಮಹಾ ಬೆಂಗಳೂರಿಗೆ ಬೇಕಾಗುವಷ್ಟು ಕಾವೇರಿ ನೀರನ್ನು ಎಲ್ಲಿಂದ ತರುತ್ತೀರಿ? ಯಾರಿಗೆ ಕೊಡುತ್ತೀರಿ? ಯಾವಾಗ ಕೊಡುತ್ತೀರಿ? ನಮಗೆ 30 ಟಿಎಂಸಿ ಅಥವಾ ಅದಕ್ಕಿಂತ ಜಾಸ್ತಿ ನೀರು ಬೇಕಾಗಿದೆ. ಆದರೆ

ನ್ಯಾಯ ಮಂಡಳಿ ತೀರ್ಪಿನ ಪ್ರಕಾರ ನಮಗೆ ಕೇವಲ 15–18 ಟಿಎಂಸಿ ನೀರನ್ನು ಮಾತ್ರ ಹಂಚಿಕೆ ಮಾಡಲಾಗಿದೆ. ಬೆಂಗಳೂರು ಕುಡಿಯುವ ನೀರಿಲ್ಲದೆ ಅಗ್ನಿಕುಂಡವಾಗುತ್ತದೆ, ಬೆಂಕಿಯ ನಗರವಾಗುತ್ತದೆ. ಕುಡಿಯುವ ನೀರು ಇಲ್ಲದೆ ಅಪಾಯ ಮುಟ್ಟತಕ್ಕಂಥ ಪರಿಸ್ಥಿತಿ ಇಲ್ಲಿ ನಿರ್ಮಾಣವಾಗುತ್ತದೆಂದು ನಾನು ತಮಗೆ ಹೇಳುತ್ತೇನೆ. ದೊಡ್ಡ ಬೆಂಗಳೂರನ್ನು ನಿರ್ಮಾಣ ಮಾಡತಕ್ಕವರು, ಬೆಂಗಳೂರಿನ ಬಗ್ಗೆ ಕಾಳಜಿ ಇಟ್ಟುಕೊಂಡಿರತಕ್ಕ ನೀವು ಈ ಬಗ್ಗೆ ಏನು ಮಾಡುತ್ತಿದ್ದೀರಿ? ಇವತ್ತು ದೇವನಹಳ್ಳಿ ರೋಡ್‌ನಲ್ಲಿ ಒಂದೂವರೆ ಸಾವಿರ ಅಡಿ ಹೊಡೆದರೂ ನೀರು ಬರುವುದಿಲ್ಲ, ವೈಟ್‌ಫೀಲ್ಡ್‌ನಲ್ಲಿ ನೀರು ಬರುವುದಿಲ್ಲ. ಎಲ್ಲಿ ಅವರಿಗೆ ನೀರು ಕೊಡುತ್ತೀರಿ? ಈ ರಾಜಧಾನಿ ಬಗ್ಗೆ ನೀವು ಚಿಂತನೆ ಮಾಡಬೇಕು. ಬೆಂಗಳೂರಿನಲ್ಲಿ ತ್ಯಾಜ್ಯ ವಸ್ತುಗಳನ್ನು ಎಲ್ಲಿ ಹಾಕುತ್ತೀರಿ? ಅದಕ್ಕೆ ಏನು ವ್ಯವಸ್ಥೆ ಇದೆ? ಸಂಪೂರ್ಣವಾಗಿ ಯಾವುದೇ ವ್ಯವಸ್ಥೆ ಇಲ್ಲಿಲ್ಲ, ಇದು ಇರತಕ್ಕಂಥ ಪರಿಸ್ಥಿತಿ. ಬೆಂಗಳೂರಿನಲ್ಲಿರುವ ಕಾರ್ಖಾನೆಗಳು ಎಷ್ಟು? ಇಡೀ ಬೆಂಗಳೂರಿನಲ್ಲಿ ತ್ಯಾಜ್ಯ ವಸ್ತುಗಳು ಬಿಡತಕ್ಕಂಥ ಮತ್ತು ವಿಷವನ್ನು ಉಗುಳತಕ್ಕಂಥ ಕಾರ್ಖಾನೆಗಳು ಎಷ್ಟಿವೆ? ಅವುಗಳು ಬೆಂಗಳೂರಿನ ಸುತ್ತ ಲೆಕ್ಕವಿಲ್ಲದಷ್ಟು ಆಗಿವೆ. ಬೆಂಗಳೂರಿನ ಬಗ್ಗೆ ನೀವು ಬೇರೆ ರೀತಿಯಲ್ಲಿ ತಿಳಿದುಕೊಂಡಿರಬಹುದು. ಸುನಾಮಿ ಬಂದು ಲಕ್ಷಾಂತರ ಜನ ಸತ್ತರು, ಅದು ಇನ್ನೊಂದು ಕೆಟ್ಟ ರೂಪದಲ್ಲಿ ಬಂದು, ಅದಕ್ಕಿಂತ ಬಹಳ ಕೆಟ್ಟ ಪರಿಣಾಮ ಒಂದು ದಿನ ಬೆಂಗಳೂರು ನಗರಕ್ಕೆ ಕಾದಿದೆ ಎನ್ನತಕ್ಕಂಥ ಎಚ್ಚರಿಕೆಯನ್ನು ನಾನು ತಮಗೆ ಕೊಡುತ್ತಿದ್ದೇನೆ.

ಬೆಂಗಳೂರು ಸುತ್ತ ಕೆಲವು ಪಟ್ಟಭದ್ರರಿದ್ದಾರೆ ಅವರದ್ದೇ ಜಮೀನು ಅವರು ಯಾವುದೇ ಸರ್ಕಾರ ಬಂದರೂ ಗಂಭೀರವಾಗಿ ಅದರಲ್ಲಿದ್ದಾರೆ. ಯಾವುದೇ ಸರ್ಕಾರ ಬಂದರೂ ಅವರಿಗೆ ಅಗ್ರಪೀಠ ಸಿಗುತ್ತಿದೆ. ಈ ಭೂಗಳ್ಳರಿರಬಹುದು, ಲೂಟಿ ಮಾಡಿರಬಹುದು, ಇಂಥವರಿಗೆಲ್ಲಾ ಯಾವುದೇ ಸರ್ಕಾರದಲ್ಲಿ ಒಂದು ಅಗ್ರಪೀಠ ಇದ್ದದ್ದೇ. ಇಲ್ಲಿ ನಾನು ಅವರ ಹೆಸರುಗಳನ್ನು ಹೇಳುವುದು ಉಚಿತವಲ್ಲವೆಂದು ತಿಳಿದುಕೊಂಡಿದ್ದೇನೆ. ಆ ದೃಷ್ಟಿಯಿಂದ ನೀವು ಬೆಂಗಳೂರಿನ ರಕ್ಷಣೆ ಮಾಡುವುದು ಅತ್ಯಂತ ಪ್ರಾಮುಖ್ಯವಾದುದೆಂದು ನಾನು ಹೇಳುತ್ತಿದ್ದೇನೆ. ಇವತ್ತು ನಾವು ಬಹಳ ಗಂಭೀರವಾಗಿ ದೇಶದ ಸುತ್ತ ಮಾತನಾಡುತ್ತೇವೆ. ದೇಶದ ಮುಖ್ಯಮಂತ್ರಿಗಳ ಆಸ್ತಿಗಳ ಬಗ್ಗೆ ಪತ್ರಿಕೆಗಳಲ್ಲಿ ಬರುತ್ತಿರುವುದನ್ನು ಯಡಿಯೂರಪ್ಪನವರೆ, ತಾವು ಓದಿರಬಹುದು, ಸಾವಿರಾರು ಕೋಟಿ ರೂಪಾಯಿಗಳ ಆಸ್ತಿಯನ್ನು ಹೇಗೆ ಮಾಡುತ್ತಾರೆ, ಎಲ್ಲಿ ಬರುತ್ತದೆ, ಇದನ್ನು ಯಾರು ನೋಡುತ್ತಿಲ್ಲ, ಇದರ ವಿಚಾರಗಳೇನು? ಬೇರೆ ಬೇರೆ ರಾಜ್ಯಗಳ

ಮುಖ್ಯಮಂತ್ರಿಗಳ ಆಸ್ತಿಗಳ ಬಗ್ಗೆ ಬರುವುದನ್ನು ನಾನು ಈಗ ಪತ್ರಿಕೆಗಳಲ್ಲಿ ನೋಡುತ್ತಿದ್ದೇನೆ, ಅವರ ಮೇಲೆ ಸಿಬಿಐ ತನಿಖೆಯಾಗಿರತಕ್ಕಂಥದ್ದು ಇದನ್ನೆಲ್ಲಾ ನೋಡಿದಾಗ ಈ ರಾಜ್ಯಗಳ ಮುಖ್ಯಮಂತ್ರಿಗಳಾದವರು ಹೇಗೆ? ಇದರ ಪರಿಸ್ಥಿತಿ ಏನು? ನಮ್ಮ ದೇಶದಲ್ಲಿ ಮುಖ್ಯಮಂತ್ರಿಗಳಾದವರಿರಬಹುದು ಮತ್ತು ಅಧಿಕಾರಿಗಳಾದವರಿರಬಹುದು, ಯಾವುದೇ ಇಲಾಖೆ ಇರಬಹುದು, ಅವರಲ್ಲಿ ಒಂದು ರೀತಿಯ ಪ್ರಾಮಾಣಿಕತೆ ಹೋಗಿದೆ. ಇದೆಲ್ಲದರ ಬಗ್ಗೆ ಒಂದು ಸಮಗ್ರವಾದ ತನಿಖೆಯನ್ನು ಈ ದೇಶದಲ್ಲಿ ಯಾರು ಮಾಡುವುದಕ್ಕೆ ಸಾಧ್ಯ? ನನಗೇನು ಸಾಧ್ಯವಿಲ್ಲಪ್ಪ. ಈ ದೇಶದ ಅನೇಕ ಕಡೆ ನೋಡಿದ್ದೇನೆ, ಒಂದು, ಎರಡು, ಮೂರು, ನಾಲ್ಕಲ್ಲ, ಸಾವಿರಾರು ಕೋಟಿ ರೂಪಾಯಿಗಳ ಮುಖ್ಯಮಂತ್ರಿಗಳ ಆಸ್ತಿಗಳ ಬಗ್ಗೆ ಸಿಬಿಐ ತನಿಖೆ ನಡೆಯುತ್ತಿದೆ. ಅದರಿಂದ ತಪ್ಪಿಸಿಕೊಳ್ಳುವುದಕ್ಕೆ ಬಹಳ ಪ್ರಯತ್ನಗಳಾಗುತ್ತಿವೆ. ಏತಕ್ಕೆ ಈ ಹಣ? ಈ ರೀತಿಯಾದರೆ ಚುನಾವಣೆಯ ವ್ಯವಸ್ಥೆಯ ಮೇಲೆ ಅದಕ್ಕೆ ಖರ್ಚು ಮಾಡುವುದರ ಮೇಲೆ ಪರಿಣಾಮ ಬೀರುತ್ತದೆ. ಇದು ಸರಿಯಾದಂಥ ವ್ಯವಸ್ಥೆಯಲ್ಲ, ಸರಿಯಾದ ಪರಿಸ್ಥಿತಿಯಲ್ಲ. ಇವತ್ತು ನಮ್ಮ ಚುನಾವಣೆ ವ್ಯವಸ್ಥೆ ಯಾವ ದಿಕ್ಕಿಗೆ ಹೋಗುತ್ತಿದೆ? ಇತ್ತೀಚಿನ ದಿವಸಗಳಲ್ಲಿ ಚುನಾವಣೆ ವ್ಯವಸ್ಥೆ ಸಂಪೂರ್ಣವಾಗಿ ಹದಗೆಡುತ್ತಿದೆ. ಇನ್ನು ಮುಂದು ಈ ಚುನಾವಣೆ ವ್ಯವಸ್ಥೆ ಎಲ್ಲಿಗೆ ತಲುಪುತ್ತದೆಯೋ ನನಗಂತೂ ಗೊತ್ತಾಗುತ್ತಿಲ್ಲ. ನಾವು ಇತ್ತೀಚೆಗೆ ಪ್ರಾಮಾಣಿಕವಾಗಿ ನೋಡುತ್ತಿದ್ದೇವೆ, ಈ ಚಾಮುಂಡೇಶ್ವರಿ ಚುನಾವಣೆಯಾದ ನಂತರ, ಏನೇನಾಗುತ್ತದೆ, ಎಲ್ಲಿಗೆ ಬರುತ್ತೇವೆ? ಇವತ್ತು ಶಾಸಕರಿಗೆ ಸುಮಾರು ರೂ. 15 ಲಕ್ಷ, ಲೋಕಸಭಾ ಸದಸ್ಯರಿಗೆ ರೂ. 25 ಲಕ್ಷ ಚುನಾವಣೆಯ ವೆಚ್ಚವಿರುವುದು, ನಾವು ಚುನಾವಣೆಯ ವೆಚ್ಚದ ಲೆಕ್ಕವನ್ನು ಪ್ರಾಮಾಣಿಕವಾಗಿ ಅಷ್ಟನ್ನೇ ಕೊಡುತ್ತೇವೆ, ಆ ಲೆಕ್ಕದಲ್ಲಿ ಮಾತ್ರ ತಪ್ಪಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಸತ್ಯವನ್ನು ನಾವೆಲ್ಲರೂ ನಮ್ಮ ಹೃದಯವನ್ನು ಮುಟ್ಟಿ ಪ್ರಾಮಾಣಿಕವಾಗಿ ನೋಡೋಣ. ಬಹಳ ನೋವಿನಿಂದ ಹೇಳಬೇಕಾಗಿದೆ, ಈ ತರಹ ಚುನಾವಣೆ ವ್ಯವಸ್ಥೆಯಲ್ಲಿ ಬದಲಾವಣೆಯಾಗದಿದ್ದರೆ ಈ ದೇಶದಲ್ಲಿ ಅರಾಜಕತೆ ಶುರುವಾಗುತ್ತದೆ. ಬೇರೆ ಮಾತು ಇಲ್ಲವೇ ಇಲ್ಲ. ಮುಂದಿನ ಚುನಾವಣೆಗಳಲ್ಲಿ, ಎಷ್ಟು ಖರ್ಚಾಗುತ್ತದೆ, ಎಲ್ಲಿಂದ ದುಡ್ಡನ್ನು ತರಬೇಕು, ಯಾವ ಕಡೆಯಿಂದ ತರಬೇಕಾಗುತ್ತದೆ, ಇದು ಏನು ವ್ಯವಸ್ಥೆ? ನನಗನಿಸುವಂತೆ ಇದು ಒಳ್ಳೆಯ ಸೂಚನೆಯಾಗುವುದಿಲ್ಲ, ಇದು ಒಳ್ಳೆಯ ಚುನಾವಣೆಯಾಗುವುದಿಲ್ಲ. ಇದಕ್ಕೆ ಸಮಗ್ರ ಚುನಾವಣೆ ಕಾಯಿದೆ

ಬದಲಾವಣೆಯಾಗಲೇಬೇಕು, ಕಡ್ಡಾಯ ಮತದಾನ ಪದ್ಧತಿ ಜಾರಿಯಾಗಲೇಬೇಕು. ಅದಾಗಲಿಲ್ಲವೆಂದರೆ, ನಮ್ಮ ದೃಷ್ಟಿ ಎಲ್ಲಿಗೋ ಹೋಗುತ್ತದೆ, ಪರಿಸ್ಥಿತಿ ಹದಗೆಡುತ್ತದೆ. ಆ ದೃಷ್ಟಿಯಿಂದ ಮುಂದಿನ ಚುನಾವಣೆಯಲ್ಲಿ ಎಂಥವರು ಬರಬಹುದು? ಈ ಚುನಾವಣೆಯಲ್ಲೇ ನಾವು ಸಂತೋಷಪಡಬೇಕು. ಇನ್ನು ಮುಂದೆ ನನಗನಿಸುವಂತೆ ಶಾಸನ ಸಭೆಗಳು ಹರಾಜಾಗುತ್ತದೆ, ಕೆಲವು ಪ್ರದೇಶಗಳನ್ನು ಹರಾಜಿನಲ್ಲಿ ಕೊಂಡುಕೊಳ್ಳುತ್ತಾರೆ. ಇಷ್ಟು ಸೀಟು ನನಗಿರಲಿ, ಇಷ್ಟು ಸೀಟುಗಳನ್ನು ನಾನು ಗೆಲ್ಲಿಸಿಕೊಡುತ್ತೇನೆಂದು ಅವರು ಯಾರನ್ನು ಬೇಕಾಗರೆ ಗೆಲ್ಲಿಸಬಹುದು, ಹರಾಜಾಗುವ ಪರಿಸ್ಥಿತಿ ಕಾದಿದೆ, ಆ ಬಗ್ಗೆ ನೀವೇನು ಅನುಮಾನಪಡಬೇಡಿ, ಕೆಲವು ಗಣಿ ಮಾಲಿಕರೇ ಈ ಜಿಲ್ಲೆ ನನಗಿರಲೆಂದು ಹರಾಜಿನಲ್ಲಿ ಬಿಡ್ ಮಾಡುತ್ತಾರೆ. ಹರಾಜಿನಲ್ಲಿ ಗೆದ್ದುಬಂದು ಮುಂದಿನ ದಿವಸಗಳಲ್ಲಿ ಆ ರಾಜ್ಯದಲ್ಲಿ ಯಾರು ಬೇಕಾದರೂ ಮುಖ್ಯಮಂತ್ರಿಯಾಗಬಹುದು, ಅದರಲ್ಲೇನು ಅನುಮಾನವಿಲ್ಲ. ಆದುದರಿಂದ ನಮ್ಮ ರಾಜಕಾರಣ ಎಲ್ಲಿಗೆ ಹೋಗುತ್ತಿದೆ, ಎಲ್ಲಿಗೆ ಹೋಗಿ ತಲುಪುತ್ತಿದೆ ಎನ್ನುವ ಬಗ್ಗೆ ಸ್ವಲ್ಪ ಚಿಂತನೆ ಮಾಡಲಿಲ್ಲವೆಂದರೆ ಅತ್ಯಂತ ಗಂಭೀರವಾದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಒಂದು ಕಡೆ ಅಧಿಕಾರಿಗಳ ಭ್ರಷ್ಟತನ ಇದೆ. ಇವತ್ತು ಅನೇಕರ ಪರಿಸ್ಥಿತಿಯನ್ನು ನೋಡಿದಾಗ, ಇಲ್ಲಿ, ಒಂದು ಜಾತಿ ಆಧಾರದ ಮೇಲೆ ವರ್ಗದ ಆಧಾರದ ಮೇಲೆ ಎಂತೆಂಥ ಅಧಿಕಾರಿಗಳಿದ್ದಾರೆಂದರೆ, ದಕ್ಷ ಅಧಿಕಾರಿಗಳು ಇದ್ದಾರೆ, ಭ್ರಷ್ಟ ಅಧಿಕಾರಿಗಳು ಇದ್ದಾರೆ, ಗುಲಾಮಗಿರಿ ಅಧಿಕಾರಿಗಳು ಇದ್ದಾರೆ. ಜಾತಿ ಅಧಿಕಾರಿಗಳು ಇದ್ದಾರೆ, ಹೀಗೆ ಕನಿಷ್ಠ 4 ವರ್ಗದ ಅಧಿಕಾರಿಗಳು ನೇರವಾಗಿ ಸ್ಪಷ್ಟವಾಗಿದ್ದಾರೆ, ಅದರಲ್ಲೇನು ಅನುಮಾನವಿಲ್ಲ, ನಮ್ಮ ಕಣ್ಣ ಎದುರಿಗೆ ಇದ್ದಾರೆ, ಅದು ಯಾರ್‍ಯಾರು ಎಂದು ವಿಶ್ಲೇಷಣೆ ಮಾಡುವ ಪರಿಸ್ಥಿತಿ ಇಲ್ಲ. ಇವತ್ತು ಮಾನ್ಯ ಯಡಿಯೂರಪ್ಪನವರು ತಮ್ಮ ಬಜೆಟ್ ಭಾಷಣದಲ್ಲಿ ವಚನಗಳನ್ನು ಹೇಳಿದ್ದಾರೆ, ಅನೇಕ ಕವಿತೆಗಳನ್ನು ಹೇಳಿದ್ದಾರೆ, ಕವನಗಳನ್ನು ಹೇಳಿದ್ದಾರೆ, ಎಲ್ಲವನ್ನೂ ಹೇಳಿದ್ದಾರೆ, ನನಗನಿಸುತ್ತದೆ, ಅವ್ಯಾವುವು ಕಾರ್ಯರೂಪಕ್ಕೆ ಪ್ರಾಮಾಣಿಕವಾಗಿ ಬರುವುದಿಲ್ಲ. ಎಲ್ಲಿಯವರೆಗೆ ನೀವು ಆಡಳಿತವನ್ನು ಸಮಗ್ರವಾಗಿ ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಸರಿಪಡಿಸುವುದಕ್ಕಾಗುವುದಿಲ್ಲ, ಅಲ್ಲಿಯವರೆಗೆ ಜನರಿಗೆ ಸರಿಯಾದ ಕಾರ್ಯಭಾರವನ್ನು ನೀವು ಕೊಡುವುದಕ್ಕಾಗುವುದಿಲ್ಲ. ನಾಳೆ ಮುಖ್ಯಮಂತ್ರಿಯಾಗುವವರಿಗೆ ಆ ಪರಿಸ್ಥಿತಿ ಬರಬಹುದೆಂದು ಜಯಪ್ರಕಾಶ ಹೆಗ್ಡೆಯವರು ಹೇಳಿದರು. ನನಗೊಂದು ಜ್ಞಾಪಕಕ್ಕೆ ಬರುತ್ತದೆ, ಇತ್ತೀಚಿನ ದಿನಗಳಲ್ಲಿ ಒಂದು ಕನಸು ಬಂತು. ಸಾಮಾನ್ಯವಾಗಿ ಕನಸು

ಬಂದದ್ದು ಯಾವಾಗ ಎಂದರೆ, ಬೆಳಗಿನ ಜಾವವಲ್ಲ. ಬೆಳಗಿನ ಜಾವವಾಗಿದ್ದರೆ ನಿಧಾನವಾಗುತ್ತಿತ್ತು. ಸುಮಾರು ರಾತ್ರಿ 12-00, 1-00 ಗಂಟೆಯಲ್ಲಿ ಕನಸು ಬಂತು. ಅದು ನಿಜವಾಗಲಿಲ್ಲವೆಂದು ನಾನೇ ಅಂದುಕೊಂಡಿದ್ದೇನೆ. ಈ ಕನಸಿನಲ್ಲಿ ಶಾಸನ ಸಭೆಯ ಚುನಾವಣೆ ಪ್ರಾರಂಭವಾಗುತ್ತದೆ. ಈ ಚುನಾವಣೆಗೆ ಹೋದಾಗ ಊರಿನಲ್ಲಿರುವ ರೌಡಿಗಳೆಲ್ಲಾ ಬರುತ್ತಾರೆ. ರೌಡಿಗಳು, ಲಾಂಗ್ ಹಿಡಿದಿರುವವರು, ಕನ್ನ ಹಾಕುವವರು, ಎಲ್ಲಾ ವರ್ಗದ ಜನ ಬಂದು ಅವರೇ ಒಂದು ಲಾಂಗ್ ಪಕ್ಷವೆಂದು ಮಾಡಿಕೊಳ್ಳುತ್ತಾರೆ. ನಿಮ್ಮ ಮತ ಯಾರಿಗೆ ಲಾಂಗ್ ಪಕ್ಷಕ್ಕೆಂದು ಬೀದಿ ಹಾದಿಯಲ್ಲೆಲ್ಲಾ ಕೂಗುತ್ತಿದ್ದಾರೆ. ಪ್ರಾಮಾಣಿಕರಾದವರು ಚುನಾವಣೆಗೆ ಹೋದಾಗ, ಸ್ವಾಮಿ, ನೀವು ಚುನಾವಣೆಗೆ ನಿಲ್ಲುವುದಕ್ಕೆ ಹೋಗಬೇಡಿ, ನಿಮಗೆ ಗೊತ್ತಿಲ್ಲ, ಆ ರೌಡಿ ರಂಗವೆನ್ನುವವನು ನಿಂತುಬಿಟ್ಟಿದ್ದಾನೆ, ದುಡ್ಡು ಅವನ ಹತ್ತಿರವಿದೆ, ಜನರು ಅವನಿಗೆ ಓಟ್ ಹಾಕುತ್ತಾರೆ, ಆದುದರಿಂದ ಖಂಡಿತ ನೀವು ನಿಲ್ಲಬಾರದು, ನೀವು ನಿಂತರೆ ಸೋತುಬಿಡುತ್ತೀರಿ ಎಂದು ಜನರೇ ಹೇಳುತ್ತಾರೆ. ಅವನಿಗೆ ಓಟು ಹಾಕುತ್ತಾರೆ, ಅವನ ಬಳಿ ದುಡ್ಡು ಇದೆ, ಖಂಡಿತ ನೀವು ನಿಲ್ಲಬಾರದು. ನೀವು ಚುನಾವಣೆಗೆ ನಿಂತರೆ ಸೋಲುತ್ತೀರಿ, ಆದ್ದರಿಂದ ದಯವಿಟ್ಟು ನಿಲ್ಲಬೇಡಿ ಎಂದು ಜನರೇ ಹೇಳುತ್ತಾರೆ ಯಡಿಯೂರಪ್ಪನವರೇ, ನಾವು ಏನು ಮಾಡುವುದು ಇಲ್ಲ ನಾನು ಪ್ರಾಮಾಣಿಕ ದುಡಿದಿದ್ದೇನೆ, ತ್ಯಾಗ ಮಾಡಿದ್ದೇನೆ ಎಂದು ಇವರು ಹೇಳುತ್ತಾರೆ. ನೀವು ಯಾವ ತ್ಯಾಗ ದುಡಿಮೆ ಯಾವುದು ಇಲ್ಲ, ರೌಡಿ ರಂಗ ನಿಂತಿದ್ದಾನೆ, ರೇಪ್ ಕಾಳ ನಿಂತಿದ್ದಾನೆ, ಲಾಂಗ್ ಬೋಳ ನಿಂತಿದ್ದಾನೆ, ಕನ್ನಕಾತ್ರಿ ಶಂಕರ ನಿಂತಿದ್ದಾನೆ, ಜೈನ್ ಭಂಡಾರಿ ನಿಂತಿದ್ದಾನೆ, ಕಳ್ಳಭಟ್ಟಿ ಸಿಂಗ್ ನಿಂತಿದ್ದಾನೆ, ಹೀಗೆ ಪ್ರಾರಂಭವಾಗುತ್ತದೆ. ಎಲ್ಲಾ ಕಡೆ ಜನ ಬೀದಿಗೆ ಬಂದು ಬೆವರುತ್ತಾರೆ. ಚುನಾವಣೆ ಪ್ರಾರಂಭವಾಯಿತು. ಈ ಚುನಾವಣೆ ಯಾರ್‍ಯಾರು ಆದರ್ಶ, ತತ್ವ, ಸಿದ್ಧಾಂತ, ಎಲ್ಲ ಹೇಳುತ್ತಿದ್ದರೋ ಅವರೆಲ್ಲರೂ ಠೇವಣಿ ಕಳೆದುಕೊಂಡವರೇ. ತತ್ವ ಸಿದ್ಧಾಂತ ಹೇಳಿಕೊಂಡವರೆಲ್ಲಾ ಠೇವಣಿ ಕಳೆದುಕೊಂಡಿದ್ದಾರೆ. ರೌಡಿ ರಂಗನ ಗುಂಪು ಅಧಿಕಾರಕ್ಕೆ ಬಂದು ಬಿಡುತ್ತದೆ. ಎಲ್ಲೇ ನೋಡಿ ರೌಡಿ ರಂಗ, ರೌಡಿ ರಂಗ ಏನು ಜನ, ಏನು ಈ ಪರಿಸ್ಥಿತಿ ಆಯಿತಲ್ಲಾ ನಮ್ಮ ಗತಿ ಏನು ಎಂದು ನಾವೆಲ್ಲಾ ಚಿಂತನೆ ಮಾಡುತ್ತಿದ್ದೇವೆ. ಕೊನೆಗೆ ರೌಡಿ ರಂಗ ಮುಖ್ಯ ಮಂತ್ರಿ ಆಗಲೇಬೇಕು. ಎಲ್ಲರ ಮೇಲೆ ಅವನ ಪ್ರಭಾವ. ನನಗೆ ಓಟು ಹಾಕಬೇಕು, ಓಟು ಹಾಕಲಿಲ್ಲ, ಓಟು ಹಾಕಲೇಬೇಕು. MLA ನೀನು ಎಷ್ಟು ಬೇಕಾದರೂ ತಗೋ. ಒಟ್ಟಿನಲ್ಲಿ

ಓಟು ಹಾಕಬೇಕು. ಓಟು ಹಾಕಲಿಲ್ಲವೆಂದರೆ ಇಲ್ಲ ಉಳಿದುಕೊಳ್ಳುತ್ತೀಯಾ ಇಲ್ಲ ಹೋಗುತ್ತೀಯಾ ಇವೆರಡೇ. ನಿನಗೆ ಏನು ಬೇಕು? ಉಳಿಯುತ್ತೀಯಾ ಓಟು ಹಾಕುತ್ತೀಯಾ? ಅವರ ಮನೆ ಹೆಂಗಸರೆಲ್ಲಾ ಪ್ರಾರಂಭ ಮಾಡುತ್ತಾರೆ. ರೌಡಿ ರಂಗನಿಗೆ ಓಟು ಕೊಟ್ಟು ಬಿಡಿ. ದುಡ್ಡೂ ಬರುತ್ತದೆ, ನಾವೂ ಬದುಕುತ್ತೇವೆ. ನೀವು ಅವರಿಗೆ ಓಟು ಕೊಟ್ಟುಬಿಡಿ. ಆಗೇ ಹೋಯಿತು, ರೌಡಿ ರಂಗನಿಗೆ ರಾಜ್ಯಪಾಲರು ಕರೆದೇ ಬಿಟ್ಟರು ರೌಡಿ ರಂಗ ಮುಖ್ಯಮಂತ್ರಿ ಆಗಿಯೇ ಬಿಟ್ಟ, ನಾವು ಇನ್ನು ನೋಡುತ್ತಿದ್ದೇವೆ. ಆ ಕನಸು ಎಲ್ಲಿಗೆ ಹೋಗುತ್ತದೋ ಏನಾಗುತ್ತದೋ ಎಂದು ನನಗೆ ಭಯ ಭೀತಿ ಉಂಟಾಯಿತು. ಅಧಿಕಾರಕ್ಕೆ ಬಂದೇ ಬಿಟ್ಟ, ಅಧಿಕಾರ ನಡೆಸುವುದಕ್ಕೆ ಮುಖ್ಯಮಂತ್ರಿ ಪದವಿಗೆ ಬಂದೇ ಬಿಟ್ಟ, ಮುಖ್ಯಮಂತ್ರಿ ಪದವಿ ಆದ ತಕ್ಷಣ ಮೊದಲನೆಯವರು ಮೊಟ್ಟ ಮೊದಲು ಬರುವವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು. ಚಂದ್ರಶೇಖರ ಪಾಟೀಲರು ಮುಖ್ಯಮಂತ್ರಿಗಳಿಗೆ ನೋಡುವುದಕ್ಕೆ ಬರುತ್ತಾರೆ. ಉಡುಪಿಯಲ್ಲಿ ಸಾಹಿತ್ಯ ಸಮ್ಮೇಳನ ಮಾಡುತ್ತೇವೆ, ಎಂದು ಹೇಳುತ್ತಾರೆ. ಯಾರೇ ಮುಖ್ಯಮಂತ್ರಿ ಆದರೂ ಪರಿಣಿತರು, ವಿದ್ಯಾವಂತರು, ತಜ್ಞರು, ಇವರೇ PA, PS ಗಳು ಆಗುತ್ತಾರೆ. ಅವರಿಗೇನು, ಯಾರಾದರೇನು, ಇಲ್ಲಿ ಅನೇಕರು ಇದ್ದಾರೆ, ಅದರ ಬಗ್ಗೆ ನಾನು ಮಾತನಾಡುವುದು ಬೇಡ. ಅವರೇ ಸಂಪೂರ್ಣ ಹೇಳಿ ಕೊಡುತ್ತಾರೆ. ಮುಖ್ಯ ಮಂತ್ರಿಗಳು ಹೊರಗಡೆ ಬಂದರು, ಮೊದಲು ಬಂದವರು ಯಾರು? ಪಾಪು. ಪಾಟೀಲ್ ಪುಟ್ಟಪ್ಪನವರು ಬರುತ್ತಾರೆ, ಚಂದ್ರಶೇಖರ ಪಾಟೀಲ್‌ರವರು ಬರುತ್ತಾರೆ. ಒಬ್ಬರು ಚಂಪಾ, ಇನ್ನೊಬ್ಬರು ಪಾಪು. ಚಂದ್ರಶೇಖರ ಪಾಟೀಲರು ಪಿಎ ಬಳಿ ಬಂದು ನೋಡಪ್ಪ ಮುಖ್ಯ ಮಂತ್ರಿಗಳಿಗೆ ನಾನು ಬಂದಿದ್ದೇನೆಂದು ಹೇಳು ಎಂದರು. ಸರಿ ಒಳಗೆ ಹೋಗಿ ರೌಡಿ ರಂಗ ಮುಖ್ಯಮಂತ್ರಿಗೆ ಪಿಎ ಬಂದು ಸಾರ್ ಎಂದು ಹೇಳುತ್ತಾನೆ. ಹಾಗೆ ಅಂದ ತಕ್ಷಣ ಏನ್ರೀ ನನಗೆ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಬಿಡುವುದಿಲ್ಲವಲ್ಲ. ಪಿಎ ಮೇಲೆ ಸಿಕ್ಕಾಪಟ್ಟೆ ರೇಗಿ ಬಿಡುತ್ತಾರೆ. ಸಾರ್ ಚಂಪಾ ಬಂದಿದ್ದಾರೆಂದು ಹೇಳುತ್ತಾರೆ. ಚಂಪಾ ಯಾರ್ರೀ ಅದು ಚಂಪ? ಬಹಳ ರಮ್ಯವಾಗಿ ಚೆನ್ನಾಗಿ ಎಲ್ಲಾ ರೀತಿಯಲ್ಲಿ ಹೇಳುತ್ತಾರೆ. ಏಕ್ರೀ ಬಂದಿದ್ದಾರೆ ಅವರು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಣ ಕೊಡಬೇಕಂತೆ, ನಾವ್ಯಾಕೆ ಹಣ ಕೊಡಬೇಕು ಸಾಹಿತ್ಯ ಸಮ್ಮೇಳನಕ್ಕೆಂದು ರೌಡಿ ರಂಗ ಹೇಳುತ್ತಾನೆ. ಇದಕ್ಕೂ ನಮಗೂ ಸಂಬಂಧವಿಲ್ಲ, ಇಲ್ಲಾ ಸಾರ್, ಬಹಳ ಪ್ರಾಮುಖ್ಯವಾದುದು. ತಾವು ಕೊಡಬೇಕಾಗುತ್ತದೆ ಎಂದು ಹೇಳುತ್ತಾರೆ. ಸರಿ ಕರೆಯಿರಿ ಎಂದು ಹೇಳುತ್ತಾರೆ, ಒಳಗಡೆ

ಬಂದರು. ನಿಮ್ಮ ಹೆಸರು ಚಂದ್ರಶೇಖರ ಪಾಟೀಲ್, ಏ ಪಿಎ ಬಾರಪ್ಪಾ ಇಲ್ಲಿ ನಾನು ಚಂಪನಿಗೆ ಕರಿ ಎಂದರೆ, ಚಂದ್ರಶೇಖರ ಪಾಟೀಲ್‌ಗೆ ಕರೆದಿದ್ದೀಯಾ, ಇವರಿಗೇಕೆ ಕರೆದೆ, ನಿನಗೆ ಮಾನ ಮರ್ಯಾದೆ ಇಲ್ಲವಾ? ನನ್ನ ಹೆಸರು ಚಂದ್ರಶೇಖರ ಪಾಟೀಲ್ ಅಂತ. "ಚ" ಅಂದರೆ ಚಂಪ "ಪ" ಅಂದರೆ ಪಾಟೀಲ್, ಹೌದಾ ಸರಿ. ನಾನು "ರೌ ರ" ರೌಡಿ ರಂಗ "ರೌ ರ" ಎಂದು ಏಕೆ ಇಟ್ಟುಕೊಳ್ಳಬಾರದು ಎಂದು ಪಿಎಗೆ ಹೇಳುತ್ತಾರೆ. ಮುಖ್ಯಮಂತ್ರಿ "ರೌರ" ಎಂದು ಇಟ್ಟುಕೊಳ್ಳುತ್ತಾನೆ. ಇದಾದ ನಂತರ ಮುಖ್ಯಮಂತ್ರಿಗಳನ್ನು ಮಠಾಧಿಪತಿಗಳು ಕರೆಯುತ್ತಾರೆ. ಅವರಿಗೆ ಮರ್ಯಾದೆ ಗೌರವ ಮಾಡುತ್ತಾರೆ. ಎಲ್ಲೆಲ್ಲೋ ಹೊರಟು ಹೋಗುತ್ತದೆ. ಇದೆಲ್ಲಾ ನೋಡಿ ಮುಂದಿನ ದೃಷ್ಟಿ ನಾನು ನಮ್ಮದೇನು, ನಮ್ಮ ಪರಿಸ್ಥಿತಿ ಏನು, ಎಂದು ನಾವು ಯೋಚನೆ ಮಾಡಬೇಕಾಗುತ್ತದೆ. ನಾವು ನಂಜನಗೂಡು ದೇವಸ್ಥಾನದ ಮುಂದೆ ರೌಡಿ ರಂಗಣ್ಣ ಹೇರ್ ಕಟಿಂಗ್ ಸಲೂನ್ ಎಂದು ಇಟ್ಟುಕೊಳ್ಳುತ್ತೇವೆ. ನಮ್ಮ ಪರಿಸ್ಥಿತಿ ನೋಡಿ, ನಮ್ಮದು ಏನಾಗುತ್ತದೆ ಎಂದರೆ, ರೌಡಿ ರಂಗಣ್ಣ ಈ ರಾಜ್ಯಕ್ಕೆ ಬಂದು ಅವನು ಅಧಿಕಾರಕ್ಕೆ ಬಂದ ಮೇಲೆ, ನಾವು ನಂಜನಗೂಡಿನಲ್ಲಿ ಕೆಲವರು, ತಿರುಪತಿಯಲ್ಲಿ ಕೆಲವರು, ತತ್ವ ಸಿದ್ಧಾಂತಗಳನ್ನು ಹೇಳತಕ್ಕಂತಹ ಮಹನೀಯರೆಲ್ಲರೂ ಅಲ್ಲಿ ಗಂಭೀರವಾಗಿ "ರೌಡಿ ರಂಗಣ್ಣ ಹೇರ್ ಕಟಿಂಗ್ ಸಲೂನ್" ಎಂದು ಇಟ್ಟುಕೊಳ್ಳಬೇಕಾಗುತ್ತದೆ. ಮಠಾಧಿಪತಿಗಳು ಕರೆದು ಹಾರ ತುರಾಯಿ ಹಾಕಿ, ರೌಡಿ ಎಂದರೆ, ಅದು ಬಹಳ ಅತ್ಯಂತ ಗಂಭೀರವಾದ ಹೆಸರು, ತ್ಯಾಗ ಮಾಡಿದಂತಹ ಹೆಸರು. ವೀರಭದ್ರನ ಸಂಕೇತ ಎಂದು ಅವರೇ ಒಪ್ಪಿಕೊಳ್ಳುತ್ತಾರೆ. ಇವರು ಹೋದ ನಂತರ ಇನ್ನೊಬ್ಬರು ಸ್ವಾಮಿಗಳು ಬರುತ್ತಾರೆ. ಕರೆಯಿರಿ ಎಂದು ಹೇಳುತ್ತಾರೆ. ರೌಡಿ ರಂಗಣ್ಣ ಮುಖ್ಯ ಮಂತ್ರಿ ಕರೆಯಿರಿ ಎಂದು ಹೇಳುತ್ತಾರೆ. ಮುಖ್ಯಮಂತ್ರಿ "ರೌರ" ಮುಖ್ಯಮಂತ್ರಿ "ರೌರ" ಎಂದು ಪ್ರಾರಂಭವಾಗುತ್ತದೆ. ಏನಿದು ಎಂದು ನಾನು ಕಣ್ಣು ಬಿಡುತ್ತೇನೆ, ನಮ್ಮ ಹಣೆಬರಹ ಮುಂದಿನ ದಿನಗಳಲ್ಲಿ ನಾವು ಎಲ್ಲಿಗೆ ತಲುಪುತ್ತೇವೆ ಎನ್ನತಕ್ಕಂಥಾದ್ದನ್ನು ಅತ್ಯಂತ ಗಂಭೀರವಾಗಿ ನಾವು ಚಿಂತನೆ ಮಾಡಲಿಲ್ಲವೆಂದರೆ, ಈ ದೇಶದಲ್ಲಿ ಅನಾಯಕತ್ವ, ಅರಾಜಕತೆ ಎಲ್ಲವೂ ಸಂಪೂರ್ಣವಾಗಿ ತೀರ್ಮಾನವಾಗುತ್ತವೆ. ಇದರ ಬಗ್ಗೆ ನಾವು ಅತ್ಯಂತ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಅದು ನಮ್ಮ ಕರ್ತವ್ಯ. ಆ ಕನಸು ಭಯ ಭೀತಿಯನ್ನು ಹುಟ್ಟಿಸತಕ್ಕಂತಹ ಕನಸು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಕನಸು ಯಾವ ದೃಷ್ಟಿಗೆ ತಲುಪುತ್ತದೋ ಎಲ್ಲಿಗೆ ಹೋಗುತ್ತದೋ ಗೊತ್ತಿಲ್ಲ ಅನೇಕರು ಇದರ ಬಗ್ಗೆ ಕೆಲವರ ಹೆಸರು ಹೇಳುವುದಕ್ಕೆ

ಹೋಗುವುದಿಲ್ಲ. ನಂಜನಗೂಡು ದೇವಸ್ಥಾನದಲ್ಲಿ ಸೇರಿದಂತಹವರಲ್ಲಿ ಇಲ್ಲಿ ಮಾನ್ಯ ರಮೇಶ್ ಕುಮಾರ್‌ರವರು ಇಲ್ಲಿದ್ದಾರೆ. ನಾವೆಲ್ಲಾ ಒಟ್ಟಿಗೆ ಸೇರಿಕೊಳ್ಳುತ್ತೇವೆ. ಇನ್ನು ಕೆಲವರು ಇದ್ದಾರೆ, ಅವರ ಹೆಸರುಗಳನ್ನು ಹೇಳುವುದು ಬೇಡ. ಈಗ ವಾರ್ತಾ ಇಲಾಖೆ ಬಹಳ ಪ್ರಮುಖವಾದ ಇಲಾಖೆ. ಈ ವಾರ್ತಾ ಇಲಾಖೆಗೆ ಪೋಲಿಸ್ ಅಧಿಕಾರಿಗಳನ್ನು ಹಾಕಬಾರದು. ವಾರ್ತಾ ಇಲಾಖೆ ಇಡೀ ರಾಜ್ಯದ ಒಂದು ಅತ್ಯುನ್ನತವಾದ ಇಲಾಖೆ. ರಾಜ್ಯದ ಬಾಯಿ. ಎಲ್ಲಾ ದೃಷ್ಟಿಯಲ್ಲಿಯೂ ಬಹಳ ಪ್ರಾಮುಖ್ಯವಾದ ಇಲಾಖೆ. ಈ ವಾರ್ತಾ ಇಲಾಖೆಗೆ ಇತ್ತೀಚಿನ ದಿನಗಳಲ್ಲಿ ಕಡೆಗಣಿಸಿದ್ದಾರೆ. ಆ ಇಲಾಖೆಗೆ ತಾವು ಹೆಚ್ಚಿನ ಹಣವನ್ನೂ ಕೊಡುತ್ತಿಲ್ಲ. ಆದರೆ ಪ್ರಚಾರ ಮಾತ್ರ ಎಲ್ಲ ದೃಷ್ಟಿಯಿಂದ ಬೇಕು. ಕೆಲವು IAS ಮತ್ತು IPS ಅಧಿಕಾರಿಗಳು ಯುವಜನ ಸೇವೆ ಮತ್ತು ವಾರ್ತಾ ಇಲಾಖೆಗೆ ಬರಬೇಕೆಂದು ಇದ್ದಾರೆ. ನನಗನ್ನಿಸುತ್ತದೆ, IPS ಅಧಿಕಾರಿಗಳು ಪೋಲಿಸ್ ಅಧಿಕಾರಿಗಳಾಗಿ ಇರಲಿ. ವಾರ್ತಾ ಇಲಾಖೆಗೆ ಮಾತ್ರ ಪೋಲಿಸ್ ಇಲಾಖೆಯವರಿಗಾಗಲಿ, ಬೇರೆ ಯಾವುದೇ ಇಲಾಖೆಗಳವರಿಗಾಗಲಿ ಹಾಕಬಾರದು. ಆ ಇಲಾಖೆಗೆ ಒಂದು ಪ್ರಭುತ್ವ ಇದೆ. ಆ ಇಲಾಖೆಗೆ ಒಂದು ಶಕ್ತಿ ಇದೆ. ಪತ್ರಕರ್ತರು ರಾಜ್ಯ, ಜನತೆ ಶಾಸಕಾಂಗ ಪ್ರಜಾತಂತ್ರ ವ್ಯವಸ್ಥೆ ಎಲ್ಲಾ ಅಂಗಗಳಲ್ಲಿಯೂ ಮಾತನಾಡತಕ್ಕಂತಹ, ಕೆಲಸ ಮಾಡತಕ್ಕಂತಹ ಒಂದು ದೊಡ್ಡ ಅಂಗ ಅದು. ಈ ವಾರ್ತಾ ಇಲಾಖೆಯನ್ನು ನಾವು ಸರಿಯಾದ ರೀತಿಯಲ್ಲಿ ಸಂಪೂರ್ಣವಾಗಿ ವ್ಯವಸ್ಥಿತವಾಗಿ ಮಾಡಬೇಕು. ಇನ್ನು ಮುಂದೆ ಯಾವುದೇ ಕಾರಣಕ್ಕೂ IPS ಅಧಿಕಾರಿಗಳನ್ನು ಅಲ್ಲಿಗೆ ಹಾಕುವುದಕ್ಕೆ ಸಾಧ್ಯವಿಲ್ಲ. ಹಾಕ ಕೂಡದು. ಇದಾದ ಮೇಲೆ, ಇನ್ನೊಂದು ಮಾಹಿತಿ ಆಯೋಗ ಎಂದು ಮಾಡಿಕೊಂಡಿದ್ದಾರೆ. ಮೂರನೇ ಮಹಡಿಯಲ್ಲಿ ಹಿಂದಿನ ಮುಖ್ಯಕಾರ್ಯದರ್ಶಿಯವರನ್ನು ಅದರಲ್ಲಿ ಹಾಕಿದ್ದಾರೆ. ಮಿಶ್ರಾರವರು ಬಹಳ ಒಳ್ಳೆಯ ವ್ಯಕ್ತಿ. ನನಗೆ ಅದರ ಬಗ್ಗೆ ಎರಡನೇ ಅಭಿಪ್ರಾಯ ಇಲ್ಲ. ದಕ್ಷರಿದ್ದಾರೆ. ಈ ಇಲಾಖೆಯಲ್ಲಿ ಎಲ್ಲರೂ ಇನ್ನೇನು ಕೊನೆಯಲ್ಲಿ ನಿವೃತ್ತರಾಗುವಾಗ ಈ ಇಲಾಖೆಗೆ ತಂದು ಹಾಕುತ್ತಾರೆ. ಏಕೆ ಬೇಕಾಗಿತ್ತು? ಏನು ಇಲಾಖೆ ಇದು, ಯಾವ ಕಾರಣಕ್ಕೆ, ಲೋಕಸೇವಾ ಆಯೋಗದಲ್ಲಿದ್ದ ಕೃಷ್ಣ ಎನ್ನುವವರನ್ನು ಅಲ್ಲಿಗೆ ಹಾಕಿದ್ದೀರಿ. ಅವರು ಅಲ್ಲಿ ಐದು ವರ್ಷಗಳ ಕಾಲ ಇದ್ದರು. ಅದಾದ ಮೇಲೆ ಆರು ವರ್ಷಗಳ ಕಾಲ ಇದ್ದರು. ಅದಾದ ಮೇಲೆ ಮತ್ತೆ ಐದು ವರ್ಷ ಮತ್ತೆ ಯಾರ್ಯಾರು ನಿವೃತ್ತರಾಗುತ್ತಾರೆ, ಅವರನ್ನು ಅಲ್ಲಿಗೆ ಹಾಕುವುದಕ್ಕೆ ಅದು ಅನಾಥಾಶ್ರಮ ಅಲ್ಲ. ಅನಾಥಾಶ್ರಮಗಳು ಬೇಕಾದಷ್ಟು ಇವೆ. ಬೆಂಗಳೂರು ಸುತ್ತ ದೊಡ್ಡ

ದೊಡ್ಡ ಅನಾಥಾಶ್ರಮಗಳು ಇವೆ. ಅಲ್ಲಿಗೆ ಹೋಗಲಿ. ಯಾವ ಕಾರಣಕ್ಕೆ ಇಂಥವರನ್ನು ಅಲ್ಲಿಗೆ ಹಾಕಬೇಕು? ಏತಕ್ಕೋಸ್ಕರ ನೀವು ಆಯೋಗ ಮಾಡಿದ್ದು? ಇದು ಬೇಕಾಗಿರಲಿಲ್ಲ. ಯಾರ ಅನುಕೂಲಕ್ಕೋಸ್ಕರ ಈ ಆಯೋಗ? ಯಾವುದೇ ಕಾರಣಕ್ಕೂ ಸರ್ಕಾರ ಇದನ್ನು ಮಾಡಬಾರದು. ಇದು ಸರಿಯಾದ ಕ್ರಮವಲ್ಲ. ಈ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ, ನಮಗೆ ಈ ಆಯೋಗ ಬೇಕಾಗಿಲ್ಲ. ಈ ಆಯೋಗವನ್ನು ರದ್ದು ಮಾಡತಕ್ಕಂಥದ್ದು ಬಹಳ ಒಳ್ಳೆಯದು. ಇನ್ನು ವಾರ್ತಾ ಇಲಾಖೆಯನ್ನು ಯಾವ ಉದ್ದೇಶಕ್ಕಾಗಿ ಮಾಡಲಾಗಿದೆಯೋ ಆ ಉದ್ದೇಶ ಸಫಲವಾಗುತ್ತಿಲ್ಲ ಮತ್ತು ಉದ್ದೇಶ ಈಡೇರುತ್ತಿಲ್ಲ. ಇತ್ತೀಚೆಗೆ ಕನ್ನಡ ಚಿತ್ರಗಳ ಬಗ್ಗೆ ತಾವು ತೆಗೆದುಕೊಂಡ ನಿರ್ಧಾರ ಸರಿಯಿಲ್ಲ. ರಿಮೇಕ್ ಚಿತ್ರಗಳಿಗೆ ಸಬ್ಸಿಡಿ ಕೊಡತಕ್ಕಂಥದ್ದು ಒಳ್ಳೆಯದಲ್ಲ. ಯಾವುದೇ ಕಾರಣಕ್ಕೂ ರಿಮೇಕ್ ಕನ್ನಡ ಚಿತ್ರಗಳಿಗೆ ಸಬ್ಸಿಡಿಯನ್ನು ಕೊಡಬಾರದು. ರಿಮೇಕ್ ಚಿತ್ರಗಳಲ್ಲಿ ಕಥೆಯನ್ನು ಸಂಪೂರ್ಣವಾಗಿ ಬೇರೆ ಭಾಷೆಯಲ್ಲಿದ್ದಂತೆ ಯಥಾವತ್ತಾಗಿ ತೆಗೆದುಕೊಂಡಿರುತ್ತಾರೆ. ಆದಕಾರಣ ಈ ರಿಮೇಕ್ ಚಿತ್ರಗಳಿಗೆ ಸಬ್ಸಿಡಿಯನ್ನು ಎಂದಿಗೂ ಕೊಡಬಾರದೆನ್ನುವ ಮಾತನ್ನು ಅತ್ಯಂತ ಒತ್ತಾಯಪೂರ್ವಕವಾಗಿ ತಮಗೆ ಹೇಳಬಯಸುತ್ತೇನೆ. ಇನ್ನು ಬೆಂಗಳೂರಿನಲ್ಲಿ 2011 ನೇ ಇಸವಿಯಷ್ಟೊತ್ತಿಗೆ 600 ದಶಲಕ್ಷ ಲೀಟರ್ ನೀರಿನ ಕೊರತೆ ಬರುತ್ತದೆ. ನೀವು ಇದಕ್ಕಾಗಿ ಯಾವ ರೀತಿಯ ಯೋಜನೆಯನ್ನು ಹಾಕಿದ್ದೀರಿ? ಯಾವ ಯೋಜನೆಯೂ ನಿಮ್ಮಲ್ಲಿ ಈಗ ಇಲ್ಲ. ಇದು ಒಳ್ಳೆಯದಲ್ಲ. ಇಂದು ಬೆಂಗಳೂರಿನಲ್ಲಿ ಸುಮಾರು 20 ಸಾವಿರಕ್ಕೂ ಹೆಚ್ಚು ಕಾರ್ಖಾನೆಗಳಿವೆ. ಸುಮಾರು 10 ಸಾವಿರಕ್ಕಿಂತ ಹೆಚ್ಚು ಹೋಟೆಲ್‌ಗಳಿವೆ. ಬೆಂಗಳೂರು ನಗರದಲ್ಲಿ ಹೋಟೆಲ್, ರಸ್ತೆ, ಆಸ್ಪತ್ರೆ, ಕಾರ್ಖಾನೆಗಳು, ಇವುಗಳಿಂದ ಪ್ರತಿದಿನ 2500 ಮೆಟ್ರಿಕ್ ಟನ್‌ನಷ್ಟು ತ್ಯಾಜ್ಯ ವಸ್ತು ಉತ್ಪತ್ತಿಯಾಗುತ್ತಿದೆ. ಬೆಂಗಳೂರಿನಲ್ಲಿ ಸುಮಾರು 700 ಆಸ್ಪತ್ರೆಗಳಿವೆ ಮತ್ತು ಆರೋಗ್ಯ ಕೇಂದ್ರಗಳಿವೆ. ಇವುಗಳಿಂದ 10 ಮೆಟ್ರಿಕ್ ಟನ್‌ನಷ್ಟು ಜೀವ ವೈದ್ಯಕೀಯ ತ್ಯಾಜ್ಯ ವಸ್ತುಗಳು ಆಸ್ಪತ್ರೆಯಿಂದ ಉತ್ಪತ್ತಿಯಾಗುತ್ತಿದೆ. ಇನ್ನು ಬಹು ಮಹಡಿ ಕಟ್ಟಡಗಳಿಂದ ಅಪಾಯ ಕಟ್ಟಿಟ್ಟ ಬುತ್ತಿ. 130 ಕ್ಕೂ ಹೆಚ್ಚು ಕೆರೆಗಳು ಬರಿದಾಗಿವೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಇವುಗಳ ಬಗ್ಗೆ ಕಾಳಜಿಯಿಲ್ಲ. ಇದುವರೆಗೂ ಹಸಿರು ವಲಯವೆಂದು ಏನಿತ್ತು, ಅದನ್ನು ಸಂಪೂರ್ಣವಾಗಿ ತೆಗೆದುಹಾಕಿದ್ದಾರೆ. ಇದರಲ್ಲಿ ನಡೆದಿರುವುದೆಲ್ಲಾ ಒಂದು ರೀತಿಯಲ್ಲಿ ಹಗಲು ದರೋಡೆಯಂತೆ. ಕೆಲವರ ಜಮೀನು ಹೊಡೆಯುವುದಕ್ಕೆ, ಕೆಲವರ ಜಮೀನು ಅಲ್ಲಿತ್ತು, ಈ ಜಮೀನುಗಳನ್ನು

ಉಳಿಸಿಕೊಳ್ಳುವುದಕ್ಕೆ ಹೀಗೆ ಇದರಲ್ಲಿ ದೊಡ್ಡ ಹಗಲು ದರೋಡೆಯಾಗಿದೆ. ಇನ್ನು ಬೆಂಗಳೂರಿನಲ್ಲಿ ಮಲ್ಲೇಶ್ವರಂಗೆ ಹೋಗುವಾಗ ದಾರಿಯಲ್ಲಿ ಇರುವ ಸ್ಮಶಾನದಲ್ಲಿ ಹೆಣದ ಮೇಲೆ ಹೆಣ, ಹೆಣದ ಮೇಲೆ ಹೆಣ, ಬೆಂಗಳೂರು ಇಷ್ಟು ಬೃಹತ್ತಾಗಿ ಬೆಳೆಯುತ್ತಿದೆ, ಸಮಗ್ರವಾಗಿ ಬೆಂಗಳೂರು ನಗರದ ಸಮಗ್ರವಾದ ಅಭಿವೃದ್ಧಿಗೆ ಸ್ಮಶಾನಗಳ ಬೆಳವಣಿಗೆಗೆ ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಂಡಿಲ್ಲ. ನಗರದ ಸಮಗ್ರ ಅಭಿವೃದ್ಧಿಗೂ ಕೂಡ ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಇನ್ನು ಬೆಂಗಳೂರು ನಗರ ಸೇರಿದಂತೆ ಇಡೀ ರಾಜ್ಯದಲ್ಲಿ 37 ಜನರು ನಾಯಿ ಕಡಿತದಿಂದ ಸಾವನ್ನಪ್ಪಿದ್ದಾರೆ. ರಾಜ್ಯದಲ್ಲಿ ಒಟ್ಟು 2623 ಸರ್ಕಾರಿ ಆಸ್ಪತ್ರೆಗಳಿದ್ದು ಇಲ್ಲಿ 709 ವೈದ್ಯರ ಕೊರತೆ ಇದೆ. ಈ ಪರಿಸ್ಥಿತಿಯಿಂದಾಗಿ ಇಂದು ಆಸ್ಪತ್ರೆಗಳು ನರಕವಾಗಿವೆ. ರಾಜ್ಯದಲ್ಲಿ ಒಟ್ಟು 3947 ಪಶು ಚಿಕಿತ್ಸಾಲಯಗಳಿದ್ದು 153 ಸಹಾಯಕ ನಿರ್ದೇಶಕರುಗಳ ಮತ್ತು 993 ಪಶು ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇದೆ. ಇದರ ಬಗ್ಗೆ ಪ್ರಾಮಾಣಿಕವಾಗಿ ಚಿಂತನೆಯನ್ನು ಮಾಡುತ್ತಿಲ್ಲ. ಈ ರೀತಿಯಲ್ಲಿ ಹುದ್ದೆಗಳು ಖಾಲಿ ಇದ್ದರೆ ಯಾವ ರೀತಿಯಲ್ಲಿ ಜಾನುವಾರುಗಳಿಗೆ ಚಿಕಿತ್ಸೆಯನ್ನು ಕೊಡಿಸುತ್ತೀರಿ ಎಂಬ ಬಗ್ಗೆ ತಾವು ಹೇಳಬೇಕಾಗುತ್ತದೆ. ಇನ್ನು 2003 ರಿಂದ 2007 ರ ಜೂನ್‌ವರೆಗೆ ರಾಜ್ಯದಲ್ಲಿ 1514 ರೈತರ ಆತ್ಮಹತ್ಯೆ ಆಗಿದೆ. ಈ ಆತ್ಮಹತ್ಯೆಗಳನ್ನು ನಿಲ್ಲಿಸುವುದಕ್ಕೆ ಸರ್ಕಾರ ಏನು ಮಾಡಿದೆ? ಏನು ವ್ಯವಸ್ಥೆ ರೈತನಿಗಾಗಿ ಮಾಡಿ ಅನುಕೂಲ ಮಾಡಿಕೊಟ್ಟಿದ್ದೀರಿ? ಏನನ್ನೂ ನೀವು ಮಾಡಿಲ್ಲವಲ್ಲ. ಮಾನ್ಯ ಮುಖ್ಯಮಂತ್ರಿಗಳು ಸೆಂಟ್ರಲ್ ಕಾಲೇಜ್ ಸಭಾಂಗಣದಲ್ಲಿ ರೈತರುಗಳ ಒಂದು ಸಭೆಯನ್ನು ಕರೆದಿದ್ದರು. ಅದೂ ತಮಗೆ ಬೇಕಾದಂಥ ರೈತರುಗಳ ಸಭೆಯನ್ನು ತಾವು ಕರೆದಿರಿ. ಇದರಿಂದ ರೈತರಿಗೆ ಏನಾಯಿತು? ರೈತರಿಗೆ ಯಾವ ಅನುಕೂಲವನ್ನು ನೀವು ಮಾಡಿಕೊಟ್ಟಿರಿ? ಏನೂ ಆಗಲಿಲ್ಲವಲ್ಲ. 1514 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದುವರೆಗೆ ತಲಾ ಒಂದು ಲಕ್ಷ ರೂಪಾಯಿಯಂತೆ 607 ಲಕ್ಷ ರೂಪಾಯಿಗಳನ್ನು ಪರಿಹಾರವಾಗಿ ಕೊಟ್ಟಿದ್ದೀರಿ. ಅಂದರೆ ರೈತರ ಜೀವಕ್ಕೆ ಹಣವನ್ನು ಕೊಟ್ಟಿರಿ. ರೈತರ ಬಗ್ಗೆ ಮಾನ್ಯ ಯಡಿಯೂರಪ್ಪನವರು ಮಾತನಾಡುತ್ತಿರುತ್ತಾರೆ, ಅವರ ಬಗ್ಗೆ ನನಗೆ ಗೌರವ ಇದೆ. ವಿಶ್ವಾಸ ಇದೆ. ರೈತರುಗಳು ಆತ್ಮಹತ್ಯೆ ಮಾಡಿಕೊಂಡಿರುವುದಕ್ಕೆ ನೀವೇನು ಯೋಜನೆಯನ್ನು ಹಾಕಿಕೊಂಡಿದ್ದೀರಿ? ನಿಮ್ಮ ಕ್ರಿಯಾ ಯೋಜನೆ ಏನು? ಒಂದು ಕಡೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಇನ್ನು ಮುಂದೆ ಯಾರೇ ರೈತರು ಸತ್ತರೂ

ನಾನು ಅಧಿಕಾರವನ್ನು ಬಿಟ್ಟುಬಿಡುತ್ತೇನೆ ಎಂದು ಹೇಳಿದರು. ಅವರು ಆ ರೀತಿ ಹೇಳಿದ ಮೇಲೆ ಸುಮಾರು ಹತ್ತು ಜನರು ಸತ್ತರು.

ಶ್ರೀ ಜೆ.ಸಿ. ಮಾಧುಸ್ವಾಮಿ:- ಅಕ್ಟೋಬರ್ 3ಕ್ಕೆ ಅಧಿಕಾರ ಬಿಟ್ಟುಕೊಡುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿಯೇ ಹೇಳಿದರಲ್ಲ.

ಶ್ರೀ ವಾಟಾಳ್ ನಾಗರಾಜ್:- ಅಕ್ಟೋಬರ್ 3ಕ್ಕೆ ಅಧಿಕಾರ ಬಿಟ್ಟುಕೊಡುತ್ತಾರೆನ್ನುವ ನಂಬಿಕೆ ನನಗೆ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಅಧಿಕಾರವನ್ನು ಬಿಟ್ಟುಕೊಡುವುದು ನಿಮಗಲ್ಲ, ಯಡಿಯೂರಪ್ಪನವರಿಗೆ.

ಶ್ರೀ ವಾಟಾಳ್ ನಾಗರಾಜ್:- ನನಗೆ ಬಿಟ್ಟುಕೊಡಿ ಎಂದು ನಾನೇನೂ ಕೇಳಿಲ್ಲ. ನಾನು ಹೇಳಿದ್ದು ಯಡಿಯೂರಪ್ಪನವರಿಗೇ ಅವರು ಬಿಟ್ಟುಕೊಡುವುದಿಲ್ಲವೆಂದು. ಯಡಿಯೂರಪ್ಪನವರು ತಮ್ಮ ಭಾಷಣದಲ್ಲಿ ಏನು ಹೇಳಿದ್ದಾರೆ, ನಾವು ಲಕ್ಷ್ಮಣರೇಖೆಯನ್ನು ದಾಟುವುದಿಲ್ಲ ಎಂದಿದ್ದಾರೆ. ಅವರು ತಮ್ಮ ಭಾಷಣದಲ್ಲಿ ಮಾತನಾಡುತ್ತಾ ಲಕ್ಷ್ಮಣರೇಖೆ ಮತ್ತು ಮೈತ್ರಿಧರ್ಮದ ಬಗ್ಗೆಯೇ ಹೇಳಿಕೊಂಡು ಬಂದಿದ್ದಾರೆ. ಇನ್ನು ನಮ್ಮ ಡಿ.ಟಿ. ಜಯಕುಮಾರ್‌ರವರು ಒಂದು ಕಡೆ ಹೇಳುತ್ತಾರೆ...

ಶ್ರೀ ಜೆ.ಸಿ. ಮಾಧುಸ್ವಾಮಿ:- ಯಡಿಯೂರಪ್ಪನವರೆ, ಈ ಲಕ್ಷ್ಮಣರೇಖೆ ಬಗ್ಗೆಯೇ ವ್ಯಾಖ್ಯಾನ ಮಾಡಬೇಕಾಗುತ್ತದೆ. ಲಕ್ಷ್ಮಣನೇ ಸೀತೆ ಮೇಲೆ ಅನುಮಾನ ಇಟ್ಟುಕೊಂಡು ಆಚೆ ಹೋಗಬೇಡಿ ಎಂದು ರೇಖೆ ಹಾಕಿ ಹೋದನೋ ಅಥವಾ ಯಾರಾದರೂ ಆ ರೇಖೆಯನ್ನು ದಾಟಿಕೊಂಡು ಒಳಗೆ ಹೋಗಬಾರದು ಎಂದು ಅವನು ರೇಖೆ ಹಾಕಿದನೋ ಎಂದು ವ್ಯಾಖ್ಯಾನ ಮಾಡಬೇಕಾಗುತ್ತದೆ. ಅದೇ ಎರಡು ರೀತಿ ಆರ್ಗ್ಯುಮೆಂಟ್ ಇದೆ. ಲಕ್ಷ್ಮಣನು ಸೀತೆ, ನೀವು ಆಚೆ ಹೋಗಬೇಡಿ, ನಿಮಗೋಸ್ಕರ ಈ ಗೆರೆ ಹಾಕಿದ್ದೇನೆ, ನಮ್ಮ ಅಣ್ಣನಿಗೆ ಏನೂ ಆಗುವುದಿಲ್ಲ, ಅವನು ಭಾರಿ ಶಕ್ತಿವಂತ" ಎಂದು ಹೇಳಿದ್ದಾನೆಯೆ? ಏಕೆಂದರೆ ಅಲ್ಲಿ ಲಕ್ಷ್ಮಣರೇಖೆಯನ್ನು ಸೀತೆ ದಾಟಿ ಹೋಗಿದ್ದಳು. ರಾವಣನಿಗೆ ಶಾಪವಿತ್ತು. ಯಾರಾದರೂ ಸ್ತ್ರೀಯನ್ನು ಅವಳ ಮನಸ್ಸಿಗೆ ವಿರುದ್ಧವಾಗಿ ನೀನು ಮುಟ್ಟಿಬಿಟ್ಟರೆ ನಿನ್ನ ತಲೆ ಸಹಸ್ರ ಹೋಳಾಗುತ್ತದೆಂದು ಶಾಪವಿತ್ತು. ಆದುದರಿಂದ ಇಲ್ಲಿ ನಿಮ್ಮಿಬ್ಬರಲ್ಲಿ ಯಾರಿಗೆ ಅನುಮಾನ ಬಂದು ಲಕ್ಷ್ಮಣರೇಖೆಯನ್ನು ಹಾಕಿಕೊಂಡಿದ್ದೀರಿ ಎಂದು ಸ್ವಲ್ಪ ಹೇಳಬೇಕಲ್ಲ.

ಶ್ರೀ ವಾಟಾಳ್‌ನಾಗರಾಜ್:- ಯಡಿಯೂರಪ್ಪನವರೆ, ನೀವು ಮೇಲಿಂದ ಮೇಲೆ ಲಕ್ಷ್ಮಣರೇಖೆ, ಮೈತ್ರಿಧರ್ಮ, ಲಕ್ಷ್ಮಣರೇಖೆ ಮತ್ತು ಮೈತ್ರಿಧರ್ಮದ ಬಗ್ಗೆಯೇ ಹೇಳುತ್ತಾ ಬಂದಿದ್ದೀರಿ. ನೀವು ರಾಮಾಯಣವನ್ನು ಓದಿ ಇದನ್ನು ಹೇಳಿದ್ದೀರೋ? ಆದರೆ ಇಲ್ಲಿ ಧರ್ಮವೂ ಇಲ್ಲ, ಲಕ್ಷ್ಮಣರೇಖೆಯೂ ಇಲ್ಲ. ನೀವು ಇತ್ತೀಚೆಗೆ ಹೆಚ್ಚು ಮೌನವಾಗಿದ್ದೀರಿ, ಏಕೆ? ನೀವು ಮೌನಕ್ಕೆ ಏಕೆ ಶರಣರಾಗಿದ್ದೀರಿ? ಮೌನಕ್ಕೆ ಶರಣಾಗಿರುವುದಕ್ಕೆ ಕಾರಣವೇನು? ನನಗೆ ನಿಮ್ಮ ಬಗ್ಗೆ ಎಲ್ಲೋ ಒಂದು ಕಡೆ ಕರುಣೆ ಇದೆ. ಮೌನಕ್ಕೆ ನೀವು ಯಾವತ್ತೂ ಶರಣಾದವರಲ್ಲ. ಡಿ.ಟಿ. ಜಯಕುಮಾರ್‌ರವರು ನಮ್ಮ ಸ್ನೇಹಿತರೆ, ಅವರು ಎಲ್ಲೋ ಒಂದು ಕಡೆ ಕುಳಿತುಕೊಂಡು ಮಾತನಾಡುವಾಗ, ಇವರು ಅಸಮರ್ಥರು, ಇವರು ಸಮರ್ಥರಲ್ಲ, ಇವರಿಗೆ ಶಕ್ತಿ ಇಲ್ಲವೆಂದು ಹೇಳಿಬಿಟ್ಟಿದ್ದಾರೆ. ಈ ರೀತಿ ಅವರು ಏಕೆ ಹೇಳಿದರೋ ನನಗೆ ಅರ್ಥವಾಗಲಿಲ್ಲ.

ಶ್ರೀ ಡಿ.ಟಿ. ಜಯಕುಮಾರ್:- ನಾನು ಆ ರೀತಿ ಹೇಳಿಲ್ಲ. ಎಂಥ ಪರಿಸ್ಥಿತಿಯಲ್ಲಿಯೂ ಕೂಡ ಎದುರಿಸತಕ್ಕಂಥ ರೀತಿಯಲ್ಲಿ ಲೀಡರ್‌ಶಿಪ್ ಅನ್ನು ಅವರು ಉಳಿಸಿಕೊಳ್ಳಬೇಕು ಎಂದು ಹೇಳಿದ್ದೇನೆ. ಅವರು ಅನರ್ಹರು ಎಂದು ನಾನೂ ಹೇಳಿಲ್ಲ. ಅವರು ಮೌನವನ್ನು ಮುರಿದು ಎಂಥ ಗಂಭೀರ ಪರಿಸ್ಥಿತಿ ಬಂದರೂ ಕೂಡ ಅದನ್ನು ಎದುರಿಸತಕ್ಕಂಥ ಚಾಕಚಕ್ಯತೆಯನ್ನು ಅವರು ತೋರಿಸಬೇಕು ಎಂದು ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ನೀವು ಪತ್ರಿಕೆಯವರ ಬಳಿ ಮಾತನಾಡುವಾಗ ಯಡಿಯೂರಪ್ಪನವರು ಹಣಕಾಸಿನ ಖಾತೆಯಲ್ಲಿ ವಿಫಲರಾಗಿದ್ದಾರೆಂದು ಹೇಳಿದ್ದೀರಿ, ಅದು ನಿಮ್ಮ ಅಭಿಪ್ರಾಯ. ಅದನ್ನು ನೀವು ಹೇಳುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಏಕೆಂದರೆ ಅದು ನಿಮ್ಮ ಅಭಿಪ್ರಾಯ. ನಿಮಗೆ ಎಲ್ಲಾ ಕಡೆ ಅಕ್ಟೋಬರ್ 3ನೇ ತಾರೀಖಿನವರೆಗೂ ಹೇಳಿ ಹೇಳಿ ಎಂದು ಪ್ರೇರಣೆ, ಪ್ರೋತ್ಸಾಹ ಎಲ್ಲಿಂದಲಾದರೂ ಶುರುವಾಗಿದೆಯಾ? ಇದು ಅನ್ಸಾರಿಯವರು ಹೇಳಿದ ಮೇಲೆ ಶುರುವಾಯಿತು ನೋಡಿ. ಆಮೇಲೆ ನೀವು ಶುರು ಮಾಡಿದ್ದೀರಿ. ಇವತ್ತು ನಮ್ಮ ಬಿ.ಸಿ. ಪಾಟೀಲ್ ಅವರು ಎಲ್ಲಿ? ಅವರೂ ಕೂಡ ಇವತ್ತು ಶುರು ಮಾಡಿದ್ದಾರೆ. ಈ ರೀತಿ ಶುರುವಾಗಿರುವುದು ನೋಡಿದರೆ ನಿಮಗೆ ಎಲ್ಲೋ ಒಂದು ಕಡೆ ಚಾಲನೆ ಸಿಕ್ಕಿದೆ, ಇಲ್ಲದಿದ್ದರೆ ನಿಮಗೆ ಆ ಧೈರ್ಯ ಬರಬೇಕಲ್ಲ. ನಿಮಗೆ ಧೈರ್ಯ ಬರಬೇಕಾದರೆ ಎಲ್ಲಿಂದಲೋ ವರಪ್ರಸಾದ ನಿಮಗೆ ಬೀಳದೇ ಇದ್ದರೆ ಅದನ್ನು ನೀವು ಹೇಳಲಾರಿರಿ. ಏಕೆಂದರೆ ನಾನು ನಿಮ್ಮನ್ನು

ಬಹಳ ವರ್ಷದಿಂದ ನೋಡಿದ್ದೇನೆ. ಏನೋ ನಡೆದಿದೆ. ನನಗೆ ಈ ರೀತಿ ನೀವಾಗಿ ನೀವು ಧೈರ್ಯವಾಗಿ ಹೇಳುತ್ತೀರಿ ಅಂತ ಅನಿಸುವುದಿಲ್ಲ. ಈ ರೀತಿ ಹೇಳುತ್ತೀರಿ ಎಂದು ಯಾರದೋ ಚಿತಾವಣೆ ಇರಬೇಕು.

ಶ್ರೀ ಡಿ.ಟಿ. ಜಯಕುಮಾರ್: ಖಂಡಿತ ಚಿತಾವಣೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಹಾಗಾದರೆ ನೀವೆಲ್ಲರೂ ಒಪ್ಪಿ ಅಕ್ಟೋಬರ್ 3ರಂದು ಮಾನ್ಯ ಯಡಿಯೂರಪ್ಪನವರನ್ನು ಮುಖ್ಯಮಂತ್ರಿಗಳನ್ನು ಮಾಡುವುದಕ್ಕೆ ತಯಾರಾಗಿದ್ದೀರಿ.

ಶ್ರೀ ಡಿ.ಟಿ. ಜಯಕುಮಾರ್: ಇದರಲ್ಲಿ ಮಾನ್ಯ ದೇವೇಗೌಡರ ಪಾತ್ರ ಏನೂ ಇಲ್ಲ. ಅವರಿಬ್ಬರ ಮಧ್ಯೆ ಏನು ಮಾತು ನಡೆದಿದೆ ಎಂದು ಹೇಳಿದ್ದಾರೆ. ಅವರು ಏನು ಹೇಳುತ್ತಾರೆ ಅದಕ್ಕೆ ನಾವು ಬದ್ಧರಾಗುತ್ತೇವೆ ಅಲ್ಲವೇ?

ಶ್ರೀ ಕೆ.ಆರ್. ರಮೇಶ್ ಕುಮಾರ್: ಇದರಲ್ಲಿ ಮಾನ್ಯ ದೇವೇಗೌಡರ ಪಾತ್ರ ಏನಿದೆ ಎಂದು ನಾವು ಕೇಳಲೇ ಇಲ್ಲ.

ಶ್ರೀ ಡಿ.ಟಿ. ಜಯಕುಮಾರ್: ಮಾನ್ಯ ಕುಮಾರ ಸ್ವಾಮಿಯವರು ಮುಖ್ಯ ಮಂತ್ರಿಯಾದಂತಹ ಸಂದರ್ಭದಲ್ಲಿ ಮಾನ್ಯ ದೇವೇಗೌಡರ ಪಾತ್ರ ಏನೂ ಇಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನಾವು ದೇವೇಗೌಡರ ಸುದ್ದಿಗೆ ಹೋಗಿಲ್ಲ ಮಾರಾಯ, ನೀನಾಗಿ ನೀನು ಹೇಳುತ್ತಿದ್ದೀಯ.

ಡಾ॥ ಹೆಚ್.ಸಿ. ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ಸರ್ಕಾರ ರಚನೆಯಾಗಿದ್ದು ಎರಡು ವ್ಯಕ್ತಿಗಳ ನಡುವೆ ಅಲ್ಲ, ಎರಡು ಪಕ್ಷಗಳ ನಡುವೆ, BJP and JD (S) alliance ಆಗಿದೆ, ವಿನಃ ಇಬ್ಬರು ವ್ಯಕ್ತಿಗಳಿಂದ ರಾಜ್ಯಾಂಗವಾಗಿ ಸರ್ಕಾರ ರಚನೆಯಾಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇವರು ಇಲ್ಲಿತನಕ ನಮ್ಮದು JDS, BJP combination ಅಂತ ಹೇಳಿ, ಆಮೇಲೆ ಅವರು ಹೇಳಿಲ್ಲ, ಇವರು ಹೇಳಿಲ್ಲ ಎಂದರೆ...

ಶ್ರೀ ಡಿ.ಟಿ. ಜಯಕುಮಾರ್: We follow the leaders, ನೀವು ಅಷ್ಟೇ, You also follow the leaders.

ಡಾ॥ ಹೆಚ್.ಸಿ. ಮಹದೇವಪ್ಪ: I am also following the leaders. Next time everyone should follow me.

ಶ್ರೀ ಡಿ.ಟಿ. ಜಯಕುಮಾರ್: One cannot take decision.

ಶ್ರೀ ವಾಟಾಳ್ ನಾಗರಾಜ್: ಈಗ ಜಯಕುಮಾರ್‌ರವರೇ, ಯಾರು ಏನೇ ಹೇಳಲಿ, ನಿಮ್ಮ ಸ್ವಂತ ಅಭಿಪ್ರಾಯವೇನು? ಈಗ ಮಾನ್ಯ ಯಡಿಯೂರಪ್ಪನವರಿಗೆ....

ಶ್ರೀ ಡಿ.ಟಿ. ಜಯಕುಮಾರ್: ಮಾನ್ಯ ವಾಟಾಳ್ ನಾಗರಾಜ್‌ರವರೆ, ನನ್ನ ಸ್ವಂತ ಅಭಿಪ್ರಾಯ ಮಾನ್ಯ ಕುಮಾರಸ್ವಾಮಿಯವರು ಮುಂದುವರೆಯಬೇಕು. ಮಾನ್ಯ ಯಡಿಯೂರಪ್ಪನವರು ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗುವುದಕ್ಕೆ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. 60 ವರ್ಷದಿಂದ ಆಗದಿರುವಂತಹ ದಾಖಲೆ ನಿರ್ಮಿತವಾದ ಕೆಲಸಗಳನ್ನು ಮಾನ್ಯ ಕುಮಾರಸ್ವಾಮಿಯವರು ಮಾಡುತ್ತಿದ್ದಾರೆ. ಅವರೇ ಮುಂದುವರೆಯಬೇಕೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ.

ಶ್ರೀ ವಾಟಾಳ್ ನಾಗರಾಜ್: ಅದೇ ನಾನು ಕೇಳುತ್ತಿರುವುದು. ಸರಿ ಬಿಡಿ, ಅದನ್ನು ಬಿಟ್ಟು ಬಿಡೋಣ. ಬಣ್ಣ ಬಂದುಬಿಡಲಿ ಅಂತ.

ಶ್ರೀ ಡಿ.ಟಿ. ಜಯಕುಮಾರ್: ನನ್ನ ಮಾತು ನಡೆಯುವುದಿದ್ದರೆ ಮಾನ್ಯ ಯಡಿಯೂರಪ್ಪನವರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡಿ ಎಂದು ಹೇಳಿಬಿಡಬಹುದು. ಆದರೆ ನನ್ನ ಮಾತು ನಡೆಯುವುದಿಲ್ಲವಲ್ಲ.

ಒಬ್ಬರು ಮಾನ್ಯ ಸದಸ್ಯರು: ಮತ್ತೆ ಹೇಳಿ ನಮ್ಮ support ಮಾನ್ಯ ಯಡಿಯೂರಪ್ಪನವರಿಗೆ ಎಂದು.

ಶ್ರೀ ಬಿ.ಎ. ಜೀವಿಜಯ: ನಿಮ್ಮ ಮಾತು ನಡೆಯುವುದಿಲ್ಲವೆಂದರೆ ಯಾರ ಮಾತು ನಡೆಯುತ್ತದೆ?

ಶ್ರೀ ಡಿ.ಟಿ. ಜಯಕುಮಾರ್: High command ಮಾತು ನಡೆಯುತ್ತದೆ. ನಮ್ಮ High command ಎಂದರೆ ಮಾನ್ಯ ದೇವೇಗೌಡರು, ರಾಜ್ಯಾಧ್ಯಕ್ಷರಾದಂತಹ ಮಾನ್ಯ ಎಂ.ಪಿ. ಪ್ರಕಾಶ್‌ರವರು ಮತ್ತು ಮಾನ್ಯ ಕುಮಾರಸ್ವಾಮಿಯವರು.

ಶ್ರೀ ಕೆ.ಆರ್. ರಮೇಶ್‌ಕುಮಾರ್: The cat is out of bag.

ಶ್ರೀ ವಾಟಾಳ್ ನಾಗರಾಜ್: ನಿಮಗೆ High command ಎಂದರೆ ಮಾನ್ಯ ದೇವೇಗೌಡರು, ರೇವಣ್ಣ ಮತ್ತು ಕುಮಾರಸ್ವಾಮಿ.

ಶ್ರೀ ಡಿ.ಟಿ. ಜಯಕುಮಾರ್: ಮಾನ್ಯ ಎಂ.ಪಿ. ಪ್ರಕಾಶ್ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಎಂ.ಪಿ. ಪ್ರಕಾಶ್ ಅವರೂ ಇದ್ದಾರೆ? ಅಯ್ಯೋ ಪಾಪ. ಛೇ ಪಾಪ, ಅಯ್ಯಯ್ಯೋ ಪಾಪ. ಜಯಕುಮಾರ್‌ರವರೆ, ಇದೇಕೆ ಹೀಗೆ ಹೇಳುತ್ತೀರಿ. ನೀವು ಏಕೆ ಹೀಗೆ ಆಗಿಬಿಟ್ಟಿರಿ. ಖಂಡಿತ ಇಲ್ಲ.

ಡಾ॥ ಕೆ. ಅನ್ನದಾನಿ: ಮಾನ್ಯ ವಾಟಾಳ್ ನಾಗರಾಜ್‌ರವರೆ, ಪದೇಪದೇ ಏಕೆ ನಮ್ಮಿಬ್ಬರಿಗೂ ತಂದಿಡುವ ಕೆಲಸ ಮಾಡುತ್ತೀರೆಂದು ನನಗೆ ಅರ್ಥವಾಗುತ್ತಿಲ್ಲ.

ಡಾ॥ ಹೆಚ್.ಸಿ. ಮಹಾದೇವಪ್ಪ: ನಾವು ತಂದು ಹಾಕುತ್ತಿಲ್ಲ. ನೀವು ನೀವೇ ತಂದು ಹಾಕಿಕೊಳ್ಳುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅನ್ನದಾನಿಯವರೆ, ನಾನೆಂದೂ ನಿಮ್ಮಿಬ್ಬರಿಗೆ ತಂದು ಹಾಕುವುದಿಲ್ಲ. ನಾನು ಏಕೆ ತಂದು ಹಾಕಲಿ? ನನಗೆ ಏಕೆ ಬೇಕಪ್ಪ?

ಶ್ರೀ ಡಿ.ಟಿ. ಜಯಕುಮಾರ್: ನಿಮಗೆ ನೀವೇ ಮಂತ್ರಿಗಳು, ನೀವೇ ಹೈಕಮಾಂಡ್, ನೀವೇ ಸದಸ್ಯರು, ಸರ್ವಸ್ವವೂ ನೀವೇ. ನಮಗೆ ಆ ರೀತಿ ಆಗುವುದಿಲ್ಲ. ನಮ್ಮ ಪಕ್ಷಕ್ಕೆ ಹೈಕಮಾಂಡ್ ಎಂದು ಇದೆ. ರಾಜ್ಯಾಧ್ಯಕ್ಷರು, ರಾಷ್ಟ್ರಾಧ್ಯಕ್ಷರೂ, ಮುಖ್ಯ ಮಂತ್ರಿಗಳು ಮತ್ತು ನಾಯಕರು ಎಂದು ಇದ್ದಾರೆ. ಆದರೆ ನಿಮಗೆ ಎಲ್ಲವೂ ನೀವೇ.

ಶ್ರೀ ವಾಟಾಳ್ ನಾಗರಾಜ್: ಅದು ಸರಿ.

ಡಾ॥ ಕೆ. ಅನ್ನದಾನಿ: ನೀವು ಇಲ್ಲಿ demand ಬಗ್ಗೆ ಮಾತನಾಡುತ್ತಿರುವುದು. ಆದರೆ ಮಧ್ಯದಲ್ಲಿ ರಾಜಕೀಯವನ್ನು ಇಷ್ಟೊಂದು ಏಕೆ ಕಲಬೆರಕೆ ಮಾಡುತ್ತಿದ್ದೀರಿ ಎಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್: ಅನುದಾನವನ್ನು 4 ತಿಂಗಳಿಗೆ ತೆಗೆದುಕೊಂಡಿರುವುದು ಮುಂದೆ ಅಕ್ಟೋಬರ್ 3ನೇ ತಾರೀಖು ಬರುತ್ತಿದೆ. ನೀವು ನಮ್ಮ ಹತ್ತಿರ ಬಂದಿದ್ದೀರಿ, ನಾವು ಅಲ್ಲೆಲ್ಲಾ ಕುಳಿತುಕೊಂಡು ಮಾತನಾಡಿದೆವು. ನಾವಿಬ್ಬರು ನಿನ್ನೆ ಅಲ್ಲವೇ ಪಕ್ಕದಲ್ಲಿ ಕುಳಿತುಕೊಂಡು ಮಾತನಾಡಿದ್ದು, ನಾನು, ಅನ್ನದಾನಿಯವರು ಏನು ಮಾತನಾಡಿದೆವು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಅವರು ನಾನು ಬಹಳ ಸ್ನೇಹಿತರು. ನಾನು ಖಂಡಿತ ಹೇಳುವುದಕ್ಕೆ ಹೋಗುವುದಿಲ್ಲ.

ಡಾ॥ ಕೆ. ಅನ್ನದಾನಿ: ನೋಡಿ ಹೀಗೆ ಹೇಳಿದರೆ ಏನೋ ಅನುಮಾನ ಬಂದುಬಿಡುತ್ತದೆ. ಈಗ ನಿಮ್ಮದು ವಾಟಾಳ್ ಪಕ್ಷ ಇದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಅವರಿಗೆ ಅನುಭವ ಇಲ್ಲ, ಆವೇಶದಲ್ಲಿ ಅವರು ಹೇಳಿದಾಗ ನಾನು ಇದ್ದೆ. ನಾವು ಯಾರಿಗೂ ಹೇಳುವುದಕ್ಕೆ ಹೋಗುವುದಿಲ್ಲ. ನೀವು ಹೇಳಿದ್ದನ್ನು ಹೇಳಿದೆವು. ಇರಲಿ ಬಿಡಿ.

ಡಾ॥ ಕೆ. ಅನ್ನದಾನಿ: ದಯಮಾಡಿ ನೀವು ದೊಡ್ಡವರಿದ್ದೀರಿ. ಈ ಸದನದಲ್ಲಿ ನಿಮಗೆ ಹಿಂದಕ್ಕೆ ತಿರುಗಿಕೊಂಡು ಮಾತನಾಡುವಂತಹ ಶಕ್ತಿ ನನಗೆ ಇಲ್ಲ. ನಾನು ಬಹಳ ಚಿಕ್ಕವನು. ಮಾನ್ಯ ವಾಟಾಳ್ ನಾಗರಾಜ್ ಸಾಹೇಬರಿಗೆ ಎಷ್ಟು ಅನುಭವವಾಗಿದೆ ಅಷ್ಟು ನನಗೆ ವಯಸ್ಸಾಗಿಲ್ಲ. ಆಗ ನಾವೇನು ಮಾತನಾಡಿಲ್ಲ. ಯಾವುದೋ ಒಂದು ವಿಚಾರವನ್ನು ಸಾರ್ವಜನಿಕವಾಗಿ ಚರ್ಚೆ ಮಾಡುತ್ತಿದ್ದೆವು ಅಷ್ಟೇ.

ಶ್ರೀ ವಾಟಾಳ್ ನಾಗರಾಜ್: ಅದು ತಮಾಷೆಗೆ, ನೀವು ರಾಜಕಾರಣದ ವಿಚಾರ ಮಾತನಾಡಲಿಲ್ಲ. ನಾವೂ ನೀವೂ ಬೇರೆ ವಿಚಾರ ಮಾತನಾಡಲಿಲ್ಲವಾ?

ಡಾ॥ ಕೆ. ಅನ್ನದಾನಿ: ಬೇರೆ ವಿಷಯ ಮಾತನಾಡಿದ್ದೇವೆ. ರಾಜಕೀಯ ಮಾತನಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಯಡಿಯೂರಪ್ಪನವರ ಬಗ್ಗೆ ಅನ್ನದಾನಿಯವರು ಮಾತನಾಡಲಿಲ್ಲ. ಅದು ಸ್ಪಷ್ಟ.

ಡಾ॥ ಕೆ. ಅನ್ನದಾನಿ: ಬೇರೆ ಗುಟ್ಟಿನ ವಿಷಯ, ಯಾರಿಗೂ ಹೇಳುವ ಹಾಗೆ ಇಲ್ಲ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ಮಾನ್ಯ ವಾಟಾಳ್ ನಾಗರಾಜ್ ಹತ್ತಿರ ರಾಜಕೀಯ ವಿಷಯ ಹೊರತಾಗಿ ಬೇರೆ ಏನಾದರು ವಿಷಯ ಮಾತನಾಡುವುದಕ್ಕೆ ಸಾಧ್ಯವಿದೆಯಾ ಎಂದು ಅವರೇ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್: ಮಹದೇವಪ್ರಸಾದ್‌ರವರೆ, ತಮ್ಮ ನಿಲುವು ಏನು ಎಂದು ಬಾಯಿ ಬಿಟ್ಟಿಲ್ಲ. ನೀವು ಈಗ ಬಾಯಿ ಬಿಡುತ್ತೀರಾ? ಹೇಳುತ್ತೀರಾ? ಹೇಳಿಬಿಡಿ. ಅದೂ ತೀರ್ಮಾನ ಆಗಿ ಹೋಗಿಬಿಡಲಿ. ಅಕ್ಟೋಬರ್ 3ನೇ ತಾರೀಖು ಏನು? ನೀವು ಅದರ ಪರವೇ? ವಿರುದ್ಧವೇ? ಇಲ್ಲ ಬಿಡಿ, ರಾಜಕೀಯ ಬಿಟ್ಟು ಏನೂ

ಮಾತನಾಡುವುದಿಲ್ಲ ಎನ್ನುತ್ತೀರಲ್ಲ, ಎಲ್ಲಾ ಮಾತನಾಡಿಕೊಂಡು ಬಂದಿದ್ದೇನೆ. ಇದನ್ನು ಕೊನೆಯಲ್ಲಿ ಹೇಳಲೇ ಬೇಕಲ್ಲ. ನಾನು ಜಯಕುಮಾರ್‌ರವರನ್ನು ಮೆಚ್ಚುತ್ತೇನೆ. ಅವರು ಧೈರ್ಯವಾಗಿ, ನೇರವಾಗಿ ನನ್ನದು ಈ ನಿರ್ಧಾರ ಎಂದು ಹೇಳಿದರು. ಸಂತೋಷ, ನಾವು ಅವರನ್ನು ಏನೂ ಮಾಡುವುದಕ್ಕೆ ಹೋಗುವುದಿಲ್ಲವಲ್ಲ. ಧೈರ್ಯ ಇರುವುದು ಬಿಡುವುದು ಅವರಿಗೆ ಬಿಟ್ಟಿದ್ದು. ನಾನು ಮಹದೇವ ಪ್ರಸಾದ್‌ರವರನ್ನು ಅಷ್ಟು ತೀರಾ ಕೇಳಿಕೊಂಡು ಹೋಗುವುದಿಲ್ಲ.

ಶ್ರೀ ಸಿದ್ಧರಾಮಯ್ಯ: ಮಹದೇವಪ್ರಸಾದ್‌ರವರನ್ನು ಈ ರೀತಿ ಬಿಟ್ಟು ಬಿಟ್ಟರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್: ಇಲ್ಲ, ಅವರಿಗೆ ಕೊಟ್ಟಿರುವಂತಹ ಇಲಾಖೆ ಕೂಡ ಕೆಲಸಕ್ಕೆ ಬಾರದೇ ಇರುವಂತಹ ಇಲಾಖೆ ಎಂದು ಆದರೂ ಕೂಡ, ನಾನು ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ದೊಡ್ಡ ಇಲಾಖೆ ಎಂದು ಹೇಳಿದ್ದೇನೆ.

ಶ್ರೀ ಸಿದ್ಧರಾಮಯ್ಯ: ಕೆಲವರನ್ನು ಬಾಯಿ ಬಿಡಿಸಿ, ಇವರನ್ನೆಲ್ಲ ನೀವು ಬಿಟ್ಟುಬಿಟ್ಟರೆ ಹೇಗೆ?

ಶ್ರೀ ಕೆ.ಆರ್. ರಮೇಶ್‌ಕುಮಾರ್: ಅವರನ್ನು ಸಿಕ್ಕಿಸಿ ಹೇಳಿ ಎಂದು ಹೇಳಿ, ಪಾಪ ಅವರು ತಮ್ಮ ಆತ್ಮದಲ್ಲಿ ಇದ್ದಂತಹ ಮಾತನ್ನು ಹೇಳಿಸಿ ಅವರಿಂದ ಹೊರಗೆ ಹಾಕಿಸಿಬಿಟ್ಟಿರಿ. ಅವರನ್ನು ಮಾತ್ರ ಕಾಪಾಡುತ್ತೀರಿ. ಇದು ನ್ಯಾಯವೇ? ಇದು ಪಕ್ಷಪಾತ. ನಾವು ಒಪ್ಪುವುದಿಲ್ಲ. ಏನ್ರಿ ನೀವು ಒಪ್ಪುತ್ತೀರೇನ್ರಿ ಜಯಕುಮಾರ್‌ರವರೆ? ಇದು ಸರಿ ಏನ್ರಿ? ಅವರಿಗೂ ಕೇಳಿ. ಅವರೂ ಅವರ ಅಭಿಪ್ರಾಯಗಳನ್ನು ಹೇಳಲಿ.

ಶ್ರೀ ಸಿದ್ಧರಾಮಯ್ಯ: ಈಗ ನೀವು ಪಕ್ಷಪಾತದ ಆಪಾದನೆಗೆ ಗುರಿ ಆಗಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಯಾರು?

ಶ್ರೀ ಸಿದ್ಧರಾಮಯ್ಯ: ನೀವು.

ಶ್ರೀ ವಾಟಾಳ್ ನಾಗರಾಜ್: ಎಲ್ಲಾದರೂ ಉಂಟೇ? ಇರಲಿ, ಮಹದೇವಪ್ರಸಾದ್ ಬಗ್ಗೆ ನಾವು ಅಷ್ಟು ಸ್ವಲ್ಪ ಚೂರು ಕರುಣೆ ಬೇಡವೇ? ಏನಿದು? ಎಲ್ಲೋ ಒಂದು ಕಡೆ ಚೂರು ಅಂದರೆ ಚಾರು ಅಂತ. ನನಗೇನೂ ಇಲ್ಲ. ಮಾನ್ಯ ಯಡಿಯೂರಪ್ಪನವರೇ,

ಇದು ನಿಮ್ಮ ಹಣೆಬರಹ. ನನಗೂ ಅದಕ್ಕೂ ಸಂಬಂಧವಿಲ್ಲ. ನೀವು ಯಾರಾದರೂ ಏನಾದರೂ ಮಾಡಿಕೊಳ್ಳಿ, ಅದು ನಿಮಗೆ ಸೇರಿದ್ದು. ನೀವು ಮೊದಲೇ ಹೇಳಿಕೊಂಡಿದ್ದೀರಿ. ನಾನು ಆ ವಿಚಾರಕ್ಕೆ ಹೋಗುವುದಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನಿಮ್ಮ ವೈಯಕ್ತಿಕ ಅಭಿಪ್ರಾಯ ಏನು?

ಶ್ರೀ ವಾಟಾಳ್ ನಾಗರಾಜ್: ನಮ್ಮೆಲ್ಲರ ಒಟ್ಟು ಅಭಿಪ್ರಾಯ...

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ನಿಮ್ಮ ವೈಯಕ್ತಿಕ ಅಭಿಪ್ರಾಯ ಏನು ಎಂದು ಆಗಿದ್ದರೆ ಇದನ್ನೆಲ್ಲಾ ಕೇಳುವಂತಹ ಪ್ರಮೇಯಕ್ಕೆ ಹೋಗುತ್ತಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಯಡಿಯೂರಪ್ಪನವರು ready ಯಾಗಿ ಈ ಕಡೆಗೆ ಬರಲಿ, ನಾವು ನಾಳೆ ಬೆಳಿಗ್ಗೆ ಮಾಡೇ ಬಿಡುತ್ತೇವೆ.

ಡಾ॥ ಕೆ. ಅನ್ನದಾನಿ: ಅವರನ್ನು ಮುಖ್ಯಮಂತ್ರಿ ಮಾಡುವುದಕ್ಕೆ ನಿಮ್ಮ ಪಕ್ಷದಿಂದ ಎಷ್ಟು ಜನ members ಇದ್ದೀರಿ. ನಿಮ್ಮ ಪಕ್ಷದಲ್ಲಿ ಎಷ್ಟು ಜನ ಇದ್ದೀರಿ ಹೇಳಿ? ನೀವು ಒಬ್ಬರೇ ಗೆದ್ದಿರುವುದು, ಅದೇಗೆ ನೀವು ಮುಖ್ಯಮಂತ್ರಿಯನ್ನಾಗಿ ಮಾಡಿಬಿಡುತ್ತೀರಿ? ಅದು ಹೇಗೆ ಸಾಧ್ಯ? ಹೀಗೆಲ್ಲಾ ಕೈ ತೋರಿಸಿದರೆ ಅವರೆಲ್ಲಾ ಕಾಂಗ್ರೆಸ್ಸಿನವರು, CPI ನವರು, JD(U) ನವರು ಕುಳಿತಿರುವುದು. ನೀವು ಹೇಳಿದ್ದು ಸರಿ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರು ಮುಖ್ಯಮಂತ್ರಿಯಾಗುವುದಕ್ಕೆ ನಿಮ್ಮ ಪಕ್ಷದಲ್ಲಿ MLA ಗಳು ಇದ್ದಾರಾ? ನಿಮ್ಮ ಪಕ್ಷದಲ್ಲಿ 115 ಜನ ಇದ್ದಾರಾ?

ಡಾ॥ ಕೆ. ಅನ್ನದಾನಿ: ಖಂಡಿತಾ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಮನಸ್ಸು ಮುಖ್ಯ ಪಕ್ಷ ಅಲ್ಲ. ಅವರು ಮನಸ್ಸು ಮಾಡಿದರೆ ಮಾಡುತ್ತಾರೆ.

ಡಾ॥ ಕೆ. ಅನ್ನದಾನಿ: ಮುಖ್ಯ ಮಂತ್ರಿಗಳಾಗುವುದಕ್ಕೆ ಸಂಖ್ಯೆ ಮುಖ್ಯ. ಮನಸ್ಸಲ್ಲ

ಶ್ರೀ ವಾಟಾಳ್ ನಾಗರಾಜ್: ಅನ್ನದಾನಿಯವರೇ, ನಾನು ಒಬ್ಬ ಇರಬಹುದು. ನಿಮ್ಮ ಪಕ್ಷಕ್ಕೆ ಯಾವತ್ತೂ ಕೂಡ ಜನರ mandate ಬಂದೇ ಇಲ್ಲ. ಇವತ್ತಲ್ಲ, ಮೊದಲಿನಿಂದಲೂ ಕೂಡ ಇಲ್ಲ. ಯಾವತ್ತು ಇದೆ? ಎಷ್ಟು ಜನ ನೀವು ಇದ್ದೀರಿ? ನೀವು 27 ಜನ ಅಷ್ಟೇ. ನೀವು 27 ಜನ ಹಿಡಿದುಕೊಂಡು ಕುಳಿತಿದ್ದೀರಲ್ಲ. ನೀವು ಏನು ಮಾತನಾಡುತ್ತಿದ್ದೀರಿ? ಮಾನ್ಯ ಯಡಿಯೂರಪ್ಪನವರು ನಿಮ್ಮ ಜೊತೆ ಸೇರದಿದ್ದರೆ...

ಡಾ॥ ಕೆ. ಅನ್ನದಾನಿ: ಯಾವ ರೀತಿ 27 ಎಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್: ಅದೆಲ್ಲ ಹೇಳುವುದಕ್ಕಾಗುವುದಿಲ್ಲ. ಮಾನ್ಯ ಪ್ರಕಾಶ್‌ರವರೆ, ಮಾನ್ಯ ಜಯಕುಮಾರ್‌ರವರು, ನೀವೊಬ್ಬರು ಹೈಕಮಾಂಡ್ ಎಂದು ಹೇಳಿದರು. ಬಹಳ ಸಂತೋಷ. ಈಗ ನಾನು ಬೇರೆ ವಿಚಾರಕ್ಕೆ ಹೋಗುತ್ತೇನೆ. ಈಗ ಪಾನನಿರೋಧ ಜಾರಿಗೆ ಬಂದ ಮೇಲೆ ಸುಮಾರು ಮೂರು ತಿಂಗಳಲ್ಲಿ 13,422 ದಾಳಿಗಳನ್ನು ಮಾಡಿದ್ದಾರೆ. 39,800 ಲೀಟರ್ ಕಳ್ಳಬಟ್ಟಿ ಜಪ್ತಿಯಾಗಿರುವಂಥಾದ್ದು. ವಿದ್ಯುತ್ ಉತ್ಪಾದನೆ ಹಿಂದಿನ ಸರ್ಕಾರ ಖಾಸಗಿಯವರ ಕೈಗೆ ಕೊಟ್ಟಿರುವಂಥಾದ್ದು ಸುಮಾರು 80, ಮಾನ್ಯ ಸಿದ್ದರಾಮಯ್ಯನವರೆ, ತಾವು ಒಂದು ಸಾರಿ ಬರಬೇಕು. ಮಳವಳ್ಳಿಯ ಹತ್ತಿರ ಗಗನಚುಕ್ಕಿ, ಬರಚುಕ್ಕಿ ಏನು ಇದೆ. ಅದು ಇತಿಹಾಸ ಪ್ರಸಿದ್ಧವಾಗಿರುವಂಥಾದ್ದು. ಇದು ಮಾನ್ಯ ಅನ್ನದಾನಿಯವರಿಗೂ ಗೊತ್ತಿದೆ. ಅಲ್ಲಿ ಯಾರು ವಿದ್ಯುತ್ ಉತ್ಪಾದನೆ ಮಾಡುತ್ತಿದ್ದಾರೆಂಬ ಬಗ್ಗೆ ಲಿಸ್ಟ್ ಅನ್ನು ತಂದಿಲ್ಲ. ಅಲ್ಲಿ ಧುಮುಕತಕ್ಕ ನೀರು ಏನು ಇದೆ, ಆ ಮಾರ್ಗವನ್ನೇ ಸಂಪೂರ್ಣ ಬದಲಾವಣೆ ಮಾಡಿ, ಅದರ ಅಂದ ಚೆಂದವನ್ನು ನಾಶ ಮಾಡಿರುವಂಥಾದ್ದು, ಇದು ಖಾಸಗಿಯವರಿಗೆ ನಮ್ಮ ರಾಜ್ಯದಲ್ಲಿ ವಿದ್ಯುತ್ ಅನ್ನು ಉತ್ಪಾದನೆಯನ್ನು ಮಾಡುವುದಕ್ಕೆ ಕೊಟ್ಟು, ಹಗಲು ದರೋಡೆ, ಲೂಟಿ, ನಿಸರ್ಗದ ನಾಶ ಇದಿಷ್ಟು ನಡೆಯುತ್ತಿದೆ.

ಡಾ॥ ಕೆ. ಅನ್ನದಾನಿ: ಮಾನ್ಯ ಚೇರ್ಮನ್‌ರೆ, ನಮ್ಮ ಹಿರಿಯ ನಾಯಕರಾದ ಮಾನ್ಯ ವಾಟಾಳ್ ನಾಗರಾಜ್‌ರವರು ; ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ನಿಜವಾಗಿಯೂ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಹಿಂದೆ ಸರ್ಕಾರ ಇವತ್ತು ಕಾವೇರಿ ನದಿ ಏನು ಹರಿಯುತ್ತಿದೆ. ಆ ಕಾವೇರಿ ನದಿಗೆ ಮತ್ತು ಆ ಎರಡು ಸುಂದರವಾದ ಫಾಲ್ಸ್‌ಗಳು ಇವೆ. ಅದರಲ್ಲಿ ಗಗನ ಚುಕ್ಕಿ ನನ್ನ ಕ್ಷೇತ್ರಕ್ಕೆ ಬರುವಂಥಾದ್ದು, ಬರ ಚುಕ್ಕಿ ಕೊಳ್ಳೆಗಾಲ ಕ್ಷೇತ್ರಕ್ಕೆ ಸೇರುವಂಥಾದ್ದು. ಈ ಎರಡು ಫಾಲ್ಸ್‌ಗಳನ್ನು ನೋಡುವುದಕ್ಕೆ ಸಾವಿರಾರು, ಲಕ್ಷಾಂತರ ಮಂದಿ ಪ್ರವಾಸಿಗರು ಬರುತ್ತಿದ್ದಾರೆ. ಅಂತಹ ಒಂದು ಸುಂದರವಾದ ಫಾಲ್ಸ್ ಅನ್ನು ಹಾಳು ಮಾಡುವುದಕ್ಕೆ ಹಿಂದೆ power generation ತಯಾರು ಮಾಡುವುದಕ್ಕೆ ಆ ಕಾವೇರಿ ನದಿ ನೀರು ಫಾಲ್ಸ್‌ಗೆ ಧುಮುಕುವುದನ್ನೇ ತಿರುಗಿಸಿದ್ದಾರೆ. ಇದು ನಿಜವಾಗಿಯೂ ಅನ್ಯಾಯ. ನಾವು ಈ ಬಗ್ಗೆ ಕಳೆದ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಇದು ಆಗಬಾರದು, ಈ power generation

ಮಾಡುವಂಥಾದ್ದನ್ನೆ ನಿಲ್ಲಿಸಬೇಕೆಂದು ನಾನು ಮತ್ತು ಕೊಳ್ಳೆಗಾಲದ ಶಾಸಕರು ಇಬ್ಬರೂ ಕೂಡ ಇದನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅದನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಹಿಂದಿನ ಸರ್ಕಾರ ಮಾಡಿರುವಂಥ ತಪ್ಪುಗಳು ಇವತ್ತು ಏನು ಆಗಿದೆಯೆಂದರೆ, ಪ್ರಕೃತಿಯಲ್ಲಿರುವಂಥ ಸುಂದರ ಸೌಂದರ್ಯವನ್ನು ನೋಡುವಂಥದ್ದರಲ್ಲಿ ನಾವು ವಂಚಿತರಾಗುತ್ತಿದ್ದೇವೆ. ನಮ್ಮ ಫಾಲ್ಸ್ ಹಾಳಾಗುತ್ತಿದೆ. ಆದುದರಿಂದ ದಯಮಾಡಿ ಅದು ಯಾರೇ ಆಗಲಿ, ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಂಡು, ಅದನ್ನು ಕೂಡಲೇ ನಿಲ್ಲಿಸಬೇಕೆಂದು ನಾನು ಈ ಸದನದಲ್ಲಿ ಒತ್ತಾಯವನ್ನು ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅನ್ನದಾನಿಯವರೆ, ನಾವು ನೀವು ಹೋಗೋಣ. ಅದು ಏನಾಗಿದೆಯೆಂದರೆ, ನಾನು ಎರಡು ತಿಂಗಳ ಹಿಂದೆ ನೀರು ಇಲ್ಲದೇ ಇರುವಾಗ ಹೋಗಿ, ಕೆಳಗಡೆಯವರೆಗೂ ಇಳಿದು ನೋಡಿದೆ. ಅದು ಸಂಪೂರ್ಣವಾಗಿ ನಾಶವಾಗಿ ಹೋಗಿದೆ. ಇದು ಇತಿಹಾಸಕ್ಕೆ ಅಪಚಾರ, ಅಲ್ಲಿ ಸಂಪೂರ್ಣವಾಗಿ ಬೇರೆ ದಿಕ್ಕನ್ನೆ ಕಲ್ಪಿಸಿ ಬಿಟ್ಟಿದ್ದಾರೆ. ಆದುದರಿಂದ ಮಾನ್ಯ ಯಡಿಯೂರಪ್ಪನವರೆ, ತಾವು ಒಂದು ಸಾರಿ ಗಗನಚುಕ್ಕಿ, ಬರಚುಕ್ಕಿಯನ್ನು ಬಂದು ನೋಡಬೇಕು.

ಡಾ॥ ಕೆ. ಅನ್ನದಾನಿ: ಮಾನ್ಯ ಚೇರ್ಮನ್‌ರವರೆ, ಅವರು ನಮ್ಮ ರಾಜ್ಯದವರು ಅಲ್ಲ. ಹೊರ ರಾಜ್ಯದವರು, ಆಂಧ್ರಪ್ರದೇಶದವರು.

ಶ್ರೀ ವಾಟಾಳ್ ನಾಗರಾಜ್: ಅವರು ಆಂಧ್ರ ಪ್ರದೇಶದವರ ಪಾಲಾಗಿದೆ. ಅದರಲ್ಲಿ ಹೆಚ್ಚು ಕಡಿಮೆ 80ರಲ್ಲಿ 60–65 ಆಂಧ್ರದವರ ಪಾಲಾಗಿ ಹೋಗಿದೆ. ಆ ದೃಷ್ಟಿಯಿಂದ ಇದು ಅತ್ಯಂತ ನೋವಿನ ಪ್ರಸಂಗವೆಂದು ಹೇಳಿದರೆ ಅದು ತಪ್ಪಾಗಲಾರದು. ಇದು ಬಹಳ ಗಂಭೀರವಾದ ಪರಿಸ್ಥಿತಿ, ರಾಜಧಾನಿ ಬೆಂಗಳೂರು ನಗರದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಜನತಾ ದರ್ಶನ ಮಾಡುತ್ತಿದ್ದಾರೆ. ಇದಕ್ಕೆ ಎಷ್ಟು ಅರ್ಜಿಗಳು ಬಂತು? 70,432 ಅರ್ಜಿಗಳು ಬಂದಿರುವಂಥಾದ್ದು. ಈ ಅರ್ಜಿಗಳು ಏನಾಗಿವೆ? ಇದಕ್ಕೆ ದಿಕ್ಕು ಇಲ್ಲ, ದೆಶೆ ಇಲ್ಲ. ಅಲ್ಲಿ ಜನತಾ ದರ್ಶನದಲ್ಲಿ ಒಬ್ಬ ಅಂಗವಿಕಲನು ಕಾಯುತ್ತಾನೆ. ಜನತಾ ದರ್ಶನ 24 ಗಂಟೆಗಳು, ಆ ದರ್ಶನದಿಂದ ಏನು ಆಗುತ್ತಿದೆ? ಮಾನ್ಯ ಮುಖ್ಯಮಂತ್ರಿಯವರ ಹುದ್ದೆ, ಅದು ಮೂರನೇ ಮಹಡಿಯಲ್ಲಿ, ಅವರಿಗೆ ಇರುವಂಥ ಅಧಿಕಾರ ಬೇರೆ ಯಾರಿಗೂ ಇರುವುದಕ್ಕೆ

ಸಾಧ್ಯವಿಲ್ಲ. ಅವರು ಜನತಾ ದರ್ಶನಕ್ಕಿಂತ ಹೆಚ್ಚಾಗಿ, ತಮ್ಮ ಕಾರ್ಯಾಲಯದಲ್ಲಿ ಕುಳಿತು, ಎಲ್ಲಾ ಕೆಲಸವನ್ನು ಮಾಡಬಹುದು. ಒಂದು ಕಡೆ ಜನತಾ ದರ್ಶನ, ಮತ್ತೊಂದು ಕಡೆ ಹಳ್ಳಿಯಲ್ಲಿ ವಾಸ್ತವ್ಯ. ಇವರೆಡೂ ವಿಫಲವಾಗಿದೆ, ಅವರು ಮಾಡಲಿ, ನನ್ನದು ಏನೂ ಅಭ್ಯಂತರವಿಲ್ಲ. ಅವರು ಜನತಾ ದರ್ಶನವನ್ನು ಮಾಡಬಾರದೆಂದು ನಾನು ಹೇಳುವುದಿಲ್ಲ. ವಾಸ್ತವ್ಯ ಬೇಡವೆಂದು ಹೇಳುವುದಿಲ್ಲ. ಈ ಜನತಾ ದರ್ಶನ ಏನು ಆಗಿದೆ? ಸಂಪೂರ್ಣ ಅರ್ಜಿಗಳು ಎಲ್ಲಿಗೆ ಹೋಗಿದೆ? ಅದಕ್ಕೆ ಏನು ಅನುಕೂಲ ಸಿಕ್ಕಿದೆ? ಇಡೀ ರಾಜ್ಯದ ಜನರು ಬಂದು ತಮ್ಮ ಕೈಯಿಂದ ಚಾರ್ಜ್ ಕೊಟ್ಟುಕೊಂಡು ಬಂದು ಅಲ್ಲಿ ರಾತ್ರಿಯೆಲ್ಲಾ ಕಾದು ಫುಟ್‌ಪಾತ್ ಮೇಲೆ ಮಲಗಿ ಅರ್ಜಿಯನ್ನು ಕೊಟ್ಟು ಏನೂ ಆಗಲಿಲ್ಲ. ಜನತಾ ದರ್ಶನ ವಿಫಲ, ವಾಸ್ತವ್ಯ ವಿಫಲ, ಅವರು ವಾಸ್ತವ್ಯದ ಬಗ್ಗೆ ಮೊನ್ನೆ ಏನು ಹೇಳಿದರು, ಈ ವಾಸ್ತವ್ಯ ನನಗೆ ಡಾ॥ ರಾಜ್‌ಕುಮಾರ್‌ರವರಿಂದ ಸ್ಫೂರ್ತಿ ಎಂದು ಹೇಳಿದರು. ನಮಗೆ ಸಂತೋಷ, ಆ ಸ್ಫೂರ್ತಿ ಇರಲಿ, ನನ್ನದು ಏನೂ ಅಭ್ಯಂತರವಿಲ್ಲ. ಏನು ವಾಸ್ತವ್ಯ? ಏನು ತತ್ವ? ವಾಸ್ತವ್ಯದ ನೀತಿ ಏನು? ಬೇರೆ ಮಂಚ, ಬೇರೆ ಹಾಸಿಗೆ, ಬೇರೆ ಜಮಖಾನ, ಬೇರೆ ದುಪ್ಪಟಿ, ಬೇರೆ ಶೌಚಾಲಯ, ಇವರು ಬಂದು ಹೋದ ತಕ್ಷಣ ಎಲ್ಲಾ ಮಾಯವಾಗುತ್ತದೆ. ಈ ಮಂಚ ಎಲ್ಲಿ ಹೋಯಿತು? ದುಪ್ಪಟಿ ಎಲ್ಲಿ ಹೋಯಿತು? ಹಾಸಿಗೆ ಎಲ್ಲಿ ಹೋಯಿತು? ಎಲ್ಲಾ ಸಂಪೂರ್ಣ ಮಾಯ. ನನಗನಿಸುವುದೇನೆಂದರೆ, ಇದರಿಂದ ಏನು ಪ್ರಯೋಜನ? ಇದು ಒಳ್ಳೆಯದಲ್ಲ, ಅವರು ಇಲ್ಲಿಯೇ ಕುಳಿತುಕೊಂಡು, ಇಲ್ಲೇ ಈ ಯುಗದಲ್ಲಿ ಒಂದು ಬಟನ್ ಅನ್ನು ಒತ್ತಿದರೆ ಬಿಜಾಪುರ, ರಾಯಚೂರು, ಬೆಳಗಾಂ, ಗುಲ್ಬರ್ಗಾ, ಎಷ್ಟು ಆಡಳಿತವನ್ನು ನಡೆಸಬಹುದು. ಇದನ್ನು ಮಾಡದೇ, ವಾಸ್ತವ್ಯಕ್ಕೆ ಹೋಗುವಂಥದ್ದು ಸರಿಯಲ್ಲ. ಇವರು ಆರಂಭದಲ್ಲಿ ಹೆಲಿಕಾಪ್ಟರ್‌ನಲ್ಲಿ ಓಡಾಡುವುದಿಲ್ಲವೆಂದು ಹೇಳಿದರು. ನಾನು ಸಂಪೂರ್ಣ ರಸ್ತೆಯಲ್ಲೇ ಓಡಾಡುತ್ತೇನೆಂದು ಹೇಳಿದರು. ಅದು ಇಲ್ಲವೇ ಇಲ್ಲ, ಅವರು ರಸ್ತೆಯನ್ನು ನೋಡಿ ಸುಮಾರು ಒಂದು, ಒಂದೂವರೆ ವರ್ಷವಾಗಿರಬಹುದು. ಇವರು ಎಲ್ಲಾ ಕಡೆಗೂ ಹೆಲಿಕಾಪ್ಟರ್‌ನಲ್ಲಿ ಓಡಾಡುವುದು ಏಕೆ? ಸಾಮಾನ್ಯ ಜನರನ್ನು ಭೇಟಿ ಮಾಡುವುದಕ್ಕೆ, ನಾವು ಅವರ ಮೇಲೆ ವೈಯಕ್ತಿಕವಾಗಿ ಏನು ಹೇಳುತ್ತಾ ಇಲ್ಲ. ಅವರು ಹೆಲಿಕಾಪ್ಟರ್‌ನಲ್ಲಿ ಹೋಗಿ ಬಂದ ತಕ್ಷಣ ಇದರಿಂದ ಏನು ಪ್ರಯೋಜನ? ನೀವು ಏನು ಹೇಳಿದ್ದೀರಿ. ನಮ್ಮ ನೀತಿ ಏನು? ಅದು ಸಾಧ್ಯವಾಗಲಿಲ್ಲ. ಮತ್ತು 2006–07ರಲ್ಲಿ ಮಂಜೂರಾದ

ಪ್ರೌಢಶಾಲೆಗಳ ಬಗ್ಗೆ ಮಾನ್ಯ ಜೆ.ಸಿ. ಮಾಧುಸ್ವಾಮಿಯವರು, ಮಾನ್ಯ ಬಸವರಾಜ ರಾಯರೆಡ್ಡಿಯವರು ಚೆನ್ನಾಗಿ ಮಾತನಾಡಿದರು. ಮಾನ್ಯ ಯಡಿಯೂರಪ್ಪನವರೆ, ನಾನು ನೇರವಾಗಿ ಹೇಳುತ್ತಿದ್ದೇನೆ. ನೀವು ಪ್ರೌಢಶಾಲೆಗಳು, ಪದವಿ ಪೂರ್ವ ಕಾಲೇಜುಗಳು, ಕಟ್ಟಡಗಳು, ಇತರ ಮೂಲ ಸೌಲಭ್ಯ, ಅನುದಾನಗಳು ಸೇರಿ, ಯಾರ್ಯಾರಿಗೆ ಎಷ್ಟೆಷ್ಟು ಕೊಟ್ಟಿದ್ದೀರಿ ಎಂಬುದನ್ನು ನೇರವಾಗಿ ಹೇಳಿ. ಮಾನ್ಯ ಮುಖ್ಯಮಂತ್ರಿಯವರು, ಉಪ ಮುಖ್ಯಮಂತ್ರಿಯವರು, ಮಂತ್ರಿಗಳು, ಕೆಲವರೇ, ಸ್ವತ್ತನ್ನು ಮಾಡಿಕೊಂಡಿದ್ದೀರಲ್ಲಾ, ಅದು ಈ ಸದನಕ್ಕೆ ಮಾಡಿದಂಥ ಅಪಚಾರ. ಈ ವ್ಯವಸ್ಥೆಗೆ ಮಾಡಿದಂಥ ಅಪಚಾರ, ಈ ಬಗ್ಗೆ ನನಗೆ ಬಹಳ ನೋವಾಗುತ್ತದೆ. ತಮ್ಮ ಭಾಷಣದಲ್ಲಿ ತಾವು ಹೇಳಿ, ಪ್ರೌಢಶಾಲೆಯನ್ನು ಕ್ಷೇತ್ರವಾರು ಎಷ್ಟು ಹಂಚಿದ್ದೀರಿ? ಕಾಲೇಜುಗಳನ್ನು ಕ್ಷೇತ್ರವಾರು ಎಷ್ಟು ಕೊಟ್ಟಿದ್ದೀರಿ? ಕ್ಷೇತ್ರವಾರು ಎಷ್ಟು ಅನುದಾನವನ್ನು ಕೊಟ್ಟಿದ್ದೀರೆಂಬುದನ್ನು ತಾವು ಹೇಳಬೇಕು. ಶಿವಮೊಗ್ಗ, ಹಾಸನ, ಬೆಂಗಳೂರು ಗ್ರಾಮಾಂತರ, ಇಲ್ಲಿಗೆ ಸಂಪೂರ್ಣ ಸಿಂಹಪಾಲಾಗಿದೆ. ಮಾನ್ಯ ಯಡಿಯೂರಪ್ಪನವರೆ, ನಾನು ಅದನ್ನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ. ನೀವು ಮತ್ತು ಮುಖ್ಯಮಂತ್ರಿಯವರು ಹಾಗೂ ಮಂತ್ರಿಗಳು, ಇಡೀ ರಾಜ್ಯದ ಜನರಿಗೆ ಭರವಸೆಗಳನ್ನು ಕೊಡುತ್ತಿದ್ದೀರಲ್ಲಾ, ಹೋದ ಕಡೆಗಳಲ್ಲಿ ಹಣದ ಬಗ್ಗೆ ಎಲ್ಲರಿಗೂ ಹೇಳುತ್ತಿದ್ದೀರಲ್ಲಾ, ಇವೆಲ್ಲವನ್ನು ನೋಡಿದರೆ, ಈ ಆಯವ್ಯಯದಲ್ಲಿ ನೀವು ಏನು ಹಣವನ್ನು ಕೊಟ್ಟಿದ್ದೀರಿ. ಅದರ ಹತ್ತು ಪಟ್ಟು ಹಣವನ್ನು ಕೊಟ್ಟು ಬಿಟ್ಟಿರಿ. ನೀವು ಏನು ಮಾಯಮಂತ್ರವನ್ನು ಮಾಡುತ್ತಿದ್ದೀರಾ? ಮ್ಯಾಜಿಕ್ ಮಾಡುತ್ತಿದ್ದೀರಾ? ರಾಮನಗರಕ್ಕೆ ಸಾವಿರ ಕೋಟಿ, ಚಾಮರಾಜನಗರಕ್ಕೆ 390 ಕೋಟಿ, ರಾಯಚೂರು 280 ಕೋಟಿ ರೂಪಾಯಿಗಳ ಅನುದಾನ, ಈ ರೀತಿ ಶುರುವಾಗಿ ಬಿಟ್ಟರೆ, ಅದಕ್ಕೆ ಶಿಸ್ತು, ನಿಯಮ ಇಲ್ಲವೇ ನಿಮ್ಮಲ್ಲಿ ಶಾಲೆಗೆ ಇಷ್ಟು ಹಣವನ್ನು ಇಟ್ಟಿದ್ದೇವೆ. ರಸ್ತೆಗೆ ಇಷ್ಟು ಹಣವನ್ನು ಇಟ್ಟಿದ್ದೇವೆ, ವಿದ್ಯುಚ್ಛಕ್ತಿಗೆ ಇಷ್ಟು ಹಣವನ್ನು ಇಟ್ಟಿದ್ದೇವೆ. ರಾಮನಗರಕ್ಕೆ ಇಷ್ಟು ಹಣವೆಂದು, ಇಂಥ ಊರಿಗೆ ಇಷ್ಟು ಎಂದು ನಿಮ್ಮಲ್ಲಿ ಏನೂ ಲೆಕ್ಕವಿಲ್ಲವೇ? ಇದಕ್ಕೆ ಲೆಕ್ಕ ಪರಿಶೋಧನೆ, ಲೆಕ್ಕ, ಏನು ಇಲ್ಲ. ನೀವು ಹೋದ ಕಡೆ ನಿಮ್ಮ ಇಷ್ಟ ಬಂದ ಹಾಗೆ, ಮಾನ್ಯ ಸಿದ್ದರಾಮಯ್ಯನವರೆ, ಹಿಂದೆ ರಾಜಾಧಿರಾಜರು ಬರುತ್ತಿದ್ದರು. ಅವರಿಗೆ ಹಾರ, ತುರಾಯಿಗಳನ್ನು ಹಾಕಿದ ನಂತರ, ಆಯಿತು ತಗೋ ಅಗ್ರಹಾರ, ಎನ್ನುವ ಹಾಗೆ ಇದೆ ನಡೆಯುತ್ತಿದೆ. ನನಗೆ ಅರ್ಥವಾಗುತ್ತಿಲ್ಲ. ನಿಮಗೆ ಏನು ಆಗಿದೆ? ನಿಮ್ಮ ಆಯವ್ಯಯದ ಬಗ್ಗೆ ನಾನು ಸಂತೋಷ ಪಟ್ಟೆ. ನೀವು ರೈತರ ಬಗ್ಗೆ ಮಾಡಿರುವಂಥದ್ದು,

ಅವರಿಗೆ ಕೊಟ್ಟಿರುವ ವಿಚಾರವಾಗಿ, ಎಲ್ಲವನ್ನು ನಾನು ಮೆಚ್ಚುತ್ತೇನೆ. ಆದರೆ ಒಂದು ಶಿಸ್ತು ಬೇಕಲ್ಲಾ, ಅದು ಎಲ್ಲೋ ಒಂದು ಕಡೆ ದಾಟುತ್ತಾ ಇದೆ. ನಿಮ್ಮ ಆಯವ್ಯಯದ ಭಾಷಣದಲ್ಲಿ ಏನು ಹೇಳಿದ್ದೀರಿ. ಅವೆಲ್ಲವೂ ಎಲ್ಲರಿಗೂ ತಲುಪಬೇಕೆಂದು ಮಂಡಿಸಿದ್ದೀರಿ. ಮಾನ್ಯ ಸಿದ್ದರಾಮಯ್ಯನವರು ಸಹ ಇಲ್ಲಿ ಆಯವ್ಯಯವನ್ನು ಮಂಡಿಸಿದ್ದಾರೆ. ಅವರು ಮಾಡಿರುವ ಬಗ್ಗೆ ನಾವು ಅವರ ಬಗ್ಗೆ ಮುಕ್ತ ಕಂಠದಿಂದ ಹೇಳಿದ್ದೇವೆ.

ಮಾನ್ಯ ಯಡಿಯೂರಪ್ಪನವರೇ, ನಾನು ಏನು ಹೇಳುತ್ತೇನೆಂದರೆ, ನೀವು ಆಯವ್ಯಯವನ್ನು ಮಂಡಿಸಿದಂದಿನಿಂದ ಇಂದಿನವರೆಗೆ ಎಲ್ಲೆಲ್ಲಿ ಯಾವ ಯಾವ ಸಮಾರಂಭಗಳಲ್ಲಿ ಏನೇನು ಭಾಷಣ ಮಾಡಿದ್ದೀರಿ, ಏನೇನು ಹೇಳಿದ್ದೀರಿ ಅದೆಲ್ಲವನ್ನು ಹೊರಗಡೆಗೆ ತೆಗೆದುಕೊಂಡು ಬನ್ನಿ, ಸದನದ ಮುಂದೆ ಮಂಡಿಸಿ, ನೀವು ಹೇಳಿರುವ ಹಣವೆಷ್ಟು, ಯಾವ ರೀತಿ ಭರವಸೆಗಳನ್ನು ಕೊಟ್ಟಿದ್ದೀರಿ, ಇದಕ್ಕೆ ಏನು ಕಾರಣವೆನ್ನುವುದನ್ನು ಹೇಳಿ, ಖಂಡಿತವಾಗಿಯೂ ಇದು ಯಾವುದೇ ಕಾರಣಕ್ಕೂ ಒಳ್ಳೆಯದಲ್ಲ. ನಮ್ಮ ಶಾಸಕರುಗಳಿಗೆ ನೀವು ವಂಚನೆ ಮಾಡಿದ್ದೀರಿ. ಕೆಲವರಿಗೆ ಮಾತ್ರ ಅನುಕೂಲವಾಗಿದೆ. ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಗೆ ನಾಮಕರಣ ಮಾಡಿದ್ದೀರಲ್ಲ. ನೀವು ಎರಡೂ ಪಕ್ಷದವರು ಮಾತ್ರ ಇರುವುದೇ? ಬೇರೆ ಬೇರೆ ಪಕ್ಷಗಳಿಂದ ಶಾಸಕರಾಗಿರುವ ನಾವ್ಯಾರೂ ಇಲ್ಲವೇ? ನಿಮ್ಮ ಎರಡೂ ಪಕ್ಷಗಳಿಗೆ ಸೇರಿದ ಆರಾರು ಜನರನ್ನು ನಾಮಕರಣ ಮಾಡಿದ್ದೀರಿ. ಬೇರೆ ಪಕ್ಷಗಳ ಒಬ್ಬರನ್ನಾದರೂ ನೀವು ನಾಮಕರಣ ಮಾಡಿರುವಿರಾ? ಮಾಡಲಿಲ್ಲವಲ್ಲ. ಕೇವಲ ನಿಮ್ಮ ಪಕ್ಷದವರನ್ನು ಮಾತ್ರ ನೀವು ನಾಮಕರಣ ಮಾಡಿಕೊಂಡು ಕುಳಿತುಕೊಂಡಿರಲ್ಲ, ಇದು ಯಾವ ನೀತಿ? ಕನಿಷ್ಠ, ಬೇರೆ ಪಕ್ಷಗಳ ಒಬ್ಬೊಬ್ಬ ಶಾಸಕರನ್ನಾದರೂ ನೀವು ನಾಮಕರಣ ಮಾಡಬೇಕಿತ್ತಲ್ಲವೇ? ಅದನ್ನು ಮಾಡಲಿಲ್ಲ. ನೂತನ ವಿದ್ಯುತ್ ಕಾರ್ಖಾನೆ ಏನಾಯಿತು? ನಮ್ಮಲ್ಲಿ ಕೈಗಾರಿಕಾ ನೀತಿ ಸಂಪೂರ್ಣವಾಗಿ ನಾಶವಾಗಿದೆ, ಸತ್ತು ಹೋಗಿದೆ. ಕರ್ನಾಟಕವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಮಾರಿಕೊಂಡಿದ್ದಾರೆ. ಕರ್ನಾಟಕವನ್ನು ಅಮೇರಿಕಕ್ಕೆ ಮಾರಿಕೊಂಡಿದ್ದಾರೆ. ಕರ್ನಾಟಕವನ್ನು ಬಹುರಾಷ್ಟ್ರೀಯ ಕಂಪನಿಗಳ ಗುಲಾಮರನ್ನಾಗಿ ಮಾಡಿದ್ದಾರೆ. ನೂತನ ವಿದ್ಯುತ್ ಕಾರ್ಖಾನೆ ಏನಾಯಿತು? ಏನು ಮಾಡಿದಿರಿ? ಕಾರ್ಖಾನೆಯ ಯಂತ್ರಗಳು ಇವತ್ತೂ ಅಲ್ಲಿ ಕೊಳೆಯುತ್ತಾ ಬಿದ್ದಿವೆ. ನೀವು ಕಾರ್ಖಾನೆಯ ಯಂತ್ರಗಳಿಗೆ ಚೈತನ್ಯ ಕೊಡಲಿಲ್ಲ, ಅನುಕೂಲ ಮಾಡಲಿಲ್ಲ. ಒಂದು

ಮಾತನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ವಿದ್ಯುತ್ ಕಾರ್ಖಾನೆ ಯಾವ ಪರಿಸ್ಥಿತಿಯಾಯಿತು? 70 ವರ್ಷಗಳ ಇತಿಹಾಸವಿರತಕ್ಕಂಥ ಮೈಸೂರು ಲ್ಯಾಂಪ್ಸ್ ಏನಾಯಿತು? ವಿಜಯ್ ಕುಮಾರ್ ಎನ್ನುವ I.A.S. ಅಧಿಕಾರಿ ಯಾರಿಗೂ ಸೊಪ್ಪು ಹಾಕಿದವರಲ್ಲ, ದಕ್ಷ ಅಧಿಕಾರಿ, ನೇರವಾದ ಅಧಿಕಾರಿ, ಸ್ಪಷ್ಟ ಅಧಿಕಾರಿ, ಆ ಅಧಿಕಾರಿಯನ್ನು ಎಷ್ಟು ಸಾರಿ ವರ್ಗ ಮಾಡಿದ್ದೀರಿ? ಆ ಅಧಿಕಾರಿ ನೇರವಾಗಿ ಹೇಳುತ್ತಿದ್ದಾರೆ, ನೀವು ಮೈಸೂರು ಲ್ಯಾಂಪ್ಸ್‌ನ್ನು ನನಗೆ ವಹಿಸಿ, ನಾನು ಅದನ್ನು ಲಾಭಕ್ಕೆ ತರಲಿಲ್ಲವೆಂದರೆ ಆಗ ಹೇಳಿ, ಈಗ ಬೇರೆ ಮಾತನ್ನಾಡಬೇಡಿ ಎನ್ನುವಂಥ ಮಾತನ್ನು ಅವರು ಹೇಳುತ್ತಿದ್ದಾರೆ. I.A.S. ಅಧಿಕಾರಿಯಾದ ಅವರಿಗೆ ವಹಿಸಿಕೊಡಿ. ಏಕೆ ಕೊಡಬಾರದು? ಕಾರಣವೇನು? ಒಬ್ಬ I.A.S. ಅಧಿಕಾರಿ, "ಅದನ್ನು ನನಗೆ ನೀವು ವಹಿಸಿದರೆ ನಾನು ಲಾಭ ಮಾಡುತ್ತೇನೆ" ಎಂದರೆ ನೀವು ಏಕೆ ಕೊಡುವುದಿಲ್ಲ. ಇದು ಸರಿಯಾದ ಕ್ರಮವಲ್ಲ. ನಮ್ಮ ಕೈಗಾರಿಕಾ ನೀತಿ ಕಪಿಮುಷ್ಟಿಯಲ್ಲಿದೆ. ಇಡೀ ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕ ವಲಯ ನಾಶವಾಗುತ್ತಿದೆ. ಸರ್ಕಾರೀ ಕಾರ್ಖಾನೆಗಳು ಮುಚ್ಚುತ್ತಿವೆ. ಕಾರ್ಮಿಕರು ಬೀದಿ ಪಾಲಾಗುತ್ತಿದ್ದಾರೆ. ಇವರಿಗೆ ಕಾರ್ಮಿಕರ ಬಗ್ಗೆ ಚಿಂತನೆ ಇಲ್ಲ. ಎಲ್ಲ ಬಹುರಾಷ್ಟ್ರೀಯ ಕಂಪನಿಗಳು ಬರುತ್ತಿವೆ. ಅಲ್ಲಿಗೆ ಬರತಕ್ಕಂಥ ಕಾರ್ಮಿಕರು ಹೊರಗಡೆಯವರು. ಕರ್ನಾಟಕದ, ಕನ್ನಡದ ಕಾರ್ಮಿಕರು ಅಲ್ಲಿ ಯಾರೂ ಇಲ್ಲ. ಈ ರೀತಿಯಾಗಿ ಆಗಿದ್ದು, ನಮ್ಮ ರಾಜ್ಯದಲ್ಲಿ ಕೈಗಾರಿಕಾ ನೀತಿ ಸಂಪೂರ್ಣವಾಗಿ ನಾಶವಾಗಿ ಹೋಗಿದೆ.

ಛೇರ್ಮನ್ (ಭಾಗೀರಥೀ ಮರುಳಸಿದ್ಧನಗೌಡ): ತಾವು ಮಾತನಾಡಲು ಪ್ರಾರಂಭಿಸಿ ಈಗಾಗಲೇ ಒಂದು ಗಂಟೆಯಾಗಿದೆ. ತಮಗೆ ಇನ್ನು ಎಷ್ಟು ಕಾಲಾವಕಾಶ ಬೇಕು?

ಶ್ರೀ ವಾಟಾಳ್ ನಾಗರಾಜ್: ಇನ್ನು ಐದು ನಿಮಿಷದಲ್ಲಿ ಮುಗಿಸುತ್ತೇನೆ. ಈಗ ಕರ್ನಾಟಕ ರಾಜ್ಯದಲ್ಲಿ 851 ಪೊಲೀಸ್ ಠಾಣೆಗಳಿವೆ. ಇನ್ನೂ ನೂರಾರು ಪೊಲೀಸ್ ಠಾಣೆಗಳ ಅವಶ್ಯಕತೆ ಇದೆ. ಅವುಗಳನ್ನು ಏಕೆ ಮಾಡುತ್ತಿಲ್ಲ, ಕಾರಣವೇನು? ಪೊಲೀಸ್ ಠಾಣೆಗಳನ್ನು ಹೆಚ್ಚಿಸದಿರಲು ಕಾರಣವೇನು? ಧರ್ಮವೀರ ಸಮಿತಿ ವರದಿ ಏನಾಯಿತು? ಅದನ್ನು ನೀವು ಏನು ಮಾಡಿದ್ದೀರಿ? ಮೂಲೆಗುಂಪು ಮಾಡಿದ್ದೀರಿ. 20 ವರ್ಷಗಳಿಂದ ಪೊಲೀಸರಿಗೆ ಬಡ್ತಿ ಕೊಟ್ಟಿಲ್ಲ. ಅವರಿಗೆ ಒಳ್ಳೆಯ ಉಡುಪು ಕೊಟ್ಟಿಲ್ಲ, ಒಳ್ಳೆಯ ಪಾದರಕ್ಷೆ, ಬೂಟ್ಸ್‌ಗಳನ್ನು ಕೊಟ್ಟಿಲ್ಲ, ಒಳ್ಳೆಯ ಟೋಪಿಗಳನ್ನು ಕೊಟ್ಟಿಲ್ಲ, ಸೋಪು ಕೊಡುತ್ತಿಲ್ಲ, ಅವರಿಗೆ ಮನೆಗಳನ್ನು ಕೊಡುತ್ತಿಲ್ಲ. 24 ಗಂಟೆಯೂ ಅವರು

ದುಡಿಯಬೇಕು, ಕೆಲಸ ಮಾಡಬೇಕು. ಅವರ ಬಗ್ಗೆ ನಿಮಗೆ ಪ್ರಾಮಾಣಿಕವಾದಂಥ ಚಿಂತನೆ ಇಲ್ಲವೇ ಇಲ್ಲ. ಅವರನ್ನು ಅತ್ಯಂತ ಕಡೆಗಾಣಿಸಿದ್ದೀರಿ. ಎಂಥ ಕಷ್ಟ ಕಾಲದಲ್ಲೂ ಓಡಾಡತಕ್ಕಂಥ ಪೊಲೀಸರಿಗೆ Risk Allowance ಅನ್ನು ನೀವು ಇವತ್ತಿನವರೆಗೂ ಕೊಟ್ಟಿಲ್ಲ. 2004ರಲ್ಲಿ 1,519 ಕೊಲೆಗಳು, 2005ರಲ್ಲಿ 1,690 ಕೊಲೆಗಳು, 2006ರಲ್ಲಿ 1,627 ಕೊಲೆಗಳು, 2007ರಲ್ಲಿ ಅಂದರೆ ಕಳೆದ ಮೂರು ತಿಂಗಳಲ್ಲಿ 540 ಕೊಲೆಗಳು ಆಗಿವೆ. ಅಂದರೆ ಪೊಲೀಸರ ದಕ್ಷತೆ ಕೆಳಗೆ ಬರುತ್ತಿದೆ ಇದಕ್ಕೆ ಕಾರಣವೇನು? ಯಾವ ಕಾರಣಕ್ಕಾಗಿ ಕೆಳಗೆ ಬರುತ್ತಿದೆ ಎಂದರೆ ಹೆಚ್ಚು ಪೊಲೀಸ್ ಠಾಣೆಗಳಿಲ್ಲ, ಉತ್ತಮ ಶಸ್ತ್ರಾಸ್ತ್ರಗಳಿಲ್ಲ, ಪೊಲೀಸರಿಗೆ ಬಡ್ತಿ ಕೊಡುತ್ತಿಲ್ಲ, ಪೊಲೀಸರ ನೇಮಕಾತಿ ಮಾಡುತ್ತಿಲ್ಲ. 10 ಸಾವಿರ ಪೊಲೀಸ್ ಹುದ್ದೆಗಳು ಖಾಲಿ ಇವೆ. ಇವತ್ತಿನವರೆಗೂ ನೀವು ಅವುಗಳನ್ನು ತುಂಬುವುದಕ್ಕೆ ಆಗಿಲ್ಲ. ಅವರಿಗೆ ಆಧುನಿಕ ಶಸ್ತ್ರಾಸ್ತ್ರಗಳನ್ನು ಕೊಡುವುದಕ್ಕೆ ಆಗಿಲ್ಲ. ಆದ್ದರಿಂದ, ಇದು ಅತ್ಯಂತ ಗಂಭೀರವಾದಂಥ ಪರಿಸ್ಥಿತಿ ಎಂದು ನನಗನ್ನಿಸುತ್ತದೆ. ನಮ್ಮ ಬಸವರಾಜ ರಾಯರೆಡ್ಡಿ ಮತ್ತು ಮಾಧುಸ್ವಾಮಿಯವರು ಈ ತಾರತಮ್ಯದ ಬಗ್ಗೆ ಸ್ಪಷ್ಟವಾಗಿ ಅಂಕಿಅಂಶಗಳನ್ನು ಕೊಟ್ಟು ಹೇಳಿದ್ದಾರೆ. ರಾಜ್ಯದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿಗಾಗಿ 2007ರ ಅಂತ್ಯಕ್ಕೆ 2.42 ಲಕ್ಷ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಅವುಗಳ ಪೈಕಿ 54,226 ಕೊಳವೆ ಬಾವಿಗಳು ಕೆಟ್ಟಿವೆ. ಹೀಗಾದರೆ ನೀವು ಎಲ್ಲಿ ಕುಡಿಯುವ ನೀರನ್ನು ಕೊಡುತ್ತೀರಿ? ಗ್ರಾಮೀಣ ಪ್ರದೇಶದ ಜನರಿಗೆ ನೀವು ಯಾವಾಗ ಕುಡಿಯುವ ನೀರನ್ನು ಕೊಡುವುದು? ಪರಿಸ್ಥಿತಿ ಏನಾಗುತ್ತದೆ? ಕರ್ನಾಟಕ ರಾಜ್ಯದಲ್ಲಿ 1,099 ಖಾಸಗಿ ಭಾರಿ ಕೈಗಾರಿಕೆಗಳಿವೆ. ಸಿಮೆಂಟ್, ಸಕ್ಕರೆ, ಕಾಗದ, ಉಕ್ಕು, ಕಬ್ಬಿಣ, ಎಂಜಿನಿಯರಿಂಗ್, ಐ.ಟಿ., ಬಿ.ಟಿ. ಎಲ್ಲ ಸೇರಿ ಅಷ್ಟಿವೆ. ಇವೆಲ್ಲ ಹೊರಗಡೆಯಿಂದ ಬಂದಿರತಕ್ಕಂಥವರದು. ಎಲ್ಲವೂ ಬಹುರಾಷ್ಟ್ರೀಯ ಕಂಪನಿಗಳು. ಇವುಗಳಲ್ಲಿ ಕನ್ನಡಿಗರ್ಯಾರಿಗೂ ಉದ್ಯೋಗವಿಲ್ಲ. ಸರೋಜಿನಿ ಮಹಿಷಿ ವರದಿಯನ್ನು ಏನು ಮಾಡಿದಿರಿ ಸ್ವಾಮಿ? ನೀವು ಇದುವರೆಗೆ ನೂರಾರು ಸುತ್ತೋಲೆಗಳನ್ನು ಸರೋಜಿನಿ ಮಹಿಷಿ ವರದಿಯ ಬಗ್ಗೆ ಕಳುಹಿಸಿದ್ದೀರಿ. ಆದರೆ, ನೀವು ಪ್ರಾಮಾಣಿಕವಾದ ಏನಾದರೂ ಚಿಂತನೆ ಮಾಡಿದಿರಾ ? ಖಂಡಿತ ಮಾಡಿಲ್ಲ. ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ. ಕರ್ನಾಟಕದಲ್ಲಿ ಕನ್ನಡಿಗರಿಗೆ ಉದ್ಯೋಗವಿಲ್ಲ, ಅವರಿಗೆ ನಮ್ಮ ನೀರು ಬೇಕು, ರಸ್ತೆ ಬೇಕು, ಜಮೀನು ಬೇಕು, ಎಲ್ಲವೂ ಬೇಕು. ಆದರೆ ಅಲ್ಲಿ ಕನ್ನಡಿಗರಿಗೆ ಉದ್ಯೋಗವಿಲ್ಲ. ಇದು ಯಾವ ನೀತಿ ? ಈ ನೀತಿ ಬಗ್ಗೆ ನಿಮ್ಮ ಸ್ಪಷ್ಟ ನಿಲುವೇನು? ಈ ಕಂಪನಿಗಳಲ್ಲಿ ಎಷ್ಟು ಜನ ಕನ್ನಡಿಗರು ಉದ್ಯೋಗದಲ್ಲಿದ್ದಾರೆ? ಎಷ್ಟು ಜನ ಹೊರಗಡೆಯವರಿದ್ದಾರೆ? ಈ ಬಗ್ಗೆ ನೀವು ಒಂದು ಶ್ವೇತಪತ್ರವನ್ನು ಸ್ಪಷ್ಟವಾಗಿ ಮಂಡಿಸಿ,

ದಯಮಾಡಿ ತೆಗೆದುಕೊಂಡು ಬನ್ನಿ. ಯಾವ ಯಾವ ಕಾರ್ಖಾನೆಯಲ್ಲಿ ಕೊಟ್ಟಿದ್ದಾರೆ, ಯಾವ ಯಾವ ಜಿಲ್ಲೆಯಲ್ಲಿ ಎಷ್ಟು ಜನರಿಗೆ ಕೊಟ್ಟಿದ್ದಾರೆ ಎನ್ನುವುದನ್ನು ನೀವು ನೇರವಾಗಿ ಹೇಳಬೇಕಾಗುತ್ತದೆ. ಇದಲ್ಲದೇ, ಇನ್ಫೋಸಿಸ್‌ನ ನಾರಾಯಣಮೂರ್ತಿ, ಅಜೀಂ ಪ್ರೇಮ್‌ಜಿ ಇವರು ನಡೆಸತಕ್ಕಂಥ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಅವಕಾಶಗಳು ಇಲ್ಲವೇ ಇಲ್ಲ. ಇವರು ಪಾಳೇಗಾರರು, ದೊರೆಗಳು, ಮಹಾರಾಜರು, ಪ್ರಧಾನ ಮಂತ್ರಿಯವರಿಂದ ಇವರಿಗೆ ಮನ್ನಣೆ ಸಿಗುತ್ತದೆ. ಈ ರಾಜ್ಯದಲ್ಲಿರತಕ್ಕಂಥ ಇವರ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಉದ್ಯೋಗವಿಲ್ಲ. ಇದು ಎಲ್ಲಿಯವರೆಗೆ ಹೋಗುತ್ತದೆ ಎಂದರೆ, ಇನ್ಫೋಸಿಸ್ ನಾರಾಯಣ ಮೂರ್ತಿಯವರು ರಾಷ್ಟ್ರಗೀತೆಗೆ ಅಪಮಾನ ಮಾಡಿದ್ದಾರೆ. ಅವರು ರಾಷ್ಟ್ರಗೀತೆಗೆ ಅಪಮಾನ ಮಾಡಿದ್ದಾರೆ ಎನ್ನುವುದನ್ನು ಮಾನ್ಯ ಗೃಹ ಮಂತ್ರಿಗಳಾದ ಎಂ.ಪಿ. ಪ್ರಕಾಶ್‌ರವರೇ ಒಪ್ಪಿಕೊಂಡಿದ್ದಾರೆ. ಆದರೆ, ಇದುವರೆಗೂ ಕರ್ನಾಟಕ ಸರ್ಕಾರ ಅವರ ಮೇಲೆ ಮೊಕದ್ದಮೆ ಹೂಡಲಿಲ್ಲ. ಇದಕ್ಕೆ ಕಾರಣವೇನೆಂದರೆ, ನಾರಾಯಣಮೂರ್ತಿ ರಾಷ್ಟ್ರಗೀತೆಗಿಂತ ಬಹಳ ಎತ್ತರವಾದವರು. ಹಿಂದೆ ಈ ಸದನದಲ್ಲಿದಂಥ ಹಿರಿಯರಾದ ಶ್ರೀ ಹೆಚ್. ಎನ್. ನಂಜೇಗೌಡರು ಮೈಸೂರಿನ ನ್ಯಾಯಾಲಯದಲ್ಲಿ ಈ ಬಗ್ಗೆ ಕೇಸ್ ಹಾಕಿದ್ದಾರೆ. ಇದುವರೆಗೂ ನ್ಯಾಯಾಲಯದವರು ಅದನ್ನು ಮುಂದೆ ಹಾಕುತ್ತಿದ್ದಾರೆಯೇ ಹೊರತು, ನ್ಯಾಯಾಲಯದಲ್ಲಿಯೂ ಅವರಿಗೆ ನ್ಯಾಯ ದೊರಕಲಿಲ್ಲ. ನಂಜೇಗೌಡರು ಇದರ ಬಗ್ಗೆ ವಿಚಾರಣೆಗೆಂದು ಬೆಂಗಳೂರಿನಿಂದ ಮೈಸೂರಿಗೆ ವಾರಕ್ಕೊಂದು ಸಾರಿ ಹೋಗಿ ಬರುತ್ತಿದ್ದಾರೆ. ಹೀಗಾದರೆ ಏನು ಪರಿಸ್ಥಿತಿ? ನಾರಾಯಣಮೂರ್ತಿಯವರಿಗೆ ಒಂದು ಕಾನೂನು, ಬೇರೆಯವರಿಗೆ ಒಂದು ಕಾನೂನು. ಇದು ಸರಿಯಾದ ಕ್ರಮವಲ್ಲ. ಅದು ಬೇರೆ ಯಾರಾದರೂ ಆಗಿದ್ದರೆ ಇಷ್ಟು ಹೊತ್ತಿಗೆ ಅವರನ್ನು ನೀವು ಬಂಧನದಲ್ಲಿಡುತ್ತಿದ್ದಿರಿ. ಇದು ಒಳ್ಳೆಯ ನಿರ್ಧಾರವಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಂಠೀರವ ಕ್ರೀಡಾಂಗಣದಲ್ಲಿ ಮಲ್ಯ ಆಸ್ಪತ್ರೆಗೆ ಜಾಗ ಕೊಡುವುದು ಏಕೆ? ಎಂದು ದಯಮಾಡಿ ಹೇಳಿ, ನಿಮ್ಮ ಶಕ್ತಿ ಪ್ರದರ್ಶನ ಆಗಬೇಕು ಅದನ್ನು ಹಿಂದಿನವರು ಕೊಟ್ಟಿದ್ದರೂ ಇವರು ತೆಗೆಯಬೇಕಲ್ಲವೇ? ಇವರು ಕೊಟ್ಟರು ಎಂದು ನಾನು ಹೇಳುತ್ತಿಲ್ಲ. ಹಾಗಾದರೆ ಬೇರೆ ಆಸ್ಪತ್ರೆಗಳಿಗೆ ನೀವು ಕ್ರೀಡಾಂಗಣಗಳನ್ನು ಕೊಡುವಿರಾ? ಕಂಠೀರವ ಕ್ರೀಡಾಂಗಣವನ್ನು ಸಮಗ್ರವಾಗಿ ಒಬ್ಬ ಖಾಸಗಿಯವರಿಗೆ ದಾನ ಕೊಟ್ಟುಬಿಟ್ಟಿದ್ದಾರೆ. ಇದು ಒಳ್ಳೆಯ ಸೂಚನೆಯಲ್ಲ. ಖಾಸಗಿಯವರು ಸರ್ಕಾರಕ್ಕೆ ಬಹಳ ಹತ್ತಿರವಾದವರು. ಅಂದರೆ, ಅವರು ಇದೇ ಸರ್ಕಾರ ಅಲ್ಲ, ಎಲ್ಲ ಸರ್ಕಾರಗಳಿಗೂ ಹತ್ತಿರವಾದವರು. ಆದ್ದರಿಂದ, ಅವರಿಗೆ ಕೊಟ್ಟಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಗಡಿನಾಡು, ಹೊರನಾಡು ಎಲ್ಲವನ್ನೂ ಸಂಪೂರ್ಣವಾಗಿ ಆ ಇಲಾಖೆಗೆ

ಜಾಸ್ತಿ ಹಣ ಕೊಟ್ಟಿಲ್ಲ. ಒಳ್ಳೆಯ ಸಚಿವರಿಗೆ ಆ ಖಾತೆಯನ್ನು ವಹಿಸಿದ್ದಾರೆ, ನನ್ನದೇನೂ ತಕರಾರಿಲ್ಲ. ಹಣ ಜಾಸ್ತಿ ಕೊಟ್ಟಿಲ್ಲ. ಕನ್ನಡ ಸಂಸ್ಕೃತಿ ಇಲಾಖೆಯಲ್ಲಿ ಅವರು ಮಾಡುವ ಅನೇಕ ಕಾರ್ಯಕ್ರಮಗಳಿಗೆ ಹಣವಿಲ್ಲ. ನಾನೊಂದು ಮತ್ತು ಬರಗೂರು ರಾಮಚಂದ್ರಪ್ಪನವರು ಒಂದು ವರದಿಯನ್ನು ಕೊಟ್ಟೆವು. ಈ ಎರಡೂ ವರದಿಗಳು ಮೂಲೆಗುಂಪಾದವು. ಗಡಿನಾಡನ್ನು, ಹೊರನಾಡನ್ನು ಮರೆತಿದ್ದಾರೆ. ಅತ್ಯಂತ ಗಂಭೀರವಾಗಿ ನಾವು ಉತ್ತರ – ಕರ್ನಾಟಕ ಮತ್ತು ಹೈದರಾಬಾದ್-ಕರ್ನಾಟಕದ ಬಗ್ಗೆ ನಾನು ಅನೇಕ ಸಾರಿ ಇಲ್ಲಿ ಮಾತನಾಡಿದ್ದೇನೆ. ಎರಡು ಕರ್ನಾಟಕ ಮಾಡಬೇಕೆನ್ನುವ ಉದ್ದೇಶವಲ್ಲ, ಅದು ಯಾರಿಗೂ ಇಲ್ಲ. ಕೊಡಗನ್ನೂ ಕಡೆಗಣಿಸಿದ್ದೇವೆ, ಹೈದರಾಬಾದ್-ಕರ್ನಾಟಕ, ಉತ್ತರ-ಕರ್ನಾಟಕವನ್ನೂ ಕಡೆಗಣಿಸಿದ್ದೇವೆ. ಅಂತಿಮವಾಗಿ ಎಲ್ಲಿಗೆ ಹೋಗುತ್ತದೆಂದರೆ, ಆಂಧ್ರದಲ್ಲಿ ತೆಲಂಗಾಣ ಚಳವಳಿ ಶುರುವಾಯಿತು. ಆ ಪರಿಸ್ಥಿತಿ ರಾಯಚೂರು, ಗುಲಬರ್ಗಾ, ಬೆಳಗಾಂ, ಹುಬ್ಬಳ್ಳಿ ಆ ಕಡೆಯೆಲ್ಲ ಆ ಜನರ ಮನೋಭಾವನೆ ಕೆಡುತ್ತಿದೆ. ಆ ಜನರಿಗೆ ಯಾವ ಉದ್ದೇಶಕ್ಕಾಗಿ ಕರ್ನಾಟಕ ಏಕೀಕರಣವಾಯಿತು, ಭಾಷಾವಾರು ಪ್ರಾಂತ್ಯವಾಯಿತು, ಆ ಉದ್ದೇಶ ಈಡೇರಿಲ್ಲವೆಂದು ಆ ಜನರ ಭಾವನೆ ಬಂದಿದೆ. ಪಕ್ಕದ ಮಹಾರಾಷ್ಟ್ರ ಗಡಿಭಾಗ ಚೆನ್ನಾಗಿದೆ. ಆಂಧ್ರ, ಕೇರಳ ಗಡಿ ಭಾಗ ಚೆನ್ನಾಗಿದೆ. ಕರ್ನಾಟಕದ ಗಡಿ ಭಾಗದಲ್ಲಿ ರಸ್ತೆ, ನೀರು, ವಿದ್ಯುಚ್ಛಕ್ತಿ ಇಲ್ಲದೇ ನರಕದಲ್ಲಿ ಬದುಕುತ್ತಿದ್ದಾರೆ. ಈ ಬಗ್ಗೆ ಚಳವಳಿಗೆ ನಾವೇ ಆಹ್ವಾನ ಕೊಟ್ಟ ಹಾಗಾಗುತ್ತದೆ. ಆದ್ದರಿಂದ, ನಂಜುಂಡಪ್ಪ ವರದಿಯಲ್ಲಿ ಕೇಳಿದ ಹಾಗೆ 1500 ಕೋಟಿ ₹.ಗಳನ್ನು ಕೊಡುತ್ತೇವೆಂದು ಘೋಷಣೆಯಾಯಿತು. ಆ ಬಗ್ಗೆ ಏನಾದರೂ ಕಾರ್ಯಕ್ರಮ ರೂಪಿಸಿದ್ದೀರಾ? ನೀವೇನು ಮಾಡಿದ್ದೀರಿ? ಇದು ಸರಿಯಾದ ಕ್ರಮವಲ್ಲ, ಆದ್ದರಿಂದ ಈ ಬಗ್ಗೆ ಸ್ಪಷ್ಟ ನೇರವಾಗಿ ಸರ್ಕಾರ ತನ್ನ ನಿರ್ಧಾರವನ್ನು ಪ್ರಕಟಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ): ಮಾನ್ಯ ಅಧ್ಯಕ್ಷರೆ, ಮುಖ್ಯವಾಗಿ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಪುನ: ಆ ವಿಷಯವನ್ನು ಪ್ರಸ್ತಾಪ ಮಾಡುವುದಿಲ್ಲ. ನಾನು ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ಅವರು ಹೇಳಿದರು ನಾಳೆ ನಮ್ಮ ನಾಲ್ಕು ವರ್ಷಗಳ Mid Term Fiscal Plan ಸದನಕ್ಕೆ ಕೊಡುತ್ತೇವೆಂದು ಹೇಳಿದರು. ಇದರಿಂದೇನು ಲೋಪವಾಗಿದೆ ಎಂಬ ಬಗ್ಗೆ ಅವರು ವಿಚಾರ ಮಾಡಬೇಕಾಗಿದೆ. ಏಕೆಂದರೆ, ಸಂವಿಧಾನದ ಪ್ರಕಾರ ಯಾವ ಪ್ರಕಾರ Financial Statement ಕೊಡಬೇಕೋ ಅದೇ ರೀತಿ Fiscal Responcibility Act ಪ್ರಕಾರ ಅವರು ಕೊಡಬೇಕಾಗಿತ್ತು. ನಿಜವಾಗಿ Deputy C.M. ರವರು ಹೇಗೆ ಮಾಡುತ್ತೀರೋ ಏನೋ ಗೊತ್ತಿಲ್ಲ. ಏಕೆಂದರೆ, ಬಜೆಟ್‌ನಲ್ಲಿ ನಾನು ಇದನ್ನು ಡಿಸ್‌ಕಸ್ ಮಾಡಿದ್ದೆ. ಆ

ಸಮಯದಲ್ಲಿ ತಾವು ಹೇಳಿದ್ದಿರಿ, ಇಲ್ಲ ನಮ್ಮ ಪದ್ಧತಿ ಪ್ರಕಾರ grants ಮೇಲೆ discussion ಮಾಡುವಾಗ ನಾವೇ ಕೊಡುತ್ತೇವೆಂದು ಹೇಳಿದ್ದಿರಿ. It is on record. ಆದರೆ, ತಾವು ಹೇಗೆ ಮರೆತಿರೋ ಗೊತ್ತಿಲ್ಲ. ನನಗೇನು ಕಾಣಿಸುತ್ತದೆಂದರೆ, ಅವರು ತಪ್ಪು ತಿಳಿದುಕೊಳ್ಳಬಾರದು, ಈ ಇಲಾಖೆಗೆ ಪ್ರಧಾನ ಕಾರ್ಯದರ್ಶಿಗಳೇ ಇರಲಿಲ್ಲ. ಈಗ ಬಂದಿದ್ದಾರೆ. ಏಕೆಂದರೆ, ಏನೋ ಇಲ್ಲಿ ಎಷ್ಟೋ ಬುದ್ಧಿವಂತ Finance Minister ಇದ್ದರೂ ಸಹ, ಎಷ್ಟೇ ಬುದ್ಧಿವಂತ Secretary ಇದ್ದರೂ ಸಹ over all Department ನಲ್ಲೇನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಬೇಕಾದರೆ, ಅವರ ಅವಶ್ಯಕತೆ ಇದೆ. ಅದನ್ನು ಹೆಚ್ಚು ಬೆಳೆಸುವುದಕ್ಕೆ ಹೋಗುವುದಿಲ್ಲ. ನಾನಿಷ್ಟೇ ಹೇಳುತ್ತೇನೆ, ಅವರು ಆMid Term Fiscal Plan ಅನ್ನು ನಾಳೆ ಕೊಡುತ್ತೇನೆಂದು ಹೇಳಿದ್ದಾರೆ. ನಾನು ಮತ್ತೆ ಹೇಳುತ್ತೇನೆ, ತಾವು ಮತ್ತೊಂದು ಕೆಲಸ ಮಾಡಬೇಕಾಗುತ್ತದೆ, ಅದನ್ನೂ ನಿಮ್ಮ ಗಮನಕ್ಕೆ ತಂದಿದ್ದೆ, ಪುನ: ಗಮನಕ್ಕೆ ತರುತ್ತಿದ್ದೇನೆ, ಏಕೆಂದರೆ, ಪುನ: ನಾಳೆ ನಾಡಿದ್ದು ಅಧಿವೇಶನದಲ್ಲಿ ರೈಸ್ ಮಾಡಬಾರದು. ಏಕೆಂದರೆ, ತಾವು purposely ಮಾಡಿದಿರಿ ಅಂತಲ್ಲ. ಹಾಗಾಗಿ, mandatory provision ಇದ್ದಾಗ Constitution ನಲ್ಲಿ requirement ಇದ್ದಾಗ ಕಾನೂನನ್ನು ನಾವೇ ಪಾಸ್ ಮಾಡಿ ಅದನ್ನು ನಾವು ಮುರಿಯಬಾರದು. ಸರ್ಕಾರಿ ಇಲಾಖೆಯ ಕೆಲಸವಾಗಬಾರದು. ಹಾಗಾಗಿ ಮತ್ತೊಮ್ಮೆ ಇಲ್ಲಿ ಹೇಳುತ್ತೇನೆ. Along with the Mid Term Fiscal Plan... Section 6 ಅನ್ನು ಓದುತ್ತೇನೆ.

> "The Minister in-charge of the Department of Finance, shall review, every half year, the trends in receipts and expenditure in relation to the budget, remedial measures to be taken to achieve the budget, targets and place before both the Houses of Legislature the out come of such reviews. The review report shall be in such form as may be prescribed. The review report shall explain any deviation or likely deviation in meeting the obligation cast on the State Government under this Act; whether such deviation is substantial and relates to the actual or the potential budgetary out comes, and how much of the deviation can be attributed to general economic environment and to policy changes by the Government; and the remedial measures.."

So, ಒಂದು ನೀವು Mid Term Fiscal Plan ಕೊಡಬೇಕು. ಮತ್ತೊಂದು "Finance Minister shall" ಎಂದು ಇದೆ. ತಾವು review ಮಾಡಿದ್ದೀರೋ ಇಲ್ಲವೋ ಅದು ಗೊತ್ತಿಲ್ಲ. ಮಾಡಿರಬಹುದೆಂದು ನನ್ನ ಅನಿಸಿಕೆ. Finance Minister as per Section 6 of this Act ಅರು ತಿಂಗಳಿಗೊಮ್ಮೆ you have to review ಮತ್ತು ಸದನಕ್ಕೆ ಕೊಡಬೇಕು, ಏನು review ಮಾಡಿದಿರಿ ನಿಮಗೆ ಏನು ಕಾಣಿಸಿತು? ಎಲ್ಲಿ deficit ಕಾಣಿಸಿತು? ಎಲ್ಲಿ surplus ಕಾಣಿಸಿತು? ಇಲ್ಲಿ ನೋಡಿ. For example, finance Minister Chidambaram ರವರು ನಿನ್ನೆ ಹೇಳಿದ್ದಾರೆ, "ನನ್ನ Excise customs ನಲ್ಲಿ ನನ್ನ revenue has gone ahead, But, service tax ನಲ್ಲಿ ನನಗೆ ಕೊರತೆ ಕಾಣಿಸುತ್ತಿದೆ". ಎಂದು. ಇದು ಹೇಗೆ ಅವರಿಗೆ ಗೊತ್ತಾಯಿತು. Because of the review. ಆ ಪ್ರಕಾರದ Statement ಅನ್ನು ಸಹ ತಾವು ಕೊಡ ಬೇಕಾಗುತ್ತದೆ. ಈ ಎರಡೂ ವಿಚಾರವನ್ನು ತಾವು comply ಮಾಡಬೇಕಾಗುತ್ತದೆಂದು ತಮಗೆ ಮಾನ್ಯ ಅಧ್ಯಕ್ಷರ ಮುಖಾಂತರ ವಿನಂತಿ ಮಾಡುತ್ತಿದ್ದೇನೆ. ಈ ವಿಷಯವನ್ನು ಇಲ್ಲಿಯೇ ಬಿಟ್ಟು ನಾನು ಕೈಗಾರಿಕೆಗಳ ಬಗ್ಗೆ ಕೆಲವು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದಲ್ಲಿ ಕೈಗಾರಿಕೆಗಳು, ಸಣ್ಣ ಕೈಗಾರಿಕೆಗಳು ವ್ಯಾಪಾರ ಬೆಳೆದಾಗ ಒಂದು ರಾಜ್ಯದ ಪ್ರಗತಿಯಾಗುತ್ತದೆ. ಕೃಷಿ, ತೋಟಗಾರಿಕೆ ಇದು ಬೆಳೆಯಬೇಕು. ಇದು ಬೆಳೆದಾಗ ಒಂದು ರಾಜ್ಯದ ಪ್ರಗತಿಯಾಗುತ್ತದೆ. ಹಾಗಾಗಿ, ನಮ್ಮ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ನಾವು ಸ್ಥಳೀಯ ಜನರಿಗೆ ಅವಕಾಶ ಕೊಡಲೇಬೇಕು. ಸ್ಥಳೀಯ ಜನರಿಗೆ ಉತ್ತೇಜನ ಕೊಡಲೇಬೇಕು. ಅದರಲ್ಲಿ ಬೇರೆ ಪ್ರಶ್ನೆ ಇಲ್ಲ. ಆದರೆ, ಕೈಗಾರಿಕೆ ಪ್ರಾರಂಭವಾಗಬೇಕಾದರೆ ಕೆಲವರು TATA ಅಥವಾ BIRLA ಪ್ರಾರಂಭಿಸುತ್ತೇವೆಂದು ಹೇಳಿದರೆ ಇಲ್ಲ ಎಂದು ಹೇಳಲಿಕ್ಕೆ ಬರುವುದಿಲ್ಲ. ಕೈಗಾರಿಕೆ ಬಂದಾಗ ಉದ್ಯೋಗವಕಾಶ ನಿರ್ಮಾಣವಾಗುತ್ತದೆ. ಉದ್ಯೋಗವಕಾಶ ಬಂದು ಉತ್ಪಾದನೆ ಆದಾಗ ಅದರಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. Employment generate ಆಗುತ್ತದೆ. ಜನರ ಕೈಲಿ ಹಣ ಇರುವುದಕ್ಕೆ ಪ್ರಾರಂಭವಾಗುತ್ತದೆ. ಇವತ್ತು ಪೂನಾದಲ್ಲಿ TELCO ಮತ್ತು BAJAJ company ಬಂದು ಇಡೀ ಪೂನಾದ picture change ಮಾಡಿದ್ದಾರೆ. ಹಾಗಾಗಿ "ಧಾರವಾಡಕ್ಕೆ TELCO project ಬರುತ್ತಿದೆ, ಅದಕ್ಕೆ ತಾವು ಸ್ವಲ್ಪ ಅನುಮತಿ ಕೊಡಿ" ಎಂದು ನಿಮಗೆ ಒಂದೆರಡು ಸಲ ಹೇಳಿದ್ದೆ. ಒಂದು ಒಂದೂವರೆ ವರ್ಷ ಆಯಿತು. ಮೊನ್ನೆ ತಾವು ಅದಕ್ಕೆ permission ಕೊಟ್ಟಿದ್ದೀರಿ. ಸಂತೋಷ. ಏಕೆ? ಆ TELCO project ಬಂದರೆ ಇಡೀ ಉತ್ತರ ಕರ್ನಾಟಕದ ಆ ಭಾಗದಲ್ಲಿ ಒಂದು ಪ್ರಗತಿಯಾಗುತ್ತದೆ, employment generate ಆಗುತ್ತದೆ, ಜನರಿಗೆ assurance ಬರುತ್ತದೆ, ಜನರ ಕೈಲಿ ಹಣವೂ ಬರುತ್ತದೆ. ಹಾಗಾಗಿ ಸರ್ಕಾರ ಕೈಗಾರಿಕಾ ವಿಚಾರ

ಬಂದಾಗ ಪ್ರಾಧಾನ್ಯತೆ ಕೊಡಬೇಕು. ಸರೋಜಿನಿ ಮಹಿಷಿ ರಿಪೋರ್ಟ್ ಇದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಪ್ರಕಾರ ನಮ್ಮ ಕನ್ನಡಿಗರಿಗೆ ಏನು ಉದ್ಯೋಗವಕಾಶ ಸಿಗಬೇಕೋ ಅದು ಸಿಗಲೇಬೇಕು. ಅದರಲ್ಲಿ ವಾದ ವಿವಾದವಿಲ್ಲ. ಅದರಲ್ಲಿ ಸರ್ಕಾರ stiff ಇರಬೇಕು. ಸರ್ಕಾರ ಕಡ್ಡಾಯವಾಗಿ ಆ ತರಹದ ಕಠಿಣ conditions ಹಾಕಬೇಕು. ನಾವು ಪ್ರತಿಯೊಂದು G.O. ದಲ್ಲೂ ಆ condtions ಅನ್ನು ಹಾಕುತ್ತೇವೆ. ಆದರೆ, ನಾನು ಒಪ್ಪಿಕೊಳ್ಳುತ್ತೇನೆ, ನಾವು strict ಆಗಿ ಅದನ್ನು monitor ಮಾಡುವುದಿಲ್ಲ. ನನ್ನ ಕಾಲದಲ್ಲಿಯೂ ಹಾಗೆಯೇ ಇತ್ತು. ಹಾಗಾಗಿ ಇದು ಆಗಲಿಲ್ಲ. ಇವತ್ತು ರಾಜ್ಯದಲ್ಲಿ IT, BT ಬೆಳೆಯುತ್ತಿದೆ. ರಾಜ್ಯದಲ್ಲಿ IT, BT ಬೆಳೆಯುತ್ತಿದೆ ಎಂದರೆ, ಮಾನ್ಯ ಯಡಿಯೂರಪ್ಪನವರೆ, ಇದು ನಿಮ್ಮ ಸರ್ಕಾರದಿಂದ, ಅಥವಾ ನಾನು ಕೈಗಾರಿಕಾ ಮಂತ್ರಿಯಾದ್ದರಿಂದ ಎಂದು ಅಲ್ಲ. ಅದಕ್ಕೆ basic strength ಇಲ್ಲಿ ಇದೆ. ಇಲ್ಲಿಯ ಮೂಲಭೂತ ಸೌಕರ್ಯಗಳು, ಇಲ್ಲಿಯ ಮಾನವ ಸಂಪನ್ಮೂಲಗಳು, ಇಲ್ಲಿಯ ಹವಾಮಾನ ಇದರಿಂದ ಇದು ಬೆಳೆಯಿತು. ಮೊದಲನೇ ಬಾರಿ IT, BT ಕಡೆ ನೋಡಿದ್ದು ಯಾವಾಗ ಎಂದರೆ 1997ನೇ ಇಸವಿಯಲ್ಲಿ, ಆಗಿನ ಸರ್ಕಾರ, ನಾನು ಕೈಗಾರಿಕಾ ಸಚಿವನಾಗಿದ್ದಾಗ IT industry ಯವರು ಬಂದು ಹೇಳಿದರು, ನೀವು IT industry ಸಲುವಾಗಿ ಹೊಸ ಇಲಾಖೆ ಮಾಡಿ ಹೊಸ Secretary ಕೊಡಿ ಎಂದು. ಆ time ನಲ್ಲಿ we created the IT Department. IT Secretary post ಮಾಡಿದೆವು. IT ಪ್ರಾರಂಭವಾಯಿತು. IT policy ಅನ್ನು ಆವಾಗ ನಾವು ತಂದೆವು. ಆ IT policy ಮುಖಾಂತರ triple I.T. ಬರುತ್ತಾ ಇತ್ತು. ಹಾಗಾಗಿ ಉದ್ಯೋಗವಕಾಶ ಇಲ್ಲಿತ್ತು ಜನರಿಗೆ ಸಾಧ್ಯವಾಯಿತು. ಅದು IT, BT ಏನು ಬೆಳೆಯುತ್ತಿದೆ, ಅದು ತನ್ನ ಶಕ್ತಿಯಲ್ಲಿ ಬೆಳೆಯುತ್ತಿದೆ. ಆದರೆ, ಇವತ್ತು ಕಷ್ಟವಾಗುತ್ತಿದೆ. ಬಹಳಷ್ಟು IT, BT industries ತಮಿಳುನಾಡು, ಪೂನಾ, ಆಂಧ್ರಪ್ರದೇಶಕ್ಕೆ ಹೋಗುತ್ತಿವೆ. West Bengal ಅನ್ನು ನೋಡುತ್ತಿವೆ. ಏಕೆಂದರೆ, ಇಲ್ಲಿ ಯಡಿಯೂರಪ್ಪನವರು ಇದ್ದಾರೆಂದಲ್ಲ. ಮುಖ್ಯವಾಗಿ,

2-30 PM

cost of living ಬಹಳ ಹೆಚ್ಚಾಗುತ್ತಿದೆ. ಇವತ್ತು IT industry ಏನು ರಫ್ತು ಮಾಡುತ್ತವೆ, rupee ಯ appreciation ನಿಂದ, rupee strong ಇರುವುದರಿಂದ ಅವರ ಲಾಭದ ಮೇಲೆ ಸಾಕಷ್ಟು ಪರಿಣಾಮವಾಗಿದೆ. ಇವತ್ತು ಆ ತರಹದ ಸಂಬಳ ಕೊಡುವ ಪರಿಸ್ಥಿತಿ ಉಳಿದಿಲ್ಲ. ಸಂಬಳ ಕೊಡಲಿಲ್ಲವೆಂದರೆ professionals ಉಳಿಯುವುದಿಲ್ಲ. IT, BT Industries ನಲ್ಲಿ employees shifting ಬಹಳವಿದೆ. ಹಾಗಾಗಿ, ನಿಮಗೆ ಎಚ್ಚರಿಕೆ ಕೊಡುತ್ತಿದ್ದೇನೆ. ಇವರ cost of living ಬೆಂಗಳೂರಿನಲ್ಲಿ ಹೆಚ್ಚಾಗಿದೆ. ಅದರಿಂದ ಸಹ

IT Industries ಬೆಳವಣಿಗೆ ಮೇಲೆ ಇದರ ಪರಿಣಾಮವಾಗುತ್ತಿದೆ. ತಾವು ಇದನ್ನು ಗಮನಿಸಬೇಕಾಗುತ್ತದೆ. ಮುಖ್ಯವಾಗಿ, ನಾನು ವರದಿಯನ್ನು ನೋಡಿದೆ. ಎಷ್ಟು Large, Medium, Small Industries ಬಂದಿವೆ ಎಂಬುದನ್ನು ನೋಡಿದೆ. ಸಂತೋಷ. ನಾನೇನು ಕೇಳುತ್ತೇನೆಂದರೆ, ನಮ್ಮ ಸ್ನೇಹಿತರು ಇಲ್ಲೇ ಇದ್ದಾರೆ ಸಂತೋಷ. ಕೆಲವು ಒಳ್ಳೆಯ ಕೆಲಸ ಮಾಡಿದ್ದಾರೆ. ನೀವು ಏನು proposal clear ಮಾಡಿದ್ದೀರಲ್ಲ, ಆ clear ಮಾಡಿದ proposal ನಲ್ಲಿ ground reality ಯಲ್ಲಿ proposal ತೆಗೆದುಕೊಳ್ಳಬೇಕು. volvo, TELCO, Telecom, Toyota, Jindal, Mukund Jindal, S. Kumars ಬಂತು. ನಾನು ನೂರಾರು Industries ಹೆಸರು ಹೇಳಬಹುದು. ನನಗೇನು ಗೊತ್ತಾಗಬೇಕಿದೆ ಎಂದರೆ, ತಾವು ಆಡಳಿತಕ್ಕೆ ಬಂದ ನಂತರ, ರಾಜ್ಯದಲ್ಲಿ ಎಷ್ಟು manufacturing industries ಪ್ರಾರಂಭವಾಗಿವೆ? ನಾನು ತಿಳಿದುಕೊಂಡ ಪ್ರಕಾರ, ನನಗ್ಯಾವ ದೊಡ್ಡ industries ಬಂದ ಹಾಗೆ ಕಾಣುವುದಿಲ್ಲ. Automobile Sector, Cement Sector, Steel Sector, Engineering Sector ನಲ್ಲಿ ಯಾವುದೂ ಇಲ್ಲ. ನನಗೇನು ಬೇಕಾಗಿದೆ ಎಂದರೆ, ದೊಡ್ಡ industries ಅಥವಾ ಮಧ್ಯಮ industries ಯಾವುವು ಪ್ರಾರಂಭವಾಗಿವೆ? ನಾನೂ ಸಾಕಷ್ಟು project ತಯಾರು ಮಾಡಿದ್ದೇನೆ. Ground reality ಯಲ್ಲಿ ಎಷ್ಟು project ಬಂದಿವೆ ಎನ್ನುವುದು ಮುಖ್ಯ. purposely ಮಾಡಲಾಗಿದೆ ಎಂದು ಹೇಳುವುದಿಲ್ಲ. ಇದು ನಮ್ಮ ಅಧಿಕಾರಿಗಳು ಮಾಡುವ ಪದ್ಧತಿ. ಮಾನ್ಯ ಕೈಗಾರಿಕಾ ಸಚಿವರೆ, ಕೈಗಾರಿಕೆ ಬಂದಾಗ, ಸಣ್ಣ ಕೈಗಾರಿಕೆಯಲ್ಲಿ employment generation ಗೆ ಬಹಳ scope ಇದೆ. ದೊಡ್ಡ ಕೈಗಾರಿಕೆಯಲ್ಲಿ employment generation ಗೆ scope ಇರುವುದಿಲ್ಲ. ಇವತ್ತು ಬಹಳ mechanize ಆಗಿದೆ. ಆದರೆ, ಅಲ್ಲಿ ancillaries ಬರುತ್ತವೆ. ದೊಡ್ಡ industry ಬಂತು. ನಾವು TELCO ದಲ್ಲಿ proposal clear ಮಾಡಿದೆವು. ಆ ತರಹದ ನೂರು ancillaries ಬರುತ್ತವೆ. ಅದರ ಮುಖಾಂತರ ಸಾವಿರಾರು ಜನರಿಗೆ ಉದ್ಯೋಗಾವಕಾಶ ಸಿಗುತ್ತದೆ. TELCO ದಲ್ಲಿ ಸಿಗುವುದು ಬಹಳ ಕಡಿಮೆ. ಜಮ್‌ಶೆಡ್‌ಪುರದಲ್ಲಿ TISCO ಇದೆ. ಅಲ್ಲಿ 40 ಸಾವಿರ ಜನ ಕೆಲಸ ಮಾಡುತ್ತಿರಬಹುದು. ಮೊದಲು ಅಲ್ಲಿ 60 ಸಾವಿರ ಜನ ಇದ್ದರು. ಆದರೆ, ವಿಜಯನಗರ ಜಿಂದಾಲ್‌ನಲ್ಲಿ ಕೆಲಸ ಮಾಡುವವರು 6 ಸಾವಿರ ಜನ ಇದ್ದರು. Because modernized. ತಪ್ಪು ಅಲ್ಲಿಗೆ ಬರುವುದಿಲ್ಲ. Competitiveness, quality has become the order of the day. ನೀವು economy, survey ನಲ್ಲಿ ಏನು ಹೇಳಿದ್ದೀರೆಂದರೆ, ಕೈಗಾರಿಕೆಯಲ್ಲಿ 2005ರಲ್ಲಿ 2 ಲಕ್ಷದ 8 ಸಾವಿರ 790 ಜನರಿಗೆ ಉದ್ಯೋಗ ಸಿಕ್ಕಿದರೆ, 2006ರಲ್ಲಿ 12 ಲಕ್ಷ ಜನರಿಗೆ ಉದ್ಯೋಗಾವಕಾಶ ಸಿಕ್ಕಿದೆ. 478% ಜಂಪ್ ಇದೆ ಎಂದು ಹೇಳುತ್ತಿದ್ದೇವೆ. I am reality shocked, ಇದು ಆದರೆ ನಾನೇ

ಬಂದು ನಿಮ್ಮನ್ನು ಅಭಿನಂದಿಸಬೇಕಾಗುತ್ತದೆ. ಅದು ನನ್ನ ಮೊದಲ ಕರ್ತವ್ಯವಾಗುತ್ತದೆ. It is impossible. ಅದೇ ಸಣ್ಣ ಕೈಗಾರಿಕೆಯಲ್ಲಿ 38,682 ಇದ್ದರೆ, 2005ರಲ್ಲಿ 42,430 ಇದೆ. 7% growth. ಸಣ್ಣ ಕೈಗಾರಿಕೆಯಲ್ಲಿ ಉದ್ಯೋಗಾವಕಾಶಕ್ಕೆ scope ಹೆಚ್ಚಿಗೆ ಇದೆ, ಅಲ್ಲಿ 7% employment. ಹೆಚ್ಚಾಗಿದೆ. ಈ report ಪ್ರಕಾರ ದೊಡ್ಡ ಮತ್ತು ಮಧ್ಯಮ ಕೈಗಾರಿಕೆಯಲ್ಲಿ 478% ಇದೆ. It is impossible. ಇದು ಅಸಾಧ್ಯವಾದ ವಿಚಾರ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಹಾಗಾಗಿ, ಈ figures ಅನ್ನು ಯಾರೂ ನಂಬಲಿಕ್ಕೆ ಸಾಧ್ಯವಿಲ್ಲ. 2006–07ರ economic survey ಮಾಹಿತಿ ಏನಿದೆ ಇದನ್ನು ತಾವು ಪುನರ್ ಪರಿಶೀಲಿಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. RBI ಏನು ಹೇಳುತ್ತದೆಂದರೆ,

> "A recent but positive future of the Indian economy is the sustained high growth that has been experienced since the 1980s. Years GDP growth with average 5.8 percent in the 1980s and the 1990s has accelerated to 8.6% in the period 2006-07. We measure our financial year from April to March. Years GDP growth was 9.2% which was one of the highest growth rates in the world in that year. If the current GDP rate of around 9% is maintained, a person can hope to see the standard of living by multiplying by almost five times in his life time".

ಅಂದರೆ, ಇವತ್ತು UPA ಸರ್ಕಾರ ತೆಗೆದುಕೊಂಡ ಹಲವಾರು ಕ್ರಮಗಳಿಂದ 9.2%, 9.5% manufactuing sector at 11.6% grow ಆಗುತ್ತಿದೆ. ಹಾಗಾಗಿ, ಈ ಪ್ರಕಾರ ಭಾರತ ದೇಶದ ಪ್ರಗತಿಯಾದರೆ, ಈ ರಾಷ್ಟ್ರದ ನಾಡಿನ ಪ್ರತಿಯೊಬ್ಬ ನಾಗರೀಕನ ವಾರ್ಷಿಕ ಆದಾಯ 5 times ಹೆಚ್ಚಾಗಬಹುದು. ಹಾಗಾಗಿ, ನಾವು I.T., B.T. ಗೆ scope ಕೊಡಬೇಕು. ಸಣ್ಣ ಕೈಗಾರಿಕೆ ಬೆಳೆಯಲು ಪ್ರಯತ್ನ ಮಾಡಲೇಬೇಕು. ಆದರೆ, ನಿಜವಾಗಿ I.T., B.T. ಯಲ್ಲಿ ಏನಾಗುತ್ತದೆಂದು ಮಾನ್ಯ ಸಚಿವರಿಗೆ ಗೊತ್ತು, ಉದ್ಯೋಗಾವಕಾಶ ಸಿಗುವುದು highly intellectual ಜನರಿಗೆ, Engineers, Ph.D., MBA, ಇಂಥವರಿಗೆ ಮಾತ್ರ ಸಿಗುತ್ತದೆ. ಆದರೆ, manufacturing industries ಗಳಾದ, Cement, Steel, Engineering, Automobile ಇರಲಿ, ಅಲ್ಲಿ skilled and semi skilled ಗೆ ಉದ್ಯೋಗಾವಕಾಶ ಸಿಗುತ್ತದೆ. Diploma Holders, ITI, SSLC

ಓದಿದವರಿಗೆ ಉದ್ಯೋಗಾವಕಾಶ ಸಿಗುತ್ತದೆ. ಆ ಜನರಿಗೆ ಉದ್ಯೋಗಾವಕಾಶ ಸಿಗಬೇಕಾದರೆ, ನಾವು manufacturing industries ಕಡೆ ಹೆಚ್ಚಿನ ಒತ್ತು ಕೊಡಬೇಕು. ನಾನು ತಿಳಿದುಕೊಂಡ ಪ್ರಕಾರ, ತಮ್ಮ ಮನಸ್ಸು ಇದ್ದರೂ ಸಹ, ಸದಿಚ್ಛೆ ಇದ್ದರೂ ಸಹ manufacturing industries ನಮ್ಮ ಕಣ್ಣ ಮುಂದೆ ಬಂದ ಹಾಗೆ ಕಾಣಿಸುವುದಿಲ್ಲ. They are only on paper. ಹಾಗಾಗಿ, ಕೈಗಾರಿಕೆಗೆ ಒಳ್ಳೆಯ ವಾತಾವರಣವಿದೆ. ಮುಖ್ಯವಾಗಿ, ಕರ್ನಾಟಕದ ಕಡೆಗೆ ನೋಡುವಾಗ ಇದು knowledge capital ಎಂದು ನೋಡುತ್ತಾರೆ. IT, BT ಅಷ್ಟೇ ಅಲ್ಲ, Karnataka is a vibrant state. ರಾಜ್ಯದ ಕೈಗಾರಿಕಾ ಪ್ರಗತಿ ಮಹಾರಾಜರ ಕಾಲದಿಂದ, ಮೈಸೂರು ಕಾಲದಿಂದ ಪ್ರಾರಂಭವಾಗದೆ. ಅದರ credit ಅನ್ನು ಆ ಸರ್ಕಾರ, ಈ ಸರ್ಕಾರ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. Basically, ಕೈಗಾರಿಕೆ ಬೆಳೆಯಲು ಪ್ರಾರಂಭವಾಗಿದ್ದು ಮೈಸೂರು ಲ್ಯಾಂಪ್ಸ್ ಇರಬಹುದು, ಆಗ NGEF ಇರಬಹುದು, ಅದು ಭದ್ರಾವತಿ ಸ್ಟೀಲ್ ಇರಬಹುದು, ಹಲವಾರು ಕೈಗಾರಿಕೆಗಳು ಮಹಾರಾಜರ ಕಾಲದಲ್ಲೇ ಪ್ರಾರಂಭವಾದವು. ಕರ್ನಾಟಕ ಆ ಬ್ಲಡ್‌ನಲ್ಲಿಯೇ ಇದೆ. ಯಾರು ಯಾರು ರೂಲ್ ಮಾಡಿದ್ದಾರೆ, ಅವರು ಕೈಗಾರಿಕೆಗೆ ಎನ್‌ಕರೇಜ್ ಮಾಡುತ್ತಾ ಬಂದಿದ್ದಾರೆ. ಹಾಗಾಗಿ, ನಾನು ನಿಮಗೇನು ಹೇಳುತ್ತೇನೆಂದರೆ, manufacturing Sector ನಲ್ಲಿ ಸ್ವಲ್ಪ ಹೆಚ್ಚಿನ concentrate ಮಾಡಿ, manufacturing Sector ನಲ್ಲಿ ಕೈಗಾರಿಕೆ ಬೆಳೆಸಲಿಕ್ಕೆ ಪ್ರಯತ್ನ ಮಾಡಿ. ಇವತ್ತು ಯಾವುದೂ conessions ಇಲ್ಲ. ಸರಿ. ಏಕೆಂದರೆ, 21ನೇ ಶತಮಾನ, ಇದೊಂದು ಪ್ರಗತಿಯ ಶತಮಾನ, ಇದೊಂದು ಗುಣಮಟ್ಟದ ಶತಮಾನವಿದ್ದಾಗ, ಇದೊಂದು ಗ್ರಾಹಕರ ಶತಮಾನವಿದ್ದಾಗ ಗುಣಮಟ್ಟದ ಕೈಗಾರಿಕೆ ಇರಬೇಕು. ಒಂದು ಕಾಲದಲ್ಲಿ ಕೈಗಾರಿಕೆಗಳು ರಾಜ್ಯದ ಕೈಗಾರಿಕೆಗಳಿಗೆ ಕಾಂಪೀಟ್ ಮಾಡುತ್ತಿದ್ದವು ಅಥವಾ ದೇಶದ ಕೈಗಾರಿಕೆಗಳ ಜೊತೆ ಕಾಂಪೀಟ್ ಮಾಡುತ್ತಿದ್ದವು. ಇವತ್ತಿನ ಪರಿಸ್ಥಿತಿಯಲ್ಲಿ they have to compete with the world. ಇವತ್ತು ನಮ್ಮ ಕೈಗಾರಿಕೆಗಳು ಇಡೀ ವಿಶ್ವದಲ್ಲಿ ಕಾಂಪೀಟ್ ಮಾಡಬೇಕಾಗುತ್ತದೆ. ಹಾಗಾಗಿ, ನೋಡಿ for the first time, ಕಳೆದ ಒಂದೂವರೆ ವರ್ಷಗಳಿಂದ ನೋಡುತ್ತಿದ್ದೇವೆ, Birla ದವರು acquisition ಮಾಡಿದ್ದಾರೆ, TATA ದವರು acquisition ಮಾಡಿದ್ದಾರೆ. London, Germany, America ದಲ್ಲಿ ನಮ್ಮ Indian Companies are becoming very active. ನಮ್ಮ ಭಾರತ ದೇಶದ ಕೈಗಾರಿಕೆಗಳು, ನಮ್ಮ ಕರ್ನಾಟಕದ ಕೈಗಾರಿಕೆಗಳು ಸಹ ಇವತ್ತು ಕ್ರಿಯಾಶೀಲವಾಗಿ, ಗುಣಮಟ್ಟದ್ದಾಗಿ, ಕಾಂಪಿಟಿಟೀವ್ ಆಗಿವೆ. ವಿಶ್ವದಲ್ಲಿ ಬೇರೆ ಬೇರೆ ಕಡೆ ಕೈಗಾರಿಕೆಗಳನ್ನು acquire ಮಾಡುತ್ತಿದ್ದಾರೆ. ಹಾಗಾಗಿ, ಸರ್ಕಾರದಿಂದ ಅವರಿಗೆ concession ಕೊಡಲಿಲ್ಲವೆಂದರೆ ಸರ್ಕಾರದಿಂದ moral support ಬೇಕಾಗುತ್ತದೆ. ಉತ್ತೇಜನ

ಬೇಕಾಗುತ್ತದೆ. ಬಂದಾಗ ಸರಿಯಾಗಿ ಮಾತನಾಡಿ ಕಷ್ಟ ಕೇಳಿ ಆ ಸಮಸ್ಯೆಯನ್ನು ಪರಿಹರಿಸಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನವಾಗಬೇಕಾಗಿದೆ. ಆ ದೃಷ್ಟಿಯಿಂದ ನಾವು, ನೀವು ಕೂಡಿ ಎಲ್ಲರೂ ಕೆಲಸ ಮಾಡಬೇಕಾಗುತ್ತದೆಯೇ ವಿನ: ಇದು ನಿಮ್ಮೊಬ್ಬರದೇ ಕೆಲಸವೆಂದು ಆಗುವುದಿಲ್ಲ. ಆ ವಾತಾವರಣ ಕ್ರಿಯೇಟ್ ಮಾಡಲಿಕ್ಕೆ ಸರಿಯಾದ ವಾತಾವರಣ ತಯಾರು ಮಾಡಲಿಕ್ಕೆ ನಿಮಗೂ ಅವಕಾಶ ಮಾಡಿಕೊಡಬೇಕಾಗುತ್ತದೆ. ಯಾರನ್ನು ಕೇಳಿದರೂ ಸಹ Yes, come to Karnataka ಎಂದು ಹೇಳುತ್ತೇವೆ. ಇಲ್ಲಿ ಒಳ್ಳೆಯ ಜನ ಇದ್ದಾರೆ, ಒಳ್ಳೆಯ employees ಇದ್ದಾರೆ, ಒಳ್ಳೆಯ ವಾತಾವರಣವಿದೆ ಎಂದು ಹೇಳುತ್ತೇವೆ. We should have that intention and mentality. ಆಗ ಅದು ಬೆಳೆಯಲಿಕ್ಕೆ ಸಾಧ್ಯವಾಗುತ್ತದೆ. ಇವತ್ತು ಮುಖ್ಯವಾಗಿ ನಾನು 2–3 ಸಲಹೆ ಕೊಡುತ್ತೇನೆ. ಕೈಗಾರಿಕೆಗೆ ಯಾವ ರೀತಿಯ ಮಾನವ ಸಂಪನ್ಮೂಲಗಳು ಬೇಕು, ಆ ರೀತಿಯ ಮಾನವ ಸಂಪನ್ಮೂಲಗಳು ಸಿಗುತ್ತಿಲ್ಲ. ನಾನು Industries minister ಇದ್ದಾಗ ದಿನ 50–60 distinction holders ಪತ್ರಗಳನ್ನು ಕೊಟ್ಟು ನೌಕರಿ ಕೊಡಿ ಎಂದು ಕಳುಹಿಸುತ್ತಿದ್ದೆ. ಒಬ್ಬರಿಗೋ ಇಬ್ಬರಿಗೋ ನೌಕರಿ ಸಿಗುತ್ತಿತ್ತು. ನಾನು ಅವರನ್ನು ಕರೆದು ಏಕೆ ಎಂದು ಕೇಳಿದೆ. ಅದಕ್ಕೆ ಅವರು ಹೇಳಿದರು, ಕೈಗಾರಿಕೆಗೆ ಏನು ಬೇಕು ಅದು ನಿಮ್ಮ ಐಟಿಐ ದಲ್ಲಿ polytechnic and engineering college ನಲ್ಲಿ ಕಲಿಸುವುದಿಲ್ಲ. ಹೀಗಾಗಿ ನಾನು Vice Chancellors meeting ಮಾಡಿ industries ಬಗ್ಗೆ meeting ಮಾಡಿ curriculum and syllabus ಏನು ಇದೆ, ಅದನ್ನು ಚೇಂಜ್ ಮಾಡಲಿಕ್ಕೆ ಪ್ರಯತ್ನಿಸಿದೆ. Tripple IT policy ಹೀಗಾಗಿ ಇವತ್ತು Tripple IT ಮುಖಾಂತರ ಅಲ್ಲಿ ಪಾಸ್ ಆಗುತ್ತಾರೆ, they go in campus selection. ಹೀಗಾಗಿ ನಾವು ನಿಮಗೇನು ಸಜೇಷನ್ ಮಾಡುತ್ತೇನೆಂದರೆ, ನಮ್ಮ ಐಟಿಐ strengthen ಮಾಡಬೇಕು. ಹೊಸ ಕೋರ್ಸ್ ಪ್ರಾರಂಭಿಸಬೇಕು. ಈಗಿನ ಶತಮಾನಕ್ಕೆ ಯಾವುದು ಬೇಕು ಅಂಥ ಕೋರ್ಸ್‌ನ್ನು ಪ್ರಾರಂಭಿಸಬೇಕು. ಅಲ್ಲಿ ಗುಣಮಟ್ಟದ ತರಬೇತಿ ಕೊಡಬೇಕು. ಸರಿಯಾದ ಫ್ಯಾಕಲ್ಟಿ ಇರಬೇಕು. ಮತ್ತು ಅಲ್ಲಿ ಏನು ಕಲಿಸಬೇಕು ಅದು ಬಹಳ ಮುಖ್ಯ. ನಾನು ಇದನ್ನು ದೊಡ್ಡ ಮಾತು ಎಂದು ಹೇಳುವುದಿಲ್ಲ. ನಾನೊಂದು ನಮ್ಮ ಊರಿನಲ್ಲಿ ಸಣ್ಣದೊಂದು institution ಪ್ರಾರಂಭಿಸಿದ್ದೇನೆ. ಉದಾಸಿಯವರು ಬರುತ್ತೇನೆಂದರು ಇನ್ನು ಬಂದಿಲ್ಲ. ಎಷ್ಟು ಹೊರಗೆ ಬರುತ್ತಾರೆ they will go in campus selection. Voltas, Toyoto eveybody is tying up. ಏಕೆಂದರೆ, ಒಳ್ಳೆಯ human resources ಬೇಕು. ಆ ತರಹದ ವಾತಾವರಣವನ್ನು ಇಂಜಿನಿಯರಿಂಗ್ ಕಾಲೇಜ್‌ನಲ್ಲಿ, ಐಟಿಐ ದಲ್ಲಿ, diploma institutions ದಲ್ಲಿ ನಾವು ನಿರ್ಮಾಣ ಮಾಡಬೇಕು. ಅದನ್ನು ಮಾಡಬೇಕಾದರೆ, ನಾನು ತಮಗೆ ಸಲಹೆ ಮಾಡುತ್ತಿದ್ದೇನೆ. ತಾವು ಒಂದು expert

committee appoint ಮಾಡಿ. It should suggest you ಯಾವ ರೀತಿಯ ತರಬೇತಿ ಕೊಡಬೇಕೆಂದು, expert committee not of politicians, not of bureaucrats, but of persons who have rich experience in the field. ಅವರ Advisory Committee report ತೆಗೆದುಕೊಂಡು ತಾವು ತಮ್ಮ curriculum and syllabus ನಲ್ಲಿ ಚೇಂಜಸ್ ತರಬೇಕು. ಆ ಮಕ್ಕಳಿಗೆ ಇವತ್ತಿನ 21ನೇ ಶತಮಾನದಲ್ಲಿ ಏನು ಗುಣಮಟ್ಟದ, ಯಾವ ರೀತಿಯ ತರಬೇತಿಯ ಅವಶ್ಯಕತೆಯಿದೆ, ಆ ತರಹದನ್ನು ತಾವು ಅವರಿಗೆ ಕೊಡಬೇಕು. ಹೀಗಾದಾಗ, ತಾವು ನೋಡಿ employment dearth ಇಲ್ಲ. ಜನರಿಗೆ ಐಟಿಐ ನವರು ಬೇಕು, diploma-holders ಬೇಕು, ಎಲ್ಲಿ ಇದ್ದಾರೆ? ಎಲ್ಲಿಯೂ ಇಲ್ಲ. ಇದ್ದಾರೆ, ಆದರೆ ಅವಶ್ಯಕತೆಯಿಲ್ಲ, because they have not been taught what they should be taught. ಹಾಗಾಗಿ ಇವತ್ತು ಉದ್ಯೋಗಾವಕಾಶದಲ್ಲಿ ನಿಜವಾಗಿ ಹೇಳಬೇಕಾದರೆ ನಿಮಗೆ ಒಳ್ಳೆಯ ಎಂಬಿಎ ಸಿಗುವುದಿಲ್ಲ. ಒಳ್ಳೆಯ ಇಂಜಿನಿಯರ್ ಸಿಗುವುದಿಲ್ಲ. ಯಾವುದೂ ಸಿಗುವುದಿಲ್ಲ. ನಿಜವಾಗಿ ಒಳ್ಳೆಯ ಗುಣಮಟ್ಟದ ಇಂಜಿನಿಯರ್ ಇದ್ದಾರೆ ಯಾರು ಗುಣಮಟ್ಟದ ಐಟಿಐಗಳು ಇದ್ದಾರೆ, ಆ ದೃಷ್ಟಿಯಿಂದ ಒಂದು ಪ್ರಯತ್ನ ತಾವು ಮಾಡಬೇಕು. ಇವತ್ತು ತಾವು ನೋಡಿ ಭಾರತ ದೇಶ, world Economy Forum ನಿಂದ ವರದಿ ಕಳುಹಿಸಿದ್ದಾರೆ. ಅಲ್ಲಿ global competition list ನಲ್ಲಿ ranking ಪಟ್ಟಿ ಇದೆ. ಅದು ಬ್ರೆಜಿಲ್, ಚೈನಾ, ರಷ್ಯಾ, ಇಂಡಿಯಾ. ಅದರಲ್ಲಿ ಭಾರತ ದೇಶದ ರ್‍ಯಾಂಕಿಂಗ್ has gone ahead to 43. We were in 68th position. ಏಕೆಂದರೆ, ಕೇಂದ್ರ ಸರ್ಕಾರ ಹಲವಾರು ಏನು ಕ್ರಮ ತೆಗೆದುಕೊಂಡಿತ್ತು. ನಾವು ಈ ಮೊದಲು 68ನೇ ಸ್ಥಾನದಲ್ಲಿದ್ದೆವು. ಕರ್ನಾಟಕವೂ ಸಹ ಒಳ್ಳೆಯ ಕೈಗಾರಿಕೆ ಬೆಳವಣಿಗೆ ಮಾಡಿದ ರಾಜ್ಯ ಇದೆ. ಕೈಗಾರಿಕಾ ವಿಚಾರದಲ್ಲಿ ಜನರಲ್ಲಿ ಕರ್ನಾಟಕದ ಬಗ್ಗೆ ಒಳ್ಳೆಯ ಅಭಿಪ್ರಾಯವಿದೆ. ಅದರ ಲಾಭ ನಾವು ತೆಗೆದುಕೊಂಡು ಒಳ್ಳೆಯ ಮಾನವ ಸಂಪನ್ಮೂಲಗಳನ್ನು ನಿರ್ಮಾಣ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈಗ ಹೈಸ್ಕೂಲ್‌ಗಳನ್ನು ಕೊಟ್ಟಿದ್ದೀರಿ. ಜೂನಿಯರ್ ಕಾಲೇಜುಗಳನ್ನು ಕೊಟ್ಟಿದ್ದೀರಿ. ಡಿಗ್ರಿ ಕಾಲೇಜು ಕೊಟ್ಟಿದ್ದೀರಿ. ಸಂತೋಷ ಕೊಡಿ. ನಿಮ್ಮನ್ನು ಅಭಿನಂದಿಸುತ್ತೇನೆ. ಆದರೆ, ಅವೆಲ್ಲವೂ ಗುಣಮಟ್ಟದಿಂದ ಕೂಡಿರಬೇಕು. 200 ಕಾಲೇಜು ಕೊಟ್ಟಿದ್ದೀರಿ, ಆದರೆ ಪ್ರೊಫೆಸರ್ ಇಲ್ಲ, ಲೆಕ್ಚರರ್ ಇಲ್ಲ, ಬಿಲ್ಡಿಂಗ್ ಇಲ್ಲ, ಡೆಸ್ಕ್ ಇಲ್ಲ, ಹಿಗಿದ್ದರೆ ಅಲ್ಲಿ ನಾವು ಏನು ಮಾಡುವುದು? 20 ಕೊಡಿ ಆದರೆ ಗುಣಮಟ್ಟದಿಂದ ಕೂಡಿರುವುದನ್ನು ಕೊಡಿ. That is important ಆ ರೀತಿ ಮಾಡಿದಾಗ ನಿಜವಾಗಿ. ನಾವು ಒಳ್ಳೆಯ ಮಾನವ ಸಂಪನ್ಮೂಲವನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಿದೆ. ಯಾವಾಗ ಒಳ್ಳೆಯ ಮೂಲಭೂತ ಸೌಕರ್ಯಗಳು ಇರುತ್ತವೆ. ಈ ಮೂಲಭೂತ ಸೌಕರ್ಯಗಳು ಬಹಳ

important. That is the key for economic, social and any other development ಯಾವ ದೇಶದಲ್ಲಿ ಯಾವ ರಾಜ್ಯದಲ್ಲಿ, ನೀವು ಸಿಂಗಾಪುರ್‌ಕ್ಕೆ ಹೋಗಿ, ಮಲೇಷಿಯಾಕ್ಕೆ ಹೋಗಿ, ದುಬಾಯಿಗೆ ಹೋಗಿ, bridges, over-bridges, ring-roads, metro ಯಾವ ತರಹ ಪ್ರಗತಿಯಾಗಿದೆ ಎಂದು ನೋಡಿ. ಅಭಿವೃದ್ಧಿ ಇವತ್ತಿನ ನಮ್ಮ ಸಮಸ್ಯೆಗೆ ಅನುಗುಣವಾಗಿ ಆಗಿಲ್ಲ. ಇದಕ್ಕೆ ನಮ್ಮದು ನಿಮ್ಮದು responsiblity ಇದೆ. ಆಗಬೇಕು, ಫ್ಲೈ ಓವರ್ಸ್ ಆಗಬೇಕು, ರಿಂಗ್ಸ್ ರೋಡ್ಸ್ ಆಗಬೇಕು, ಮೆಟ್ರೋ ಆಗಬೇಕು, ಏಕೆಂದರೆ ಇವತ್ತು traffic congestion ಇದೆ. ನಮ್ಮ ಮನೆಯಿಂದ ಏರ್‌ಪೋರ್ಟ್‌ಗೆ ಹೋಗಬೇಕೆಂದರೆ ಇವತ್ತು ಒಂದೂವರೆ ತಾಸು ಬೇಕು. ಇದು ನಿಮ್ಮದು ತಪ್ಪು ನೀವು ಬಂದು ಒಂದು ವರ್ಷವಾಯಿತು ಎಂದು ನಾನು ಆ ರೀತಿ ಅಪಾದನೆ ಮಾಡುವುದಿಲ್ಲ. ನಾನು ಜನರಲ್ಲಾಗಿ ಮಾತನಾಡುತ್ತೇನೆ. Infrastructure ಗೆ ನಾವು ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತಿದ್ದೇನೆ. ಹೀಗಾಗಿ ಆ ತರಹದ ಒಂದು ಕಮಿಟಿಯನ್ನು ಮಾಡಬೇಕೆಂದು ನಾನು ತಮಗೆ ಸಲಹೆ ಮಾಡುತ್ತಿದ್ದೇನೆ. ಬಳ್ಳಾರಿ ಜಿಲ್ಲೆಯಲ್ಲಿ steel institute ಅನ್ನು ಪ್ರಾರಂಭಿಸಿದೆವು. ಅದು ಏನಾಯಿತು ನನಗೆ ಗೊತ್ತಿಲ್ಲ. ತಾವು ನೋಡಬೇಕು. ಅದೇ ಪ್ರಕಾರ food-processing parks. ಜೇವರ್ಗಿ, ಬೆಳಗಾವಿ, ಚಿತ್ರದುರ್ಗ, ಮಾಲೂರು, ಮದ್ದೂರಿನಲ್ಲಿ ಪ್ರಾರಂಭಿಸಬೇಕೆಂದು ಕ್ಲಿಯರ್ ಮಾಡಿತ್ತು, ಅದಕ್ಕೆ ಕೇಂದ್ರ ಸರ್ಕಾರವು ಸಹಾಯ ಮಾಡಿದೆ, ರಾಜ್ಯ ಸರ್ಕಾರವು ಎರಡು ಕೋಟಿ ಕೊಡುತ್ತೇನೆಂದು ಹೇಳಿದ್ದರು. ಅದರೆ ಒಂದು food-processing park ಪ್ರಾರಂಭವಾಗಿದ್ದು ನನಗೆ ಗೊತ್ತಾಗಲಿಲ್ಲ. ನಾನು ಕೈಗಾರಿಕೆಯ ಮಂತ್ರಿಯಾಗಿದ್ದಾಗ ಏನು ಪರಿಸ್ಥಿತಿ ಇತ್ತೋ ಅದೇ ಪರಿಸ್ಥಿತಿ ಇವತ್ತು ಇದೆ. ಯಾವ food-processing park ಪ್ರಾರಂಭವಾಗಿರುವುದು ನನ್ನ ಗಮನಕ್ಕೆ ಬಂದಿಲ್ಲ. ಮಾಲೂರಿನಲ್ಲಿ ಏನು ಪ್ರಾರಂಭವಾಗುತ್ತದೆಂದು ಹೇಳಿದ್ದಾರೆಯೇ ವಿನಾ: ಅವು ಎಲ್ಲಾ acquisition stage ನಲ್ಲಿ ಇವೆ, ಸರ್ಕಾರದಿಂದ ಹಣವೂ ಬಿಡುಗಡೆಯಾಗಿಲ್ಲ. They have not seen the reality. ಹೀಗಾಗಿ ರೈತರಿಗೆ ನೀವು ನಿಜವಾಗಿ ಸಹಾಯ ಮಾಡಬೇಕಾದರೆ, ರೈತ ಏನು ಬೆಳೆಸುತ್ತಾನೆ ಅದು value addition ಆಗಬೇಕಾದರೆ food processing industries ಬರಬೇಕು. food processing industries ಬರಲಿಕ್ಕೆ food processing parks ಏನು ಇವೆ, ಅದಕ್ಕೆ ಪ್ರಯಾರಿಟಿ ಕೊಟ್ಟು ನೀವು ಮಾಡಬೇಕು. Footwear, Leather, Garment, Jewellery industries ಇವುಗಳನ್ನು ಬೆಳೆಸಿರಿ. ಏಕೆಂದರೆ, ಇಲ್ಲಿ ಉದ್ಯೋಗಾವಕಾಶ ಸಾಕಷ್ಟು ಆಗುತ್ತದೆ. ಅದರಿಂದ ಸಾಮಾನ್ಯ ಜನರಿಗೆ ಉದ್ಯೋಗಾವಕಾಶವಾಗಿ ಮಹಿಳೆಯರಿಗೆ, ಬಡವರಿಗೆ, ಅನುಕೂಲವಾಗಿ ಸಾಕಷ್ಟು ರಾಜ್ಯದ ಆರ್ಥಿಕ ಪ್ರಗತಿಗೂ ಕೂಡ ಸಾಧ್ಯವಾಗುತ್ತದೆ. ಮುಖ್ಯವಾಗಿ ನಮ್ಮ NMCC

ಅವರು ಏನು ಹೇಳುತ್ತಾರೆಂದರೆ, manufacturing sector ದಲ್ಲಿ ಇವತ್ತೇನು growth 12 to 14%-ಇದೆ, ಅದು 7–8% ಆಗಿದ್ದು ಅದು in 11th plan ನಲ್ಲಿ it should go more than 12% ಅಗಬೇಕೆಂದು ಹೇಳುತ್ತಾರೆ. ಅವರು thrust area ಕೊಡುವಾಗ the national strategy ains in increasing the share of manufacturing in the GDP from 17% to 25% in a short period and eventually to 30%. The share of manufacturing in India-exports is about 53% and this sector receives 2-3rd of the foreign investment. The sector is identified by NMCC with a twin objective of employment generation and improving competitions in textile, garments, food processing, leather and footwear, and IT hardware and telecom equipment. ಹೀಗಾಗಿ ಜಿಡಿಪಿ ಏನು ಗ್ರೋಥ್ ಆಗುತ್ತದೆ, ಅದರ ಹತ್ತು ಹನ್ನೆರಡು ಭಾಗ ಈ ಸೆಕ್ಟಾರ್‌ನಿಂದ ಬರುತ್ತದೆ. ಹಿಂದಿನ ಕಾಲದಲ್ಲಿ ಅದು 53% ಆಗಬೇಕಾದರೆ ಈ thrust ನಿಂದ ಸಾಧ್ಯವೆಂದು ವರದಿ ಕೊಟ್ಟಿದ್ದಾರೆ, ತಾವು ಅದನ್ನು ಗಮನಿಸಬೇಕು. ಈಗಾಗಲೇ ನಾನು ತಮಗೆ ಹೇಳಿದ್ದೆ. ಈ skill building ನಲ್ಲಿ ಪ್ರಯತ್ನ ಮಾಡಿ. ನಂತರ SEZ concept ಏನು ಇದೆ, ನಾವು ಏನು ತಿಳಿದುಕೊಳ್ಳುತ್ತೇವೆಂದರೆ, it came originally from China. it is wrong, originally came from Rome ನಂತರ ಚೈನಾ ಗೌರ್ನಮೆಂಟ್‌ದವರು ಇದಕ್ಕೆ ಹೆಚ್ಚಿನ ಉತ್ತೇಜನ ಕೊಟ್ಟರು ಹೀಗಾಗಿ ಅದು ಅಲ್ಲಿ ಬೆಳೆಯಿತು. It is originated in 300 B.C., such special Zones were found in Venecian city, Greek Island. ನಂತರ ಚೈನಾದವರು ತೆಗೆದುಕೊಂಡು, ನಮ್ಮ ಆಗಿನ ಕೇಂದ್ರದ ಮಾಜಿ ಸಚಿವರಾದ ಶ್ರೀ ಮಾರನ್‌ರವರು ಹೋದಾಗ he brought into India. SEZ concept ಇದೆಯಲ್ಲ, ಅದು ಕೇಂದ್ರ ಸರ್ಕಾರ ದೇಶದಲ್ಲಿ ಜಾರಿಗೆ ತಂದಿದೆ. ಈ concept ಬಗ್ಗೆ ಯಾವುದು ವಾದ ಇರಬಾರದು. ನಾನೇ ಕೈಗಾರಿಕೆ ಮಂತ್ರಿಯಾಗಿದ್ದಾಗ, ಹಾಸನದಲ್ಲಿ SEZ ಆಗಬೇಕೆಂದು ನಾನು ರೆಕಮೆಂಡ್ ಮಾಡಿದ್ದೆ, ಅದು ಅಪ್ರೂವಲ್ ಆಗಿ ಬಂದಿದೆ. ಅಲ್ಲಿ ಹಲವಾರು ಕೈಗಾರಿಕೆಗಳು ಬರಲಿಕ್ಕೆ ಪ್ರಾರಂಭವಾಗಿವೆ. ನಮ್ಮ ಮಂಗಳೂರು ಸ್ನೇಹಿತರು ಇಲ್ಲಿ ಕುಳಿತ್ತಿದ್ದಾರೆ. ನಮ್ಮ ಮಂಗಳೂರು ಛೇಂಬರ್ಸ್ ಆಫ್ ಕಾಮರ್ಸ್‌ರವರು ಬಂದಾಗ, ನಿನ್ನೆ ಅದರ ಪ್ರಿನ್ಸಿಪಾಲ್‌ರವರು ನನಗೆ ಅಭಿನಂದಿಸಿ ಪತ್ರ ಬರೆದಿದ್ದಾರೆ. ಅದಕ್ಕೆ ನನಗೆ ಅಭಿನಂದಿಸಿ ಬರೆಯಬೇಡಿ, Chamber of Commerce ಗೆ ಅಭಿನಂದಿಸಿ ಎಂದು ಹೇಳಿದೆ, ಕಾರಣ ಅವರು ಅದರ ಬಗ್ಗೆ ಆಸಕ್ತಿ ವಯಿಸಿದ್ದರು.

SEZ ಬರಬೇಕು. ಏಕೆ? SEZ ಹಿಂದೆ ಚೈನಾದಲ್ಲಿ ಬಂದಿವೆ. ಅದು communist country. ಇಲ್ಲಿ ಬರಬಾರದೆಂದು ಬಹುಶ: ಇಲ್ಲಿ ಯಾರದ್ದೂ ವಿರೋಧವಿಲ್ಲ. ಅದು ಹೇಗೆ ಬರಬೇಕೆಂದರೆ, Entrepreneurs ಗೆ ಸ್ವಲ್ಪ economic freedom ಇರಬೇಕು. ಅಲ್ಲಿ relaxation of laws ಇರುತ್ತದೆ. ಈ bureaucratic bottle-necks ಇರುವುದಿಲ್ಲ. ಹೀಗಾಗಿ ಕೈಗಾರಿಕೆ ಬೆಳೆಯುವುದಕ್ಕೆ, ಉತ್ಪಾದನೆ ಬೆಳೆಯುವುದಕ್ಕೆ ಕೈಗಾರಿಕೆ ಲಘು ಪ್ರಾರಂಭವಾಗಲಿಕ್ಕೆ ಒಂದು ಅವಕಾಶವಾಗುತ್ತದೆ. ಮತ್ತೆ ಅಲ್ಲಿ ಎಲ್ಲಾ ತರಹದ ಮೂಲಭೂತ ಸೌಕರ್ಯಗಳಿರಬೇಕಾಗುತ್ತದೆ. ಅಂದರೆ, Water, Power, Land and whatever is required ಅಲ್ಲಿ ಇರಬೇಕಾಗುತ್ತದೆ. Special Economy Zone ಅನ್ನು ರಿಜೆಕ್ಟ್ ಮಾಡಿ ಎಂದು ನಾನು ಹೇಳುವುದಿಲ್ಲ. ಆದರೆ, ಕೆಲವು ವಿಚಾರಗಳನ್ನು ನಾವು ಗಮನಿಸಬೇಕಾಗುತ್ತದೆ. ಅದೇನೆಂದರೆ, ಅದಷ್ಟು ಮಟ್ಟಿಗೆ ಬೆಂಗಳೂರು ಸುತ್ತಮುತ್ತಲಿನ ಪ್ರದೇಶದಲ್ಲಿ Special Economy Zone ಮಾಡುವುದಕ್ಕೆ ಅವಕಾಶ ಕೊಡಬಾರದು. ಎಲ್ಲರೂ ಇಲ್ಲಿ ಏಕೆ ಬರುತ್ತಾರೆಂದರೆ, ಬೆಂಗಳೂರಿನಲ್ಲಿ ನಾವು ಏನು ಮಾಡಿದರೂ ಕೂಡ ಮಾರಾಟವಾಗುತ್ತದೆಂದು ಇಲ್ಲಿಗೆ ಬರುತ್ತಾರೆ. ಅವರ proposal ನಲ್ಲಿ ಕೆಲವು ಸಲ ಒಳ್ಳೆಯ ವಿಚಾರಗಳು ಇರಬಹುದು. but that could change into a real estate porjects also. ಆದ್ದರಿಂದ, ಎಲ್ಲಿ ಲ್ಯಾಂಡ್ barren ಇದೆ ಮತ್ತು ಯಾವ ಲ್ಯಾಂಡ್‌ನಲ್ಲಿ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಿಲ್ಲದಂಥ ಲ್ಯಾಂಡ್‌ಗಳನ್ನು ನಾವು ಇದಕ್ಕಾಗಿ ಗುರುತು ಮಾಡಬೇಕು. ಈಗಾಗಲೇ ಕೇಂದ್ರ ಸರ್ಕಾರ ನಿಮಗೆ ಸೂಚನೆ ಕೊಟ್ಟಿದೆ. ಅದೇನೆಂದರೆ, ಯಾವುದೇ ಲ್ಯಾಂಡ್‌ನ್ನು ಸ್ವಾಧೀನ ಮಾಡಿಕೊಳ್ಳಬಾರದೆಂದು ಸೂಚನೆ ಕೊಟ್ಟಿದೆ, ಲ್ಯಾಂಡ್‌ನ್ನು ಸ್ವಾಧೀನ ಮಾಡಿಕೊಳ್ಳುವುದಿಲ್ಲವೆಂದು ತಾವು ನೀಡಿರತಕ್ಕಂಥ ಹೇಳಿಕೆಯನ್ನು ನಾನು ನೋಡಿದ್ದೇನೆ. ರೈತರು ಮತ್ತು ಆ ಕೈಗಾರಿಕೆ ಮಾಲೀಕರು ನಡುವೆ ಇದು ಇರುತ್ತದೆ. ಬೇಕಾದರೆ ಕೊಡಬಹುದು ಮತ್ತು ತೆಗೆದುಕೊಳ್ಳಬಹುದು. ನೀವು ಅವರ ಸಹಾಯಕ್ಕೆ ಹೋಗಬೇಕು. ಆದರೆ, ಲ್ಯಾಂಡ್ ಅಕ್ವಿಜೆಷನ್ ಮುಖಾಂತರ SEZ ಗೆ ಕೊಡಬಾರದು. ಇದು ಕೇಂದ್ರ ಸರ್ಕಾರ ತನ್ನ ನೀತಿಯನ್ನು ಬಹಳ ಸ್ಪಷ್ಟವಾಗಿ ಹೇಳಿದೆ. ತಾವು ಕೂಡ ಇದರ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದೀರಿ. ಮುಖ್ಯವಾಗಿ ಅಲ್ಲಿ ಏನಾಗಬೇಕಾಗಿದೆ ಎಂದರೆ, ಹೊಸದಾಗಿ ಬಂದಾಗ ಅಲ್ಲಿ ಮೂಲಭೂತ ಸೌಕರ್ಯಗಳನ್ನು ನಿರ್ಮಾಣ ಮಾಡಲಿಕ್ಕೆ ಯಾವ ತರಹದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆಂಬುದನ್ನು ತಾವು ನೋಡಿಕೊಳ್ಳಬೇಕು. World-class infrastructure ಅಲ್ಲಿರಬೇಕು. ಮತ್ತೆ ಅವರು ಗುರುತು ಮಾಡಿರತಕ್ಕಂಥ ಲ್ಯಾಂಡ್ ಕ್ರಾಪ್ ಗ್ರೋಯಿಂಗ್ ಲ್ಯಾಂಡ್ ಆಗಿರಬಾರದು. ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಬಹಳ ಕಷ್ಟವಿದೆ. ಇವತ್ತು ಏನಾಗಿದೆ ಎಂದರೆ, ಯಾರು ಬೆಂಗಳೂರಿಗೆ

ಬರುತ್ತಾರೆ ಅವರು ಇಲ್ಲಿಯೇ ಸ್ಟೇ ಆಗುತ್ತಾರೆ. ಮತ್ತೆ ವಾಪಸ್ಸು ಹೋಗುವುದಕ್ಕೆ ತಯಾರಿರುವುದಿಲ್ಲ because of this urban development, flyovers and ring roads pollution, traffic congestion and law and order problem ಕ್ರಿಯೇಟ್ ಆಗಿದೆ. ಆದ್ದರಿಂದ, ಬೆಂಗಳೂರಿನಿಂದ ಎಷ್ಟು ದೂರ ಉಳಿಯುವುದಕ್ಕೆ ಸಾಧ್ಯವಿದೆಯೇ ಆ ಪ್ರಯತ್ನ ಸರ್ಕಾರದ ಕಡೆಯಿಂದ ನಡೆಯಬೇಕು. ಮತ್ತೆ ಯಾರು proposal ಕೊಡುತ್ತಾರೆ, ಅವರಿಂದ ಇನ್‌ವೆಸ್ಟ್‌ಮೆಂಟ್ ಕ್ಲಿಯರ್ ಬಗ್ಗೆ proposal ತೆಗೆದುಕೊಳ್ಳಬೇಕು. ಅಂದರೆ, ಎಷ್ಟು ಇಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡುತ್ತೀರೆಂದು ಮತ್ತು ಇದಕ್ಕೆ ಹಣವನ್ನು ಎಲ್ಲಿಂದ ತರುತ್ತೀರಿ ಎನ್ನತಕ್ಕಂಥದರ ಬಗ್ಗೆ ಕ್ಲಿಯರ್ ಇರಬೇಕು. ಮತ್ತೆ ಇದಕ್ಕೆ ಅವರ ಡಾಕ್ಯುಮೆಂಟ್ಸ್ ಸಪೋರ್ಟ್ ಕೂಡ ಇರಬೇಕು. ನಾವು 500 ಕೋಟಿ ಹಾಕುತ್ತೇವೆ ಮತ್ತೆ 10000 ಬ್ಯಾಂಕ್‌ನಿಂದ ತಂದು ಕೊಡುತ್ತೇನೆಂದು ಒಂದು ಪೇಪರ್‌ನಲ್ಲಿ ಕೊಡತಕ್ಕಂಥದಲ್ಲ. You must be clear and transparent. ಎಲ್ಲೆಲ್ಲಿಂದ ಹಣ ಬರುತ್ತಿದೆ ಮತ್ತು ಯಾವ ರೀತಿಯಾಗಿ ಬರುತ್ತದೆಂಬುದು ಹಾಗೂ ಎಲ್ಲಿಂದ ಇವರು ತರುತ್ತಾರೆಂಬುದನ್ನು ನೀವು ನೋಡಬೇಕಾಗುತ್ತದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಸನ್ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ ಸೂಚನೆಗಳೆಲ್ಲವನ್ನು ಗಮನದಲ್ಲಿಟ್ಟುಕೊಂಡು SEZ ಗೆ ಜಾಗವನ್ನು ಗುರುತು ಮಾಡಲಾಗುತ್ತದೆ. ಬೆಂಗಳೂರು ಸುತ್ತಮುತ್ತಲೂ ಇದಕ್ಕೆ ಅನುಮತಿ ಕೊಡಬಾರದೆಂದು ತಾವು ಹೇಳಿದ್ದೀರಿ. ಇದರ ಪರವಾಗಿ ನಾವೂ ಕೂಡ ಇದ್ದೇವೆ. ಆದರೆ, ಇವತ್ತಿನ ದಿವಸ ಬಾಂಬೆ, ಚೆನ್ನೈ, ಹೈದರಾಬಾದ್, ಹರಿಯಾಣ ರಾಜ್ಯಗಳಲ್ಲಿ ಪಟ್ಟಣ ಪ್ರದೇಶಗಳಲ್ಲಿನ ಜಾಗಕ್ಕೆ ಅನುಮತಿಯನ್ನು ಕೇಂದ್ರ ಸರ್ಕಾರ ಕೊಡುತ್ತಿದೆ. ಕೇಂದ್ರ ಸರ್ಕಾರ SEZ ಪಾಲಿಸಿಯಲ್ಲಿ ಒಂದೇ ನೀತಿಯನ್ನು ಜಾರಿಗೆ ತಂದಿದ್ದರೆ ಚೆನ್ನಾಗಿರುತ್ತಿತ್ತು. ಅಂದರೆ, ಇದನ್ನು ಒಣ ಭೂಮಿ ಜಾಗದಲ್ಲಿ ಮತ್ತು ಕೋಸ್ಟಲ್ ಪ್ರದೇಶದಲ್ಲಿ ತರಬೇಕೆಂದು ಒಂದು ಸ್ಯಾಟಲೈಟ್ ಇಮಾಜಿನರಿಯನ್ನು ಏನಾದರೂ ಮಾಡಿ ಇಂಥ ಕಡೆಯೇ ಮಾಡಬೇಕೆಂದು ಒಂದು ಸೂತ್ರವನ್ನು ಅವರು ತಂದಿದ್ದರೆ ನಾವು ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ನಾವು ಇಲ್ಲಿ ಕೊಡಲಿಲ್ಲವೆಂದರೆ ಅವರು ಯಾವ ಕಡೆ ಹೋಗುತ್ತಾರೆಂಬುದು ತಮಗೂ ಸಹ ಗೊತ್ತಿದೆ. You have rich experience. ಚೆನ್ನಾಗಿ ಮಾತನಾಡುತ್ತಿದ್ದೀರಿ. ತಮ್ಮ ಹತ್ತಿರ ನಾವು ಕಲಿಯತಕ್ಕಂಥದ್ದು ಬಹಳಷ್ಟು ಇವೆ. ಆದರೆ, ಎಲ್ಲಿ ತೊಂದರೆಯಾಗುತ್ತಿದೆ ಎಂಬುದು ತಮಗೂ ಸಹ ಗೊತ್ತಿದೆ. ನಾನು ಮತ್ತು ನೀವು ಸೇರಿ ಕೇಂದ್ರ ಜೊತೆ ಚರ್ಚೆ ಮಾಡಿ ಮಾರ್ಪಾಡುಗಳನ್ನು ಮಾಡಿದರೆ ತುಂಬಾ ಚೆನ್ನಾಗಿರುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ:- ಕೇಂದ್ರ ಸರ್ಕಾರ ಜೊತೆ ಖಂಡಿತವಾಗಿ

ಮಾತನಾಡೋಣ. ಆದರೆ, ನೀವು ರೆಕಮೆಂಡ್ ಮಾಡತಕ್ಕಂಥದ್ದನ್ನು ಕೇಂದ್ರ ಸರ್ಕಾರ ಒಪ್ಪಿಕೊಳ್ಳುತ್ತದೆ. ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದಲ್ಲಿ ಏನು ಮಾಡಿದ್ದಾರೆಂಬುದನ್ನು ನೋಡುವುದಕ್ಕಿಂತ ನಾವು ಕರ್ನಾಟಕ ಜನರ ಮತ್ತು ನಮ್ಮ ರೈತರ ಹಿತವನ್ನು ನೋಡಿಕೊಂಡು proposal ನ್ನು ನಾವು ಕಳುಹಿಸಬಹುದಲ್ಲವೇ? ಈ proposal ನಿಂದ ನಮ್ಮ ರೈತರಿಗೆ ಅನ್ಯಾಯವಾಗುತ್ತದೆಂದು ನಿಮಗೆ ಗೊತ್ತಾದರೆ you don't recommend that proposal. ನಿಮ್ಮ ರೆಕಮೆಂಡೇಶನ್‌ನಲ್ಲಿ ಇಲ್ಲದಿದ್ದರೆ ಅವರು ಅಪ್ರೂವಲ್ ಮಾಡುವುದಕ್ಕೆ ಬರುವುದಿಲ್ಲ. ಹೈದರಾಬಾದ್‌ನಲ್ಲಿ ಅಥವಾ ಪೂನಾದಲ್ಲಿ ಯಾವ ಪ್ರಕಾರ ಮಾಡಿದ್ದಾರೆಂದರೆ, cooperative concept ಮಾಡಿ ಅದರಲ್ಲಿ ಮೆಂಬರ್ಸ್ ಆಗುತ್ತಾರೆ. ಮತ್ತೆ ಅದಕ್ಕೆ ಶೇರ್ ಹಣ ಹಾಕಿ ಆ ಸಂಸ್ಥೆಯನ್ನು ನಡೆಸುತ್ತಾರೆ. ಅದೇ ಪ್ರಕಾರ 500, 1000 ಎಕರೆ ಜಮೀನನ್ನು ಒಂದು ಪೂಲ್‌ನಲ್ಲಿ ತಂದು ಆ ಜಮೀನಿನ ಮಾಲೀಕರು ಆ ಕೈಗಾರಿಕೆ ಮಾಲೀಕರಾಗಿದ್ದಾರೆ. ಅವರದು ಎಷ್ಟು ಲ್ಯಾಂಡ್ ಇರುತ್ತದೆಯೇ ಅಷ್ಟು ಪರ್ಸೆಂಟೇಜ್ ತೆಗೆದುಕೊಳ್ಳುತ್ತಾರೆ. ನನಗೆ ಈ ರೀತಿಯಾಗಿ ಬೇಕಾಗಿಲ್ಲವೆಂದರೆ, ಮಾರ್ಕೆಟ್ ರೇಟ್ ಪ್ರಕಾರ ಹಣ ಪಡೆದುಕೊಂಡಿದ್ದಾರೆ. ಆದರೆ, ಸಬ್‌ರಿಜಿಸ್ಟ್ರಾರ್ ವ್ಯಾಲ್ಯು ಪ್ರಕಾರವಲ್ಲ. ಸಬ್‌ರಿಜಿಸ್ಟ್ರಾರ್ ವ್ಯಾಲ್ಯು ಯಾವ ಪ್ರಕಾರ ಇದೆ ಎಂಬುದು ನಮಗೆಲ್ಲಾ ಗೊತ್ತಿದೆ. ಯಾರು Yes ಎಂದು ಹೇಳುತ್ತಾರೆ they have become the owners of the company. ಈ ರೀತಿಯಾಗಿ ಮಾಡಿಕೊಂಡು ಅವರೇ ಎಲ್ಲಾ ಡವಲಪ್ ಮಾಡುತ್ತಿದ್ದಾರೆ. ಸಾಫ್ಟ್‌ವೇರ್ ಪಾರ್ಕ್, hospitals, ಸ್ಕೂಲ್ ಮತ್ತು ಕ್ಲಬ್‌ಗಳನ್ನು ಡೆವಲಪ್ ಮಾಡಿದ ಪ್ರಕಾರ ಅವರು ವರ್ಷಕ್ಕೆ ಮಿನಿಮಮ್ 6 ರಿಂದ 7 ಲಕ್ಷ ರೂಪಾಯಿಗಳಷ್ಟು ಡಿವಿಡೆಂಟ್ ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ, ಅಲ್ಲಿರತಕ್ಕಂಥ ವ್ಯವಸ್ಥೆ ಬಗ್ಗೆ ತಾವು ಭೇಟಿ ಮಾಡಿ ನೋಡಿಕೊಂಡು ಬನ್ನಿ. ಪೂನಾದಲ್ಲಿ ಈ ರೀತಿಯಾಗಿ ಮಾಡಿದ್ದಾರೆಂದು ನನಗೆ ಹೇಳಿದ್ದಾರೆ. ಮತ್ತೆ ಹೈದರಾಬಾದ್‌ನಲ್ಲಿ ಮಾಡಿದ್ದಾರೆ. ತಾವು ದಯಮಾಡಿ ಹೋಗಿ ನೋಡಿ. ಆ ಕಂಪನಿ ಮಾಡುವಾಗ ರೈತರೆ ಅದರ ಮಾಲೀಕರಾಗಿರುತ್ತಾರೆ. ಕನ್‌ಸ್ಟ್ರಕ್ಷನ್ ಆಕ್ಟಿವಿಟೀಸ್‌ನಲ್ಲಿಯೂ ಭಾಗವಹಿಸುವುದಲ್ಲದೇ ಅವರ ಮಕ್ಕಳು ಅಲ್ಲಿಯೇ ಕೆಲಸ ಕೂಡ ಮಾಡುತ್ತಿದ್ದಾರೆ. ಇದರಿಂದ ಅವರ ಮಕ್ಕಳಿಗೆ ನೌಕರಿ ಸಹ ಸಿಗುತ್ತಿದೆ. ಇದು ಬಹಳ ಸುಲಭವಾಗಿದೆ ಎಂದು ನಾನು ಹೇಳುವುದಿಲ್ಲ. ಏಕೆಂದರೆ, ಎಲ್ಲರೂ ಇದನ್ನು ಒಪ್ಪಿಕೊಳ್ಳಬೇಕಲ್ಲ, ಆದೆ, ಒಂದು ಪ್ರಯತ್ನ ಸರ್ಕಾರದ ಕಡೆಯಿಂದ ಆದರೆ, ಇಂಥ controversial ಹೆಚ್ಚು ಬರುವುದಿಲ್ಲ. ಅಂದರೆ, ಲ್ಯಾಂಡ್ ಅಕ್ವಿಜಿಷನ್ ಪ್ರಶ್ನೆ ಬರುವುದಿಲ್ಲ ಮತ್ತೆ ಟ್ರ್ಯಾನ್ಸ್‌ಪರೆನ್ಸಿ ಪ್ರಶ್ನೆ ಬರುವುದಿಲ್ಲ. ಯಾವುದೇ ಒಂದು ವಿಚಾರ ಬಂದಾಗ ಅಲ್ಲಿ ಟ್ರ್ಯಾನ್ಸ್‌ಪರೆನ್ಸಿ ಇರಬೇಕಾಗುತ್ತದೆ. ಅನಾವಶ್ಯಕವಾಗಿ

ಡಿಬೇಟ್ ಅಗತಕ್ಕಂಥದ್ದು ಇರುವುದಿಲ್ಲ. ಆದ್ದರಿಂದ, ರೈತರು ಒಪ್ಪಿಕೊಂಡರೆ, ಅದನ್ನು ಮಾಡುವುದಕ್ಕೆ ಅವಕಾಶ ಕೊಡಿ ಮತ್ತೆ ಅಲ್ಲಿ ರೈತರಿಗೆ ಉದ್ಯೋಗವಕಾಶ ಕೊಡಿ. ಮತ್ತೆ ಎಲಿಜಬಲ್ ಇರತಕ್ಕಂಥ ಕಾಂಟ್ರಾಕ್ಟ್‌ದಾರರಿಗೆ ಅಲ್ಲಿ ಕಾಂಟ್ರಾಕ್ಟ್ ಕೊಡಿ. ಅಲ್ಲಿ barren ಲ್ಯಾಂಡ್ ಆಗಿರುವುದರಿಂದ ಏನು ಆದಾಯ ಬರುತ್ತಿರಲಿಲ್ಲ. ಆದರೆ, ಈ ರೀತಿಯಾಗಿ ಮಾಡಿದಾಗ ಅವರಿಗೆ ಆದಾಯ ಬರುತ್ತದೆ ಮತ್ತೆ ಉದ್ಯೋಗ ಕೂಡ ದೊರಕಿದಂತೆ ಆಯಿತು. ಹಾಗೆಯೇ ಶಾಶ್ವತವಾಗಿ ಆತನಿಗೆ ಆದಾಯ ಕೂಡ ಬರುತ್ತದೆ. ಈ ರೀತಿಯಾಗಿ ಪೂನಾದಲ್ಲಿ ಆಗಿದೆ. ಮತ್ತೆ ಹೈದರಾಬಾದ್‌ನಲ್ಲಿ ಕೂಡ ಆಗಿದೆ ಎಂದು ಹೇಳಿದ್ದಾರೆ. ತಾವು ಹೋಗಿ ನೋಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ಮತ್ತೆ ಮೂಲಭೂತ ಸೌಕರ್ಯಗಳ ಬಗ್ಗೆ ಹೇಳುವುದಾದರೆ, 1996ರಲ್ಲಿ ನಾನು ಕೈಗಾರಿಕಾ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಇದನ್ನು ಮಾಡಲಾಗಿತ್ತು. ಮೂಲಭೂತ ಸೌಕರ್ಯವಿಲ್ಲದಿದ್ದರೆ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. Industrial estate ಮಾಡುವ KSSIDC and KIADB ಇರಬಹುದು. ಅಲ್ಲಿ ನೀರಿಲ್ಲ, ರಸ್ತೆಯಿಲ್ಲ, ಒಳಚರಂಡಿ ವ್ಯವಸ್ಥೆ, ವಿದ್ಯುತ್ ವ್ಯವಸ್ಥೆ ಇಲ್ಲ. ಆದ್ದರಿಂದ, ಅಲ್ಲಿಗೆ ಯಾರು ಹೋಗುತ್ತಾರೆ. ಆದ್ದರಿಂದ, ಮೂಲಭೂತ ಸೌಕರ್ಯಗಳು ಎಲ್ಲಾ ಕಡೆ ಬೆಳೆಯಬೇಕು. ಅದು ಏರ್‌ಪೋರ್ಟ್, ಪೋರ್ಟ್ಸ್, ಮೆಟ್ರೋ, ರೈಲ್ ರಸ್ತೆ ಮತ್ತು ಫ್ಲೈಓವರ್ ಇರಬಹುದು.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ನಮಗೆ ಕೈಗಾರಿಕೆಗಳ ಬಗ್ಗೆ ಅರ್ಥವಾಗುವುದಿಲ್ಲ. ಬೆಂಗಳೂರಿನಿಂದ ಸ್ವಲ್ಪ ಜನ ಗುಂಪು ಗುಂಪುಗಳಾಗಿ ಮಾಡಿಕೊಂಡು ನಿಮ್ಮ ಜಮೀನುಗಳನ್ನು ತೆಗೆದುಕೊಳ್ಳುತ್ತೇವೆಂದು ಮಾಲೂರಿಗೆ ಬಂದರು. ಹಿಂದೆ ನಮ್ಮ ಕಡೆ ಭೂಮಿ ಬೆಲೆ ಬಹಳ ಕಡಿಮೆ ಇತ್ತು. ಆಗ ರೈತರಿಗೆ ಮಿನಿಮಮ್ ಹಣ ಕೊಟ್ಟು ಅವರ ಜೊತೆ ಅಗ್ರಿಮೆಂಟ್ ಮಾಡಿಕೊಂಡರು. ಸ್ವಲ್ಪ ದಿವಸಕ್ಕೆ ಇದೆಲ್ಲಾ Industrial Area Development Board ಗೆ ಸ್ವಾಧೀನ ಮಾಡುತ್ತಿದ್ದಾರೆಂದು ತಿಳಿಯಿತು. ಭೂಮಿಯನ್ನು ಸ್ವಾಧೀನ ಮಾಡಿದ ಮೇಲೆ ಆ ಭೂಮಿಗೆ ಜಾಸ್ತಿ ಹಣ ಆಯಿತು. ಮೊದಲು ಇಷ್ಟೊಂದು ರೇಟ್ ಇರಲಿಲ್ಲ. ಹೆಚ್ಚಿನ ಹಣವೆಲ್ಲಾ ಬೆಂಗಳೂರಿನಿಂದ ಕಾರಿನಲ್ಲಿ ಬಂದವರಿಗೆ ಹೋಯಿತು. ಈಗ ನಮ್ಮವರು ನಿಕ್ಕರ್‌ನಲ್ಲಿದ್ದವನು ಈಗ ಪುಟಗೋಸಿಗೆ ಬಂದಿದ್ದಾನೆ. ಈ ಕೈಗಾರಿಕೆ ವಿಷಯದಲ್ಲಿ ನಮಗೆ ಮಾನ್ಯ ದೇಶಪಾಂಡೆ ಮತ್ತು ಮಾನ್ಯ ನಾಯ್ಡುರವರನ್ನು ನೋಡಿದರೆ ನಮಗೆ ಭಯ ಏಕೆಂದರೆ, ಇದು ನಮಗೆ ಅರ್ಥವಾಗುವುದಿಲ್ಲ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು: ಭಯ ಭೀಳತಕ್ಕಂಥ ಶರೀರಿವು ನಮಗೆ ಇಲ್ಲ ಮತ್ತೆ ಅಂಥ ಕೃತ್ಯಗಳು ಕೂಡ ಇಲ್ಲ. ಮತ್ತೆ ಅಂಥ ಮಾತುಗಳೂ ಸಹ ಇಲ್ಲ.

ಅಧ್ಯಕ್ಷರು: ಕೈಗಾರಿಕಾ ಮಂತ್ರಿಗಳೆಂದರೆ ಭಯ ಎಂದು ಹೇಳುತ್ತಿದ್ದಾರೆ. ಕೈಗಾರಿಕೋದ್ಯಮಿಗಳು ನೀವು ಸರಿ ಏನೇನು ಬಲೆ ಎಳೆದುಬಿಡುತ್ತೀರೆಂದು ಭಯ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೆ, ಆ ರೀತಿಯಾದ ವಾತಾವರಣವನ್ನು ಯಾರು ನಿರ್ಮಾಣ ಮಾಡಿಲ್ಲ. ಮಾನ್ಯ ರಮೇಶ್ ಕುಮಾರ್‌ರವರು ಸಭಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಮತ್ತೆ ತುಂಬಾ ಬುದ್ಧಿವಂತರು ಸಹ ಆಗಿದ್ದಾರೆ. ಮತ್ತೆ ಮಾನ್ಯ ದೇಶಪಾಂಡೆಯವರೂ ಕೂಡ ಚೆನ್ನಾಗಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ನಾನೂ ಕೂಡ ಅಷ್ಟೊಂದು ವಿಕಾರವಾಗಿಲ್ಲ. ಮತ್ತೆ ರಾಕ್ಷಸರ ತರಹ ನನಗೆ ಸ್ವಭಾವ ಕೂಡ ಇಲ್ಲ. ಮತ್ತೆ ಮನುಷ್ಯನ ಆಕಾರ ಕೂಡ ಆ ರೀತಿ ಇಲ್ಲ. ನಾವು ಮನುಷ್ಯರಾಗಿದ್ದೇವೆ ಆದರೆ, ತಮ್ಮಲ್ಲಿ ಈ ರೀತಿಯಾದ ಭಾವನೆ ಏಕೆ ಬಂತೆಂಬುದು ನನ್ನ ಪ್ರಶ್ನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕಟ್ಟಾಸುಬ್ರಮಣ್ಯ ನಾಯ್ಡುರವರನ್ನು ನೋಡಿ ಅವರಿಗೆ ಭಯ ಬಂದಿಲ್ಲ. Industrial Minister ರವರನ್ನು ನೋಡಿ ಅವರಿಗೆ ಭಯ ಬಂದಿದೆ.

ಶ್ರೀ ಕೆ. ಆರ್. ರಮೇಶ್ ಕುಮಾರ್ : ಪ್ರಾಕ್ಟಿಕಲ್ ಆಗಿ ನಾವು ಎಕ್ಸ್‌ಪರಿಮೆಂಟ್ ಮಾಡಿದಾಗ ಅವರು ನಮಗೆ ಎನಿಮೀಸ್ ತರಹ ಕಾಣುತ್ತಾರೆ ಹೊರತು ನಮ್ಮ ಫ್ರೆಂಡ್ಸ್ ಆಗಿ ಒಂದು ದಿವಸವೂ ಸಹ ಕಾಣಲಿಲ್ಲ. ನೀವಲ್ಲ. ನಿಮ್ಮ ಇಲಾಖೆಯ ಕಾರ್ಯಚಟುವಟಿಕೆಗಳ ಬಗ್ಗೆ ಹೇಳುತ್ತಿದ್ದೇನೆ. ಇವತ್ತಿನ ದಿವಸ ಅಲ್ಲಿನ ಲ್ಯಾಂಡ್‌ಗೆ ಆಕ್ಚುವಲ್ ಪ್ರೈಸ್ ಬಂದಿದೆ. ಆ ರೇಟ್ ಪ್ರಕಾರ ನಮ್ಮ ರೈತರಿಗೆ ಸಿಕ್ಕಿದರೆ ಆತ ಇನ್ನೊಂದು ಕಡೆ ಜಮೀನು ತೆಗೆದುಕೊಳ್ಳುತ್ತಿದ್ದನೋ ಅಥವಾ ಬಿಡುತ್ತಿದ್ದನೋ ಅದು ಬೇರೆ ಪ್ರಶ್ನೆಯಾಗುತ್ತಿತ್ತು.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು): ಮಾನ್ಯ ಅಧ್ಯಕ್ಷರೆ, ತಾವು ಏನು subject ತಂದಿದ್ದೀರಿ, ತಾವು ನಿಜವಾಗಲೂ ಒಳ್ಳೆಯ ಮಾತನ್ನು ಹೇಳಿದಿರಿ. ಆದರೆ ನಮ್ಮ ಹೊಸ ಸರ್ಕಾರ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ನಂತರ ರೈತರಿಂದ ಏನು ವಿರೋಧ ವ್ಯಕ್ತವಾಗಿದೆ. ಆ ಹಿನ್ನೆಲೆಯಲ್ಲಿ ಆ ಭೂಮಿಯನ್ನು ಪಾಲುದಾರಿಕೆ ಮಾಡುವಂಥ ಸೂತ್ರವನ್ನು ತಂದಿದ್ದೇವೆ. ಯಾವ ಒಬ್ಬ ರೈತನಲ್ಲಿ ನಾವು ಹೋಗಿ ಬಲಾತ್ಕಾರವಾಗಿ ಅವರಿಗೆ ಕಾನೂನನ್ನು ಹೇರಿ ನಾವು ಭೂಸ್ವಾಧೀನ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ನಾವು ಪ್ರಾರಂಭ ಮಾಡಲಿಲ್ಲ. ತಮಗೆ ನಾನು clarify ಮಾಡುತ್ತೇನೆ. ಅಷ್ಟೆ . ತಾವು ಹೇಳುತ್ತಿದ್ದೀರಿ, ನರಸಾಪುರ ಹತ್ತಿರ ಯಾರೋ ಮಾಡಿದ್ದಾರೆ ಕೋಲಾರದ ಹತ್ತಿರ ಯಾರೋ ಮಾಡಿದ್ದಾರೆಂದರೆ ಅದಕ್ಕೆ ನಾವು ಜವಾಬ್ದಾರರು ಅಲ್ಲ. That is the business btween those people.

ಶ್ರೀ ಕೆ.ಆರ್. ರಮೇಶ್ ಕುಮಾರ್ : Industries Department ಹೋದರೆ ಎಂದು ಹೇಳಲ್ಲಿಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ರೈತರ ಬಗ್ಗೆ ತಾವು ಹೇಳಿದ್ದೀರಿ ಅಲ್ಲವೇ ಅದಕ್ಕೆ ನಾನು ಹೇಳುತ್ತಿರುವಂಥದ್ದು. ಇವತ್ತು ರೈತರ ಹಿತವನ್ನು ಮನಸ್ಸಿನಲ್ಲಿಟ್ಟುಕೊಂಡು ಒಂದು ಹೊಸ ನೀತಿಯನ್ನು ಜಾರಿಗೆ ತಂದಿರುವಂಥದ್ದು ಆ ಭೂಮಿಯನ್ನು ಪಾಲುದಾರಿಕೆ ಮಾಡಿಕೊಳ್ಳುವಂತದ್ದು. ರೈತರಿಗೆ ಅನ್ಯಾಯವಾಗಲಿ ಎಂದು Industries ತಂದು ಮಾಡಬಾರದ್ದನ್ನೆಲ್ಲಾ ಮಾಡಿ ಕುಳಿತುಕೊಳ್ಳಬೇಕು ಎನ್ನುವ ಅಭಿಪ್ರಾಯ ಏನು ಇಲ್ಲ ಸರ್.

ಶ್ರೀ ಕೆ.ಆರ್. ರಮೇಶ್ ಕುಮಾರ್ : ದಯಮಾಡಿ ಒಂದು ನಿಮಿಷ ಕೇಳಿ. ಹಳ್ಳಿ ಕಡೆ ಇವತ್ತು ಏನಾಗುತ್ತದೆಂದು ತಮಗೆ ಗೊತ್ತು. ದನಗಳು ಸತ್ತರೆ ಏನಾಗುತ್ತದೆ ಅದನ್ನು ತಂದು ಬಿಸಾಕುತ್ತೇವೆ ಅಲ್ಲವೇ ಅದು ಹೇಗೆ ಗೊತ್ತಾಗುತ್ತದೋ, ಆ ರಣಹದ್ದುಗಳು, ಅಲ್ಲಿ ಅವು ಸುತ್ತುತ್ತವೆ. ಅದು ಹೇಗೆ? ಅವು ಎಲ್ಲೂ normal ಆಗಿ ಕಾಣುವುದಿಲ್ಲ. ಎಮ್ಮೆ ಹಸು ಬಿದ್ದಾಗ ಆ time ಗೆ correct ಆಗಿ ಬರುತ್ತದೆ. ಯಾವ ಭಾಗದಲ್ಲಿಯ ಜಮೀನಿಗೆ ಬೆಲೆ ಬರುತ್ತದೆ ಎನ್ನುವುದರ ಬಗ್ಗೆ ಈ ಬೆಂಗಳೂರಿನಲ್ಲಿರುವ ರಣಹದ್ದುಗಳಿಗೆ ವಾಸನೆ ಬರುತ್ತದೆ. ಪಾಪ, ಈ ಸರ್ಕಾರದವರಾಗಲಿ, Department ನವರಾಗಲಿ ಬರುವುದಿಲ್ಲ, ಅವರು ಬರುತ್ತಾರೆ. ಅವರು ಬರುವ ಶೈಲಿ, ರೀತಿ ನೋಡಿದರೆ ನಮ್ಮ ಬೆಪ್ಪ ರೈತರು ಪಾಪ ಅವರಿಗೆ ಏನು ಗೊತ್ತಾಗುವುದಿಲ್ಲ. ನೋಡಿ. ಅವು 10 ಸಾವಿರ ರೂ. ಗಳ ಬಂಡಲ್‌ನ್ನು ಯಾವಾಗ ನೋಡಿರಬೇಕು? ಅವರು ವಕೀಲರ ಸಮೇತ ಬರುತ್ತಾರೆ, ಪಾಪ ಆ ರೈತರಿಗೆ ನಂತರ ಇಲ್ಲಿ ಕೈಗಾರಿಕೆ ಬರುತ್ತದೆಂದು ಗೊತ್ತಾಗುವುದಿಲ್ಲ. ಆದರೆ ಇದು ಬೆಂಗಳೂರಿನ ರಣಹದ್ದುಗಳಿಗೆ ಗೊತ್ತಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದು ಅವರಿಗೆ ಹೇಗೆ ಗೊತ್ತಾಗುತ್ತದೆ?

ಶ್ರೀ ಕೆ.ಆರ್. ರಮೇಶ್ ಕುಮಾರ್ : ಇದೆಲ್ಲಾ ಒಳ್ಳೆಯ ಜಮೀನು, ಇಲ್ಲಿ Industrial Department ಬರುತ್ತದೆ. ಇಲ್ಲಿ KIADB ಯವರು development ಮಾಡುವುದಕ್ಕೆ ಹೋಗುತ್ತಾರೆ, ಇದನ್ನು Board ಗೆ ತೆಗೆದುಕೊಳ್ಳುತ್ತಿದ್ದಾರೆ ಅದನ್ನು acquire ಮಾಡಿಕೊಳ್ಳುತ್ತಾರೆ. ಪಾಪ ಅವರು ಅಷ್ಟೋತ್ತಿಗಾಗಲೇ ಕೈಕಾಲು ಕಟ್ಟಿಹಾಕಿಕೊಂಡು ಬಿಟ್ಟಿರುತ್ತಾರೆ. ನೀವಲ್ಲಾ, ಬೆಂಗಳೂರಿನಿಂದ ಬರುತ್ತಾರಲ್ಲಾ ಆ ರಣಹದ್ದುಗಳು ಅವರು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅವರಿಗೆ ಹೇಗೆ ಗೊತ್ತಾಗುತ್ತದೆಂದು ಬೇಕಲ್ಲವೇ?

ಶ್ರೀ ಕೆ.ಆರ್. ರಮೇಶ್ ಕುಮಾರ್ : ಅದು ನನಗೆ ಗೊತ್ತಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅವರಿಗೆ ಏನಾದರೊಂದು ವಾಸನೆ ಗೊತ್ತಿರಬೇಕಲ್ಲವೇ?

ಅಧ್ಯಕ್ಷರು : ರಣಹದ್ದುಗಳಿಗೆ ಹೇಗೆ ವಾಸನೆ ಗೊತ್ತಾಗುತ್ತದೋ ಹಾಗೆ ಅವರಿಗೆ ವಾಸನೆ ಗೊತ್ತಾಗುತ್ತದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ :ನಮಗೆ ಏನಾಗಿ ಬಿಡುತ್ತದೆಂದರೆ, ನಮ್ಮ ರೈತನ ಜಮೀನು ಖಾಲಿಯಾಗಿ ಬಿಡುತ್ತದೆ. ಏನು ನಿಜವಾಗಲೂ ಲಕ್ಷ ಕೋಟಿ ರೂ. ಗಳಲ್ಲಿ ಮಾತನಾಡುತ್ತಾರೆ, ಅದು ಅವನಿಗೆ ಸಿಗುತ್ತದೆಯಾ? ಸಿಗುವುದಿಲ್ಲ. ಈಗ ವೈಟ್‌ಫೀಲ್ಡ್ ಹತ್ತಿರ ಒಂದು ಎಕರೆಗೆ ಒಂದು ಕೋಟಿ ರೂ. ಗಳಂತೆ, ನಿಜವಾಗಲೂ ಖಾತೆದಾರರು ಆಗಿದ್ದವರು ನಿಕ್ಕರ್‌ಗಳನ್ನು ಹಾಕಿಕೊಂಡು ಇದ್ದವರು ಅಲ್ಲಿ ವ್ಯವಸಾಯ ಮಾಡುವವರಿಗೆ ಎಷ್ಟು ಜನರಿಗೆ ಅಲ್ಲಿ ಕೋಟಿ ರೂ. ಗಳು ಸಿಗುತ್ತದೆ ಗೊತ್ತಿಲ್ಲ, ನನ್ನ ದುಃಖ ಅದು. ನೀವು ತಪ್ಪು ಮಾಡಿಲ್ಲ. ಅದಕ್ಕೆ ನಮಗೆ ಭಯವಾಗುತ್ತದೆಂದು ನಾನು ಹೇಳಿದ್ದು, ನಿಮ್ಮ ಮೇಲೆ ಅಲ್ಲ. ಖಂಡಿತವಾಗಿ ನೀವು ಲಕ್ಷಣವಾಗಿದ್ದೀರಿ, ಸುಂದರವಾಗಿದ್ದೀರಿ, ನೀವು ನಮ್ಮ ಆತ್ಮೀಯರು, ನೀವು ವಿಕಾರವಂತರು ಅಲ್ಲ, ನೀವು ವಿಕಾರ ಆಗುವುದಿಲ್ಲ. ಒಂದು ವೇಳೆ ನೀವು ಅಂತಹ ಕೆಲಸವನ್ನು ಮಾಡಿದರೂ ನಾಜುಕಾಗಿ ಇರುತ್ತೀರಿ. ನಿಮ್ಮ ಮೇಲೆ ನನಗೆ ಆ ವಿಶ್ವಾಸ ಇದೆ.

ಶ್ರೀ ಕಟ್ಟಾ ಸುಬ್ರಮಣ್ಯ : ಮಾನ್ಯ ರಮೇಶ್ ಕುಮಾರ್‌ವರು ನಾವು ಮಾಡಿದರೂ ಈ ರೀತಿ ಇರುತ್ತಾರೆಂದು ಹೇಳುವುದು ಬೇಡ. ಆ ರೀತಿಯ ಕೆಲಸಗಳು ಏನೂ ಆಗಿಲ್ಲ. ತಾವು ಸ್ಥಾನದಲ್ಲಿ ಕುಳಿತು ಅನೇಕ ತೀರ್ಪುಗಳನ್ನು ಕೊಟ್ಟಿದ್ದೀರಿ. ಆದರೆ ತಾವು ಈ ರೀತಿ ಚುಚ್ಚುವುದು ಸರಿಯಲ್ಲ. ನಾವು ಆ ರೀತಿಯ ಕೆಲಸಗಳನ್ನು ಯಾವುದೂ ಮಾಡಿಲ್ಲ. ನಾನು ಕ್ಲಾರಿಫೈ ಮಾಡಿ ಬಿಡುತ್ತೇನೆ. ನಾವು ಎಲ್ಲೋ Industrial area ದಲ್ಲಿ ಒಂದು ಜಮೀನನ್ನು ಭೂಸ್ವಾಧೀನ ಮಾಡಿಕೊಳ್ಳುತ್ತೇವೆ. ಅದಕ್ಕೋಸ್ಕರ ಈ ರಣಹದ್ದುಗಳು ಬರುತ್ತವೆ, ನಾವು ಋಷಿಮುನಿಗಳು ಅಲ್ಲ. ನಮಗೆ ಗೊತ್ತಾಗುವುದಿಲ್ಲ. ಯಾರು ಹೋಗುತ್ತಾರೆ ಏನು ಎಂದು ನಾವು ಕಡಿವಾಣ ಹಾಕುವುದಕ್ಕೆ, ಅದಕ್ಕೋಸ್ಕರ ಈಗ ಒಂದು ಹೊಸ ಸೂತ್ರವನ್ನು acquire ಮಾಡಿಕೊಂಡಿರುವ land ಗೆ final notification ಆಗಿ possession ತೆಗೆದುಕೊಳ್ಳದಿರುವ ಜಮೀನಿಗೂ ಕೂಡ ಯಾವ ರೈತರ ಜಮೀನಿಗೂ ಕೂಡ ಯಾವ ರೈತರ ಜಮೀನನ್ನು ನಾವು ಇವತ್ತು ವಶಪಡಿಸಿಕೊಂಡು ಕೈಗಾರಿಕೆಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವು, ಇವತ್ತು ಕೂಡ ಆ ಎಲ್ಲಾ ರೈತರಿಗೆ ಕೊಡುತ್ತೇವೆ, ಹಿಂದೆ ಮಾಡಿದಂಥ ಜಮೀನುಗಳಿಗೂ ಕೂಡ ನಾವು ಅವರ possession ತೆಗೆದುಕೊಳ್ಳದಿರುವ

ಜಮೀನಿಗೂ ಕೂಡ ಈ ಒಂದು ಸೂತ್ರ ಅನ್ವಯವಾಗುತ್ತದೆ. ರೈತರ ಮಕ್ಕಳು ರೈತರ ಜಮೀನನ್ನು ಉಳಿಸಿಕೊಳ್ಳಬೇಕು. ಅದನ್ನು ಅಭಿವೃದ್ದಿಪಡಿಸಿ ಅವರಿಗೆ ಎಲ್ಲಾ ರೀತಿಯ ಅಭಿವೃದ್ಧಿಯಾಗುವ ವಿಚಾರದಲ್ಲಿ ಸರ್ಕಾರ ಎಲ್ಲಾ ರೀತಿಯ ಯೋಚನೆಯನ್ನು ಮಾಡಿ ಇವತ್ತು ಈ ತೀರ್ಮಾನವನ್ನು ತೆಗೆದುಕೊಂಡಿವೆ. ರೈತರಿಂದ ಕಿತ್ತುಕೊಳ್ಳಬೇಕು, ರೈತರಿಗೆ ಅನ್ಯಾಯ ಮಾಡಬೇಕು ಅವರನು ಬೀದಿಪಾಲು ಮಾಡಬೇಕು, ಯಾರೋ Real Estate ನವರಿಗೆ ಕೊಡಬೇಕು ಎಂದು ನಾವು ಹೇಳಿಲ್ಲ Real Estate ಎನ್ನುವ ಪದ ಇವತ್ತು SEZ ಎಂದು ಕೇಂದ್ರ ಸರ್ಕಾರ ತಂದಿದೆ. Developer, co-developer ಎಂದು ಹೇಳಿ. ಮಾನ್ಯ ರಮೇಶ್ ಕುಮಾರ್‌ವರು ಮಧ್ಯದಲ್ಲಿ ಹೇಳಿದಕ್ಕೆ, ಹೇಳಿದೆ ಅವರು ಹಿರಿಯರು ಅಲ್ಲವೆ? ಅವರ ಹತ್ತಿರ ನಾವು ಕಲಿಯುವುದು ತುಂಬಾ ಇದೆ.

ಅಧ್ಯಕ್ಷರು: ನನ್ನ ಮಾತನ್ನು ಸ್ವಲ್ಪ ಕೇಳಿ, ಆಮೇಲೆ ನೀವು ಹೇಳಿ, ಕೇಂದ್ರ ಸರ್ಕಾರದವರು SEZ ಗೆ ನಿಮ್ಮ proposal ಮೇಲೆ ಅನುಮತಿ ಕೊಡುತ್ತಾರೆ, ಇದೆಲ್ಲಾ ಸರಿ. ನಗರದ ಸುತ್ತಮುತ್ತಲು ಏಕೆ ಆಗಬೇಕು ಈ SEZ ಗಳು. ಈ ಕಟ್ಟುನಿಟ್ಟಾಗಿ ನಿಮ್ಮ ರಾಜ್ಯ ಸರ್ಕಾರ ನಗರದಿಂದ 30-40 ಕಿ.ಮೀ. ಒಳಗಡೆ SEZ ತರಬೇಡಿ, ಈಗ ಏನಾಗಿದೆ , ದೂರದಲ್ಲಿ barren land ಇದೆ. ಕೆಲವು ಕಡೆ ನದಿಗಳು ಹೋಗುತ್ತವೆ. ಎಲ್ಲಾ ನೀರಿನ ಅವಶ್ಯಕತೆ ಇದೆ. ಅಲ್ಲಿ infrastucture develop ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ, ಅಂತಹ ಕಡೆ ಮಾಡಿ, ಈಗ ಪತ್ರಿಕೆಯಲ್ಲಿ ಬರುವುದು ನೊಡಿದರೆ ಅದು ಸತ್ಯವಿದೆ. ಈಗ ಬೆಂಗಳೂರಿನಲ್ಲಿ Real Estate ಅವರು ಬರತಕ್ಕಂಥದ್ದು Real Estate ಗೋಸ್ಕರ ನೀವು Real Estate ನವರಿಗೆ ಸಹಾಯ ಮಾಡುವುದಕ್ಕೋಸ್ಕರವಾಗಿ ಸರ್ಕಾರದವರು ಆ ರೈತರ ಜಮೀನು ತೆಗೆದುಕೊಂಡು ಕೊಡತಕ್ಕಂಥದ್ದು ಇದೆಯಲ್ಲಾ ಅದು total ಆಗಿ ಬೇಡ. 40 ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ನಗರ ಇರಲಿ, ಅದನ್ನು ಬಿಟ್ಟು ದೂರ ಮಾಡಿ. ಏಕೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎನ್.ಎಸ್. ಭೋಸರಾಜು : ಮಾನ್ಯ ಅಧ್ಯಕ್ಷರೆ, ನಮ್ಮ ರಾಯಚೂರಿನಲ್ಲಿ ಗ್ರೋಥ್ ಸೆಂಟರ್ ಮಾಡಿದರು Central Government support ಮಾಡಿದರು. ಕೃಷ್ಣ ನದಿಯ ದಂಡೆಯಲ್ಲಿ 500-600 TMC ನೀರು ಕೆಳಗಡೆ ಹೋಗುತ್ತದೆ. ಅಲ್ಲಿ ಸಾಕಷ್ಟು ನೀರು ಇದೆ. ಕೆ.ಪಿ.ಸಿ. ಯವರ 1400 ಮೆಗಾವ್ಯಾಟ್ ವಿದ್ಯುತ್ ಸ್ಥಾವರ ಇವರ ಗ್ರೋಥ್ ಸೆಂಟರ್ ಪಕ್ಕದಲ್ಲಿಯೇ ಇದೆ. ಎಲ್ಲಾ facility ಇದೆ, ಹೈದ್ರಾಬಾದ್‌ಗೆ ಹೋಗಲು, ಬೆಂಗಳೂರಿಗೆ ಹೋಗಲು airport ವ್ಯವಸ್ಥೆ ಇದೆ. ಬಾಂಬೆ, ದೆಹಲಿ, ಬೆಂಗಳೂರಿಗೆ ರೈಲು ಇದೆ, ಎಲ್ಲಾ ರೈಲುಗಳು ರಾಯಚೂರು ಮೂಲಕ ಬರುತ್ತವೆ. ಅಲ್ಲಿಗೆ ಒಂದು Industry ಬರಲಿಲ್ಲ.

ಅಧ್ಯಕ್ಷರು: No, no, ಅಲ್ಲಿಗೆ ಬರಲಿಲ್ಲವೆಂದರೆ, ನಮ್ಮ ಹಳ್ಳಿಯಲ್ಲಿ ಹಿಂದೆ ತರುವವರು, ಹೈದ್ರಾಬಾದ್ ನೋಡು, ಮೈಸೂರು ನೋಡು, ಬಾಂಬೆ ನೋಡು, ಕಲ್ಕತ್ತ ನೋಡು, ಎಂದು ಅವರೆಲ್ಲಾ ಏನು ಮಾಡುತ್ತಾರೆಂದರೆ, Industries ನವರು ಹೇಳುತ್ತಾರೆಂದು ಅವರ ಕಾಲಿಗೆ ಬಿದ್ದು ನಮಗೆ ಎಲ್ಲಾ ಅನುಕೂಲತೆ ಮಾಡಿ ಕೊಡುತ್ತೇವೆಂದು ಮತ್ತು ಬೆಂಗಳೂರಿನ ಸುತ್ತಮುತ್ತ ಕೊಡುತ್ತೇವೆಂದು ಮಾಡುತ್ತಾರಲ್ಲಾ ಸ್ವಾಮಿ. ಈ ಬಗ್ಗೆ ಒಂದು ಸ್ಪಷ್ಟವಾದ ನೀತಿ ಮಾಡಿ. ಏಕೆ ಆಗುವುದಿಲ್ಲ? ರಾಯಚೂರು, ಗುಲ್ಬರ್ಗಾಕ್ಕೆ ಹೈದ್ರಾಬಾದ್ ಸಮಿಪ ಇದೆ, ಮಾಡಿ. I tell you, ಮದ್ರಾಸ್‌ನವರು ನಮ್ಮ ಬಾರ್ಡ್‌ರ್‌ದಲ್ಲಿ ಸಿಕ್ಕಾಪಟ್ಟೆ Industries ನ್ನು develop ಮಾಡಿದ್ದಾರೆ. ಎಲ್ಲಾ Infrastructure ಕೊಡುವುದು ಬೆಂಗಳೂರು ನಗರಕ್ಕೆ, ಆ ತರಹ ನೀವು ಗುಲ್ಬರ್ಗಾ ಬಾರ್ಡ್‌ರ್ ಏರಿಯಾಕ್ಕೆ ಮಾಡಿ. ಏಕೆ ಮಾಡುವುದಕ್ಕಾಗುವುದಿಲ್ಲ? ನೀವು ರಾಯಚೂರಿನಲ್ಲಿ ಮಾಡಿ. ಏಕೆ ಅಗುವುದಿಲ್ಲ?

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ನಮ್ಮ ಗುಲ್ಬರ್ಗಾದಲ್ಲಿ ಮಾಡಬೇಕು.

ಅಧ್ಯಕ್ಷರು : ನನಗೆ ಅನಿಸುತ್ತದೆ, ಯಾವುದೇ ಸರ್ಕಾರ ಬರಲಿ, ನೀವು ಈಗ ಕೈಗಾರಿಕೆ ಮಂತ್ರಿಯಾಗಿರಬಹುದು, ಮಾಡುವುದಕ್ಕೆ ರಾಜಕೀಯ ಇಚ್ಚಾಶಕ್ತಿ ಇಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ರಾಯಚೂರಿನಲ್ಲಿ ನಾವು ಮೊದಲ ಬಾರಿಗೆ ಕೈಗಾರಿಕೆ ಬಂಡವಾಳ ಹೂಡಿಕೆದಾರರ ಸಭೆಯನ್ನು ಮಾಡಿದೆವು. 12000 ಕೋಟಿ ರೂ. ಗಳನ್ನು ಹೂಡಿಕೆ ಮಾಡುತ್ತೇವೆಂದು ಹೇಳಿದರು. ಆ ಜಮೀನಿನ ಬಗ್ಗೆ ನಾವು ಪ್ರಥಮ ಬಾರಿಗೆ ಹೋಗಿ ಸಭೆಯನ್ನು ಮಾಡಿದೆವು. ಆ ಜಮೀನು 10 ವರ್ಷಗಳ ಹಿಂದೆ ಸ್ವಾಧೀನ ಮಾಡಿರತಕ್ಕಂಥದ್ದು. ನಾವು ಬೇಕಾಬಿಟ್ಟೆಯಾಗಿ ನಾವು ಆ ಭಾಗಕ್ಕೆ ಹೋಗಿಲ್ಲವೆಂದು ಏನು ಇಲ್ಲ. ಶಿವಮೊಗ್ಗಾದಲ್ಲಿ ಬಂಡವಾಳ ಹೂಡಿಕೆದಾರರ ಸಭೆಯನ್ನು ಮಾಡಿದೆವು. ಬೆಳಗಾಂನಲ್ಲಿ, ಮಂಗಳೂರಿನಲ್ಲಿ ಬಂಡವಾಳ ಹೂಡಿಕೆದಾರರ ಸಭೆಯನ್ನು ಮಾಡಿದೆವು. ಎಲ್ಲಾ ಕಡೆ ಕೂಡ ಬಂಡವಾಳ ಹೂಡಿಕೆದಾರರು ಬಂದಿದ್ದರು. ಜಮೀನನ್ನು ಭೂಸ್ವಾಧೀನ ಮಾಡಿದ್ದೆವು. ಆ ಭಾಗದಲ್ಲಿ ಕೂಡ ನಾವು ವಿಶೇಷವಾದ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಬೇರೆ ಬೇರೆ ಭಾಗದಲ್ಲಿ ಕೂಡ ಬಂಡವಾಳ ಹೂಡಿಕೆದಾರರನ್ನು ಅಲ್ಲಿ ಅಕರ್ಷಣೆ ಮಾಡುವುದಕ್ಕೆ ವಿಶೇಷವಾದ ಪ್ರಯತ್ನವನ್ನು ಮಾಡುವುದಕ್ಕೆ ಅಲ್ಲಿ ನಾವು infrastructure ನ್ನು ಒದಗಿಸುತ್ತೇವೆ. ನಾವು ಆ ಕಡೆ ಗಮನವನ್ನು ಹರಿಸಲಿಲ್ಲವೆಂದು ಎನೂ ಇಲ್ಲ.

ಅಧ್ಯಕ್ಷರು: ಬಂಡವಾಳ ಹೂಡಿಕೆದಾರರು ಇದ್ದಾರಲ್ಲಾ ಅವರು ಆ ಭಾಗಕ್ಕೂ ಸಹ ಬರಲಿಕ್ಕೆ ಸಿದ್ಧರಿದ್ದಾರಾ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಸಿದ್ದರಿದ್ದು, ಬಂಡವಾಳ ಹಾಕುತ್ತೇವೆಂದು ಅವರು ಬಂದಿದ್ದು.

ಅಧ್ಯಕ್ಷರು : ಯಾವ ಕಾರಣಕ್ಕಾಗಿ ಅವರು ಅಲ್ಲಿಗೆ ಹೋಗುತ್ತಿಲ್ಲ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಅವರು ಒಂದೇ ಸಲಕ್ಕೆ ಬರುವುದಿಲ್ಲ. ಅಲ್ಲಿ ಮೂಲಭೂತ ಸೌಲಭ್ಯಗಳು ಬೇಕು. ಅವರು ಇಲ್ಲಿಯವರೆಗೆ ಹೇಳಿದರು. ಏನೇನು ಬೇಕು, ಒಂದು Industry ಬರಬೇಕಾದರೆ, ಅಲ್ಲಿ ಶಾಲೆ ಬೇಕಾಗುತ್ತದೆ, ಆಸ್ಪತ್ರೆ ಬೇಕಾಗುತ್ತದೆ. ವಿಮಾನ ನಿಲ್ದಾಣ ಬೇಕಾಗುತ್ತದೆ. ರೈಲು ಸಂಚಾರದಿಂದ ಗೂಡ್ಸ್ ಹೋಗುವುದಕ್ಕೆ ಎಲ್ಲಾ ವ್ಯವಸ್ಥೆ ಬೇಕಾಗುತ್ತದೆ. ಈ ರೀತಿ ವ್ಯವಸ್ಥೆಗಳು ಇದ್ದಾಗ ಅಲ್ಲಿ ಕೈಗಾರಿಕೋದ್ಯಮಿಗಳು ಬರುವುದು. ಇವತ್ತು ನಾವು ಅವರಿಗೆ ಹೋಗಿ ಎಂದು ತಳ್ಳುವುದಕ್ಕಾಗುವುದಿಲ್ಲ. ನೀವು ಹೋಗಿ ಅಲ್ಲಿಯೇ ಮಾಡಿ ಎಂದರೆ ಆಗುವುದಿಲ್ಲ. ಇವತ್ತು ಕೋಲಾರದಲ್ಲಿ ಮಾನ್ಯ ರಮೇಶ್‌ಕುಮಾರ್‌ವರ ಜಿಲ್ಲೆ, ನರಸಾಪುರದಿಂದ 60 ಕಿ.ಮೀ. ದೂರದಲ್ಲಿ ಮತ್ತು ಮುಳಬಾಗಿಲಿನಲ್ಲಿ ಇವತ್ತು ನಾವು ಕೈಗಾರಿಕೆಯನ್ನು ಪ್ರವೇಶ ಮಾಡಿದ್ದೇವೆ. ತಮ್ಮ ಕ್ಷೇತ್ರದಲ್ಲಿ 2000 ಎಕರೆ ಜಮೀನನ್ನು acquire ಮಾಡುವುದಕ್ಕೆ ನಾವು ಪ್ಲಾನ್ ಮಾಡಿದೆವು. ನಾವು ಬೆಂಗಳೂರು ಸುತ್ತಮುತ್ತ ಇಲ್ಲಯೇ ಮಾಡಬೇಕೆಂದು ಏನೂ ಇಲ್ಲ. ತುಮಕೂರಿನಿಂದ ಆಚೆ ವಸಂತನರಸಾಪುರ, ಅಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡಿದೆವು. ಬೆಂಗಳೂರು ಸುತ್ತಮುತ್ತ ನಮ್ಮ ಉದ್ದೇಶ ಅಲ್ಲ ಮತ್ತು ಗುರಿಯೂ ಅಲ್ಲ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಗುಲ್ಬರ್ಗಾದಲ್ಲಿಯೂ ಮಾಡಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ತಾವು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ. ಇವತ್ತು ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಒಳ್ಳೆಯ ಸಲಹೆಯನ್ನು ಕೊಟ್ಟರು. ಬೇರೆಯವರು ಏನ್‌ಕರೇಜ್ ಮಾಡಿದರು. ನಾವು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅದು ಬರಬೇಕಲ್ಲವೇ? ಎಲ್ಲರ ಅಪೇಕ್ಷೆ ಏನೆಂದರೆ ಟಾಟಾ, ಬಿರ್ಲಾ ಬರಬೇಕು.

ಅಧ್ಯಕ್ಷರು : ನಂದಿಗ್ರಾಮದ ಘಟನೆಯಾಯಿತು. ಇದು ಆದ ಮೇಲೆ ಎಲ್ಲಾ ಕಡೆ ರೈತರ ವಿರೋಧ ಜಾಸ್ತಿಯಾಗಿದೆ. ಅದಕ್ಕಿಂತ ಹಿಂದೆ ಇಷ್ಟು ಇರಲಿಲ್ಲ. ಸಾಂಕ್ರಾಮಿಕ ರೋಗ ಹರಡಿದ ಹಾಗೆ ನಂದಿಗ್ರಾಮವನ್ನು ಹರಡಿಸಬಿಡುತ್ತಿದ್ದರು. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ, ಒಂದು political consensus ಬೇಕು. ಈಗ ಏನಾಗಿದೆ ಅಂದರೆ ನೀವು ಅಕ್ವೈರ್ ಮಾಡುತ್ತೀರಿ, ಅದಕ್ಕೆ ನೀವು ಯೋಗ್ಯವಾದ ದರವನ್ನು ಕೊಡಬೇಕು.

ರೈತರ ಮಕ್ಕಳಿಗೆ ನೀವು ಒಂದು rehabilitation ಮಾಡಬೇಕು. ಅದಕ್ಕೆ ನಿಮಗೆ ಬೇಕಾದ infrastructure ಬೇಕು. ಅವೆಲ್ಲವನ್ನು ನೀವು identify ಮಾಡಬೇಕು. ಅದನ್ನು ಏತಕ್ಕಾಗಿ ನೀವು ಮಾಡುತ್ತಿಲ್ಲ?

ಶ್ರೀ ಆರ್.ವಿ. ದೇಶಪಾಂಡೆ : ಅದರ ಬಗ್ಗೆ ನಾನು ಸಲಹೆ ಮಾಡಿದ್ದೇನೆ. ತಾವು ಕೇಳಲಿಲ್ಲವೆಂದು ಕಾಣಿಸುತ್ತದೆ. ನಾನು ಹೇಳಿದೆ, ಬೆಂಗಳೂರಿನಿಂದ ಇದು ದೂರವಾಗಲಿ, barren ಲ್ಯಾಂಡ್‌ನಲ್ಲಿ ಮಾಡಲಿ, SEZ ನಲ್ಲಿ land acquire ಮಾಡುವುದಕ್ಕೆ ಬರುವುದಿಲ್ಲ. SEZ ಬಗ್ಗೆ ಕೇಂದ್ರ ಸರ್ಕಾರದವರು ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಅಷ್ಟೇ ಅಲ್ಲ, ಅದು ರೈತರಿಗೆ ಕೈಗಾರಿಕೆಯ ಬಗ್ಗೆ ಅವರಿಗೆ ಮಾಲೀಕರುಗಳನ್ನು ಮಾಡಿ. ಆ ತರಹ ಒಂದು ಬುನಾದಿಯಾಗಲಿ ಎಂದು ಸಲಹೆ ಕೊಟ್ಟಿದರು. ತಾವು ಕೇಳಿರಬಹುದು. ರಾಯಚೂರು growth centre, ಏಕೆ ಕೈಗಾರಿಕೆಗಳು ಬರುವುದಿಲ್ಲ. ಅಲ್ಲಿ ಒಳ್ಳೆಯ ಸೆಂಟರ್ ಇದೆ. ಅಲ್ಲಿ ನೀರು ಮತ್ತು ವಿದ್ಯುತ್ ಇದೆ. ಅಲ್ಲಿರುವಂತಹ ಸಮಸ್ಯೆ ಏನೆಂದರೆ, ಯಾರನ್ನು ಕೂಡ compulsory ಯಾಗಿ ಅಲ್ಲಿಗೆ ಹೋಗಿ ಎಂದು ಹೇಳುವುದಕ್ಕಾಗುವುದಿಲ್ಲ. ಯಾರು ಹಣ ಹಾಕುತ್ತಾರೆ, he has a Constitutional right....

ಅಧ್ಯಕ್ಷರು : I agree ಎಲ್ಲ Infrastructure ಇದ್ದರೆ ಏಕೆ ಬರುತ್ತಿಲ್ಲ ಅವರು?

ಶ್ರೀ ಆರ್.ವಿ. ದೇಶಪಾಂಡೆ : infrastructure ಇದೆ. ನೀರು ಇದೆ, ಕೆಪಿಸಿಯವರು ವಿದ್ಯುತ್ ಕೊಡುತ್ತಾರೆಂದರು, ಈ ತರಹ ಡೆವಲಪ್ ಆಗಿದೆ ಆದರೆ ಪ್ರಶ್ನೆ ಏನು ಇದೆ, ಚೆನ್ನಾಗಿದ್ದರೆ ಇವತ್ತು ಮುಂಜಾನೆ ಹೋಗಿ.....

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ತಾವು ಏನಾದರೂ ತಮ್ಮ ಪವರ್ ಸರಿಯಾಗಿತ್ತು ಚೆನ್ನಾಗಿ ಚಲಾಯಿಸುತ್ತಿದ್ದೀರಿ. ತಾವು ಏನು Infrastructre ಬಗ್ಗೆ ಹೇಳುತ್ತಿದ್ದಿರಲ್ಲಾ, ಅದನ್ನು ಮಾಡಿದ್ದರೆ ಯಾರು ಕೂಡ ಇವತ್ತು ಬೆಂಗಳೂರು ಸುತ್ತಮುತ್ತ ಇರುತ್ತಿರಲಿಲ್ಲ. ಅದಕ್ಕೆ ಕಾರಣ ಮಾನ್ಯ ರಮೇಶ್ ಕುಮಾರ್‌ರವರು. ಅವರು ಸಭಾಧ್ಯಕ್ಷರಾಗಿ ಇಲ್ಲಿ ಕೆಲಸ ಮಾಡುತ್ತಿದ್ದರು. ಆ ಕಾಲದಲ್ಲಿ ಇವರು ಯೋಚನೆ ಮಾಡಿ ಎಲ್ಲಾ ಕಡೆಯಲ್ಲಿ ಹೆಲಿಪ್ಯಾಡ್ಸ್ ನಮ್ಮ ವಿಮಾನ ನಿಲ್ದಾಣಗಳು, ರೈಲು ಸಂಚಾರಗಳು ರಸ್ತೆಗಳು, ಇವೆಲ್ಲದರ ಬಗ್ಗೆ ಅವತ್ತು ಯೋಚನೆ ಮಾಡಿದ್ದರೆ ಚೆನ್ನಾಗಿತ್ತು. ಇವತ್ತು ನಾವು ಯೋಚನೆ ಮಾಡುತ್ತಿದ್ದೇವೆ. ನಿಜವಾಗಿಯೂ ಕೂಡ ಆಗಬೇಕಾಗಿದೆ. ತಮ್ಮ ಸಲಹೆ ಉತ್ತಮವಾಗಿದೆ. ನಿಜವಾಗಲೂ ಕೂಡ ಅವತ್ತು ಮಾಡಿದ್ದರೆ, ಅವತ್ತಿಂದ ಪ್ರಾರಂಭ ಮಾಡಿಕೊಂಡು ಬಂದಿದ್ದರೆ ಇವತ್ತು ಈ ಸಮಸ್ಯೆ ಈ ಆಪಾದನೆಗಳು ನಿಲ್ಲುತ್ತಿತ್ತು. ಅವತ್ತಿನಿಂದಲೂ ಕೂಡ ನಾವುಗಳು ಮಾಡಲಿಲ್ಲ.

ತಮ್ಮ ತರಹ ಸಲಹೆಗಳು ಅವತ್ತು ಬಂದು ಇಲ್ಲಿರುವವರು ಮಾಡಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನನ್ನ ಹತ್ತಿರ ವಿಮಾನ ಕೂಡ ಇರಲಿಲ್ಲ. ಷಿಪ್ ಕೂಡ ಇರಲಿಲ್ಲ. ನನ್ನ ಹತ್ತಿರ ರೈಲು ಒಂದೇ ಇತ್ತು. ನಾವು ಆವಾಗವಾಗ ಬಿಡುತ್ತಿದೇವು.

ಶ್ರೀ ಆರ್.ವಿ ದೇಶಪಾಂಡೆ : Government of India ಎಲ್ಲಾ concession ತಂದಿದೆ. ನಮಗೆ, Entry tax concession ಇರಬಹುದು, ನಾನು ಏನು ಸಜೆಸ್ಟ್ ಮಾಡಿದೆ ಎಂದರೆ, backward area ರಾಯಚೂರು, ಗುಲ್ಬರ್ಗಾ, ಕೊಪ್ಪಳ, ಈ Backward area ಗಳು ಇದೆಯಲ್ಲಾ ಅಲ್ಲಿ ಕೈಗಾರಿಕಾ ವಲಯಕ್ಕೆ ಜನರು ಹೋಗಬೇಕಾದರೆ, incentives ಕೊಡುವುದಕ್ಕೆ ಸಾಧ್ಯವಿದೆಯಾ ನೋಡಿ. ಆ ಭಾಗದ ಅಭಿವೃದ್ಧಿಯಾಗುತ್ತದೆ. ಆ ಭಾಗದವರಿಗೆ ಉದ್ಯೋಗವಕಾಶಗಳು ಸಿಗುತ್ತದೆ. ಕೈಗಾರಿಕೆಗಳು ಬೆಳೆಯಬೇಕು.. ಬೆಳೆದ ಮೇಲೆ ಬಡವರು ಕಡಿಮೆಯಾಗುತ್ತಾರೆ. ಆ ದೃಷ್ಟಿಯಿಂದ ತಾವು examine ಮಾಡಬೇಕು. ಮಾನ್ಯ ರಮೇಶ್‌ಕುಮಾರ್‌ರವರು, ಮಾನ್ಯ ಅಧ್ಯಕ್ಷರು ಏನು ಹೇಳಿದರು, ಅದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಹಾಗಾಗಿ ಮೂಲಭೂತಸೌಕರ್ಯಗಳನ್ನು ನಿರ್ಮಾಣ ಮಾಡುವುದಕ್ಕೆ ಏನಾಗುತ್ತದೆ, ಪ್ರತಿಯೊಂದರ ಬಗ್ಗೆಯೂ transparency ಬೇಕು. ಯಾವ ಬಜೆಟ್‌ನಲ್ಲಿ ಕೊಟ್ಟರೆ ಗಲಾಟೆ power ಗೆ ಇಷ್ಟು ಹಣವನ್ನು ಅವರು ತಿಂದುಬಿಟ್ಟರಲ್ಲಾ ನಮ್ಮಲ್ಲಿ ಭಿನ್ನಾಭಿಪ್ರಾಯ ಇದೆ.

ಅಧ್ಯಕ್ಷರು : ಮಾನ್ಯ ದೇಶಪಾಂಡೆಯವರೆ,ಮ ನಾನು ಏನು ಹೇಳುವುದೇನೆಂದರೆ, political parties ಗಳಲ್ಲಿ consensus ಇರಬೇಕು. ಈಗ ರೈತ ಸಂಘಟನೆಗಳು ಇವೆ. ನಿಮ್ಮಲ್ಲಿ ಏನಾಗಿದೆ ಎಂದರೆ ಏಕಭಿಪ್ರಾಯವಿದ್ದರೆ ಬಹಶಃ ಏನು ಅಡ್ಡಿ ಅಗುವುದಿಲ್ಲ. ಜನರು ಅರ್ಥಮಾಡಿಕೊಳ್ಳುತ್ತಾರೆ. ರೈತರು ಅರ್ಥಮಾಡಿಕೊಳ್ಳುತ್ತಾರೆ. ಆದರೆ ನಿಮ್ಮಲ್ಲಿಯೇ consensus ಇಲ್ಲವಲ್ಲಾ? ನೀವು ಏನೂ ಇದರಲ್ಲಿ ಮೀನು ಹಿಡಿಯುವುದಕ್ಕೆ ಹೋಗುತ್ತಿರಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ಹಾಗಾಗಿ ಏನಾಗಿದೆ ಸಾರ್. ಅಪಾದನೆಗಳು ಮಾಡುವುದು ಒಂದು ಕೆಲಸವಾಗಿಬಿಟ್ಟಿದೆ, ಆಪಾದನೆಗಳನ್ನು ಮಾಡುವಾಗ ಜವಾಬ್ದಾರಿಯಿಂದ ಮಾಡಬೇಕು. ಅದಕ್ಕೆ transperent ಇರಬೇಕು. ಅನಾವಶ್ಯಕವಾಗಿ ಯಾರೂ ಚಾರಿತ್ರ್ಯವಧೆ ಮಾಡಬಾರದು. ಜನರು ವಿಚಾರ ಮಾಡುತ್ತಾರೆ, there is pleaure ಚರ್ಚೆ ಮಾಡುತ್ತಾರೆ. ನನಗೆ ಇಲ್ಲಿ ಯಾರಾದರೂ ಅಟ್ಯಾಕ್ ಮಾಡಬೇಕಾದರೆ pleasure ಇರಬೇಕಲ್ಲ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ದೇಶಪಾಂಡೆಯವರೆ....

ಶ್ರೀ ಆರ್.ವಿ. ದೇಶಪಾಂಡೆ : Constructive criticism ಆಗಬೇಕಾಗುತ್ತದೆ.. ಕಷ್ಟಪಟ್ಟು ಕೆಲಸವನ್ನು ಮಾಡುವಾಗ ಅಭಿನಂದನೆಯನ್ನು ಕೂಡ ಮಾಡಬೇಕಾಗುತ್ತದೆ. ಆ ಧ್ಯೇಯ ನಮ್ಮಲ್ಲಿರಬೇಕಾಗುತ್ತದೆ. ಅದಕ್ಕೆ ದಾರಿಗಳು ಇವೆ. political consensus ಕೂಡ ಇರಬೇಕು. ಜಮೀನುಗಳು ಆದಷ್ಟು ಮಟ್ಟಿಗೆ ಅಕ್ವೈರ್ ಮಾಡಬಾರದು. ಬೇರೆ ಲ್ಯಾಂಡ್ಸ್‌ನ್ನು ತೆಗೆದುಕೊಳ್ಳಬೇಕು. ಆದಷ್ಟು ಮಟ್ಟಿಗೆ ನಾವು ದೂರ ಹೋಗಬೇಕು. ಸಾಧ್ಯವಾದರೆ ರೈತರ ಕಡೆಯಿಂದ ಜಮೀನು ಬಂದರೆ ಅದರಲ್ಲಿ ರೈತರನ್ನು ಇನ್‌ವಾಲ್ವ್ ಮಾಡಿ ಸಾಧ್ಯವಾದರೆ. ಮಾಲೀಕರನ್ನಾಗಿ ಮಾಡಲು ಸಾಧ್ಯವೇ ಎಂದು ನೋಡಬೇಕು. ಇವೆಲ್ಲವನ್ನು ಕೂಡ ನಾವು ಪುನಃ ಹೇಳಿದ್ದೇನೆ. ಹಾಗಾಗಿ ಕೈಗಾರಿಕೆಗಳು ರಾಜ್ಯದ ಎಲ್ಲ ಕಡೆಯಲ್ಲಿ ಬಂದಾಗ ರಾಜ್ಯವು ಸಮವಾಗಿ ಪ್ರಗತಿಯಾಗುವುದಕ್ಕೆ ಸಾಧ್ಯ. ಇಲ್ಲಾ ಎಷ್ಟೇ ಮಾಡಿದರು ಡಾ. ನಂಜುಂಡಪ್ಪನವರ ವರದಿ ಕೇವಲ ಹೈಸ್ಕೂಲ್ ಮತ್ತು hospital ನಿಂದ ಸುಧಾರಿಸುವುದಕ್ಕಾಗುವುದಿಲ್ಲ. ಅಲ್ಲಿ ವ್ಯಾಪಾರಗಳು ಬೆಳೆಯಬೇಕು. ಕೈಗಾರಿಕೆಗಳು ಬೆಳೆಯಬೇಕು. ಅಲ್ಲಿ ಮೂಲಭೂತ ಸೌಕರ್ಯಗಳು ಬೆಳೆಯಬೇಕು. ಅವಾಗ prosper-ity ಬರುವುದಕ್ಕೆ ಸಾಧ್ಯವಾಗುತ್ತದೆ. ಒಂದು ರಾಜ್ಯಕ್ಕೆ prosperity ಬರಬೇಕಾದರೆ, ರಾಜ್ಯವು ಬೆಳೆಯಬೇಕು. High school & Hospitals ಗಳು ಬೇಕು. ನಾನು ಇಲ್ಲವೆಂದು ಹೇಳುವುದಿಲ್ಲ. ಆದರಿಂದ prosperity ತರುವುದಕ್ಕೆ ಆಗುವುದಿಲ್ಲ. ಉದ್ಯೋಗವಾಕಾಶಗಳು ಬೇಕಲ್ಲ. ಇವತ್ತು ತಾವು ಕೃಷಿಯನ್ನು ನೋಡಿ, ಹೊಸ ಯುವಕರು ಕೃಷಿಗೆ ಹೋಗುವುದಕ್ಕೆ ರೆಡಿ ಇಲ್ಲ. ಇವತ್ತು ಕೃಷಿ GDP growth 1.52% contribution ಇದೆ. ಪ್ರತಿವರ್ಷ ಕೃಷಿ going down ಇದೆ. ಇಂತಹ ಪರಿಸ್ಥಿತಿಯಲ್ಲಿ food processing industry ನಾವು ಹೆಚ್ಚು ಮಾಡುವುದಕ್ಕೆ ಸಾಧ್ಯ. ಯಾವ ಪ್ರಕಾರವಾಗಿ ರೈತರಿಗೆ value additional ನಲ್ಲಿ ನಾವು ಸಹಾಯ ಮಾಡುವುದಕ್ಕೆ ಸಾಧ್ಯವಿದೆ. ಯಾವ ಪ್ರಕಾರವಾಗಿ ಮಾರ್ಕೆಟಿಂಗ್ ವ್ಯವಸ್ಥೆ ಸರಿಮಾಡುವುದಕ್ಕೆ ಸಾಧ್ಯವಿದೆ. ಇವತ್ತು fertiliser ಬಗ್ಗೆ position ನೋಡಿ ಸಾರ್. Fertilizer ನಲ್ಲಿ ಈಗ Andhra Pradesh ದಲ್ಲಿ 134.80 ಕೆ.ಜಿ. per hectre con-sumption ಇದೆ. Tamil Nadu ನಲ್ಲಿ 112.51 ಕೆ.ಜಿ. per hectre consumption ಕರ್ನಾಟಕದಲ್ಲಿ fertilizer consumption is 74.88 ಕೆ.ಜಿ. ಇದೆ. ಏಕೆ ಇದನ್ನು ನಾನು ಮಾಡಿದ್ದೇನೆಯೇ? ಉದಾಸಿಯವರು ಮಾಡಿದ್ದಾರೆಂದು ಎಂದು ನಾನು ಅಪಾದನೆಯನ್ನು ಮಾಡುವುದಿಲ್ಲ. ನಾವು ಕೃಷಿಯನ್ನು ಬೆಳೆಸುವುದಕ್ಕೆ ಯಾವ ರೀತಿಯಾಗಿ priority ಯನ್ನು ಕೊಡಬೇಕಾಗಿತ್ತು. ಅದನ್ನು ಕೊಟ್ಟಿಲ್ಲವೆಂದು ಹೇಳುವುದಿಲ್ಲ. ಆದರೆ ಅದಕ್ಕೆ priority

ಯನ್ನು ಕೊಡಬೇಕಾಗಿತ್ತು. ಕೃಷಿಪ್ರಧಾನವಾದ ರಾಷ್ಟ್ರವೆಂದು ಹೇಳುತ್ತೇವೆ, ಇದರ ಬಗ್ಗೆ ನಾವು ಚಿಂತನೆಯನ್ನು ಮಾಡಬೇಕಾಗಿತ್ತು. ರಾಜ್ಯದಲ್ಲಿ ಹಲವಾರು ಕಡೆಯಲ್ಲಿ fertilizer ಗಳು ಇಲ್ಲ. ಪ್ರೈವೇಟ್ ವ್ಯಾಪಾರಸ್ಥರಿಂದ ರೈತರಿಗೆ ಕಷ್ಟವಾಗುತ್ತಿದೆ. ನಾನು ಏನು ಹೇಳುತ್ತೇನೆಂದರೆ, ಇವೆಲ್ಲವೂ ನಿಜ, ನಾವು ನಂಜುಂಡಪ್ಪನವರ ಕಮಿಟಿ ವರದಿಯನ್ನು implement ಮಾಡಬೇಕು. imbalance ಇರುವುದಲ್ಲಾ ನಿಜ. ಅದಕ್ಕೆ ಮುಖ್ಯವಾಗಿ imbalance ಹೋಗಬೇಕಾದರೆ ಕೈಗಾರಿಕೆ ವ್ಯಾಪಾರ, ಕೃಷಿ, ತೋಟಗಾರಿಕೆ ಇಡೀ ರಾಜ್ಯದಲ್ಲಿ ಎಲ್ಲಾ ಕಡೆಯಲ್ಲಿ ಬೆಳೆಯಬೇಕು. ಜನರ ಕೈಯಲ್ಲಿ ಹಣ ಚಲಾವಣೆಯಾಗಬೇಕು. South Canara ಎಲ್ಲಾ prosperity ಇದೆ. ಶ್ರೀನಿವಾಸ ಮಲ್ಯ, ಟಿ.ಎ. ಪೈ, ಟಿ.ಎಂ. ಪೈ ಅವರೆಲ್ಲರನ್ನು ನೆನೆಸಬೇಕಲ್ಲವೇ? Education Banking, Industry, Port, Airport, ಅದೇ ಪ್ರಕಾರ ನಾನು ಯಾರ ಮೇಲೆ ಅಪಾದನೆಯನ್ನು ಮಾಡಿ ಇಂತಹವರು ಮಾಡಿಲ್ಲವೆಂದು ಹೇಳುವುದಕ್ಕಿಂತ ನಾವೆಲ್ಲರೂ ಕೂಡಿ ಮಾಡಬೇಕೆಂದು ಹೇಳುತ್ತಿದ್ದೇನೇಯೇ, ವಿನಃ ಟೀಕೆ ಟಿಪ್ಪಣಿಗೆ ಹೋಗುವುದಿಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ತಮ್ಮ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದೀರಿ. ಅವರು ಮತ್ತು ನಾವೆಲ್ಲರೂ ಸೇರಿ ಒಮ್ಮತದಿಂದ ಈ ಕೈಗಾರಿಕಾ ನೀತಿಯನ್ನು ರೂಪಿಸುವ ಬಗ್ಗೆ ಈ ಸರ್ಕಾರ ಬದ್ಧವಾಗಿತ್ತು ನಾವು ಯಾವುದಕ್ಕೂ ಕೂಡ ವಿರೋಧವಿಲ್ಲ. ಕೇಂದ್ರ ಸರ್ಕಾರಕ್ಕೂ ಕೂಡ ಅದೇ ರೀತಿಯಾಗಿ ಅನ್ವಯವಾಬೇಕಾಗುತ್ತದೆ. ಬೇರೆ ಬೇರೆ ರಾಜ್ಯಗಳಿಗೆ ಒಂದು ರೀತಿ, ನಮ್ಮ ರಾಜ್ಯಕ್ಕೆ ಒಂದು ರೀತಿಯಾದ ಕೈಗಾರಿಕೆಗಳ ಪರಿಸ್ಥಿತಿ ಏನಾಗುತ್ತದೆಂದು ತಮಗೆ ಗೊತ್ತಿದೆ. ಅದು SEZ ಅಥವಾ ಬೇರೆ ಇರಬಹುದು. ದೇಶದಲ್ಲಿ ಎಲ್ಲಾ ರಾಜ್ಯಗಳಲ್ಲಿ ಒಂದೇ ನೀತಿಯನ್ನು ತರುವಂತಹ ಪ್ರಯತ್ನವನ್ನು ನಾವು ಮಾಡ ಬೇಕಾಗುತ್ತದೆ. ಅಧ್ಯಕ್ಷರು ಸಲಹೆ ಕೊಟ್ಟಂತೆ political consensus ಇರಬೇಕಾಗುತ್ತದೆ. Government is ready. ನಾವು ರೆಡಿ. ಇದ್ದೇವೆ. ತಾವು experience person ಇದ್ದೀರಿ. industries ನಲ್ಲಿ ತಮ್ಮ ನೇತೃತ್ವದಲ್ಲಿ ಒಂದು ಸಭೆಯನ್ನು ಕರೆಯಿರಿ. ನಾವು ತಯಾರಿದ್ದೇವೆ. ಎಲ್ಲೆಲ್ಲಿ ಕೈಗಾರಿಕೆಗಳನ್ನು ಯಾವ ರೀತಿಯಾಗಿ ಬೆಳೆಸಬೇಕು. ಎಲ್ಲಿ ಯಾವ ಜಮೀನುಗಳನ್ನು ತೆಗೆದುಕೊಳ್ಳಬೇಕು. ಯಾವ ರೀತಿಯಾಗಿ ಅಭಿವೃದ್ಧಿಪಡಿಸಬೇಕು. ಎಂದು Consensus ನಿಂದ ಹೋಗೋಣ. ರೈತರ ಹಿತವನ್ನು ಕಾಯುವುದರಲ್ಲಿ ಅವರಿಗೆ ಅನ್ಯಾಯ ಮಾಡುವುದಕ್ಕೆ ಸರ್ಕಾರ ತಯಾರು ಇಲ್ಲ. ಅದಕ್ಕೋಸ್ಕರ ಮಾನ್ಯ ರಮೇಶ್ ಕುಮಾರ್ ರವರು ದೇಶಪಾಂಡೆಯವರು ಏನು ಹೇಳಿದ್ದಾರೆ, ಅದಕ್ಕೆ ನಾವು ಬದ್ಧರಾಗಿದ್ದೇವೆ.

ಅಧ್ಯಕ್ಷರು: ಎಲ್ಲಾ political party ಯವರು ಇದ್ದಾರಲ್ಲಾ, ಮಂತ್ರಿಗಳೇ ಅವರನ್ನು ಕರೆದು ಒಂದು consensus ಗೆ ಬನ್ನಿ, ಚರ್ಚೆ ಮಾಡಿ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ದೇಶಪಾಂಡೆಯವರು ಅನುಭವದ ಹಿನ್ನೆಲೆಯಲ್ಲಿ industries ಬಗ್ಗೆ ಬಹಳ ಉತ್ತಮವಾದಂತಹ ಸಲಹೆಗಳನ್ನು ಕೊಡುತ್ತಿದ್ದಾರೆ. ಈ SEZ ಬಗ್ಗೆಯೂ ಕೂಡ ತಮಗೆ ಎಷ್ಟು ಅತಂಕಗಳು ಕಾಡುತ್ತಿದೆ, ಇಲ್ಲಿ ಅನೇಕರಿಗೆ ಆ ಅತಂಕ ಕಾಡುತ್ತಿದೆ. ಮಾನ್ಯ ಗೋವಿಂದಾಚಾರ್ಯರು ಬೆಂಗಳೂರಿಗೆ ಬಂದಿದ್ದರು. ಅವರು ಬಹಳ ಹಿರಿಯ ಅರ್ಥಿಕ ತಜ್ಞರು, ಬಹಳಷ್ಟು ಜನ ಬಿಜೆಪಿಯವರು ಅವರ ಜೊತೆಯಲ್ಲಿ ಕೆಲಸ ಮಾಡಿದಂತವರುಗಳಿಗೆ ಅನುಭವವಿದೆ. ಅವರ SEZ ಕಲ್ಪನೆಯನ್ನು ನಾನು ಪೇಪರ್‌ನಲ್ಲಿ ಓದಿದ್ದೇನೆ. ಇವತ್ತು ಚೈನಾ ದೇಶಕ್ಕೆ ನಾನು ಹೋದಾಗಲೂ ಕೂಡ ಅಲ್ಲಿ ಕೃಷಿಯೂ ಕೂಡ ಇವತ್ತು ಲಾಭದಾಯಕವಾಗಿ ಉಳಿದಿಲ್ಲ. ಕೃಷಿಯನ್ನು ಲಾಭದಾಯಕವಾಗಿ ಮಾಡುವುದಕ್ಕೋಸ್ಕರ ಗೋವಿಂಧಾಚಾರ್ಯರು ಈ ಕೃಷಿ ಆಧಾರಿತ ಉತ್ಪನ್ನಗಳ ಒಂದು ಉತ್ಪಾದನೆಯನ್ನು ಮಾಡುವುದಕ್ಕೆ ಒಂದು SEZ ನ್ನು ಮಾಡಬೇಕೆಂದು ಉತ್ತಮವಾದಂತಹ ಸಲಹೆಯನ್ನು ಕೊಟ್ಟಿದ್ದಾರೆ. ಇದು ಗಾಂಧಿ ದೇಶ, ಅವರು ಈ ದೇಶಕ್ಕೆ ಇಂತಹ ಉತ್ತಮವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಬಹಳ ಚಿಂತಕರಾಗಿದ್ದಾರೆ. ಆ ಸಲಹೆಯ ಬಗ್ಗೆ ಮಾನ್ಯ ದೇಶಪಾಂಡೆಯವರಿಗೆ ಮತ್ತು ನಮ್ಮ ಮಂತ್ರಿಗಳಿಗೆ ಗೊತ್ತಿದ್ದರೆ ನಮಗೆ ವಿಷಯವೇನೂ ಸಹ ಗೊತ್ತಿಲ್ಲ. ಆ ವಿಷಯದ ಬಗ್ಗೆ ಏನಾದರೂ ಗೊತ್ತಿದ್ದರೆ ಅದರ ಮೇಲೆ ನಾವು ಏಕೆ ಚಿಂತೆಯನ್ನು ಮಾಡಬಾರದು? ಏಕೆ ಗೋವಿಂದಾಚಾರ್ಯರವರ ಕಲ್ಪನೆಯಲ್ಲಿ ನಾವು ಎಸ್.ಇ.ಜೆಡ್ ಮಾಡಬಾರದು? ಕೇವಲ ನಾವು ಉದ್ಯೋಗಾವಕಾಶವನ್ನು ಇಟ್ಟುಕೊಂಡು....

ಶ್ರೀ ಆರ್.ವಿ ದೇಶಪಾಂಡೆ : Agriculture based processing industries, food parks ನಾವು ಮಂಜೂರು ಮಾಡಿದ್ದೇವೆ.

ಶ್ರೀ ಬಿ.ಆರ್. ಪಾಟೀಲ್ : ಈಗ ಗೋವಿಂದಾಚಾರ್ಯರು ಎಸ್.ಇ.ಜೆಡ್. ಕಲ್ಪನೆ ಕೊಟ್ಟಿದ್ದಾರೆ, ತಮಗೆ ಅದರ ಬಗ್ಗೆ ಏನಾದರೂ ಗೊತ್ತಿದೆಯೇ, ಅದನ್ನೇನಾದರೂ ಮಾಡಲಿಕ್ಕೆ ಸಾಧ್ಯತೆಯಿದೆಯೇ? ಏಕೆಂದರೆ ಗೋಂವಿಂದಾಚಾರ್ಯರು ಈ ವಿಷಯದ ಬಗ್ಗೆ ಬಹಳ ಚಿಂತನೆ ಮಾಡುತ್ತಾರೆ.

ಶ್ರೀ ಆರ್.ವಿ ದೇಶಪಾಂಡೆ : ಈಗ ನಾನು Infrastructure ಬಗ್ಗೆ ಕೆಲವು ವಿಚಾರಗಳನ್ನು ಹೇಳುತ್ತೇನೆ. Infrastructure ಅನ್ನು ಸರ್ಕಾರದಲ್ಲಿ ಯಾರು head ಮಾಡುತ್ತಾರೆ. ಗೊತ್ತಿಲ್ಲ. ಮಾನ್ಯ ಉಪಮುಖ್ಯಮಂತ್ರಿಗಳೇ? ಶ್ರೀರಾಮುಲುರವರು ಹೆಡ್

ಮಾಡುತ್ತಾರೆಯೇ? ಸರಿ, ಹಾಗಾಗಿ ಏನು ಹೇಳುತ್ತಾರೆಂದರೆ, Infrastructure development department is relatively a new and small department of Government ಎಂದು. ಇದು ಇಷ್ಟು ಸಣ್ಣ ಇಲಾಖೆ, ಸರ್ಕಾರದಲ್ಲಿ ಎಲ್ಲಾ ಇಲಾಖೆಗಳೂ important ಅದರಲ್ಲಿಯೂ Infrastructure development department is very important. ಬಹಳ ಸಣ್ಣ ಇಲಾಖೆಯೆಂದು ಈ ರಿಪೋರ್ಟ್‌ನಲ್ಲಿ ಹೇಳುತ್ತಾರೆ. ಇವತ್ತು ಈ department ಅನ್ನು ನೀವು activate ಮಾಡಿದರೆ, ತಾವು ಮಾಡುತ್ತಿದ್ದೀರಿ, you have given some budget support also, ಹಾಗೆ ಮಾಡಿದರೆ ನಿಮ್ಮ ಕೈಗಾರಿಕೆಗಳು ಹೆಚ್ಚಾಗಿ ನಿಮ್ಮ ವ್ಯಾಪಾರ ಬೆಳೆಯುತ್ತವೆ. ನಾನು ಒಂದು ಮಾತು ಹೇಳುತ್ತೇನೆ, ಯಾರು ತಪ್ಪು ತಿಳಿದುಕೊಳ್ಳಬಾರದು. ನನ್ನ ಅನುಭವದ ಮಾತು ಇದು. ಯಡಿಯೂರಪ್ಪನವರು ಹಲವಾರು ಯೋಜನೆಗಳನ್ನು ತಂದಿದ್ದಾರೆ. ಆ ಯೋಜನೆಗಳನ್ನು ಯಾವ ಬೇಸಿಸ್ ಮೇಲೆ ತಂದಿದ್ದಾರೆ? Resource, Tax ನಿಂದ ಬಂತು. ಎಲ್ಲಿಂದ ಬಂತು? it has come from agriculture industry.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : (ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):- Resource mobilize ಎಂದು ಹೇಳುತ್ತಾರೆ, ನಮ್ಮಿಬ್ಬರನ್ನು ನೋಡಿದರೆ ರಮೇಶ್ ಕುಮಾರ್ ರವರಿಗೆ ಭಯವಾಗುತ್ತಿದೆ. ನೀವು resource mobilization ಬಗ್ಗೆ ಹೇಳಿ ಮುಗಿಸಿ.

ಶ್ರೀ ಆರ್.ವಿ ದೇಶಪಾಂಡೆ : Resource ಎಲ್ಲಿಂದ ಬಂತು, Agriculture and Industries departments ಅನ್ನು close ಮಾಡಿದರೆ, Agricultue and Industries department ಬೇಡವೆಂದು ಹೇಳಿದರೆ, you will not be able to present the budget next time. ನೀವು Excise ತೆಗೆದುಕೊಳ್ಳಿ Industries ತೆಗೆದುಕೊಳ್ಳಿ, whatever you take, ಕೈಗಾರಿಕೆ, ಕೃಷಿ, ವ್ಯಾಪಾರ ಬೆಳೆದಾಗ ಮಾತ್ರ ರಾಜ್ಯ ಬೆಳೆಯಲಿಕ್ಕೆ ಸಾಧ್ಯವಾಗುತ್ತದೆ. Where is the money? ಎಲ್ಲಿಂದ ಹಣ ತರುತ್ತೀರಿ? we should not be hesitant in encouraging the industries. ಹಾಗಾಗಿ ನಾನು ಹೇಳಿದ ಹಾಗೆ balancing ಇರಬೇಕು. You have to be very careful ಎಲ್ಲಿ ಬರಬೇಕು? ಹಿಂದುಳಿದ ಪ್ರದೇಶದಲ್ಲಿ ಬರಲಿಕ್ಕೆ ಸಾಧ್ಯವಿದ್ದರೆ ಮಾಡಿ. ನಾವು ಪ್ರಯತ್ನ ಮಾಡಿದ್ದೇವು. But, let me tell you honestly ನಾವು expect ಮಾಡಿದ ಪ್ರಮಾಣದಲ್ಲಿ ಯಶಸ್ವಿಯಾಗಲಿಲ್ಲ. ಏಕೆಂದರೆ ಅಷ್ಟು ಪ್ರಮಾಣದ Infrastructure ಬೇಕು. ಕೆಲವು incentives ಬೇಕು, ಹಣಕಾಸಿನ ಸಚಿವರು ಇಲ್ಲಿರುವುದರಿಂದ ಹೇಳುತ್ತಿದ್ದೇನೆ. West Bengal ನಲ್ಲಿ through

he is the Chairman of your empowered Committee on VAT ಅವರು ಕೆಲವು concession ಕೊಟ್ಟಿದ್ದಾರೆ, ಆ ಪ್ರಕಾರ backward areas ಗೆ ಪ್ರಮುಖ್ಯತೆ ಕೊಡಿ, ಬೆಂಗಳೂರು, ತುಮಕೂರು, ಮೈಸೂರು, ಮಂಗಳೂರಿನಲ್ಲಿ ಕೊಡಬೇಡಿ. Bacward areas ನಲ್ಲಿ industries ತರಲಿಕ್ಕೆ ತಾವು ವಿಚಾರ ಮಾಡಬಹುದು. ಏಕೆಂದರೆ, we have to send these industries t backward areas. ಆಗ ಆ ಜನರಿಗೂ prosperity, ಉದ್ಯೋಗ ಸಿಗುತ್ತದೆ. ಹಾಗಾಗಿ ಇವತ್ತು infrastructure department ನಲ್ಲಿ ಮುಖ್ಯವಾಗಿ ಇದು ಸಣ್ಣ ಇಲಾಖೆಯಲ್ಲ, ಅದು ಬೆಳೆಯಬೇಕು. ದೊಡ್ಡ ಕೈಗಾರಿಕೆ ಬಂದಾಗ ಸಣ್ಣ ಕೈಗಾರಿಕೆಗಳು ಬರುತ್ತವೆ. Ancillaries ಬರುತ್ತವೆ. ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಆಗಲಿಕ್ಕೆ ಇವತ್ತಿನ ದಿವಸ ಬಹಳ ಕಷ್ಟವಾಗಿದೆ. compete ಮಾಡಲಿಕ್ಕಾಗುತ್ತಿಲ್ಲ. World economy. ಈ ರೀತಿ ಇದೆ. ಹಾಗಾಗಿ ಸಣ್ಣ ಕೈಗಾರಿಕೆಗೂ ಸ್ವಲ್ಪಮಟ್ಟಿಗೆ ಸಂರಕ್ಷಣೆ ಕೊಡಬೇಕಾಗುತ್ತದೆ. ದೊಡ್ಡ ಪ್ರಮಾಣದಲ್ಲಿ ಸಂರಕ್ಷಿಸಲು ಆಗುವುದಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ಸಣ್ಣ ಕೈಗಾರಿಕೆಗಳೂ ಸಹ competative ಆಗಬೇಕು. Old haphazard way ನಲ್ಲಿ ಒಂದು ಮೆಷಿನ್ ಇಟ್ಟುಕೊಂಡು ನಡೆಸಲಿಕ್ಕೆ ಹೇಗೆ ಸಾಧ್ಯವಾಗುತ್ತದೆ? It has to grow. Sir it is very simple. Struggle for Existence, survival of the fittest. Everybody id trying to survive. ಆಗುತ್ತವೆ. ನರಿಗಳು? The fittest. ಜಂಗಲ್‌ನಲ್ಲಿ only Tigers and Lions survive Who will suvive the Fittest. ಜಂಗಲ್‌ನಲ್ಲಿ only Tigers and Lions survive ಆಗುತ್ತವೆ. ನರಿಗಳು survive ಆಗಲಿಕ್ಕೆ ಸಾಧ್ಯವಿಲ್ಲ. ಇವತ್ತು 21ನೇ ಶತಮಾನದಲ್ಲಿ ಭಾರತ ದೇಶದ ಕರ್ನಾಟಕ ರಾಜ್ಯ ಪ್ರಗತಿಯಾಗಬೇಕಾದರೆ ಗುಣಮಟ್ಟಕೆ ಮಹತ್ವ ಕೊಡಬೇಕಾಗುತ್ತದೆ. ಮೆರಿಟ್ ಅನ್ನು recognize ಮಾಡಬೇಕಾಗುತ್ತದೆ. We have do it . ಮಾಡಲಿಲ್ಲ. ಎಂದರೆ O.K. ನಡೆಸಿರಿ. You will be in 30th position, 50th position., We should not be hesitant in all these things. ಇಲ್ಲಿ hypocracy ಇರಬಾರದು. ಇವತ್ತು ಮುಖ್ಯವಾಗಿ ಯಡಿಯೂರಪ್ಪನವರೇ, 2008ನೇ ಏಪ್ರಿಲ್ –ಮೇ ತಿಂಗಳಿನಲ್ಲಿ ಬೆಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾರಂಭವಾಗಬೇಕು. ಕೇಂದ್ರ ಸರ್ಕಾರ, ನ್ಯಾಷನಲ್ ಹೈವೇ ಅಥಾರಿಟಿ, ಆ ಕಾಲದಲ್ಲಿ ವಾಜಪೇಯಿಯವರ ಕಾರ್ಯಕ್ರಮ, ಇವತ್ತು ಮನಮೋಹನ್ ಸಿಂಗ್ ನಡೆಸಿಕೊಂಡು ಹೋಗುತ್ತಿದ್ದಾರೆ. ಅದೊಂದು ಮೇಕ್ರಿ ಸರ್ಕಲ್‌ನಿಂದ ಆರು ಲೈನ್ ರಸ್ತೆಯಾಗುತ್ತಿದೆ. ಈ ಏರ್ ಪೋರ್ಟ್‌ಗೆ dedicated ಒಂದು ರಸ್ತೆ dedicated rail line ಮಾಡಬೇಕೆಂದು ಆಗಿತ್ತು. ಏನಾಗಿದೆ ಇವತ್ತು? ಇನ್ನು acquisition ಪ್ರಾರಂಭವಾಗಿಲ್ಲ.

ಏಪ್ರಿಲ್–ಮೇ ತಿಂಗಳಿನಲ್ಲಿ ವಿಮಾನ ನಿಲ್ದಾಣ inaugurate ಮಾಡುತ್ತಿದ್ದೀರಿ, ಆದರೆ ಈ ವಿಮಾನ ನಿಲ್ದಾಣ ಹೋಗಲಿಕ್ಕೆ ಒಂದೂವರೆ ಗಂಟೆ ಬೇಕು. ಆ ವಿಮಾನ ನಿಲ್ದಾಣಕ್ಕೆ ಹೋಗಲಿಕ್ಕೆ 4 ಗಂಟೆಗಳು ಬೇಕು. ಹಾಗಾಗಿ Government should recognize the importance and take immediate steps. ಇವತ್ತು ನೀವು land acquisition ಪ್ರಾರಂಭ ಮಾಡಿಲ್ಲ. ಇನ್ನು ಪ್ರಿಲಿಮನರಿ ಸ್ಟೇಜ್‌ನಲ್ಲಿದೆ. ನಿಮ್ಮ ರೈಲ್ವೆ ಬಗ್ಗೆ ಏನೂ ಹೇಳಿಲ್ಲ, ಹಾಗಾಗಿ ಇದು ಹೇಗೆ ಸಾದ್ಯವಾಗುತ್ತದೆ? ಇವತ್ತು ಈ ಏರ್‌ಪೋರ್ಟ್‌ಗೆ ಹೋಗಲಿಕ್ಕೆ ಕಷ್ಟವಾಗಿದೆ, ಇನ್ನು ಆ ಏರ್‌ಪೋರ್ಟ್‌ಗೆ ಜನ ಹೇಗೆ ಹೋಗಬೇಕು? ಹಾಗಾಗಿ ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಬೇಕು. ಇವತ್ತು ಏರ್‌ಪೋರ್ಟ್ ಕಾಸ್ಟ್ ಸಹ 1200–00 ಕೋಟಿ ರೂ. ಗಳಿಂದ 1900 ಕೋಟಿ ರೂಗಳಿಗೆ ಹೆಚ್ಚಿದೆ. ತಾವು ಸ್ವತಃ ಹೋಗಿ ಏಕೆ ಇಷ್ಟು ಲೇಟ್ ಆಗಿದೆ ಎಂದು ಪರಿಶೀಲಿಸಬೇಕು. ಮಂಜೂರು ಮಾಡಿದ್ದೇವೆ.

ಶ್ರೀ ಡಿ.ಆರ್. ಪಾಟೀಲ್ : ತಾವು infrastructure ಬಗ್ಗೆ ಮಾತನಾಡುವಾಗ ಶ್ರೀ ವಾಜಪೇಯಿಯವರು ಇದನ್ನು conceive ಮಾಡಿದ್ದು, ಶ್ರೀ ಮನಮೋಹನ ಸಿಂಗ್‌ರವರು ಮುಂದುವರೆಸಿದರು ಎಂದು ಹೇಳಿದಿರಿ. ಅದು ತಪ್ಪು, ಶ್ರೀ ಪಿ.ವಿ. ನರಸಿಂಹರಾವ್‌ರವರು ಸರ್ಕಾರ ಅದನ್ನು conceive ಮಾಡಿದ್ದು. Golden Quadrangle ಆಮೇಲೆ port ನಿಂದ ಎಲ್ಲಾ ಮೆಟ್ರೋಸ್‌ಗೆ ಎಲ್ಲಾ infrastructure plan ಮಾಡಿದವರು ಅವರು.

ಶ್ರೀ ಆರ್.ವಿ. ದೇಶಪಾಂಡೆ : ಆಯಿತು, ನನ್ನ ಪ್ರಕಾರ ಶ್ರೀ ವಾಜಪೇಯಿಯವರು ಪ್ರಧಾನಿಯಾಗಿದ್ದಾಗ ಈ ಪ್ರೋಗ್ರಾಮ್ ಜಾರಿಗೆ ಬಂತು ಎಂದಷ್ಟೇ ನನಗೆ ಗೊತ್ತಿದೆ. ಶ್ರೀ ನರಸಿಂಹರಾಯರು brought liberalization to the Country.

ಶ್ರೀ ಡಿ.ಆರ್. ಪಾಟೀಲ್ : The project was conceived by P.V. Narashima Rao.

ಶ್ರೀ ಆರ್.ವಿ. ದೇಶಪಾಂಡೆ : I agree, I don't dispute. Narshima Rao, we have to salute him. Narashima Rao brought privatization with Manmohan Singh as Finance Minister. This is the history. But, this Road project, I was under the impression that this quadrangle project was started by Vajpayee. If that is so, I will correct myself.

ಶ್ರೀ ಡಿ.ಆರ್. ಪಾಟೀಲ್ : No. This was their propaganda. That is not the fact.

ಶ್ರೀ ಆರ್.ವಿ. ದೇಶಪಾಂಡೆ : If that is not the fact ಎಲ್ಲಿ ಒಳ್ಳೆಯ ಕೆಲಸವಾಗಿದೆ, ಅದನ್ನು ಹೇಳಬೇಕಾಗುತ್ತದೆ. We should not be afraid ಜನರು ತಪ್ಪು ಹೇಳಿದರೂ ಕೆಲವು ಸಾರಿ ಒಪ್ಪಿಕೊಳ್ಳುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ಅವರ ಕಾಲದಲ್ಲಿ accelerate ಆಯಿತು ಎಂದು ಹೇಳಿ. But, the project was conceived by P.V.N.

ಶ್ರೀ ಆರ್.ವಿ. ದೇಶಪಾಂಡೆ : It is O.K. Sir, I agree. I am subject to correction. ಹಾಗಾಗಿ ಇವತ್ತು cost of the airport. 1400-00 ಕೋಟಿ ರೂ. ಗಳಿಂದ cost, has gone to 1,930 ಕೋಟಿ ರೂ. ಗಳು ಅಂದರೆ 500–00 ಕೋಟಿ ರೂ. ಗಳಷ್ಟು cost escalation ಆಗಿದೆ. We have to find out why. ನಮ್ಮ ದೃಷ್ಟಿಯಲ್ಲಿ ತಪ್ಪಾಗಿದೆ. ಏನೆಂದರೆ ಇಲ್ಲಿ promoters contractors ಆಗಿದ್ದಾರೆ. L&T, Siemens, Zurich, they are the promoters and promoters have become contractors. ಈ ಪ್ರಾಜೆಕ್ಟ್ ಏನು execute ಆಗುತ್ತಿದೆಯೆಲ್ಲಾ , ಹಾಗಾಗಿ I request the Finance Minister, Infrastructure Minister ತಾವು ನೋಡಿ, ಈ cost escalation ಯಾವ ರೀತಿಯಾಗಿದೆ. ನಮ್ಮ ಸ್ಟೇಟ್ ಸಪೋರ್ಟ್ ಕೊಡುತ್ತಿದೆ. ನಮಗೆ 13% equity ನಮ್ಮದು ಇದೆ, Airport Authority 13% equity. ಇದೆ. So, we have to examine what is happening. ಮತ್ತೊಂದು ಈ ಟ್ರಾಫಿಕ್ ಹೆಚ್ಚಾಗಿ 2015ನೇ ಇಸವಿಗೆ ಟ್ರಾಫಿಕ್ ಯಾವ ರೀತಿ ಇರಬೇಕು ಅದರ ಪ್ರಕಾರ ಸ್ವಲ್ಪ clearance ತೆಗೆದುಕೊಂಡಿದ್ದೀರಿ. ಅದಕ್ಕೆ ನಾನು ಅಭಿನಂದಿಸುತ್ತೇನೆ. ಏಕೆಂದರೆ ಅದರ ಅವಶ್ಯಕತೆ ಇತ್ತು, ಅದಾಗಿದೆ, ಹಾಗಾಗಿ dedicated road and dedicated rail line ಬಗ್ಗೆ priority ಮೇಲೆ ತಾವು ಚಿಂತನೆ ಮಾಡಬೇಕು. ಅದರ ಪ್ರಕಾರ ರಾಜ್ಯದಲ್ಲಿ ಹಲವಾರು ಕಡೆ ಏರ್‌ಪೋರ್ಟ್ ಬರುವ ಬಗ್ಗೆ ಚಿಂತನೆ ನಡೆಯುತ್ತಿದೆ, ಶಿವಮೊಗ್ಗ, ಬಿಜಾಪುರ, ಹಾಸನದಲ್ಲಿ, ಮೈಸೂರು ಕೆಲಸ ಬಹಶಃ ಪ್ರಾರಂಭವಾಗಿದೆ. ಮಂಗಳೂರಿನಲ್ಲಿ ಕೆಲಸ ಪ್ರಾರಂಭವಾಗಿದೆ. ಗುಲ್ಬರ್ಗಾದಲ್ಲಿ ಧಾರವಾಡದಲ್ಲಿ ಕೆಲಸ ಆಗಬೇಕೆಂದಿದೆ, ಅದನ್ನು ಮಾಡಿ, ಆದರೆ ಇದಕ್ಕೆ ಸರಿಯಾದ ಬಜೆಟ್ ಸಪೋರ್ಟ್ ಸಹ ಕೊಡಬೇಕಾಗುತ್ತದೆ. ಕೇಂದ್ರ ಸರ್ಕಾರದೊಂದಿಗೆ ಮಾತನಾಡಿ ಈ ಕೆಲಸ ತಕ್ಷಣ ಪ್ರಾರಂಭ ಮಾಡಬೇಕು. ಏಕೆಂದರೆ ತಮ್ಮ ಕಲ್ಪನೆ ಪ್ರಕಾರ ಇಲ್ಲೆಲ್ಲಾ ಏರ್‌ಪೋರ್ಟ್‌ಗಳಾದರೆ ಖಂಡಿತವಗಿಯೂ ಒಳ್ಳೆಯ ವಾತಾವರಣ ಸೃಷ್ಟಿಯಾಗಲಿಕ್ಕೆ ಸಾಧ್ಯವಿದೆ. For example Karwar airport. Government ನಿಂದ ಆಜ್ಞೆ ಆಗಿದೆ. ನಾವು Sea Bird ನವರು ಏನು ಏರ್‌ಪೋರ್ಟ್ ಮಾಡುತ್ತಾರೆ, ಪ್ರೈವೇಟ್ ಟ್ರಾಫಿಕ್‌ಗೆ ಅನುಕೂಲ ಮಾಡಿಕೊಟ್ಟರೆ ನಾವು

ಒಪ್ಪಿಕೊಳ್ಳುತ್ತೇವೆಂದು G.O. ಆಗಿದೆ ಅದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಲ್ಯಾಂಡ್ ಅಡಿಷನಲ್ ಆಗಿ ಅಕ್ವೈರ್ ಆಗಬೇಕು. ಅದಾಗಿಲ್ಲ, ತಕ್ಷಣ acquisition ಪ್ರಾರಂಭವಾಗಬೇಕು. ತಾವು consultant appoint ಮಾಡುತ್ತೇವೆಂದು ಹೇಳಿದ್ದಿರಿ, You have promised Airport authority. ಆ Consultant appoint ಆಗಬೇಕು. ಅದರಿಂದ ಇಡೀ ಕರವಾಳಿಯಲ್ಲಿ, ಗೋವಾದಲ್ಲಿ ಇವತ್ತು ಪ್ರವಾಸೋದ್ಯಮಕ್ಕೆ saturation ಬಂದಿದೆ. ಕರ್ನಾಟಕದಲ್ಲಿ ಸಾಕಷ್ಟು ಅವಕಾಶ ಇದೆ. ಆದರೆ explotation ಆ ಪ್ರಮಾಣದಲ್ಲಿ ಸಾಧಿಸಲಿಕ್ಕೆ ಆಗಿಲ್ಲ. 320 ಕಿ.ಮೀ. ನಷ್ಟು ಕರಾವಳಿ ಇದೆ. ಅಲ್ಲಿ ಸಹ ಪ್ರವಾಸೋದ್ಯಮ ಸಾಕಷ್ಟು ಬೆಳೆಯಲಿಕ್ಕೆ ಪ್ರಾರಂಭವಾಗಿದೆ. ಆದರೆ ಇನ್ನೂ ಅಭಿವೃದ್ಧಿಯಾಗಬೇಕಾದರೆ ಈ ಏರ್‌ಪೋರ್ಟ್ ಆಗುವ ಅವಶ್ಯಕತೆ ಇದೆ ಅದಕ್ಕೆ ತಾವು ಪ್ರಾಧಾನ್ಯತೆ ಕೊಡಬೇಕು. ಮೆಟ್ರೋ ಬಗ್ಗೆ ಹೇಳುವುದಾರೆ ಮೆಟ್ರೋ ವಿಷಯ ವಾದ ವಿವಾದಲ್ಲಿ ಹೋಗುತ್ತಿದೆ. ಮೆಟ್ರೋ, ಮೋನೋ ರೈಲು ಆಗಬೇಕು. ಮೋನೋ ರೈಲು ಅರ್ಧ, ಒಂದು ಕಿ.ಮೀ. ಗೆ ಮಾಡುತ್ತಾರೆ. ಸಿಂಗಪುರ್‌ದಲ್ಲಿ ಒಂದು ಸಫಾರಿ ಇದೆ. ರಾತ್ರಿ ಅಲ್ಲಿ ಆನೆ, ಹುಲಿ, ತೋರಿಸಲಿಕ್ಕೆ ಮೋನೋ ರೈಲನ್ನು ತೆಗೆದುಕೊಂಡು ಹೋಗುತ್ತಾರೆ. Metro, it is a world wide accepted culture. ಡೆಲ್ಲಿ, ಕಲ್ಕತ್ತಾ, ಸಿಂಗಪುರ್ , ಮಲೇಶಿಯಾ, ಇಂಡೋನೇಶಿಯಾ ಎಲ್ಲಿಗೆ ಬೇಕಾದರೂ ಹೋಗಿ, ಅಲ್ಲಿ ಮೆಟ್ರೋ ರೈಲಿದೆ, ಹಾಗಾಗಿ ನಾವು ಮೆಟ್ರೋ ಬಗ್ಗೆ 15 ವರ್ಷಗಳಿಂದ ಮಾತನಾಡುತ್ತಿದ್ದೇವೆ. ಪ್ರಧಾನಮಂತ್ರಿಗಳು ಅಡಿಗಲ್ಲು ಹಾಕಿ ಹೋದರು. ಅದರಲ್ಲಿ ಏನು ಪ್ರೊಗ್ರೆಸ್ ಇದೆ? When the Metro is going to see the light of the day? ಹಾಗಾಗಿ ಇದು prestigious projects. ಕೇಂದ್ರ ಸರ್ಕಾರ ಇದಕ್ಕೆ ಅನುದಾನ ಕೊಟ್ಟು ಸಹಾಯ ಮಾಡುತ್ತಿದೆ, ಪ್ರಯಾರಿಟಿ ಮೇಲೆ ಈ ಕೆಲಸ ಆಗಬೇಕಾಗುತ್ತದೆ. ಆ ದೃಷ್ಟಿಯಿಂದ ಸರ್ಕಾರ ಇದರತ್ತ ಗಮನ ಹರಿಸಬೇಕು. ಅದೇ ಪ್ರಕಾರ rails. ಹುಬ್ಬಳ್ಳಿ-ಅಂಕೋಲ ರೈಲು. ಉದಾಸಿಯವರೇ, ತಾವು ಕ್ಯಾಬಿನೇಟ್‌ನಲ್ಲಿ ಒತ್ತಾಯ ತರಬೇಕು. ಇವತ್ತು ಕಲಘಟಗಿವರೆಗೂ ತೆಗೆದುಕೊಂಡು ಬಂದು, environment problem ನಿಂದಾಗಿ ಕೆಲಸ ಅಲ್ಲಿಗೇ ನಿಂತಿದೆ. ಇವತ್ತು ಸರ್ವೆ ಮುಗಿಸಿದ್ದಾರೆ,. ತಕ್ಷಣ ಹುಬ್ಬಳ್ಳಿ-ಅಂಕೋಲ ರೈಲು ಮಾರ್ಗ ಆಗಬೇಕು. ನಮ್ಮ ಪ್ರಕಾಶ್ ಸಾಹೇಬರಿದ್ದಾರೆ. ಬಳ್ಳಾರಿಯಿಂದ ಹೋಗುವ iron ore ಎಲ್ಲವೂ ರೈಲಿನ ಮುಖಾಂತರ ಹೋದಲ್ಲಿ pollution, ecology save ಆಗುತ್ತದೆ, ಹಣವೂ ಉಳಿತಾಯವಾಗುತ್ತದೆ. ಆದುದರಿಂದ, ಹುಬ್ಬಳ್ಳಿ-ಅಂಕೋಲ ರೈಲ್ವೆ ಮಾರ್ಗಕ್ಕೆ ತಾವು ಹೆಚ್ಚಿನ priority ಕೊಡಬೇಕು. ಬಹಳಷ್ಟು ಹಿಂದೆಯೇ ಇದು ಮಂಜೂರಾಗಿತ ಕೆಲಸವೂ ಪ್ರಾರಂಭವಾಗಿತ್ತು. All because Ecology and Envirnoment Dep

ment raised some issue about submersion of lands, ಅದು stand still ಆಗಿದೆ ಪುನಃ ಸರ್ವೆ ಕಾರ್ಯ ಮುಗಿದಿದೆ. ಅದಕ್ಕೆ ತಾವು ಹೆಚ್ಚಿನ priority ಕೊಡಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡುತ್ತೇನೆ. ಎರಡನೆಯದಾಗಿ International Airport ಗೆ ಸಂಬಂಧಿಸಿದಂತೆ addtional land ಬಗ್ಗೆ ಏನಾಯಿತೆಂದರೆ, run way design change ಆಯಿತು. ಅದು ನಿಮಗೆ ಗೊತ್ತಿರಬಹುದು. International Airport design change ಆದ ನಂತರ we had to acquire additional land. ನಾವು ದೇವನಹಳ್ಳಿಯಲ್ಲಿ land acquire ಮಾಡಿದ್ದು ಬಹಳ ಕಡಿಮೆ. we have acquired that land at Rs. 5 lakhs per acre. ಮತ್ತು NAL ಗೆ Rs. 8 lakhs per acre. Acquisition was done 8-10 years back. Project delay ಆಯಿತು. ಆದರೆ, ಈಗ alignment change ಆದ ನಂತರ we acquired addtional lands at higher. ಆಗ 400 acres of land ನಮಗೆ ಉಳಿಯಿತು. ದಯಮಾಡಿ, ಆ ಲ್ಯಾಂಡ್ ಅನ್ನು ಹರಾಜು ಹಾಕಲು ಹೋಗಬೇಡಿ. ಅದು ಬಹಳ prestigious land ಆಗಿದೆ. ಆ ಲ್ಯಾಂಡ್ ಸರಿಯಾಗಿ ಉಪಯೋಗವಾಗಬೇಕು. ರೈತರ ಕಡೆಯಿಂದ ಅಥವಾ ಮಾಲೀಕರುಗಳ ಕಡೆಯಿಂದ acquire ಮಾಡುವಾಗ, ನಾವು airport ಸಲುವಾಗಿ ಲ್ಯಾಂಡ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇವೆ. ಹಾಗಾಗಿ, you have no right to auction those lands. ನಾನು ಏನು ಹೇಳುತ್ತೇನೆಂದರೆ, ನಿಮ್ಮ MSIL ಸಂಸ್ಥೆ ಇದೆ. ಅದೊಂದು ಒಳ್ಳೆಯ ಸಂಸ್ಥೆಯಾಗಿದೆ. ಕಾರ್ಗೋದಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ. Ware houses Cargos, ಅವರಿಗೆ ಎಷ್ಟು sufficient land ಬೇಕೋ ಅಷ್ಟು ಕೊಡಿ. Government Departments ಎಲ್ಲೆಲ್ಲಿ active ಆಗಿವೆಯೋ, ಯಾವ್ಯಾವ ಸಂಸ್ಥೆಗಳ cash rich ಇವೆ, ಯಾವ್ಯಾವ ಸಂಸ್ಥೆಗಳು ಒಳ್ಳೆಯ ಕೆಲಸಗಳನ್ನು ಮಾಡುತ್ತಿವೆಯೋ, you involve them. ನೀವು ಅವರಿಗೆ ಸಹಾಯ ಮಾಡಿ. Private ನವರಿಗೆ chance ಕೊಡಬಾರದು. It should be scondary. ನಿಮ್ಮ Government Agencies ಇರುವಾಗ, ಅವುಗಳು ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಿದ್ದಾಗ, first you give priority to Government agencies. Then you look after that. ಆದುದರಿಂದ, ಇದು valuable 400 acre land ಆಗಿರುವುದರಿಂದ, ಅದರ ಉಪಯೋಗ ಸರಿಯಾಗಿ ಆಗಬೇಕೆಂದು ತಮ್ಮಲ್ಲಿ ನಾನು ಕೋರುತ್ತಿದ್ದೇನೆ. ಇದಾದ ನಂತರ, ಈಗ ಹುಬ್ಬಳ್ಳಿ ಏರ್‌ಪೋರ್ಟ್, ಬೆಳಗಾವಿ ಏರ್‌ಪೋರ್ಟ್ modernize ಆಗುತ್ತಿದೆ. Land acquisition ನಡೆಯುತ್ತಿದೆ. Land acquisition ನಿಂದ ಅಲ್ಲಿ ಏನಾಗುತ್ತಿದೆಯೆಂದರೆ, ನಾನು ಮೊನ್ನೆ ಹುಬ್ಬಳ್ಳಿಯಲ್ಲಿ ರೈತರಿಗೆ ಹೇಳಿದೆ. ಅಲ್ಲಿ ನೂರಾರು ಸಂಖ್ಯೆಯಲ್ಲಿ ರೈತರು ಬಂದಿದ್ದರು. ನಾನು ಡಿ.ಸಿ.

ಯವರಿಗೆ ಫೋನ್ ಮಾಡಿ ಹೇಳಿದೆ, ಜಗದೀಶ್ ಶೆಟ್ಟರ್ ಅವರಿಗೂ ಹೇಳಿದೆ. ಮಾತನಾಡಿ ಬಗೆಹರಿಸಿದ್ದೇನೆ. ರೈತರಿಗೆ ಏನಾಗಿದೆಯೆಂದರೆ, ಅವರ ಜಮೀನನ್ನು ಅನವಶ್ಯಕವಾಗಿ ಕೆಲವು ಕಡೆಗಳಲ್ಲಿ ತೆಗೆದುಕೊಳ್ಳುತ್ತಿದ್ದಾರೆ. ರೇಟ್ಸ್ ಸರಿಯಾಗಿ ಕೊಡುವುದಿಲ್ಲ. ಉಳುವುದಕ್ಕೆ ನಮಗೆ excess land ಇಲ್ಲ. ಆದಕಾರಣ, ಅವರುಗಳು confidence ಗೆ ತೆಗೆದುಕೊಂಡು we have to work. ನಮ್ಮ ಜಿಲ್ಲೆಯಲ್ಲಿ ಹಲವಾರು ಪ್ರಾಜೆಕ್ಟ್‌ಗಳು ಬಂದವು, ಸೀಬರ್ಡ್, ಕೈಗಾ, ಕಾಳಿ ಯೋಜನೆ, ಇತ್ಯಾದಿ ಬಂದವು. My hair has gone grey becuse of that. we took people into confidence. ಅಲ್ಲಿ agitation ಮಾಡುವುದಕ್ಕೆ ಶಿವರಾಮ ಕಾರಂತರು ಬಂದರು. we faced it. very honourably, very calmly ಹಾಗಾಗಿ , ಸರ್ಕಾರ ಸುಮ್ಮನೆ ಲ್ಯಾಂಡ್ ಅನ್ನು acquire ಮಾಡಿ ಎಂದು ಹೇಳಬಾರದು. acquire ಮಾಡುವ ಮುನ್ನ ರೈತರನ್ನು, ಜನರನ್ನು ಕರೆಸಿ, ಅವರೊಡನೆ ಸಮಾಲೋಚನೆ ನಡೆಸಿ, ಯೋಗ್ಯ ದರ ಕೊಟ್ಟು, ಎಷ್ಟು ಅವಶ್ಯಕತೆ ಇದೆಯೋ, ಅಷ್ಟು ಮಾತ್ರ ತೆಗದುಕೊಂಡು ನಾವು ಮಾಡಬೇಕಾಗುತ್ತದೆ. Land audit ನಾನು Industries Minister ಆಗಿದ್ದಾಗ land audit. ಮಾಡಿದ್ದೆ. ಆ ತರಹದಲ್ಲಿ land audit ಮಾಡಿ. ಯಾರು ಎಷ್ಟು ಕೇಳುತ್ತಾರೋ, ಅಷ್ಟು ಜಮೀನನ್ನು ನಾವು ಕೊಡಬಾರದು. You have to conduct land audit. ಈ ಪ್ರಾಜೆಕ್ಟ್ ಈ ಲ್ಯಾಂಡ್‌ನ ಅವಶ್ಯಕತೆ ಇದೆಯೇ? If you are convinced, give it. But, if you are not conviced you should not give it. ಅ ರೀತಿಯಲ್ಲಿ ಪ್ರತಿಯೊಂದು ಪ್ರಾಜೆಕ್ಟ್‌ಗೆ ಬಂದಾಗ ಇದರ ಬಗ್ಗೆ ಒಂದು ಚಿಂತನೆ ನಡೆಯಬೇಕಾಗುತ್ತದೆ. ಈ Railway lines, ಕೆಲವು ಕಡೆಗಳಲ್ಲಿ ಇನ್ನೂ expendite ಆಗಬೇಕಾಗುತ್ತದೆ. ಆ ಕೆಲಸ ಸರ್ಕಾರದಿಂದ ಆಗಬೇಕಾಗಿದೆ. ಸಮಯಾಭಾವದಿಮದ ನಾನು ಇದರ ಬಗ್ಗೆ ಹೆಚ್ಚು ಸಮಯ ತೆಗೆದುಕೊಳ್ಳುತ್ತಿಲ್ಲ. ಇನ್ನು by passes. ಈಗ Bellary Town, Torangal and Belikere. ಈ ಮೂರು ಕಡೆಗಳಲ್ಲಿ by pass ಆಗಬೇಕೆಂದು ಹೇಳುತ್ತೀರಿ. 21ನೇ ಶತಮಾನದಲ್ಲಿ ನೀವು ಎಷ್ಟೇ ಒಳ್ಳೆಯ ಅರ್ಥಿಕ ಸಚಿವರಾಗಿದ್ದರೂ, ಎಷ್ಟೆ resources ಅನ್ನು ನೀವು reserve ಮಾಡಿದ್ದರೂ, Government cannot bring all the infrastructure. ಕೈಗಾರಿಕೆ ವಿಶ್ವೇಶ್ವರಯ್ಯನವರ ಕಾಲದಲ್ಲಾಯಿತು. ನಮಗೆ ಹೊಸ ಕೈಗಾರಿಕೆಗಳನ್ನು ಪ್ರಾರಂಭಿಸುವುದಕ್ಕಾಗುತ್ತದೆ. It is not your priority. Health care, Education, this is your priority. Drinking Water, Sanitation. President of India ಆದ ಡಾ: ಎ.ಪಿ.ಜೆ. ಅಬ್ದುಲ್ ಕಲಾಂರವರು ನಿನ್ನೆ ಹೇಳಿದ್ದಾರೆ. What Priority should be given? Education ಗೆ social security ಗೆ, that is the priority of your State.

You are a welfare State. ಹಾಗಾಗಿ Infrastructure ವಿಚಾರಗಳು ಬಂದಾಗ, you should leave it. Legal frame work. ಮಾಡಿ. ಆದಷ್ಟು, you leave it to the private sector. ನಿಮ್ಮ ಕಡೆ ಹಣವಿಲ್ಲ. ಎಲ್ಲಿ ರೋಡ್ಸ್ ಆಗಬೇಕು, ಬೈಪಾಸ್ ಆಗಬೇಕು, fly overs ಆಗಬೇಕು, ಎಲ್ಲೆಲ್ಲಿ security problems ಇದೆಯೋ, OK. You take care. ಆದರೆ ಎಲ್ಲಿ ಇಲ್ಲವೋ, ಅಲ್ಲಿ I think Banks are flooded with money, private sector is flooded with money. Allow them with all restrictions and other things. ಇಲ್ಲದಿದ್ದರೆ, ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ, ಈ ಮೂರು ಕಡೆಗಳಲ್ಲಿ by passes ಏನು ಆಗಬೇಕು, ಅಲ್ಲಿ private sector ಅನ್ನು involve ಮಾಡಿಕೊಂಡರೆ, ಈ ಕೆಲಸ ಲಘುವಾಗಿ ಆಗುತ್ತದೆ. ಇಲ್ಲವೆ. Government Agency ಯಿಂದ ಮಾಡುತ್ತೇವೆಂದರೆ, ತಾವು Deputy Chief Minister, Chief Minister ಆದರೂ ಸರ್ಕಾರದೆ ಕಡೆಯಿಂದ ಇ ಕೆಲಸವಾಗುವುದಿಲ್ಲ. ಇದನ್ನು ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ನಾನು ಹೆಚ್ಚು elobrate ಮಾಡಲು ಹೋಗುವುದಿಲ್ಲ. ಆದರೆ, ಒಂದು ಮಾತನ್ನು ಹೇಳುತ್ತೇನೆ. ದಯಮಾಡಿ ಯಾವುದೇ ಶಾಸಕರುಗಳು ತಪ್ಪಾಗಿ ಭಾವಿಸಬಾರದು ನಾವು ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟಿದ್ದೇವೆ. ನಂಬಿ ವಿಕೇಂದ್ರಿಕರಣ ವ್ಯವಸ್ಥೆಗೆ ಉತ್ತೇಜನ ನೀಡಿದ್ದೇವೆ. ಅದರಲ್ಲಿ ಕರ್ನಾಟಕ, ಪಶ್ಚಿಮ ಬಂಗಾಳದಂತಹ ರಾಜ್ಯಗಳು ಈ decentralization ವಿಚಾರವಾಗಿ forefront ನಲ್ಲಿವೆ. ನಾವು reverse gear ಗೆ ಹೋಗಬಾರದು. ಅದು ತಪ್ಪಾಗುತ್ತದೆ. ಇವತ್ತು ಗ್ರಾಮಸಭೆ. ಗ್ರಾಮಸಭೆ ಎಂದರೆ ಏನು? ಅವರೂ ಜನಪ್ರತಿನಿಧಿಗಳಲ್ಲವೇ? ಅವರೂ ನಮ್ಮನ್ನು ಆರಿಸುತ್ತಾರಲ್ಲವೇ? ಅವರು ನಮ್ಮ ಮತದಾರರುಗಳಲ್ಲವೇ? ಅವರ ಮೇಲೆ ನಾವು ವಿಶ್ವಾಸವಿಡಬೇಕಾಗುತ್ತದೆ. ಗ್ರಾಮಸಭೆಗೆ ನಾವು ಏನೂ ಅಧಿಕಾರ ಕೊಟ್ಟೆವು, ಆ ಅಧಿಕಾರವನ್ನು ನಾವು ಮೊಟಕುಗೊಳಿಸುವ ಪ್ರಯತ್ನ ಮಾಡಬಾರದು. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಏನು ಆಧಿಕಾರ ಕೊಟ್ಟೆವು, ಅದನ್ನೂ ಮೊಟಕುಗೊಳಿಸುವ ಪ್ರಯತ್ನ ಮಾಡಬಾರದು. ಅದರ ಅವಶ್ಯಕತೆಯಿಲ್ಲ. ಶಾಸಕರುಗಳಿಗೆ ಇವತ್ತು ಸಾಕಷ್ಟು ಕೆಲಸಗಳಿವೆ, ಶಾಸಕರುಗಳು ಕೆಲಸ ಮಾಡಬೇಕೆಂದರೆ, so many works to be done, ಹಾಗಾಗಿ, ಎಲ್ಲೆಲ್ಲಿ ಕುಡಿಯುವ ನೀರು ಬೇಕು, ಯಾರ್‍ಯಾರಿಗೆ ಮನೆಗಳು ಬೇಕು, ಯಾರಿಗೆ ಆಶ್ರಯ ಮನೆಗಳು ಬೇಕು, Why should I scratch my head? Leave it to Panchayats. Let them decide. ಇದರಲ್ಲಿ ಏನು ತೊಂದರೆ ಇದೆ?

ಸಭಾಧ್ಯಕ್ಷರು: ಈಗ ಗ್ರಾಮಸಭೆ ಎಂದರೆ, ಅದರಲ್ಲಿ ಹತ್ತಾರು ಜನರಿರುತ್ತಾರೆ.

ಆದುದರಿಂದ, ಯಾವ ಫಲಾನುಭವಿಗಳನ್ನು ಆಯ್ಕೆ ಮಾಡಬೇಕೆಂಬ ಬಗ್ಗೆ ನಿಜ ಸ್ಥಿತಿ ಏನೆಂದು ಗೊತ್ತಾಗುತ್ತದೆ. ಇವತ್ತು ಗ್ರಾಮಸಭೆಗಳು ಏನಾಗಿವೆಯೊಂದರೆ, ದೇಶಪಾಂಡೆಯವರಿಗೆ ಒಂದು ಜನತಾ ಮನೆ ಕೊಡಬಹುದೇ ಎಂದರೆ, ಯಾರೂ ಮಾತನಾಡುವುದಿಲ್ಲ, ಸುಮ್ಮನೆ ನಿಂತಿರುತ್ತಾರೆ. ಅವರಿಗೆ ಕೊಟ್ಟರು, ಇವರಿಗೆ ಕೊಟ್ಟರು, ಹಾಗಾಗಿದೆ, ಹೀಗಾಗಿದೆ ಎಂದು ಹಿಂದೆ ಹೇಳುತ್ತಾರೆ. ಇವತ್ತು ಅವೆಲ್ಲವೂ ಧೃತರಾಷ್ಟ್ರ ಸಭೆಗಲಾಗಿವೆ. ಅದಕ್ಕೇನಾದರೂ ನೀವು ಒಂದು mechanism ಹುಡುಕದೇ ಇದ್ದರೆ, ಬಹಶಃ ಅದು success ಆಗುವುದಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ: ನಾನು ಒಂದು ಸಲಹೆ ಹೇಳುತ್ತೇನೆ. ಈಗ ಒಂದು ಕಾಯಿದೆ ಮಾಡುತ್ತಾರೆ, ನಾವು ಆ ಕಾಯಿದೆಯನ್ನು ಉಲ್ಲಂಘನೆ ಮಾಡುತ್ತೇವೋ ಇಲ್ಲವೋ ಎಂಬ ಬಗ್ಗೆ ಚೆಕ್ ಮಾಡುತ್ತಾರೆಯೇ? ಇಲ್ಲವೇ? ಹಾಗೆಯೇ, ಒಂದು ವ್ಯವಸ್ಥೆ ಜಾರಿಯಲ್ಲಿ ಬಂದಾಗ ಏನಾದರೂ ಲೋಪದೋಷಗಳಿದ್ದರೆ, ಸುಧಾರಿಸಬೇಕು. ಆದರೆ, ಈ system ಸರಿಯಿಲ್ಲವೆಂದರೆ, ಮತ್ತೆ ಹೇಗೆ ಮಾಡಲು ಸಾಧ್ಯವಿದೆ? ಇದನ್ನು regulate ಮಾಡುವಾಗ, I agree, regulate ಮಾಡುವಾಗ political decisions ಆಗುತ್ತಿರಬಹದು, regulate ಸರಿಯಾಗಿ ಆಗುವುದಕ್ಕೆ ಕಷ್ಟವಾಗುತ್ತಿರಬಹದು. ಆದರೆ, ನಾನು ಶಾಸಕನಾಗಿ ಬಂದರೆ, ಅದನ್ನು ನಾನು ಸರಿಪಡಿಸುತ್ತೇನೆಯೇ? ನನ್ನ ಮೇಲೆ ಕಾಂಗ್ರೆಸ್ ಜನರನ್ನು ಆಯ್ಕೆ ಮಾಡಿ ಎಂದು ಕಾಂಗ್ರೆಸ್‌ನವರು pressure ಹೇರುವುದಿಲ್ಲವೇ? I am also a human being. ನನ್ನ ಮೇಲೆ pressure ಹಾಕುವುದಿಲ್ಲವೇ? ಇದು ಬಹಳ ಕಷ್ಟ ನಾನು ಹೇಳುತ್ತೇನೆ, ನಮ್ಮ ಅಂಗನವಾಡಿ ಆಯ್ಕೆ ಸಮಿತಿ, ಆಶ್ರಯ ಇವೆಲ್ಲವೂ head ache ಆಗಿವೆ. Un-popularity ಇದೊಂದು ಮಾರ್ಗವಾಗಿದೆ. ಯಾರೋ ಹಣ ತಿನ್ನುತ್ತಾರೆ, ಅದು ನಮ್ಮ ಮೇಲೆ ಬರುತ್ತದೆ. ಇದು ನಮಗೆ ಗೊತ್ತಾಗುವುದಿಲ್ಲ. Best course is, ಯಾರಾದರೂ ಅಧಿಕಾರಿ ಮಾಡಲಿ, ಇಲ್ಲವೇ ಯಾರಾದರೂ ಮಾಡಲಿ, ಹೆಚ್ಚಾದಲ್ಲಿ, ನಾವು recommed ಮಾಡಬಹದು. ಇಲ್ಲದಿದ್ದರೆ, unnecessarily we are involved. For no reason we are involved. ಏನು ಅವಶ್ಯಕತೆ ಇದೆಯೆಂಬುದನ್ನು ಹೇಳಿ. ಅಂಗನವಾಡಿಗೆ, ನಾನು select ಮಾಡಬೇಕಂತೆ. ನನಗೆ ನೋವು ಆಗುತ್ತದೆ. ಏನಪ್ಪ, ನಾನು ಎಲ್ಲಿ ಹೋಗಿ ಕೂರಬೇಕು? ಮಾಡದೇ ಹೋದರೆ, ತಕ್ಷಣವೇ ಅಧಿಕಾರಿಗಳುಬಂದು ಬಿಡುತ್ತಾರೆ.

ಅಧ್ಯಕ್ಷರು: popularity ಮತ್ತು unpopularity ಪ್ರಶ್ನೆಯಲ್ಲ. ಯಾರಿಗೆ ಸಿಗಬೇಕೋ ಅವರಿಗೆ ಸಿಗಬೇಕಲ್ಲ. ಅದಕ್ಕೆ ಏನು mechanism? ಏನು solution ಹೇಳಿ.

ಶ್ರೀ ಡಿ.ಆರ್. ಪಾಟೀಲ್: ಇದು very simple, Sir, ಅಲ್ಲಿರುವ officers ಅನ್ನು ನೀವು ಜವಾಬ್ದಾರಿಯುತರನ್ನಾಗಿ ಮಾಡಬೇಕು. They must give list of eligible candidates only. ಯಾರಾದರೂ ineligible ಇದ್ದವರನ್ನು ಸೇರಿಸಿದರೆ, ಅವರನ್ನು immediate ಆಗಿ ಮನೆಗೆ ಕಳುಹಿಸಿ, ಅದರೆ, eligible list ನಲ್ಲಿ let tem choose anybody. ನಮಗೆ ಆ system ಅನ್ನು ಸುಧಾರಿಸಬೇಕೆಂಬ ಮನಸ್ಸಿದ್ದರೆ, ಏನೂ ತೊಂದರೆಯಿಲ್ಲ. ಆ ಅಧಿಕಾರವನ್ನು ನಮ್ಮ ಕೈಗೆ ತೆಗೆದುಕೊಳ್ಳಬೇಕೆಂದರೆ, ಅದು ಸರಿಯಿಲ್ಲ. ಇದು ಸರಿಯಿಲ್ಲವೆಂದು ಹೇಳಲು ಅಡ್ಡಿಯಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ: ನಾನು ಏನು ಹೇಳುತ್ತೇನೆಂದರೆ, they are all human beings. we are subject to some attachement, some affection, ಸ್ವಲ್ಪ ನಾವು ಮಾಡಬೇಕಾಗುತ್ತದೆ. ಮನುಷ್ಯ ಅಂದ ಮೇಲೆ ಮಾಡುತ್ತಾನೆ. ಆದರೆ, glaring ಆಗಿ ಆಗಬಾರದು. ಅಲ್ಲಿ ಬಡವ, ಫಲಾನುಭವಿ, ಆತ ಕಾಂಗ್ರೆಸ್‌ನವನಾಗಿರಬಹುದು, ಜೆ.ಡಿ (ಎಸ್) ಆಗಿರಬಹುದು. ಬಿಜೆಪಿ ಆಗಿರಬಹುದು, how it matters? ಅವನಿಗೆ ಮನೆ ಸಿಗುವುದಕ್ಕೆ ಆತನಿಗೆ ಅರ್ಹತೆ ಇದೆಯೇ? ಇಲ್ಲವೇ? ಅಷ್ಟನ್ನೇ ನಾವು ನೋಡಬೇಕು. ಆದರೆ, ಅದನ್ನು ನಾವು ನೋಡುವುದಿಲ್ಲ. How many we can see? ಪಂಚಾಯತ್‌ನವರೇ ನೋಡುವುದಿಲ್ಲ, ಇನ್ನು ಎಂಎಲ್‌ಎ ನೋಡುವುದಕ್ಕಾಗುತ್ತದೆಯೇ? ನನ್ನ ಮೇಲೆ pressure ಇರುವುದಿಲ್ಲವೇ? I think, we have to go beyond all these things. ಈ system ಏನು ಬಂದಿದೆ, ಇದನ್ನು recognise ಮಾಡಬೇಕಾಗುತ್ತದೆ, strengthen ಮಾಡಬೇಕಾಗುತ್ತದೆ, ಇದು ನಮ್ಮೆಲ್ಲರ ಕರ್ತವ್ಯವೆಂದು ನಾನು ಭಾವಿಸುತ್ತೇನೆ. Rules, Regulations, Acts ಮಾಡಿ ಸರ್ಕಾರದ ಅಭಿವೃದ್ಧಿ ವಿಚಾರದಲ್ಲಿ ಏನೇ ಟೀಕೆ–ಟಿಪ್ಪಣಿಗಳನ್ನು ಮಾಡಿಯೂ ಸರ್ಕಾರ ಒಳ್ಳೆಯ ಕಾರ್ಯಕ್ರಮ ಮಾಡದಿದ್ದರೆ, ತರಾಟೆಗೆ ತೆಗೆದುಕೊಳ್ಳಿ ಆದುದರಿಂದ, ಈ ಎಲ್ಲಾ ವಿಚಾರಗಳಿಗೂ ಕೈ ಹಾಕಿದಲ್ಲಿ ಬಹಳ ಕಷ್ಟವಾಗುತ್ತದೆಂಬುದು ನನ್ನ ಅನಿಸಿಕೆಯಾಗಿದೆ.

ಶ್ರೀ ಸಿ.ಎಂ. ಉದಾಸಿ:– ಸನ್ಮಾನ್ಯ ಅಧ್ಯಕ್ಷರೆ, ನಾವು ಇವತ್ತಿಗೂ ಸಹ ಅಧಿಕಾರವನ್ನು ಹಿಂದಕ್ಕೆ ಪಡೆಯಬೇಕೆಂಬ ಉದ್ದೇಶದಿಂದ ಕಾನೂನಿಗೆ ತಿದ್ದುಪಡಿ ಮಾಡಲು ಹೋಗಿಲ್ಲ ಎಂಬುದನ್ನು ನಿಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ವಿಫಲರಾದ ಸಂದರ್ಭದಲ್ಲಿ, ಈ ಸಮಿತಿಯವರು ಜವಾಬ್ದಾರಿ ವಹಿಸಿ ಅದನ್ನು ನಿರ್ವಹಿಸಬೇಕೆಂಬ ಉದ್ದೇಶ ಇಟ್ಟುಕೊಂಡಿದ್ದೇವೆಯೇ ವಿನಾ ಇನ್ನೇನೂ ಇಲ್ಲ. ತಮಗೆಲ್ಲ ಗೊತ್ತಿರುವ ಹಾಗೆ ಇವತ್ತಿಗೂ ಪ್ರತಿನಿತ್ಯ ಬರುವಂಥ ದೂರುಗಳನ್ನು ನೋಡಿದಾಗ

ಅಲ್ಲಿ ಹಣ ಕೊಡದೇ ಮನೆಗಳನ್ನು ಆಯ್ಕೆ ಮಾಡಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಗ್ರಾಮ ಸಭೆಗಳಲ್ಲಿ ಆಗಿರುವ ಅನೇಕ ತೀರ್ಪುಗಳನ್ನು ದಾಖಲೆಗಳನ್ನು ತಿದ್ದುಪಡಿ ಮಾಡಿದ್ದೂ ಇದೆ. ಗ್ರಾಮ ಸಭೆ ನಡೆಯದೇ ಗ್ರಾಮ ಸಭೆ ನಡೆದಿದೆ ಎಂದು ಬರೆದಿರುವುದು ಇದೆ. ತಮಗೆಲ್ಲಾ ಗೊತ್ತಿರಬಹುದು, S.J.R.Y. scam ಇದೆ. ಅದರಲ್ಲಿ ಒಂದು ಲಕ್ಷ ರೂಪಾಯಿಯವರೆಗಿನ ಅನುದಾನದ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಆರ್ಥಿಕ ಅನುಮೋದನೆಯನ್ನು ಗ್ರಾಮ ಸಭೆಯೇ ಕೊಡಬೇಕು, ಅದೇ ಅಂತಿಮ ಎಂದು ಇದೆ. ಇವತ್ತಿನವರೆಗೂ ಯಾವುದೇ ಒಂದು ಗ್ರಾಮ ಪಂಚಾಯಿತಿಯಲ್ಲಿ, ಗ್ರಾಮ ಸಭೆಯಲ್ಲಿ ಆಡಳಿತಾತ್ಮಕ ಮತ್ತು ಆರ್ಥಿಕ ಅನುಮೋದನೆಯನ್ನು ಗ್ರಾಮ ಸಭೆ ಕೊಟ್ಟಂತ ಉದಾಹರಣೆ ಇಲ್ಲ. ಗ್ರಾಮಸಭೆಯವರು prepare.ಮಾಡಿರುವ ಉದಾಹರಣೆ ಇಲ್ಲ. ಮೂರು ಸಾವಿರಕ್ಕಿಂತ ಹೆಚ್ಚು ಗ್ರಾಮಪಂಚಾಯಿತಿಗಳಲ್ಲಿ ಇವತ್ತು ಏನು ಕಂಪ್ಯೂಟರ್ ಖರೀದಿ ಮಾಡಿದ್ದಾರೆ, ಕಂಪ್ಯೂಟರ್ ಖರೀದಿ ಮಾಡಿರುವ ಹಗರಣದ ಬಗ್ಗೆ ದೂರು ಬಂದ 6 ಜಿಲ್ಲೆಗಳಲ್ಲಿ ನಾವು ಪರಿಶೀಲನೆ ಮಾಡಿದಾಗ ಆಗಿರುವಂಥ ಲೋಪದೋಷವನ್ನು ನೋಡಿದಾಗ ಅಲ್ಲಿ ಅನೇಕ ಸಂದರ್ಭದಲ್ಲಿ ಆಗಿರುವಂಥದ್ದನ್ನು ನಿಮಗೆ ಹೇಳಿದರೆ ಒಳ್ಳೆಯದು ಎನ್ನುತ್ತೀರೋ?

ಶ್ರೀ ಆರ್.ವಿ. ದೇಶಪಾಂಡೆ: ಒಳ್ಳೆಯದು ಆಗಿರುವುದನ್ನು ಹೇಳಲಿಲ್ಲ. ಈ ಪದ್ಧತಿಯಲ್ಲಿ ಲೋಪದೋಷ ಇಲ್ಲವೇ? ಎಲ್ಲಾ ಪದ್ಧತಿಯಲ್ಲೂ ಲೋಪದೋಷಗಳಿದೆ.

ಶ್ರೀ ಸಿ.ಎಂ. ಉದಾಸಿ: ಒಂದನ್ನು ನಾನು ಹೇಳುತ್ತಿದ್ದೇನೆ. ಚೆಕ್ ಮೂಲಕ ಹಣವನ್ನು ಕೊಡಬೇಕಾದ್ದನ್ನು ಕಾರ್ಯಗತ ಮಾಡಬೇಕೆಂದು ಇದೆ. S.J.R.Y. ನಲ್ಲಿ ಇವತ್ತಿನವರೆಗೆ ಏನಿದೆ, ಕೂಲಿ ಕೆಲಸ ಮಾಡಬೇಕು, ಜನರಿಗೆ ಆ ಉದ್ಯೋಗ ಕೊಡಬೇಕು ಎಂಬ ಕಾರ್ಯಕ್ರಮ ಇದೆ. ಆ ಉದ್ಯೋಗ ಮಾಡುವ ಕಾರ್ಯಕ್ರಮದಲ್ಲಿ ಅಕ್ಕಿ ಕೊಡುವುದಾಗಲಿ, ಹಣ ಕೊಡುವುದಾಗಲಿ ಪಾವತಿ ಮಾಡಬೇಕಾದ್ದು ಇರಬೇಕಾಗಿದ್ದರೆ, ನಾನು ಮೊನ್ನೆ ಒಂದು ತಾಲ್ಲೂಕು ಪಂಚಾಯಿತಿಯಲ್ಲಿ ಪರಿಶೀಲನೆ ಮಾಡಿದಾಗ, ಇವತ್ತು ಬೆಳಿಗ್ಗೆ ಹಲವಾರು ತಾಲ್ಲೂಕು ಪಂಚಾಯಿತಿ ಸದಸ್ಯರು ಅನುದಾನವನ್ನು ಹಂಚಿಕೊಳ್ಳುವುದರ ಬಗ್ಗೆ ಚರ್ಚೆಯಾದಾಗ, ಇವತ್ತು ಕೆರೆಗಳಿಂದ ಹೂಳನ್ನು ಎತ್ತುವ ಕೆಲಸಕ್ಕೆ ಹಣ ಮಂಜೂರಾಗಿದ್ದರೆ ಅದನ್ನು ಸದಸ್ಯರು ತಲಾ 80 ಸಾವಿರ ಹಂಚಿಕೊಂಡರು. ನಾನು 80 ಸಾವಿರ ರೂಪಾಯಿಯ ಕೆಲಸವನ್ನು ನನ್ನ ಕ್ಷೇತ್ರದಲ್ಲಿ ಮಾಡಿಸುತ್ತೇನೆಂದು ಹಂಚಿಕೊಂಡರು. 80 ಸಾವಿರದಲ್ಲಿ ಕೆಲಸ ಮಾಡುತ್ತೇನೆಂದು ಹೇಳಿ 20 ಗಂಟೆ ಜೆ.ಸಿ.ಬಿ. ಯಂತ್ರದಿಂದ ಕೆಲಸ ಮಾಡಿ

ಮನುಷ್ಯರಿಂದ ಕೆಲಸ ಮಾಡಿಸಿದ್ದೇವೆಂದು ಅಲ್ಲಿ ಬರೆಯುತ್ತಾ ಹೋದರೆ ಯಾವ ಹಂತಕ್ಕೆ ಹೋಗಿ ಮುಟ್ಟುತ್ತಿದ್ದೇವೆ? ಇದರ ಬಗ್ಗೆ ಯಾವುದಾದರೂ system ನ್ನು ತರಬೇಕಾಗಿದೆ. ಅಧಿಕಾರ ಮತ್ತು ಹಣವನ್ನು ಕೊಡುವ ಜೊತೆ ಜೊತೆಗೇ ಅಧಿಕಾರಿಗಳನ್ನೂ ಕೊಡಬೇಕಾಗಿತ್ತು. Check and measurement ವ್ಯವಸ್ಥೆಯನ್ನೂ ಮಾಡಬೇಕಾಗಿತ್ತು. 20 ವರ್ಷಗಳಿಂದ ಇದನ್ನು ಮಾಡದೇ ಬಿಟ್ಟಿರುವ ಸಂದರ್ಭದಲ್ಲಿ ಇವತ್ತು ಎಲ್ಲಿಗೆ ಬಂದು ಮುಟ್ಟುತ್ತಿದೆ ಎಂದರೆ, malpractice ಎಂಬುದು practice ಎಂಬ ಭಾವನೆಗೆ ಹೋಗಿ ಮುಟ್ಟುವ ಪರಿಸ್ಥಿತಿ ಇದೆ. ಆ ರೀತಿ ಆಗುತ್ತಿದೆ. ಇದನ್ನು ತಡೆಗಟ್ಟುವ ಕೆಲಸ ಅವಶ್ಯವಾಗಿ ಮಾಡಬೇಕಾಗಿದೆ. ಅದನ್ನು ತಡೆಹಿಡಿಯುವ ಸಂದರ್ಭದಲ್ಲಿ, ಡಿ.ಆರ್. ಪಾಟೀಲರು ವಿಡಿಯೋ ರೆಕಾರ್ಡ್ ಮಾಡಿ ತನ್ನಿ ಎಂದು ಹೇಳುತ್ತಾರೆ. ಅವರ ಜೊತೆ ಮಾತನಾಡುವಾಗ ಅನೇಕ ಸಂದರ್ಭದಲ್ಲಿ ಅವರು ಆ ರೀತಿ ಮಾಡಿ ಎಂದು ಹೇಳಿದ್ದಾರೆ. ಆದರೆ ಅದನ್ನೂ manipulate ಮಾಡುವ ಮಟ್ಟಕ್ಕೆ ಹೋಗಿದ್ದಾರೆ, ಏಕೆಂದರೆ ಪಾಯ ತೆಗೆದ ಒಂದೇ ಮನೆಯ ಮುಂದೆ ವಿಭಿನ್ನ ಸಂದರ್ಭದಲ್ಲಿ ಬೇರೆ ಬೇರೆ ನಾಲ್ಕು ಜನರನ್ನು ನಿಲ್ಲಿಸಿ ಫೋಟೋ ತೆಗೆಸಿರುವ ಉದಾಹರಣೆ ಇದೆ. ಒಂದೇ ಪಾಯದ ಮುಂದೆ ಒಂದು ಸಲ ನನ್ನನ್ನು ನಿಲ್ಲಿಸಿ ಫೋಟೋ ತೆಗೆದಿದ್ದರೆ ಮತ್ತೊಂದು ಸಲ ಅದೇ ಪಾಯದ ಮುಂದೆ ಡಿ.ಆರ್. ಪಾಟೀಲರನ್ನು ನಿಲ್ಲಿಸಿ ಫೋಟೋ ತೆಗೆದಿರುವ ಉದಾಹರಣೆ ಇದೆ. ಇವೆಲ್ಲಾ ground reality ಇರಬೇಕಾದರೆ ಇದರಲ್ಲಿ ಸುಧಾರಣೆ ತರಬೇಕಾಗಿದೆ. ನೀವು ಎಲ್ಲಾ ಶಾಸಕರು, ಲೋಕಸಭೆಯ ಸದಸ್ಯರು ಪರಿಪೂರ್ಣರಾಗಿದ್ದಾರೆಂದು ಹೇಳಬಹುದು, ಆ ರೀತಿ ಹೇಳಿ ಇವತ್ತು ವ್ಯವಸ್ಥೆಯನ್ನು ಸಂಪೂರ್ಣವಾಗಿ ಅಲಕ್ಷ್ಯ ಮಾಡುವುದು ಬೇಡ. ಇದರ ಬಗ್ಗೆ ಮತ್ತೊಂದು ಸಲ ಹೇಗೂ ಚರ್ಚೆ ಮಾಡಬೇಕಾಗಿದೆ. ಇದನ್ನು re-considered ಮಾಡಬೇಕೆಂದು ಬಂದಿರುವಾಗ ತಾವೆಲ್ಲರೂ ವಿವರವಾಗಿ ಚರ್ಚೆ ಮಾಡಿ. ನಾನು ನನ್ನ ಹತ್ತಿರ ಇರುವ ದಾಖಲೆಗಳನ್ನು ತಮ್ಮೆದುರು ಮಂಡಿಸುತ್ತೇನೆ. ಆಗ ಮುಂದಿನ ಕ್ರಮ ಕೈಗೊಳ್ಳಿ.

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಉದಾಸಿಯವರು ಮಾತನಾಡಿರುವುದನ್ನು ಕೇಳಿದಾಗ ಪಕ್ಷ ಬದಲಾದ ಕೂಡಲೇ idealize ಇಷ್ಟು ಬೇಗ ಬದಲಾವಣೆ ಆಗುತ್ತದೆ ಎಂದು ನಾನು ಅಂದುಕೊಂಡಿರಲಿಲ್ಲ. 1987ರಲ್ಲಿ ನಾನು ಜಿಲ್ಲಾಪಂಚಾಯಿತಿಯ ಸದಸ್ಯನಾಗಿದ್ದಾಗ ಅವರು ಶಾಸಕರಾಗಿದ್ದರು. ನಮಗೆಲ್ಲಾ ಗೈಡ್ ಮಾಡುತ್ತಿದ್ದರು. ಪೂರ್ತಿ ಸ್ವಾತಂತ್ರ್ಯ ಕೊಟ್ಟಿದ್ದರು. ಆ ರೀತಿ commitment ಏಕೆ ಈಗ ಬದಲಾವಣೆಯಾಗಿ ಬಿಟ್ಟಿದೆಯೋ ನನಗೆ ಬಾರಿ

ಆಶ್ಚರ್ಯವಾಗುತ್ತಿದೆ. ಈಗ ನೀವು housing ನ್ನೇ ತೆಗೆದುಕೊಳ್ಳಿ. ಒಂದು ಊರಿನಲ್ಲಿ land less 1,2,3 ಎಕರೆಯದ್ದು ಎಷ್ಟು 5 ಎಕರೆಯದ್ದು ಎಷ್ಟು ದಾಖಲೆ ಇರುತ್ತದಲ್ಲವೇ? ನಮಗೆ ಪ್ರಾಮಾಣಿಕವಾಗಿ ಅದನ್ನು ಬಡವರಿಗೇ ಮುಟ್ಟಿಸಬೇಕು ಎಂಬ ಇಚ್ಚೆ ಇದ್ದರೆ ಆ ದಾಖಲೆ ಪ್ರಕಾರ list ಮಾಡಿ. ಎಷ್ಟು ಮಂದಿ eligible ಆಗುತ್ತಾರೆ ಮಾಡಿ ಲಾಟರಿ ಹಾಕಿ ಎತ್ತುಬಿಡಿ. ಯಾವುದೇ ರೊಕ್ಕವನ್ನು ಕೊಡುವಂತೆ ಇಲ್ಲ. ಆ commitment ಇರಬೇಕು ನಮಗೆ. ನಾವು ಮಾಡಲೇ ಬೇಕು ಎಂದು commitment ಇದ್ದರೆ ದಾರಿ ತಾನಾಗಿಯೇ ಸಿಗುತ್ತದೆ. ಹಣವನ್ನು ಹಂಚಿಕೊಳ್ಳುತ್ತಾರೆ ಎಂದು ತಾವುಗಳು ಹೇಳಿದ್ದೀರಿ. ನೀವು ಬರುವುದಕ್ಕಿಂತ ಪೂರ್ವದಲ್ಲಿ ಹತ್ತು ಸಾವಿರ ರೂಪಾಯಿ ಕೆಲಸ ಕೂಡ ಟೆಂಡರ್ ಮೂಲಕ ಆಗಬೇಕು, competitive bidding open ಆಗಬೇಕು ಎಂದು ಸರ್ಕಾರದ ಆದೇಶವಾಗಿದೆ. ತಾವು ಬಂದು ಅದನ್ನು ಏಕೆ ಉಲ್ಟಾ ಮಾಡಿದಿರೋ ಅರ್ಥವಾಗುತ್ತಿಲ್ಲ. ಆಗ ಹಂಚಿಕೊಂಡರೂ ತಮಗೆ ಬೇಕಾದಂಥ contractorಗೆ ಕೊಡಲು ಆಗುವುದಿಲ್ಲ. ಹೀಗೆ system improve ಮಾಡಿಕೊಂಡು ಹೋಗಬೇಕು. ಎಲ್ಲವೂ ಶಾಸಕರಿಗೆ ಬಂದರೆ ಹೇಗೆ? ಇವತ್ತೇನೋ ನಾವು ಶಾಸಕರಾಗಿದ್ದೇವೆ, ಚೆನ್ನಾಗಿದೆ ನಾಳೆ ಶಾಸಕತ್ವ ಹೋದ ನಂತರ ಹೇಗೆ?

ಶ್ರೀ ಆರ್. ವಿ. ದೇಶಪಾಂಡೆ: ಈ ವ್ಯವಸ್ಥೆಯಲ್ಲಿ ದೋಷಗಳು ಇರಬಹುದು. ಯಾವ ವ್ಯವಸ್ಥೆಯಲ್ಲಿ ದೋಷಗಳು ಇಲ್ಲ ಹೇಳಿ? ಕಾಯ್ದೆ ಕಾನೂನನ್ನು ಮಾಡಿ ಅದನ್ನು ನಾವು ಉಲ್ಲಂಘನೆ ಮಾಡುವುದಿಲ್ಲವೇ? ಆ ವ್ಯವಸ್ಥೆಯಲ್ಲಿ ಯಾವ ರೀತಿಯಾಗಿ ಸುಧಾರಣೆ ಮಾಡಬೇಕು, ಅನುಭವದಿಂದ ಏನು ಮಾಡಬೇಕು ಎಂಬುದನ್ನು ಹೇಳಿ. ಆದರೆ, ಈ ವ್ಯವಸ್ಥೆಯನ್ನೇ ಮುಚ್ಚುತ್ತೇವೆ, ಅವರ ಅಧಿಕಾರವನ್ನೇ ಕಿತ್ತುಕೊಳ್ಳುತ್ತೇವೆ ಎಂಬುದು ಸರಿಯಲ್ಲ. ಎಂ.ಎಲ್.ಎ.ಗಳ ಅಧಿಕಾರ ಹೋಗುವ ಒಂದು ಕಾಲ ಬರಬಹುದು. ಆಗ ನಾವು ನಮ್ಮ ಅಧಿಕಾರವನ್ನು continue ಮಾಡಿ ಎಂದು ಕೇಳುತ್ತೇವೆಯೇ? ಅದೇ ಪ್ರಕಾರ ರಾಜ್ಯಾದ್ಯಂತ agitation ಆಗುತ್ತಿದೆ. ನಮ್ಮ ಉತ್ತರ ಕನ್ನಡ ಜಿಲ್ಲೆಯ ಜನರು ಕುಳಿತಿದ್ದಾರೆ. ಇದರ ಅವಶ್ಯಕತೆ ಏಕೆ? ಅವರನ್ನು ಕರೆಸಿ ಮಾತನಾಡಿ, ಚರ್ಚೆ ಮಾಡಿ sort out ಮಾಡಿ. System ನಾವು ನೀವೆಲ್ಲ ವಿಶ್ವಾಸ ಇಡುವಾಗ ಇದರಲ್ಲಿ ಏನಾದರೂ ಲೋಪ ದೋಷವಿದ್ದರೆ ಅದನ್ನು ಮಾತುಕತೆಯ ಮೂಲಕ, ಗೈಡೆನ್ಸ್ ಮೂಲಕ ಪರಿಹಾರವಾಗುತ್ತದೆ. ಆ ದೃಷ್ಟಿಯಿಂದ ತಾವು ಕ್ರಮ ತೆಗೆದುಕೊಳ್ಳಿ. ಇವತ್ತು ಒಂದೆರಡು ಸಲಹೆಗಳನ್ನು ಕೊಡುತ್ತೇನೆ. ಮನೆಗಳ

ಬಗ್ಗೆ ಹೇಳುವುದಾದರೆ, ಟೀಕೆ ಮಾಡುತ್ತೇನೆ ಎಂದು ದಯಮಾಡಿ ತೆಗೆದುಕೊಳ್ಳಬೇಡಿ. ಆಶ್ರಯ, ಕಳೆದ 3 ವರ್ಷದಲ್ಲಿ ನಾವು ಶಾಸಕರಾಗಿ ಬಂದ ನಂತರ ಧರ್ಮಸಿಂಗ್ ಮುಖ್ಯಮಂತ್ರಿಯಾಗಿದ್ದಾಗ ಒಂದು ಪಂಚಾಯತಿಗೆ 40 ಮನೆಗಳನ್ನು ಕೊಟ್ಟರು. ಮೊನ್ನೆ ಎರಡು ಮೂರು ತಿಂಗಳ ಹಿಂದೆ 60 ಮನೆಗಳನ್ನು ಒಂದು ಪಂಚಾಯಿತಿಗೆ ಕೊಡಲು ಹೇಳಿದ್ದೀರಿ. ಅದು ಬಿಟ್ಟರೆ ಹೊಸ ಮನೆ ಕೊಟ್ಟಿಲ್ಲ. ಇದರಲ್ಲಿ progress ಬಹಳ poor ಇದೆ. 15-20% progress ಇದೆ. ಆದ್ದರಿಂದ ಇದರ ಬಗ್ಗೆ ಸರಿಯಾದ monitoring ಮಾಡಿ ಬಡವರಿಗೆ ಇದು ಸಿಗುವ ವ್ಯವಸ್ಥೆಯಾಗಬೇಕು. ನವಗ್ರಾಮ ಯೋಜನೆ ಇತ್ತು, ಅದನ್ನು ತೆಗೆದುಬಿಟ್ಟಿರಿ. ಏಕೆ ತೆಗೆದಿರೊ ನನಗೆ ಗೊತ್ತಿಲ್ಲ. ನೆರಳಿನ ಭಾಗ್ಯದಲ್ಲಿ ಬಡವರಿಗೆ, ಕೂಲಿ ಕಾರ್ಮಿಕರಿಗೆ ಇಷ್ಟು ದಿವಸ ಮನೆಯನ್ನು ಕೊಡುತ್ತಿದ್ದೆವು. ಅದನ್ನೂ ಬಂದ್ ಮಾಡಿದಿರಿ. ಅಂಬೇಡ್ಕರ್ ಯೋಜನೆಯಲ್ಲಿ ಒಂದೂ ಮನೆ ಇಲ್ಲ. ಇಂದಿರಾ ಆವಾಜ್ ಯೋಜನೆಯಲ್ಲಿ ನಾವು ಇವತ್ತು minimum 20 ಮನೆಗಳನ್ನು ಮಾಡಿದ್ದೇವೆ. ಆದರೆ ಅದನ್ನು ಕೊಟ್ಟಿಲ್ಲ. ಯಾರಿಗೂ ಇಂದಿರಾ ಆವಾಜ್ ಮನೆ ಸಿಗಲು ಆಗಿಲ್ಲ. ತಾವು ಇದರ ಬಗ್ಗೆ ಸ್ವಲ್ಪ ಪರಿಶೀಲನೆ ಮಾಡಿ.

ಶ್ರೀ ಸಿ.ಎಂ. ಉದಾಸಿ: ತಮಗೆ ತಪ್ಪು ಕಲ್ಪನೆ ಇದರಲ್ಲಿ ಇದೆ. ಬಿ.ಪಿ.ಎಲ್ list ಮಾಡಿದವರು ಯಾರು? ಗ್ರಾಮಪಂಚಾಯಿತಿ ಸದಸ್ಯರೇ ಮಾಡಿರುವುದು.

ಶ್ರೀ ಶರಣಪ್ರಕಾಶ ರುದ್ರಪ್ಪ ಪಾಟೀಲ್: ಇದು ತಪ್ಪು ಮಾಹಿತಿ. ಬಿ.ಪಿ.ಎಲ್ list ನ್ನು ಗ್ರಾಮಪಂಚಾಯಿತಿ ಸದಸ್ಯರು ಮಾಡಿಲ್ಲ. ಮಾನ್ಯ ಸಚಿವರೇ ಈ ರೀತಿಯ ತಪ್ಪು ಹೇಳಿಕೆ ಕೊಟ್ಟರೆ ನಾವು ಕೇಳಿಕೊಂಡು ಕೂರಬೇಕೆ?

ಶ್ರೀ ಸಿ.ಎಂ.ಉದಾಸಿ: ಬೊಮ್ಮನಹಳ್ಳಿ ಎಂಬ ಊರಿನಲ್ಲಿ ನಾನು ತಪಾಸಣೆ ಮಾಡಿದಾಗ 14 ಅಂಕಗಳಿಗಿಂತ ಕಡಿಮೆ ಇದ್ದವರನ್ನು ಗುರುತಿಸಬೇಕಾದ ಪ್ರಶ್ನೆ ಬಂದಾಗ 47 ಜನ ಇದ್ದರು. ಅದರಲ್ಲಿ ಟ್ರಾಕ್ಟರ್ ಇದ್ದ ಒಬ್ಬನ ಹೆಸರೂ ಇತ್ತು. ಆದ್ದರಿಂದ ನಾನು ಏನು ಹೇಳುತ್ತಿದ್ದೇನೆಂದರೆ, ಎಲ್ಲಾ ಪರಿಪೂರ್ಣ ಇದೆಯೆಂದು ತಿಳಿದುಕೊಂಡು defend ಮಾಡಿಕೊಳ್ಳುವುದು ಸರಿಯಲ್ಲ.

ಆರ್.ವಿ. ದೇಶಪಾಂಡೆ: ತಾವು ಎಲ್ಲವನ್ನೂ ಹಳದಿ ಕಣ್ಣಿನಿಂದ ನೋಡಲು ಏಕೆ ಪ್ರಾರಂಭ ಮಾಡಿದ್ದೀರಿ? ನೀವು ನಾವು ಒಳ್ಳೆಯ ಸ್ನೇಹಿತರು. ತಾವು ಒಳ್ಳೆಯ ಮಂತ್ರಿಗಳು. ಒಳ್ಳೆಯ ಕೆಲಸ ಮಾಡಿ. ಒಳ್ಳೆಯದನ್ನು ಹೇಳಿ.

ಶ್ರೀ ಸಿ.ಎಂ. ಉದಾಸಿ: ಯಾವ ಕಾರಣಕ್ಕಾಗಿ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಾಗ Vigilance Commission ಮಾಡಿದಿರಿ? ನಿಮಗೆಲ್ಲ ಅನುಭವಕ್ಕೆ ಬಂದಿತ್ತು. ಆದ್ದರಿಂದ ಇದು Vigilance Commission ನಲ್ಲಿ ಬರಬೇಕು, ಚರ್ಚೆಯಾಗಿ ಅನರ್ಹರಿದ್ದರೆ ವಾಪಸ್ ಕಳುಹಿಸಬೇಕು ಎಂಬ ತೀರ್ಮಾನ ಮಾಡಿದ್ದಿರಿ. ಆಗ ಆ ರೀತಿ ಏಕೆ ಮಾಡಿದ್ದಿರಿ? ಇದರ ಬಗ್ಗೆ ಹೇಗೂ ಮುಂದೆ ಚರ್ಚೆ ಮಾಡುವುದಿದೆ. ಆಗ ಚರ್ಚೆ ಮಾಡೋಣ. ನಾನು ಅದಕ್ಕೆ ಬೇಕಾದ ದಾಖಲೆಯನ್ನು ಹಾಜರುಪಡಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:– ನಮ್ಮ ಸ್ನೇಹಿತರಾದ ಮಾನ್ಯ ಉದಾಸಿಯವರಿಗೆ ಪರಿಸ್ಥಿತಿ ಏನಿದೆ ಎಂಬುದೆಲ್ಲಾ ಗೊತ್ತಿದೆ. ಮಾನ್ಯ ಡಿ.ಆರ್. ಪಾಟೀಲ್‌ರು ಹೇಳಿದಂತೆ ಈ ಪ್ರಕಾರ ಏಕೆ ಮಾತನಾಡುತ್ತಿದ್ದಾರೋ ಗೊತ್ತಿಲ್ಲ. He is a committed man Rural Development and belief in Panchayat Raj ಎಂದು ನನಗೆ ಗೊತ್ತಿದೆ. ನಾವು ದೋಷ ಇಲ್ಲವೆಂದು ಹೇಳುತ್ತಿಲ್ಲ, ದೋಷ ಇರಬಹುದು, ಅದನ್ನು ಸುಧಾರಣೆ ಮಾಡಬೇಕಲ್ಲವೇ? ನಾವು system ಅನ್ನೇ close ಮಾಡಲಿಕ್ಕಾಗುತ್ತದೆಯೇ? After all, If you destroy the system, Government of Indiaದಿಂದ ನಿಮಗೆ ಬರುವ ಆದಾಯ ಸಹಿತ ಕಡಿಮೆಯಾಗಬಹುದು. ಹಾಗಾಗಿ ನಾನು ವಿನಂತಿ ಮಾಡುತ್ತಿದ್ದೇನೆ, ಇದನ್ನು ತಾವು ಬಹಳ ಸೀರಿಯಸ್ಸಾಗಿ ತೆಗೆದುಕೊಳ್ಳಬೇಕು, ಹಗುರವಾಗಿ ತೆಗೆದುಕೊಳ್ಳಬಾರದು. ಎಲ್ಲೆಲ್ಲಿ agitation ಇದೆಯೋ, ಅಲ್ಲೆಲ್ಲಾ ಕರೆಸಿ ಮಾತನಾಡಬೇಕೆಂದು ನಾನು ಅವರಲ್ಲಿ ವಿನಂತಿ ಮಾಡುತ್ತಿದ್ದೇನೆ. ಮಾನ್ಯ ಯಡಿಯೂರಪ್ಪನವರೆ, ಮನೆಗಳ ನಿರ್ಮಾಣದ ಬಗ್ಗೆ ಸ್ವಲ್ಪ effective action ತೆಗೆದುಕೊಳ್ಳಿ. ಮನೆಗಳ progress ತಾವು ನೋಡಿ. ಮಾನ್ಯ ಎಸ್.ಎಂ. ಕೃಷ್ಣ ರವರ ಕಾಲದಲ್ಲಿ 8 ಲಕ್ಷ ಮನೆ ಕಟ್ಟಿದ್ದೆವು. ತಾವು ಬೇಜಾರು ಮಾಡಿಕೊಳ್ಳಬಾದರು. it is fact. ಮಾನ್ಯ ಎಸ್.ಎಂ. ಕೃಷ್ಣ ರವರ ಕಾಲದಲ್ಲಿ 11 ಲಕ್ಷದಲ್ಲಿ 8 ಲಕ್ಷ ಮನೆಗಳನ್ನು complete ಮಾಡಿದ್ದೆವು. ನಿಮ್ಮ ಕಾಲದಲ್ಲಿ 3 ವರ್ಷಗಳಿಂದ 64 ಸಾವಿರ ಮನೆಗಳೂ ಸಹ complete ಆಗಿಲ್ಲ. ನವಗ್ರಾಮದಲ್ಲಿ ಮನೆ ಇಲ್ಲ, ನೆರಳಿನ ಭಾಗ್ಯದಲ್ಲಿ ಮನೆ ಇಲ್ಲ, ಅಂಬೇಡ್ಕರ್ ಯೋಜನೆಯಲ್ಲಿ ಮನೆ ಇಲ್ಲ, ಇಂದಿರಾ ಆವಾಜ್ ಯೋಜನೆಯಲ್ಲಿ ಮನೆ ಇಲ್ಲ. BPL Card ಇದ್ದರೂ ಸಹ ಇವತ್ತು ಮನೆ ಸಿಗುತ್ತಿಲ್ಲ. ಅವರ ಹತ್ತಿರ ಎಲ್ಲಾದರೂ ಟಿವಿ ಅಥವಾ ಮತ್ತೊಂದು ಇದ್ದರೆ ಆತ ಹಾಳಾಗಿ ಹೋಗುತ್ತಾನೆ, ಅವನಿಗೆ ಮನೆ ಸಿಗುವುದಿಲ್ಲ. ತಾವು ಇದರ ಬಗ್ಗೆ ಸ್ವಲ್ಪ ಪರಿಶೀಲನೆ ಮಾಡಬೇಕಾಗುತ್ತದೆ. ಯಾವ ಪ್ರಕಾರವಾಗಿ

ಆಶ್ರಯಕ್ಕೆ ತಾವು withdraw ಮಾಡಿದ್ದೀರಿ? ಆ ಪ್ರಕಾರ ಇದಕ್ಕೂ withdraw ಮಾಡಿ ಆ ಬಡವರಿಗೆ ಮನೆ ಹಂಚಿಕೆ ಮಾಡಲು ತಾವು ಅನುವು ಮಾಡಿಕೊಳ್ಳಬೇಕಾಗುತ್ತದೆ. ಕೊನೆಯದಾಗಿ ಒಂದು ಮಾತನ್ನು ನಾನು ಹೇಳಬಯಸುತ್ತೇನೆ. Infrastructure ನಲ್ಲಿ port development ಬಗ್ಗೆ ಹೇಳುವುದಾದರೆ, ಮಾನ್ಯ ಯಡಿಯೂರಪ್ಪನವರೆ, ನಮ್ಮ ಕಡೆ ಯಾವುದೂ ಬಂದರು ಅಭಿವೃದ್ಧಿಯಾಗಿಲ್ಲ. ನಾನು ಕೈಗಾರಿಕಾ ಸಚಿವನಾಗಿದ್ದಾಗ ಕೇಂದ್ರದ ರೈಟ್ಸ್ ಸಂಸ್ಥೆ ಮುಖಾಂತರ ಒಂದು ಸ್ಟಡಿ ಮಾಡಿಸಿದ್ದೆ. ಈ ಕರಾವಳಿಯ 120 ಕಿ.ಮೀ. ನಲ್ಲಿ ಯಾವ port ಅನ್ನು develop ಮಾಡಬಹುದು ಎಂದು ಅದರಲ್ಲಿದೆ. ಮೊದಲು ತದಡಿ port development ಮಾಡಲಿಕ್ಕೆ ಸಾಧ್ಯತೆ ಇದೆ. We called for global tenders also. Global tender ಕೊಟ್ಟು, Letter of Intent issue ಮಾಡಿದೆವು. But, South Korean party did not come and they did not turn up. Letter of Intent ಕೊಟ್ಟರೂ ಅವರು ಕೆಲಸ ಮಾಡಲಿಲ್ಲ. ಸೌತ್ ಕೊರಿಯನ್ ಪಾರ್ಟಿಯವರು ಬರಲೇ ಇಲ್ಲ. ಒರಿಸ್ಸಾ ತೆಗೆದುಕೊಳ್ಳಿ. ಗುಜರಾತ್ ತೆಗೆದುಕೊಳ್ಳಿ, ಅವರು ಯಾವ ರೀತಿಯಾಗಿ port development ಮಾಡುತ್ತಿದ್ದಾರೆ ಎಂಬುದನ್ನು ನೋಡಿ. port development ಆದರೆ ಸಾಕಷ್ಟು ಅಭಿವೃದ್ಧಿ ಕರಾವಳಿಯಲ್ಲಿ ಆಗಲಿಕ್ಕೆ ಸಾಧ್ಯವಾಗುತ್ತದೆ. ರಾಜ್ಯದ ಅಭಿವೃದ್ಧಿ ಸಹ ಆಗಲಿಕಕೆ ಸಾಧ್ಯವಾಗುತ್ತದೆ. ಹಾಗಾಗಿ ಈ ತದಡಿ ಪೋರ್ಟ್ ಡೆವಲಪ್ ಮಾಡಲಿಕ್ಕೆ ಎಲ್ಲಾ ತರಹದ ಅನುಕೂಲತೆಗಳಿವೆ. 1800 ಎಕರೆ ಲ್ಯಾಂಡ್ is in possession of KIADB. ಹಾಗಾಗಿ immediately ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವಿದೆ. ಅದೇ ಪ್ರಕಾರ ಬೇಲಿಕೆರೆ ಪೋರ್ಟ್, ಇದೂ ಕೂಡ develop ಮಾಡಲಿಕ್ಕೆ ಸಾಕಷ್ಟು scope ಇದೆ. ತಾವು ತಕ್ಷಣ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಅದೇ ಪ್ರಕಾರ Fisherier port ಎಲ್ಲೆಲ್ಲಿ develop ಮಾಡಲಿಕ್ಕೆ ಸಾಧ್ಯವಿದೆ ಎಂಬುದನ್ನು ನೋಡಬೇಕು. Fishermenಗೆ coastal facilities ಇರಬಹುದು. auction plaotforms ಇರಬಹುದು, ಅದರ ಬಗ್ಗೆಯೂ ಕೂಡ RITES ನವರು ರಿಪೋರ್ಟ್ ಕೊಟ್ಟಿದ್ದಾರೆ. ಇಡೀ ಕರಾವಳಿಯ 120 ಕಿ.ಮೀ. ನಲ್ಲಿ ಎಲ್ಲೆಲ್ಲಿ ಏನೇನು ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವಿದೆ? ಎಂದು ಅದರಲ್ಲಿದೆ. ಅದು ಮಲ್ಪೆ ಇರಬಹುದು, ಮತ್ತೊಂದು ಇರಬಹುದು, ಭಟ್ಕಳ್ ಇರಬಹುದು, I do not want to go in to specific names, ಆ RITES report ತರಿಸಿ, ports development ಗೂ ಸಹ ತಾವು ಹೆಚ್ಚಿನ ಗಮನ ಕೊಟ್ಟು, ಅದಕ್ಕೆ stress ಕೊಟ್ಟರೆ, ಇಡೀ ಕರಾವಳಿಯಲ್ಲಿ fisheries ports ಅಥವಾ ಇತರ port develop ಆದರೆ prospective ಈ ರಾಜ್ಯಕ್ಕೂ, ರಾಷ್ಟ್ರಕ್ಕೂ ಮತ್ತು ಕರಾವಳಿ ಭಾಗಕ್ಕೂ ಬರಲಿಕ್ಕೆ ಸಾಧ್ಯತೆ

ಇದೆಯೆಂದು ತಮಗೆ ನಾನು ಸಲಹೆ ಕೊಡುತ್ತಾ, ಮಾನ್ಯ ಅಧ್ಯಕ್ಷರೆ, ತಾವು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ (ಘೇಮಗಲ್):– ಸನ್ಮಾನ್ಯ ಸಭಾಧ್ಯಕ್ಷರೆ, ಬೇಡಿಕೆಗಳ ಮೇಲೆ ನಡೆಯುತ್ತಿರತಕ್ಕಂಥ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಪ್ರಾರಂಭಿಕವಾಗಿ ತಮಗೆ ಧನ್ಯವಾಧಗಳನ್ನು ಅರ್ಪಿಸುತ್ತೇನೆ. ಈ ಬೇಡಿಕೆಗಳಲ್ಲಿ ಸಾಕಷ್ಟು ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆಯಾಗುತ್ತಿದೆ. ಅದರಲ್ಲಿ 2–3 ವಿಷಯಗಳ ಮೇಲೆ ಮಾತ್ರ ನಾನು ಚರ್ಚೆ ಮಾಡಲಿಕ್ಕೆ ಬಯಸುತ್ತೇನೆ. ಪ್ರಥಮವಾಗಿ, ಗ್ರಾಮಾಂತರ ಭಾರತದಲ್ಲಿ ಇವತ್ತು ಏನು ಪರಿಸ್ಥಿತಿ ಇದೆ ಎನ್ನುವುದರ ಬಗ್ಗೆ ಸ್ವಲ್ಪ ಮಟ್ಟಿಗೆ ವಿಶ್ಲೇಷಣೆ ಮಾಡಲಿಕ್ಕೆ ಬಯಸುತ್ತೇನೆ. ಇವತ್ತು ನಮ್ಮ ದೇಶದಲ್ಲಿ ಏನಾಗಿದೆ ಎಂದರೆ, ಉತ್ತರ ಭಾರತ, ದಕ್ಷಿಣ ಭಾರತ, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಹೀಗೆ ನಾನಾ ರೀತಿಯಲ್ಲಿ ನಾವು ನಾವೇ ವಿಭಜನೆ ಮಾಡಿಕೊಳ್ಳುವುದರಲ್ಲಿ ಕಳೆದಿದ್ದೇವೆಯೇ ಹೊರತು, ನಮ್ಮ ಸಮಯವನ್ನು ಕೂಡಿಸತಕ್ಕಂಥ ಪ್ರಯತ್ನದಲ್ಲಿ ನಾವು ಮಾಡುತ್ತಿಲ್ಲ. ಆದರೂ ಸಹ ನಾನೂ ಎಲ್ಲೋ ತಪ್ಪಿ, ಅದೇ ಹೆಜ್ಜೆ ಇಡಬಾರದು ಎನ್ನುವುದು ಮನಸ್ಸಿನಲ್ಲಿ ಇದ್ದರೂ ಸಹ, ಇವತ್ತು ಏನಾಗಿದೆ ಎಂದರೆ ನಮ್ಮ ದೇಶದಲ್ಲಿ ಸ್ಪಷ್ಟವಾಗಿ ಈ ನಗರ ಪ್ರದೇಶಗಳಿಂದ ಕೂಡಿರತಕ್ಕಂಥ ಒಂದು ಇಂಡಿಯಾ, ಗ್ರಾಮಾಂತರ ಪ್ರದೇಶಗಳಿಂದ ಕೂಡಿರತಕ್ಕಂಥ ಭಾರತ ಅನ್ನತಕ್ಕಂಥದ್ದು ಇನ್ನೊಂದು, ಹೀಗೆ ಬೇರೆ ಬೇರೆ ದಿಕ್ಕಿನಲ್ಲಿ ನಾವು ಸಾಗುತ್ತಿದ್ದೇವೆ ಎನ್ನುವುದು ನಮ್ಮ ಮನಸ್ಸನ್ನು ಪ್ರತಿನಿತ್ಯ ಕಾಡುತ್ತಿರುವ ವಿಷಯವಾಗಿದೆ. ಹಾಗಾಗಿ ಇದಕ್ಕೆ ಕಾರಣವೇನು? ಎಂಬುದನ್ನು ಸ್ವಲ್ಪಮಟ್ಟಿಗೆ ವಿಶ್ಲೇಷಣೆ ಮಾಡುತ್ತಾ, ನಂತರ ಬೇಡಿಕೆಗಳ ಕಡೆಗೂ ಸಹ ಬರುತ್ತೇನೆ. 10ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ರಾಷ್ಟ್ರದ ಆರ್ಥಿಕ ಅಭಿವೃದ್ಧಿ ಶೇಕಡ 7 ರಷ್ಟು ಇತ್ತು. ಅದರಲ್ಲಿ ಕೃಷಿ ಶೇಕಡ 1 1/2 ಮಾತ್ರ ಬೆಳೆಯಿತು. ಇಡೀ ಆರ್ಥಿಕ ವ್ಯವಸ್ಥೆ ಶೇಕಡ 7 ರಷ್ಟು ಬೆಲೆದರೆ, ಕೃಷಿ ಬೆಳೆದಿದ್ದು ಮಾತ್ರ ಶೇಕಡ 1 1/2 ಮಾತ್ರ. 11ನೇ ಪಂಚವಾರ್ಷಿಕ ಯೋಜನೆ ಆರಂಭವಾಗಿ ಬಹುಶಃ ಈಗ ನಾವು ಮೂರನೇ ವರ್ಷದಲ್ಲಿದ್ದೇವೆ. ಈ 2–3 ವರ್ಷಗಳ ಅಂಕಿ ಸಂಖ್ಯೆಗಳನ್ನು ತೆಗೆದುಕೊಂಡರೆ, ಈಗಾಗಲೇ ನಮ್ಮ ಆರ್ಥಿಕ ವ್ಯವಸ್ಥೆ ಶೇಕಡ 9ಕ್ಕೂ ಮೇಲ್ಪಟ್ಟು ಬೆಳೆಯುತ್ತಿದೆ, ಎಲ್ಲಾ ಸಮುಚ್ಚಯ ಸೇರಿ ಆರ್ಥಿಕ ಶೇಕಡ 9 ಕ್ಕೂ ಮೇಲ್ಪಟ್ಟು ಬೆಳೆಯುತ್ತಿದ್ದರೆ, ಹಿಂದಿನ ಪಂಚವಾರ್ಷಿಕ ಯೋಜನೆಯಲ್ಲಿ

ಶೇಕಡ 1 1/2 ಇದ್ದ ಕೃಷಿ ಬೆಳವಣಿಗೆ ದರ ಇವತ್ತು ಶೇಕಡ 1ಕ್ಕೆ ಇಳಿದಿದೆ. ನಮ್ಮ ಕೃಷಿ ವಲಯ ವರ್ಷದಿಂದ ವರ್ಷಕ್ಕೆ ಕೇವಲ ಶೇಕಡ 1 ರಷ್ಟು ಮಾತ್ರ ಬೆಳೆಯುತ್ತಿದೆ. ಇವತ್ತು ಕೃಷಿ ವಲಯ, ಉತ್ಪಾದನಾ ವಲಯ ಮತ್ತು Service Industry ಎಂಬ ಮೂರು ವಲಯಗಳಿವೆ. ನಾನು ಆಗಲೇ ಅಂಕಿ ಸಂಖ್ಯೆಗಳನ್ನು ನೋಡುತ್ತಿದ್ದೆ. ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿ ವಲಯ ಸುಮಾರು ಶೇಕಡ 35ರಷ್ಟು ಪಾಲು ಹೊಂದಿತ್ತು. ಪ್ರತಿ ಪಂಚವಾರ್ಷಿಕ ಯೋಜನೆಗೆ ಶೇಕಡ 5 ರಷ್ಟು ಕೃಷಿ ವಲಯದ ಪಾಲು ಕಡಿಮೆಯಾಗುತ್ತಾ ಬರುತ್ತಿದೆ. ಈಗ ಹಾಲಿ ನನಗೆ ಅರ್ಥವಾದ ಮಟ್ಟಿಗೆ ನಮ್ಮ ರಾಜ್ಯದ್ದೇ ಮಾತನಾಡುವುದಾದರೆ, ನಮ್ಮ ರಾಷ್ಟ್ರ ಮಟ್ಟದಲ್ಲಿ ಶೇಕಡ 65 ರಷ್ಟು ಕೃಷಿ ವಲಯದ ಪಾಲಿದ್ದರೆ, ನಮ್ಮ ರಾಜ್ಯದಲ್ಲಿ ಶೇಕಡ 19.2 ಎರಷ್ಟು ಮಾತ್ರ ಕೃಷಿ ವಲಯದ ಪಾಲಿದೆ. ಇದು ಏಕೆ ಮುಖ್ಯವಾದ ಅಂಕಿ ಅಂಶಗಳಾಗುತ್ತದೆ. ಎಂದರೆ, ಕೃಷಿ ಮೇಲೆ ಇವತ್ತು ನಮ್ಮ ದೇಶದ ಶೇಕಡ 65 ರಷ್ಟು ಜನ ಅವಲಂಬಿಸಿದ್ದಾರೆ. ಶೇಕಡ 56 ರಷ್ಟು ಜನರು ಉತ್ಪಾದನೆ ಮಾಡಿದರೂ, ಅವರದು ಆರ್ಥಿಕ ವ್ಯವಸ್ಥೆಯ ಆದಾಯದಲ್ಲಿ ಪಾಲು ಶೇಕಡ 20 ರಷ್ಟು ಮಾತ್ರ. ಇನ್ನು 34–36% ಇತರರು ಯಾರಿದ್ದಾರೆ, ಅವರ ಪಾಲು ಶೇಕಡ 80 ರಷ್ಟು ಇದೆ. ಹಿಂದೆ ಭೂಮಿ ಒಡೆತನದ ವ್ಯವಸ್ಥೆಯಲ್ಲಿ ಎರಡು ವಲಯಗಳ ಮಧ್ಯೆ ಯಾವ ರೀತಿ ಅಜಗಜಾಂತರ ಇತ್ತೋ, ಇವತ್ತು ಇನ್ನೊಂದು macro levelನಲ್ಲಿ ಅದೇ ಅಜಗಜಾಂತರ ಕಂಡು ಬರುತ್ತಿದೆ. ಶೇಕಡ 65ರಷ್ಟು ಇರುವ ಕೃಷಿ ವಲಯದ ಪಾಲು ಆದಾಯದಲ್ಲಿ ಕೇವಲ 20ರಷ್ಟು ಮಾತ್ರ ಇದೆ. ಹೀಗಾಗಲು ಯಾರೋ ಏನೋ ವ್ಯವಸ್ಥಿತವಾಗಿ ಪಿತೂರಿ ನಡೆಸಿದ್ದಾರೆ ಎಂದು ಖಂಡಿತ ನಾನು ಹೇಳುವುದಿಲ್ಲ. ಆದರೆ ವ್ಯವಸ್ಥಿತವಾಗಿ ಹೇಗೆ ವರ್ಷದಿಂದ ವರ್ಷಕ್ಕೆ ಕೃಷಿ ಪಾಲು ಕಡಿಮೆಯಾಗುತ್ತಿದೆ ಎನ್ನತಕ್ಕಂಥ ಅಂಶವನ್ನು ತಮ್ಮ ಮುಖಾಂತರ ನಾನು ಸದನದ ಗಮನಕ್ಕೆ ತರಲಿಕ್ಕೆ ಬಯಸುತೇನೆ. ಹಾಗಾಗಿ ಕೃಷಿಕರು, ಗ್ರಾಮಾಂತರ ಪ್ರದೇಶದ ಜನತೆ ಏನಿದ್ದಾರೆ. ಅವರ ಪಾಲು ಪ್ರತಿ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಾ ಹೋಗುತ್ತಿದೆ. ಅದೇ ನಗರ ಪ್ರದೇಶಗಳಲ್ಲಿ ವಾಸ ಮಾಡತಕ್ಕಂಥವರ ತಲಾದಾಯ ಆದಾಯ, per capita income ಏನಿದೆಯೋ ಅದು ವರ್ಷದಿಂದ ವರ್ಷಕ್ಕೆ ಬೆಳೆಯುತ್ತಾ ಹೋಗುತ್ತಿದೆ. ಅವರ ಸಂಬಳ ಇರಬಹುದು, ಲಾಭ ಇರಬಹುದು, ಪ್ರತಿಯೊಂದು ನಗರ ಪ್ರದೇಶಗಳಲ್ಲಿ ಬೆಳೆಯುತ್ತಾ ಹೋಗುತ್ತಿದೆ. ಅದೇ ರೀತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ per capita income ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಾ ಹೋಗುತ್ತಿರತಕ್ಕಂಥದ್ದು ಇದೇ ಪುಸ್ತಕದಲ್ಲಿ ಒದಗಿಸಿರತಕ್ಕಂಥ ಅಂಕಿ

ಸಂಖ್ಯೆಗಳಿಂದ ಸ್ಪಷ್ಟವಾಗಿ ಕಾಣುತ್ತದೆ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕಂಥ ಜನರಲ್ಲಿ ಶೇಕಡ 49 ರಷ್ಟು ಜನ ಸಾಲದ ಸುಳಿಗೆ ಸಿಕ್ಕಿಹಾಕಿಕೊಂಡಿದ್ದಾರೆ. ನಮ್ಮ ದೇಶದಲ್ಲಿNational Sample Survey ಎಂದು 2-3 ವರ್ಷಗಳಿಗೊಮ್ಮೆ ಮಾಡುತ್ತಾರೆ. ಆ National Sample Survey ಯಲ್ಲಿ ಕಂಡು ಬಂದಿರುವಂತೆ, ಗ್ರಾಮಂತರ ಪ್ರದೇಶಗಳಲ್ಲಿನ ಶೇಕಡ 49ರಷ್ಟು ಜನ ಇವತ್ತು ಸಾಲದ ಸುಳಿಗೆ ಸಿಕ್ಕಿ ಹಾಕಿಕೊಂಡಿದ್ದಾರೆ. ಗ್ರಾಮಾಂತರ ಪ್ರದೇಶದ ಒಬ್ಬೊಬ್ಬನ ಮನುಷ್ಯನ ತಲೆ ಮೇಲೆ ಸುಮಾರು 13 ಸಾವಿರ ರೂಪಾಯಿಗಳಷ್ಟು ಸಾಲ ಇದೆ. ಶೇಕಡ 50ರಷ್ಟು ಜನ ಇವತ್ತು ಸಾಲದ ಸುಳಿಗೆ ಸಿಕ್ಕಿಹಾಕಿಕೊಂಡು ವರ್ಷ ವರ್ಷ ತಮ್ಮ ಜಮೀನುಗಳನ್ನು ಸಹ ಕಳೆದುಕೊಳ್ಳುತ್ತಿದ್ದಾರೆ. ಇವತ್ತು co-operaive institutions ಮುಚ್ಚುವ ಮಟ್ಟಕ್ಕೆ ಬಂದಿವೆ. ಲೇವಾದೇವಿಗಾರರ ಹತ್ತಿರ ಸಾಲ ಅವರು ತೆಗೆದುಕೊಳ್ಳಬೇಕು. ಲೇವಾದೇವಿಗಾರರ ಹತ್ತಿರ ಸಾಲ ತೆಗೆದುಕೊಂಡರೆ, ಅವನು ತನ್ನ ಜಮೀನನ್ನು ಬರೆದು ಕೊಡಬೇಕಾಗುತ್ತದೆ. ಜಮೀನನ್ನು ಬರೆದು ಕೊಟ್ಟು, ಕೊನೆಗೆ ಅವನು ಮೀಟರ್ ಬಡ್ಡಿ ಕಟ್ಟಲಾಗದೇ ತನ್ನ ಜಮೀನನ್ನು ಕಳೆದುಕೊಳ್ಳುತ್ತಿದ್ದಾನೆ. ಮೀಟರ್ ಬಡ್ಡಿ ಎಂಬುದು ತಿಂಗಳಿಗೆ 5ರೂಪಾಯಿಗಳಿಂದ 10 ರೂಪಾಯಿಗಳವೆರಗೆ Charge ಮಾಡುತ್ತಾರೆ. ಅದನ್ನು ಕುಬೇರ ಬಂದರೂ ಕಟ್ಟಲಿಕ್ಕೆ ಆಗುವುದಿಲ್ಲ, ಇನ್ನು ರೈತರು ಕಟ್ಟುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹಾಗಾಗಿ ಸಾಲದ ಸುಳಿಗೆ ಸಿಕ್ಕಿ ಹಾಕಿಕೊಂಡು ಅವರು ಇವತ್ತು ತಮ್ಮ ಜಮೀನನ್ನೂ ಸಹ ಕಳೆದುಕೊಳ್ಳುತ್ತಿದ್ದಾರೆ. ನಮ್ಮ ರಾಜ್ಯಕ್ಕೆ ಸೀಮಿತವಾಗಿ ಮಾತನಾಡುವುದಾದರೆ, ಕಳೆದ ಆಯವ್ಯಯದಲ್ಲಿ ತಾವು ಪ್ರಕಟಿಸಿರುವ ಹಾಗೆ ನಮ್ಮ ರಾಜ್ಯದ ಸಂಪೂರ್ಣ ಆರ್ಥಿಕ ವ್ಯವಸ್ಥೆಯ ಭಾರ 1 ಲಕ್ಷ 94 ಸಾವಿರದ 9 ಕೋಟಿ ರೂ. ಗಳು ಇದೆ. ಇದರಲ್ಲಿ ಕೃಷಿ ವಲಯದ ಭಾಗ ಶೇಕಡ 19.2 ಹಾಗೆ ಮಧ್ಯಮ ವಲಯವಾದ ಉತ್ಪಾದನಾ ವಲಯ ಶೇಕಡ 26 ಇದೆ. ಇನ್ನು ಅತಿ ವೇಗದಲ್ಲಿ ಬೆಳೆಯುತ್ತಿರುವ Service Industry ಶೇಕಡಾವಾರು ಹೆಚ್ಚಿದೆ. ಅದಕ್ಕೆ ನಮ್ಮ ಯಾವುದೇ ತಕರಾರು ಇಲ್ಲ. Service Industry ಬೆಳೆಯಬೇಕು, ಜನರಿಗೆ ಉದ್ಯೋಗ ಸಿಗಬೇಕು. ಅದರದ್ದು ಶೇಕಡ 54 ರಷ್ಟು ಭಾಗ ಇದೆ. ಆದರೆ ಆಗಲೇ ನಾನು ಹೇಳಿದ್ದರ ಬಗ್ಗೆ, ನಮ್ಮ ರಾಜ್ಯ ಮಟ್ಟಕ್ಕೆ ಸೀಮಿತವಾಗಿ ಮಾತನಾಡುವುದಾದರೆ ನಮ್ಮ ರಾಜ್ಯದ ಶೇಕಡ 65ರಷ್ಟು ಭಾಗದ ಜನರು ಗ್ರಾಮಾಂತರ ಪ್ರದೇಶಗಳಲ್ಲಿದ್ದಾರೆ. ನಮ್ಮ ರಾಜ್ಯದ ಆದಾಯದಲ್ಲಿ ಅವರ ಪತ್ರ 37 ಸಾವಿರ ಕೋಟಿ ರೂ. ಗಳು ಆಗಿದೆ. ಇನ್ನುಳಿದ ಶೇಕಡ 35ರಷ್ಟು ಜನರ ಪಾತ್ರ 1 ಲಕ್ಷ 56 ಸಾವಿರ ಕೋಟಿ ರೂ. ಗಳಾಗಿದೆ. ಇವೆರಡರ ನಡುವೆ ಎಷ್ಟು ಅಜ-ಗಜಾಂತರ ಇದೆ ಎಂದರೆ, ನೂರಕ್ಕೆ 65

ಜನ ಕೇವಲ 37 ರೂ. ಊಟ ಮಾಡಿದರೆ, ಇನ್ನುಳಿದ 35 ಜನ 156 ರೂ. ಗಳ ಊಟ ಮಾಡುತ್ತಿದ್ದಾರೆ. ಈ ರಿತಿಯ ವ್ಯವಸ್ಥೆಯಲ್ಲೇ ಇವತ್ತು ನಮ್ಮ ರೈತಾಪಿ ಜನ ಜೀವನ ಕಳೆದುಕೊಳ್ಳುತ್ತಿದ್ದಾರೆ. ಈ ಅಂಕಿ ಅಂಶಗಳ ಬಗ್ಗೆ ಮಾತನಾಡುವುದನ್ನು ಬಿಟ್ಟು, ಸ್ವಲ್ಪ ಕೆಳಮಟ್ಟಕ್ಕೆ ಬರುವುದಕ್ಕೆ ಬಯಸುತ್ತೇನೆ. ಇವತ್ತು ಕೃಷಿವಲಯಕ್ಕೆ ಏಕೆ ಈ ಗತಿ ಬಂದಿದೆ, ಗ್ರಾಮಾಂತರ ಪ್ರದೇಶದಲ್ಲಿ ಏನು ಪರಿಸ್ಥಿತಿ ಇದೆ? ಇಲ್ಲಿ ರೈತಪ್ರತಿನಿಧಿಗಳೆಲ್ಲಾ ಇದ್ದೇವೆ, ಸನ್ಮಾನ್ಯ ಅಧ್ಯಕ್ಷರೆ, ತಾವು ಕೂಡ ರೈತರ ಒಬ್ಬ ಪ್ರತಿನಿಧಿಯಾಗಿ ಇಲ್ಲಿ ಕುಳಿತಿದ್ದೀರಿ. ಗ್ರಾಮಾಂತರ ಪ್ರದೇಶದಲ್ಲಿ ಗೋಧಿ ಬೆಳೆಯುವುದಾಗಬಹುದು, ಅಕ್ಕಿ ಬೆಳೆಯುವುದಾಗಬಹುದು, ತರಕಾರಿಗಳನ್ನು ಬೆಳೆಯುವುದಾಗಬಹುದು ಆ ರೈತರ ಪರಿಸ್ಥಿತಿ ಏನಾಗಿದೆ ಎಂಬುದು ತಮಗೆ ಚೆನ್ನಾಗಿ ಗೊತ್ತಿದೆ. ವಿಶ್ಲೇಷಣೆ ಮಾಡುವುದಕ್ಕೆ ಮೊದಲು ಕೆಲವು ಸ್ಪಷ್ಟವಾದ ನಿದರ್ಶನಗಳನ್ನು ಕೊಡುತ್ತೇನೆ. ಗೋಧಿ ಉತ್ಪಾದನೆಯನ್ನು ಏತಕ್ಕೆ ತೆಗೆದುಕೊಂಡಿದ್ದೇನೆ ಎಂದರೆ ನಮ್ಮ ರಾಜ್ಯಕ್ಕೆ ನಿಕಟವಾದ ಸಮರ್ಪಕವಿಲ್ಲದೇ ಹೋದರೂ ಸಹ ಗೋಧಿ ಉತ್ಪಾದನೆಗೆ ನಮ್ಮ ರಾಷ್ಟ್ರಮಟ್ಟದಲ್ಲಿ ಅಂಕಿ ಅಂಶಗಳು ಬಹಳ ಸ್ಪಷ್ಟವಾಗಿ ಸಿಗುತ್ತವೆ, ಹಾಗಾಗಿ ಗೋಧಿ ಉತ್ಪಾದನೆಯ ಬಗ್ಗೆ ಸ್ವಲ್ಪ ಅಂಕಿ ಅಂಶಗಳನ್ನು ಕೊಡುತ್ತೇನೆ. ಅದನ್ನು ಕೊಟ್ಟು ನಂತರ ತಾತ್ಪರ್ಯವೇನೆಂಬುದಕ್ಕೂ ಸಹ ಬರುತ್ತೇನೆ. 1985ರಿಂದ 96, ಈ ಹತ್ತು ವರ್ಷಗಳ ಅವಧಿಯಲ್ಲಿ ನಮ್ಮ ದೇಶದ ಗೋಧಿ ಉತ್ಪಾದನೆ 3.67% ವಾರ್ಷಿಕ ಬೆಳವಣಿಗೆ ಇತ್ತು. ಉತ್ಪಾದನೆಯಲ್ಲಿ 3.67% ಅಭಿವೃದ್ಧಿಯಾದರೆ ಆವತ್ತಿನ ಸಂದರ್ಭದಲ್ಲಿ ಪ್ರೊಡಕ್ಟಿವಿಟಿನೂ ಸಹ 2.61% ಇತ್ತು. ಅಂದರೆ ಯೀಲ್ಡ್ ಪರ್ acre 2.61% ವರ್ಷದಿಂದ ವರ್ಷಕ್ಕೆ ಬೆಳೆಯುತ್ತಿತ್ತು. ಅದೇ 1996ರಿಂದ 2005ರ ಅವಧಿಯನ್ನು ಅವಲೋಕಿಸಿದರೆ, ಉತ್ಪಾದನೆಯಲ್ಲೇ ನಮ್ಮದು ಬೆಳೆಯುತ್ತಿರುವುದು 0.67%, ಹಿಂದೆ 10 ವರ್ಷಗಳ ಅವಧಿಯಲ್ಲಿ 3.67% ಇದ್ದದ್ದು ನಂತರ ಹತ್ತು ವರ್ಷಗಳ ಅವಧಿಗೆ ಕೇವಲ 0.67%ಕ್ಕೆ ಉತ್ಪಾದನೆಯಲ್ಲಿ, ನಮ್ಮ ಗ್ರೋಥ್ ರೇಟ್ ಇಳಿದಿದೆ. ಇದೇ ಸಂದರ್ಭದಲ್ಲಿ ನಮ್ಮ ಜನಸಂಖ್ಯೆಯ ವೃದ್ಧಿ ಎಷ್ಟೆಂದರೆ 1.6–7% ರಷ್ಟು ಬೆಳೆಯುತ್ತಿದೆ, ನಮ್ಮ ಉತ್ಪಾದನೆ ಅದರಲ್ಲಿ ಮೂರನೇ ಒಂದು ಭಾಗದಷ್ಟು ಮಾತ್ರ ಬೆಳೆಯುತ್ತಿದೆ. ವರ್ಷದಿಂದ ವರ್ಷಕ್ಕೆ ಜನಸಂಖ್ಯೆ ಏನು ಏರುತ್ತಿದೆ, ಅದನ್ನು ನೀಗಿಸತಕ್ಕಂಥ ಕೆಲಸವನ್ನು ನಮ್ಮ ಕೃಷಿ ವಲಯ ಇವತ್ತು ಮಾಡುತ್ತಿಲ್ಲ. ಹಿಂದೆ ಪರ್ ಎಕರೆಗೆ ಯೀಲ್ಡ್ productivity growth 2.61% ಇತ್ತು. ಅದು ಕಳೆದ ಹತ್ತು ವರ್ಷದಲ್ಲಿ 0.53%ಕ್ಕೆ ಇಳಿದಿದೆ. ಅಂದರೆ, ನಮ್ಮಲ್ಲಿ ಪ್ರೊಡಕ್ಟಿವಿಟಿನೂ ಇಂಪ್ರೂವ್ ಆಗುತ್ತಿಲ್ಲ. ಪ್ರೊಡಕ್ಷನ್ನೂ ಇಂಪ್ರೂವ್ ಆಗುತ್ತಿಲ್ಲ, ಪ್ರೊಡಕ್ಷನ್ನೂ ಇಂಪ್ರೂವ್ ಆಗುತ್ತಿಲ್ಲ, ಆದರೆ ಹುಟ್ಟತಕ್ಕಂಥ

ಮಕ್ಕಳ ಸಂಖ್ಯೆ, ಜನಸಂಖ್ಯೆ ಮಾತ್ರ ಅದೇ ವೇಗದಲ್ಲಿ ಇವತ್ತು ಬೆಳೆಯುತ್ತಿದೆ, ಅದರಿಂದ ಏನು ಪರಿಣಾಮವಾಗುತ್ತಿದೆ ಎಂಬುದನ್ನು ಬಿಡಿಸಿ ಹೇಳುವಂಥ ಅವಶ್ಯಕತೆ ಇಲ್ಲ. ಹಾಗೆ ಗೋಧಿ ಉತ್ಪಾದನೆಯನ್ನು ಅವಲೋಕಿಸುತ್ತಾ ಮುಂದಕ್ಕೆ ಹೋದರೆ 2002-3 ಆ ಅವಧಿಯಲ್ಲಿ ನಮ್ಮ ದೇಶದ ಗೋದಾಮುಗಳಲ್ಲಿ ಎಷ್ಟಿತ್ತು ಎಂದರೆ ಅದನ್ನು ಏನು ಮಾಡಬೇಕೆಂಬುದೇ ಗೊತ್ತಾಗುತ್ತಿರಲಿಲ್ಲ. ಅವತ್ತು ಸರ್ಕಾರ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುತ್ತಿತ್ತು. 2002ರ ನಂತರ ಅವರು ಕೃಷಿ ಮಾರುಕಟ್ಟೆಯನ್ನು ಸ್ವಲ್ಪ ಲಿಬರಲೈಸ್ ಮಾಡಿದರು. ತದನಂತರ 2002-2005 ಮಧ್ಯೆ ನಮ್ಮ ದೇಶದಿಂದ ಸುಮಾರು 12 ಮಿಲಿಯನ್ ಟನ್ ಗೋಧಿಯನ್ನು ಬೇರೆ ದೇಶಕ್ಕೆ ರಫ್ತು ಮಾಡಿದ್ದೇವೆ, ಅಷ್ಟು ಗೋಧಿ ಉತ್ಪಾದನೆಯಾಗುತ್ತಿತ್ತು. ಅಷ್ಟು ನಮ್ಮಲ್ಲಿ ಹೆಚ್ಚಿಗೆ ಗೋಧಿ ಇತ್ತು. 2006-07ನೇ ಸಾಲಿಗೆ ಸುಮಾರು 5 ಮಿಲಿಯನ್ ಟನ್ ಅಷ್ಟು ಅಂತರರಾಷ್ಟ್ರೀಯ ಮಾರುಕಟ್ಟೆಯಿಂದ ಗೋಧಿಯನ್ನು ಆಮದು ಮಾಡಿಕೊಳ್ಳುವುದಕ್ಕೆ ಟೆಂಡರ್ ಕರೆದು, ಅದರಲ್ಲಿ 3.5 ಮಿಲಿಯನ್ ಟನ್‌ಗಳನ್ನು ಆಮದು ಮಾಡಿಕೊಂಡು ಸಾರ್ವಜನಿಕ ವಿತರಣ ವ್ಯವಸ್ಥೆಗೆ ಕೊಟ್ಟಿದ್ದು ತಮಗೆಲ್ಲ ಗೊತ್ತಿರುವ ವಿಷಯ. 2007-08ನೇ ಸಾಲಿಗೆ ನಮ್ಮ ಸ್ಥಿತಿ ಯಾವ ಮಟ್ಟಕ್ಕೆ ಮುಟ್ಟಿದೆ ಎಂದರೆ, 10 ಮಿಲಿಯನ್ ಟನ್ ಗೋಧಿಯನ್ನು ಆಮದು ಮಾಡಿಕೊಳ್ಳಲು ಗ್ಲೋಬಲ್ ಟೆಂಡರ್ ಅನ್ನು ನಾವು ಫ್ಲೋಟೋ ಮಾಡಿದ್ದೇವೆ. 1960ರ ದಶಕದಲ್ಲಿ ನಾನು ಇರಲಿಲ್ಲ, ಬಹುತೇಕ ಕುಳಿತಿರುವ ಮಂತ್ರಿಗಳೆಲ್ಲಾ 60ನೇ ದಶಕದಲ್ಲಿದ್ದೀರೆಂದು ಕಾಣಿಸುತ್ತದೆ. PL 480 ಏನೆಂದು ತಮಗೆಲ್ಲಾ ಗೊತ್ತಿದೆ. ಅಂಥ ಕರಾಳ ದಿವಸಗಳಿಗೆ, ನಮ್ಮ ಸ್ವಾಭಿಮಾನವನ್ನು ಶರಣು ಮಾಡುವಂಥ ದಿವಸಗಳು ಬರಬಹುದೇನೋ ಎಂಬುದನ್ನು ಜ್ಞಾಪಿಸುವುದಕ್ಕೆ ಬಯಸುತ್ತೇನೆ. 60ನೇ ದಶಕದಲ್ಲಿ ಹೇಗೆ ನಮ್ಮ ಸ್ವಾಭಿಮಾನವನ್ನು ಗೋಧಿಗೋಸ್ಕರ ಮಾರಾಟ ಮಾಡಿದ್ದೇವೆನ್ನುವುದು ಬಹುಶಃ ತಮಗೆ ಗೊತ್ತಿದೆ, ತಾವೆಲ್ಲರೂ ಅವತ್ತಿನ ದಿನಗಳಲ್ಲಿ ಇದ್ದಂಥವರು, ನಾನು 60 ದಶಕದ ನಂತರ ಹುಟ್ಟಿದ್ದು, ಆದರೆ ಮತ್ತೆ ಇವತ್ತು ಅಲ್ಲಿಗೆ ಹೋಗುತ್ತಿದ್ದೇವೇನೋ ಎಂದು ಈ ಅಂಕಿ ಅಂಶಗಳನ್ನು ನೋಡಿದಾಗ, ಗ್ರಾಮಾಂತರ ಪ್ರದೇಶದಲ್ಲಿರುವ ಪರಿಸ್ಥಿತಿಯನ್ನು ನೋಡುತ್ತಿದ್ದರೆ, ಆ ರೀತಿ ಕಾಣುತ್ತಿದೆ. ಏಕೆಂದರೆ, ಈ ಗೋಧಿಯನ್ನು ಸರ್ಕಾರ ಪ್ರತಿವರ್ಷ ಕೊಂಡುಕೊಳ್ಳುವುದು ನಮಗೆಲ್ಲಾ ಗೊತ್ತಿರುವ ವಿಷಯ. ಆ ಕಂಡುಕೊಳ್ಳುವ ಪ್ರಮಾಣದಲ್ಲಿ ಏನು ಹೆಚ್ಚು ಕಡಿಮೆಯಾಗುತ್ತಿದೆ ಎಂಬ ಬಗ್ಗೆ ನನ್ನ ಹತ್ತಿರ ಅಂಕಿ ಅಂಶವಿದೆ, ಕೊಡುತ್ತೇನೆ. 203-04ರಲ್ಲಿ ಸುಮಾರು 15.8 ಮಿಲಿಯನ್ ಟನ್ ಗೋಧಿಯನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಸರ್ಕಾರ ಕೊಂಡುಕೊಂಡಿತು.

2004–05ರಲ್ಲಿ ಅದು 16.7 ಕ್ಕೆ ವೃದ್ಧಿಯಾಯಿತು. 2005–06ರಲ್ಲಿ 14.7 ಮಿಲಿಯನ್ ಟನ್ ಗೆ ಬಿತ್ತು ನೋಡಿ. 2006–07ಕ್ಕೆ 9.2 ಮಿಲಿಯನ್ ಟನ್‌ಗೆ ಬಿತ್ತು. ಯಾವಾಗ 2004–05ರಲ್ಲಿ 16.7 ಮಿಲಿಯನ್ ಟನ್ ಪ್ರೊಕ್ಯೂರ್ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿತ್ತು, ಬೇಡಿಕೆ ಒಂದು ಕಡೆ ಬೆಳೆಯುತ್ತಿದೆ, ಅದೇ ಸಂದರ್ಭದಲ್ಲಿ ಸರ್ಕಾರ ಕೊಂಡುಕೊಳ್ಳುವುದಕ್ಕಾಗಿದ್ದು ಕೇವಲ 9.2 ಮಿಲಿಯನ್ ಟನ್ ಗೋಧಿ, ಹಿಂದಿನ ವರ್ಷಕ್ಕಿಂತ ಸರ್ಕಾರಕ್ಕೆ ಲಭ್ಯವಿರುವ ಗೋಧಿ ಪ್ರಮಾಣ 35% ರಷ್ಟು ಕಡಿಮೆಯಾಯಿತು. ರೂ.50 ಬೋನಸ್ ಪ್ರಕಟಣೆ ಮಾಡಿದ ನಂತರವೂ ಸಹ ರೈತರು ಕೊಡುವುದಕ್ಕೆ ಮುಂದಕ್ಕೆ ಬರಲಿಲ್ಲ, ಏಕೆಂದರೆ, ಸರ್ಕಾರ ಕೊಡುವ ಬೆಲೆ ಕಡಿಮೆ ಇತ್ತು. ಹೊರಗಡೆ ಬೆಲೆ ಜಾಸ್ತಿ ಇತ್ತು. ಹಾಗಾಗಿ ಸರ್ಕಾರ, ನಮ್ಮ ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಗೋಧಿಯನ್ನು ಕೊಡುವ ಶಕ್ತಿಯನ್ನು ಕಳೆದುಕೊಳ್ಳುತಿದ್ದೇನೆ. ಸರ್ಕಾರದಿಂದ ಬಡವರಲ್ಲಿ ಬಡವರಿಗೆ ಗೋಧಿ, ಅಕ್ಕಿಯನ್ನು ಕೊಡುತ್ತೇನೆ. ಅವರಿಗೂ ಕೂಡ ಸರಬರಾಜು ಮಾಡದಿರುವ ಪರಿಸ್ಥಿತಿಯನ್ನು ನಾವು ಬಂದು ತಲುಪಿದ್ದೇವೆ. 2005–06ರಲ್ಲಿ 26 ಮಿಲಿಯನ್ ಟನ್ ಅಕ್ಕಿಯನ್ನು ಸರ್ಕಾರ ಕೊಂಡುಕೊಂಡಿತ್ತು. 2006–07ಕ್ಕೆ ಅವರಿಗೆ ಲಭ್ಯವಾಗಿದ್ದು ಕೇವಲ 24.6 ಮಿಲಿಯನ್ ಟನ್. ಅಕ್ಕಿಯಲ್ಲಿಯೂ ಕೂಡ ಸರ್ಕಾರಕ್ಕೆ ಇವತ್ತು ಖೋತಾ ಬಿದ್ದಿದೆ, ಸರ್ಕಾರಕ್ಕೆ ಸಿಗುತ್ತಿಲ್ಲ, ಇವತ್ತು ಅದೇ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರದಿಂದ ನಮಗೆ ಒಂದು ಪತ್ರ ಬಂದಿದೆ ಎಂದು ಮೊನ್ನೆ ಮಂತ್ರಿಗಳು ಹೇಳಿದರು. ನಾವು 27%ಕ್ಕಿಂತ ಮೇಲ್ಪಟ್ಟು ನೀವು ಎಷ್ಟೇ BPL ಕಾರ್ಡ್ ಕೊಟ್ಟಿದ್ದರೂ ಕೂಡ ಗೋಧಿಯಾಗಲಿ, ಅಕ್ಕಿಯಾಗಲಿ ನಾವು ಸರಬರಾಜು ಮಾಡುವುದಕ್ಕಾಗುವುದಿಲ್ಲ. ನೀವು ಹಣ ಕೊಟ್ಟರೂ ನಮ್ಮಲ್ಲಿ ದಾಸ್ತಾನು ಇಲ್ಲವೆಂದು ಕೇಂದ್ರ ಸರ್ಕಾರದವರು ಇವತ್ತು ಪತ್ರವನ್ನು ಬರೆದಿರುವುದಕ್ಕೆ ಕಾರಣವೇನೆಂದರೆ, ಇವತ್ತು ಸರ್ಕಾರ ಕೊಂಡುಕೊಳ್ಳುವುದಕ್ಕೂ ಆಗುತ್ತಿಲ್ಲ. ಏಕೆಂದರೆ, ಉತ್ಪಾದನೆಯು ಕೂಡ ಇಳಿಮುಖವಾಗಿದೆ. 1999–2000 ದಲ್ಲಿ 76 ಮಿಲಿಯನ್ ಟನ್ ಉತ್ಪಾದನೆಯಗಿದ್ದರೆ, 2004–05ಕ್ಕೆ 71 ಮಿಲಿಯನ್ ಟನ್‌ಗೆ ಬಂದಿದೆ. 2004–05ನೇ ಸಾಲಿಗೆ ನಮ್ಮ ಗುರಿ ಇದ್ದದ್ದು 75 ಮಿಲಿಯನ್ ಟನ್, ಆದರೆ ನಾವು ಉತ್ಪಾದನೆ ಮಾಡುವುದಕ್ಕಾಗಿದ್ದೇ 71 ಮಿಲಿಯನ್ ಟನ್. ಇದು ಕೇವಲ ಗೋಧಿಗೆ ಮಾತ್ರ ಸೀಮಿತವಾಗಿಲ್ಲ. ಅಕ್ಕಿಯಾಗಬಹುದು, ಎಣ್ಣೆ ಕಾಳಾಗಬಹುದು, ಪ್ರತಿಯೊಂದರಲ್ಲೂ ಸಹ ನಾವು ಹಿಂದಕ್ಕೆ ಹೋಗುತ್ತಿದ್ದೇವೆ. ಕರ್ನಾಟಕಕ್ಕೆ ಸೀಮಿತವಾಗಿ ಮಾತನಾಡುವುದಾದರೆ, ಕಾಳುಗಳು food grains ನೇ 2005–06 ಸಾಲಿಗೆ ನಮ್ಮ ಗುರಿ 113 ಲಕ್ಷ ಟನ್, ತಮ್ಮಲ್ಲಿ ಉತ್ಪಾದನೆಯಾಗಿದ್ದು 110 ಲಕ್ಷ ಟನ್,

ಆಯಿಲ್ ಸೀಡ್ಸ್ 18 ಲಕ್ಷ ಟನ್ ನಮ್ಮ ನಿರೀಕ್ಷೆ ಇತ್ತು. ಉತ್ಪಾದನೆಯಾಗಿದ್ದು 17 ಲಕ್ಷ ಟನ್. ಕಾಟನ್ ಒಂಭತ್ತೂವರೆ ಲಕ್ಷ ಟನ್ ನಮ್ಮ ನಿರೀಕ್ಷೆ ಇತ್ತು, ಉತ್ಪಾದನೆಯಾಗಿದ್ದು ಎಂಟೂವರೆ ಲಕ್ಷ ಟನ್. ಯಾವುದೇ ಉತ್ಪಾದನೆಯನ್ನು ತೆಗೆದುಕೊಳ್ಳಿ ಇವತ್ತು ಹಿನ್ನಡೆಯಲ್ಲಿದ್ದೇವೆಯೇ ಹೊರತು ಮುಂದಕ್ಕೆ ಹೆಜ್ಜೆ ಇಡುವುದಾಗಲಿ, ಅಥವಾ ಇವತ್ತು ಜಾಗತಿಕ ಮಟ್ಟದಲ್ಲಿ ನಮಗೇನು ಅವಕಾಶಗಳಿವೆ, ಅವುಗಳನ್ನು ಬಳಸಿಕೊಳ್ಳುವ ಪ್ರಶ್ನೆಯೇ ಇಲ್ಲ. ನಮ್ಮ ಮಕ್ಕಳಿಗೆ ಊಟ ಮಾಡುವುದಕ್ಕೆ ಕೊಡುವುದಕ್ಕೆ ಸಾಧ್ಯವಾಗುತ್ತದೆಯೋ ಇಲ್ಲವೋ ಎನ್ನುವ ಪರಿಸ್ಥಿತಿಗೆ ನಾವು ಮುಟ್ಟುತ್ತಿದ್ದೇವೆ. ಇವತ್ತು ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ರೇಷ್ಮೆ ಉತ್ಪಾದನೆಯಲ್ಲೂ ಕೂಡ ಹಿಂದೆ ಬಿದ್ದಿದೆ. ಕೆಲವು ಕಡೆ ಹಾಲು ಉತ್ಪಾದನೆ ಹಿಂದೆ ಬಿದ್ದಿದೆ. ಕೆಲವು ಕಡೆ ಏರುತ್ತಿದೆ. ಆದರೆ ಇವತ್ತು ಹಾಲು ಉತ್ಪಾದನೆಯನ್ನು ಸರಿಯಾಗಿ ಮಾಡುವುದಕ್ಕಾಗುತ್ತಿಲ್ಲ. ಇದಕ್ಕೆಲ್ಲಾ ಸಾಂಕೇತಿಕವಾಗಿ ಏನಾಗುತ್ತದೆ ಎಂದರೆ, ಪ್ರತಿ ವಾರಕ್ಕೆ ಒಂದು ಅಥವಾ ಎರಡು ದಿವಸ ಗ್ರಾಮಾಂತರ ಪ್ರದೇಶದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಪದೇ ಪದೇ ನಾವೆಲ್ಲಾ ಕಾಣುತ್ತಿದ್ದೇವೆ. ರೈತರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಏನು ಕಾರಣ? ಕೆಲವರು ಏನು ಹೇಳುವುದೇನೆಂದರೆ, ಸಾಲ ಮಾಡಿದ್ದರಿಂದ ಸಾಲ ತೀರಿಸಲಾಗದೇ ಆತ್ಮಹತ್ಯೆ ಮಾಡಿಕೊಂಡರೆಂದು ಹೇಳುತ್ತಾರೆ. ಸಾಲ ಏತಕ್ಕೆ ತೀರಿಸುವುದಕ್ಕಾಗಲಿಲ್ಲ? ಹಿಂದೆ ಯಾವಾಗಲೂ ರೈತರು ಸಾಲವನ್ನು ತೆಗೆದುಕೊಳ್ಳುತ್ತಿರಲಿಲ್ಲವೇ? ಸಾಲ ತೀರಿಸುತ್ತಿರಲಿಲ್ಲವೇ, ಹಿಂದೆ PLD Bank ನಿಂದ ಸಾಲ ತೆಗೆದುಕೊಳ್ಳುತ್ತಿರಲಿಲ್ಲವೇ, ಅಥವಾ co-operative institutions ನಿಂದ ಸಾಲ ತೆಗೆದುಕೊಳ್ಳುತ್ತಿರಲಿಲ್ಲವೇ, ಅವತ್ತು ಇನ್ನೂ ಕಷ್ಟದ ಕಾಲ. ನಮ್ಮ ಭಾಗದಲ್ಲಿ ಒಂದು ಮುದ್ದೆ ಊಟ ಹಾಕಿದರೆ ಸಾಕು, ಕೆಲಸ ಮಾಡಲು ಎಷ್ಟೋ ಜನ ಕೂಲಿ ಕಾರ್ಮಿಕರು ಬರುತ್ತಿದ್ದರು, ಅಂಥ ಪರಿಸ್ಥಿತಿ ಇತ್ತು. ಅಂಥ ಕಾಲದಲ್ಲಿ ನಾವು ಸಾಲವನ್ನು ತೆಗೆದುಕೊಂಡಿದ್ದೇವೆ, ತೀರಿಸಿದ್ದೇವೆ. ಆದರೆ ಇವತ್ತು ತೀರಿಸುವುದಕ್ಕಾಗುತ್ತಿಲ್ಲವೆನ್ನುವ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ಹಾಕಿಕೊಳ್ಳಬೇಕಾಗುತ್ತದೆ. ಒಂದು ಕಡೆ co-operative institutions ರೈತರ ಸ್ವತ್ತುಗಳಾಗಿವೆ. ಅವುಗಳ ಶಕ್ತಿಯನ್ನು ನಾವು ಇವತ್ತು ಸಂಪೂರ್ಣವಾಗಿ ಕುಂದಿಸಿದ್ದೇವೆ. ಅವುಗಳು ರೈತರಿಗೆ ಸಾಲ ಕೊಡತಕ್ಕಂತಹ ಶಕ್ತಿ ಇವತ್ತು ಇಲ್ಲ. ಅದರ ಜೊತೆಗೆ ಸಾಲ ಮನ್ನಾ ಎಂದು ಮಾಡಿ. ಆ ಬ್ಯಾಂಕುಗಳು ಅವರಿಗೆ ಕೊಡತಕ್ಕಂತಹ ಸಾಲವನ್ನು 25,000 ರೂಪಾಯಿಗಳಿಗೆ ಇಳಿಸಿ, 25,000 ರೂಪಾಯಿಗಳಲ್ಲಿ ಯಾವ ರೈತನೂ ಕೃಷಿಯಲ್ಲಿ ಬಂಡವಾಳ ಹೂಡುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು co-operative institutions

ಅನ್ನು ಹಾಳು ಮಾಡತಕ್ಕಂತಹ ಮಟ್ಟಕ್ಕೆ ತೆಗದುಕೊಂಡು ಹೋಗಿ ಇವತ್ತು ಏನಾಗಿದೆ ಎಂದರೆ, ಲೇವಾದೇವಿಗಾರರ ಬಳಿ ಹೋಗಬೇಕಾಗಿದೆ. ಸಾಲ ತೆಗೆದುಕೊಂಡು ಆ ಬಡ್ಡಿ ಕಟ್ಟುವುದಕ್ಕಾಗದೇ, ಜಮೀನು ಏನು ಅಡವು ಇಟ್ಟಿರುತ್ತೇವೆ, ಅದನ್ನೂ ಅವನಿಗೆ ಬಿಟ್ಟು ಕೊಟ್ಟು ಬಿಟ್ಟು, ಕೊನೆಗೆ ಸಾಲಕ್ಕೆ ಸಾಲವೂ ಬೆಳೆದಿರುತ್ತದೆ, ಈ ಕಡೆ ಬಡ್ಡಿಯೂ ಕಟ್ಟುವುದಕ್ಕಾಗುವುದಿಲ್ಲ. ಮಕ್ಕಳನ್ನು ಸಾಕುವುದಕ್ಕೆ ಆಗದೇ, ಕೊನೆಗೆ ನೇಣು ಹಾಕಿಕೊಳ್ಳತಕ್ಕಂಥಾದ್ದು ಒಂದೇ ಉಳಿದಂತಹ ಮಾರ್ಗವಾಗಿ ರೈತರು ಇವತ್ತು ನೇಣು ಹಾಕಿಕೊಳ್ಳುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ರೈತರು ಏನು ಸಾಲ ಹೊತ್ತುಕೊಂಡಿದ್ದಾರೆ, ಇದು ಮೂಲ ಕಾರಣವಲ್ಲ. ಅದು ಒಂದು symptom ಅಷ್ಟೆ. ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂತಹ ಕ್ರೈಸಿಸ್ ಇದೆ, ಆ ಕ್ರೈಸಿಸ್‌ನ ಸಿಂಪ್ಟಮ್ ಇವತ್ತು ಸಾಲದ ಭಾರ ಏನಿದೆ, It is a symptom ಸಾಲವೇ ದೊಡ್ಡ ಕಾರಣವೆಂದು ಅದನ್ನೇ ಟಾರ್ಗೆಟ್ ಮಾಡುವಂಥದ್ದನ್ನು ನಾವು ಮಾಡುತ್ತಿದ್ದೇವೆ. ಆ ದೃಷ್ಟಿಯಲ್ಲಿ ನಾವು ಎಡವಿದ್ದೇವೆ ಎಂದು ನನ್ನ ಅಭಿಪ್ರಾಯ. ಮೂಲವಾಗಿ ಸಮಸ್ಯೆ ಇರತಕ್ಕಂಥಾದ್ದು ಬೆಲೆಗಳದ್ದು. ರೈತ ಇವತ್ತು ಅವನು ಏನು ಬೆಳೆ ಬೆಳೆಯುತ್ತಿದ್ದಾನೆ, ಅದಕ್ಕೆ ಸೂಕ್ತವಾದ ಒಂದು ಪರಿಹಾರ ಸಿಗದೇ ಇರುವ ಕಾರಣದಿಂದ ರೈತರು ಅನಿವಾರ್ಯವಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಮಟ್ಟಕ್ಕೆ ಬಂದಿದ್ದಾರೆ. ಇದಕ್ಕೂ ವಿಶ್ಲೇಷಣೆ ಮಾಡುತ್ತಾ ಹೇಳುತ್ತೇನೆ, 2001–02 ರಿಂದ 2004–05ರ ಮಧ್ಯೆ Whole sle price index inflation rate ನಾವು ಏನು measure ಮಾಡುತ್ತೇವೆ, ಶೇ 4.7ಎರಷ್ಟು ಇತ್ತು. ಅದೇ ಅವದಿಯಲ್ಲಿ ನಮ್ಮ ಅರ್ಥಿಕ ವ್ಯವಸ್ಥೆಯಲ್ಲಿರತಕ್ಕಂತಹ ಪ್ರಮುಖ ಉತ್ಪನ್ನಗಳು ಸಹ ಶೇ 5 ರಷ್ಟು ಬೆಳೆ ವರ್ಷದಿಂದ ವರ್ಷಕ್ಕೆ ಅವುಗಳ ಬೆಲೆ ಜಾಸ್ತಿಯಾಗುತ್ತಿದ್ದರೆ, ಅದೇ ಸಂದರ್ಭದಲ್ಲಿ ಕೃಷಿ ಉತ್ಪನ್ನ ಬೆಲೆಗಳು ಏನಿವೆ, ಅವು ಮಾತ್ರ ಶೇ. 3.4 ರಷ್ಟು ಮಾತ್ರ ಬೆಳೆಯುತ್ತಿದ್ದರು. ಇವತ್ತು ನಾನು ಕೊಂಡುಕೊಳ್ಳತಕ್ಕಂತಹ ಬೆಳೆ ಉದಾಹರಣೆ ಕೊಡುತ್ತೇನೆ. ನಾನು ರೈತನಾಗಿ ಕೊಂಡುಕೊಳ್ಳುತಕ್ಕಂತಹ ಎಲ್ಲಾ ಪದಾರ್ಥಗಳು ಸಹ ಬೆಲೆ ಶೇ 5ರಷ್ಟು ಬೆಳೆಯುತ್ತಿದ್ದರೆ, ನಾನು ಮಾರುವುದು ಮಾತ್ರ ಶೇ. 3.5 ರಷ್ಟು ಬೆಳೆಯುತ್ತಿದ್ದರೆ ಏನಾಗುತ್ತದೆ ಎಂದರೆ, ವರ್ಷದಿಂದ ವರ್ಷಕ್ಕೆ ನಾವು ಕೊಂಡುಕೊಳ್ಳತಕ್ಕಂತಹ ಬೆಲೆ ಮಾರಾಟ ಮಾಡತಕ್ಕಂತಹ ಬೆಲೆಗೆ ಏನು ಅಂತರ ಇತ್ತು. ಅದು squeeze ಆಗುತ್ತಾ ಆಗುತ್ತಾ ಬಂದು ಕೊನೆಗೆ ರೈತನ ಕೈಯಲ್ಲಿ ಏನೂ ಸಹ ಉಳಿಯುವುದಿಲ್ಲ. ಅಂತಹ ಪರಿಸ್ಥಿತಿಗೆ ಇವತ್ತು ಬರುತ್ತಿದ್ದೇವೆ. ಅದಕ್ಕೆ ಸಂಬಂಧಪಟ್ಟ ಹಾಗೆ ನಮ್ಮ ಸರ್ಕಾರದವರೇ, ಕೆಲವೊಂದು estimates ಮಾಡಿದ್ದಾರೆ. 2005–06ನೇ ಸಾಲಿಗೆ ರೈತನು

ಕೊಂಡು ಕೊಳ್ಳುತಕ್ಕಂತಹ ಸಾಮಗ್ರಿಗಳು ಏನಿವೆ, ಅವುಗಳ ಬೆಲೆಯಲ್ಲಿ ಎಷ್ಟು ವೃದ್ಧಿಯಾಯಿತು ಎನ್ನುವುದಕ್ಕೆ ಅವರೇ estimate ಮಾಡಿದ್ದಾರೆ. ಇದು ಸರ್ಕಾರಿ ಸಂಸ್ಥೆ ಮಾಡಿರತಕ್ಕಂಥಾದ್ದು. Commission for cost and price of agriculture ಎಂದು ಆ ಕಮಿಷನ್‌ನವರು ಮಾಡಿರತಕ್ಕಂಥಾದ್ದು. ಹರಿಯಾಣದಲ್ಲಿ ಲೇಬರ್ ವರ್ಷದಿಂದ ವರ್ಷಕ್ಕೆ ಶೇ 10.4 ರಷ್ಟು ಕೂಲಿ ಬೆಳೆಯುತ್ತದೆ. ಹಿಂದಿನ ವರ್ಷ ಕೂಲಿ ಕಾರ್ಮಿಕರಿಗೆ ಸಂಬಳ ಕೊಡುತ್ತಿದ್ದೆವು, 60 ರೂಪಾಯಿ ಇದ್ದರೆ, ಈ ವರ್ಷ 66 ರೂಪಾಯಿ ಆಗಿದೆ. ಮಹಾರಾಷ್ಟ್ರದಲ್ಲಿ 4.5% ರಷ್ಟು ಬೆಳೆದಿದೆ. ಪಂಜಾಬಿನಲ್ಲಿ 3.5%, ರಾಜಸ್ಥಾನದಲ್ಲಿ 16% ಮತ್ತು West Bengal ನಲ್ಲಿ 17% ಬೆಳೆದಿದೆ. ಹೋದ ವರ್ಷ ನಾನು 50 ರೂಪಾಯಿ ಕೊಡುತ್ತಿದ್ದರೆ, ಈ ವರ್ಷ 57 ರೂಪಾಯಿ ಕೊಡಬೇಕಾದ ಪರಿಸ್ಥಿತಿ ಅಲ್ಲಿ ಇದೆ. ನಮ್ಮ tractor ಗಳಿಗೆ ಮತ್ತು ಎಲ್ಲದಕ್ಕೂ ಬಳಸುವಂತಹ ಹೈ ಸ್ಪೀಡ್ ಡೀಸೆಲ್ ಅದೇ ವರ್ಷದಲ್ಲಿ ಶೇ. 16%ರಷ್ಟು ಬೆಳೆದಿತ್ತು. Other pertroleum products oil ಆಗಬಹುದು, Lubricant ಆಗಬಹುದು, ಇಂತಹವುಗಳು ಶೇ 17% ನಷ್ಟು ಬೆಳೆದಿವೆ. ಬೇರೆ ವಸ್ತುಗಳು ಗೊಬ್ಬರ ಮತ್ತಿತರ ವಸ್ತುಗಳು ಸುಮಾರು ಶೇ 6% ಜಾಸ್ತಿಯಾಗಿವೆ. ಮೆಷಿನರಿ 3.3% ನಷ್ಟು ಬೆಳೆದಿತ್ತು. Tractor ಬೆಲೆ ಶೇ 4.6 % ರಷ್ಟು ಬೆಳೆದಿತ್ತು. Pesticides 12.6% ರಷ್ಟು ಬೆಳವಣಿಗೆ ಆಗಿತ್ತು. Fertilizers ಸಹ ಶೇ. 6% ರಷ್ಟು ಬೆಳವಣಿಗೆ ಆಗಿತ್ತು. ಎಲ್ಲಾ ಪದಾರ್ಥಗಳಲ್ಲಿಯೂ ಶೇ 10 ರಿಂದ 20 % ಜಾಸ್ತಿಯಾಗಿ ರೈತನಿಗೆ ಸಿಗತಕ್ಕಂತಹ ಬೆಳೆಗಳ ಬೆಲೆ ಏನಿದೆ, ಅದು ಮಾತ್ರ ಸುಮಾರು ಎರಡು ಮೂರು ಪರ್ಸೆಂಟ್‌ನಷ್ಟು ಜಾಸ್ತಿಯಾಗಿದೆ. ರೈತನ ಗತಿ ಏನಾಗುತ್ತದೆ? ಅವನು ಇವತ್ತು ಏನು ಬಂಡವಾಳ ಹೂಡುತ್ತಾನೆ, ಏನು ಪದಾರ್ಥಗಳನ್ನು ಕೊಂಡುಕೊಳ್ಳುತ್ತಿದ್ದಾನೆ, ಕನಿಷ್ಠ ಅವನು ಏನು ಬಂಡವಾಳ ಹೂಡಿದ್ದಾನೆ, ಅದೂ ಕೂಡ ಅವನಿಗೆ ಇವತ್ತು ಮಾರುಕಟ್ಟೆಯಿಂದ ವಾಪಸ್ ಬರಲಿಲ್ಲವೆಂದರೆ, ಇನ್ನು ವ್ಯವಸಾಯ ಮಾಡಿ, ವ್ಯವಸಾಯ ಮಾಡಿ ಏನನ್ನು ಸಾಧಿಸುವುದಕೋಸ್ಕರ ವ್ಯವಸಾಯ ಮಾಡಬೇಕು? ವ್ಯವಸಾಯ ಮಾಡಿದವನು ಇವತ್ತು ಕೆಟ್ಟು ಅವನು ನೇಣು ಹಾಕಿಕೊಳ್ಳುವ ಪರಿಸ್ಥಿತಿಗೆ ಬಂದಿದ್ದಾನೆ. ವ್ಯವಸಾಯ ಮಾಡದೇ ಇರುವವನು ಈ ಸಾಲಕ್ಕೆ ಸಿಕ್ಕಿ ಹಾಕಿಕೊಳ್ಳದೇ ಬಹುಶಃ ಬದುಕಿದ್ದಾನೆ ಇಲ್ಲವೆಂದು ನಮಗೆ ಗೊತ್ತಾಗುತ್ತಿಲ್ಲ. "ವ್ಯವಸಾಯ ಮಾಡಿದವನೇ ಕೆಟ್ಟ" ಎಂದು ಕಾಣುತ್ತದೆ. ಬಹುಶಃ ವ್ಯವಸಾಯ ಮಾಡದೇ ಹೋಗಿದ್ದರೆ, ಕೂಲಿ ನಾಲಿ ಮಾಡಿಕೊಂಡು ಜೀವನ ಮಾಡಿಕೊಂಡಿದ್ದರೆ ಬಹುಶಃ ಅವನು ಕೆಡುತ್ತಿರಲಿಲ್ಲ. ಅಥವಾ ನೇಣು ಹಾಕಿಕೊಳ್ಳುವ ಮಟ್ಟಕ್ಕೆ ಬರುತ್ತಿರಲಿಲ್ಲ. ಇವತ್ತು ಅವನು ಕೃಷಿ ಮಾಡಿದ್ದರಿಂದ

ಇಂತಹ ಪರಿಸ್ಥಿತಿಗೆ ಸಿಕ್ಕಿ ಹಾಕಿಕೊಂಡು ನೇಣು ಹಾಕಿಕೊಂಡು ಸಾಯುವ ಮಟ್ಟಕ್ಕೆ ಅವನು ಬಂದಿದ್ದಾನೆ. ಇವತ್ತು ಮಾನ್ಯ ಅಧ್ಯಕ್ಷರೆ, ಇವತ್ತು ನಾವು ಸಾಕಷ್ಟು ವಸ್ತುಗಳನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತೇವೆ. ಕೆಲವು ಲಕ್ಸುರಿ ಕಾರು, ಬೇರೆ ಬೇರೆ ಮೆಷಿನರಿ import ಮಾಡಿಕೊಳ್ಳುತ್ತೇವೆ, ಉದಾಹರಣೆಗೆ ಹೇಳುವುದಾದರೆ, ಲಕ್ಷುರಿ ಕಾರಿನ ಮೇಲೆ ಹಿಂದೆ ಎಲ್ಲ 150% Import duty ಇತ್ತು. ಇತ್ತೀಚೆಗೆ ಏನಿದೆ ಎಂದು ನಾನೂ ಸರಿಯಾಗಿ ಗಮನಿಸಿಲ್ಲ. ಬೇರೆ ಬೇರೆ ಮೆಷಿನರಿ ಮೇಲೆ ಸುಮಾರು 60% ನಷ್ಟು ಇದೆ, ಕೆಲವು ವಸ್ತುಗಳ ಮೇಲೆ 80% ಇದೆ, ಹಿಂದೆ 300% ಇತ್ತು. ಈಗ 40%, 30% ಗೆ ಎಲ್ಲಾ ಬಂದಿದೆ. ಆದರೆ, ಸರ್ವೇ ಸಾಮಾನ್ಯವಾಗಿ ನಾವು ನೋಡಿದರೆ, ಕೃಷಿಗೆ ಸಂಬಂಧಪಟ್ಟ ಯಾವ್ಯಾವ ಪದಾರ್ಥಗಳು ಇವೆ, ಅವುಗಳ ಮೇಲೆ ಆಮದು ಕರ ಎಷ್ಟು ಎಂದರೆ, ಸರ್ವೇ ಸಾಮಾನ್ಯವಾಗಿ 10 ರಿಂದ 20% ಒಳಗೆ ಇದೆ. ಹೋದ ವರ್ಷ ಸಕ್ಕರೆ ಬೆಲೆ ಸ್ವಲ್ಪ ಜಾಸ್ತಿಯಾಯಿತು. ಎಂದು ಹೇಳಿ, ಅದನ್ನು ರಫ್ತು ಮಾಡುವುದಕ್ಕೆ ಬಂದ್ ಮಾಡಿಬಿಟ್ಟರು. ಅದೇ ರೀತಿಯಲ್ಲಿ ಹಾಲಿನ ರಫ್ತು ಕೂಡ ಜನವರಿ 2007ರಿಂದ ಬಂಧ್ ಮಾಡಿದ್ದಾರೆ. ಹಾಲನ್ನು ಸಹ ಇವತ್ತು ನಾವು ರಫ್ತು ಮಾಡುವುದಕ್ಕಾಗುವುದಿಲ್ಲ. ಹೀಗೆಯೇ ರೈತನಿಗೆ ಎಲ್ಲಾದರೂ ಒಂದು ಕಡೆ ಬೆಲೆ ಸಿಗುತ್ತದೆ ಎಂದರೆ, ನಾವು ಏನು ಬೇಕೋ ಎಲ್ಲ ಅಡ್ಡಿ ಮಾಡುತ್ತೇವೆ. ಆದರೆ ಇವತ್ತು ಲಕ್ಸುರಿ ಕಾರುಗಳು ಅದಕ್ಕೆ ಮಾತ್ರ ನಾವು 150% duty ಹಾಕಿದ್ದೇವೆ. ಅದೇ ರೀತಿ ನಾವು ಕೃಷಿ ಆಮದು ಏನಿದೆ., ಅವುಗಳ ಮೇಲೆ ನಾವು ಏಕೆ duty ಏಕೆ ಹಾಕಬಾರದು? ನಮ್ಮ ರೈತರಿಗೆ ರಕ್ಷಣೆ ಕೊಡುವುಕ್ಕೋಸ್ಕರ ಎಲ್ಲಾದರೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಲೆಗಳಲ್ಲಿ ವ್ಯತ್ಯಾಸ ಇದ್ದಂತಹ ಸಂದರ್ಭದಲ್ಲಿ ಅವುಗಳ ಮೇಲೆ ಏಕೆ ಆಮದು ಕರವನ್ನು ವಿಧಿಸಬಾರದು ಎಂದು ನಾವು ಇದನ್ನು ಪ್ರಶ್ನೆ ಹಾಕಿಕೊಳ್ಳಬಹುದೇ ಹೊರತು ಇದಕ್ಕೆ ಉತ್ತರ ಕೊಡುವವರು ಯಾರೂ ಇಲ್ಲ. ಏಕೆಂದರೆ ರಾಜ್ಯ ಸರ್ಕಾರಕ್ಕೆ ಕೇಳಿದರೆ ಕೇಂದ್ರ ಸರ್ಕಾರಕ್ಕೆ ತೋರಿಸುತ್ತಾರೆ, ಆದರೆ ಇವರು ಅದರ ಮೇಲೆ ಒತ್ತಾಯ ತರಬಾರದು ಎನತಕ್ಕಂತಹ ನಿಬಂಧನೆ ಈ ಸರ್ಕಾರದ ಮೇಲೆ ಎಲ್ಲಿಯೂ ಇಲ್ಲ. ಆ ಕೆಲಸ ಮಾಡುವುದರಲ್ಲಿ ನಮ್ಮ ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲ. ಮೊನ್ನೆ ಸಹ ಒಂದು ಪ್ರಶ್ನೆ ಬಂದಿತ್ತು. ಸಿಮೆಂಟ್ ಮತ್ತು ಬೆಲೆ Steel ಜಾಸ್ತಿಯಾಗಿದೆ, ಇದರ ಬಗ್ಗೆ ಏನು ಮಾಡಿದ್ದೀರಿ ಎಂದು ಕೇಳಿದ್ದಕ್ಕೆ, Essential Commodities Act ನಿಂದ ಅವುಗಳನ್ನು ತೆಗೆದಿರುವುದರಿಂದ ನಾವು ಏನೂ ಮಾಡುವುದಕ್ಕಾಗುವುದಿಲ್ಲವೆಂದು ಮಾನ್ಯ ಸಚಿವರು ಹೇಳಿದರು. ಅದೇ ರೈತರು ಬೆಳೆಯತಕ್ಕಂತಹ ಬೆಳೆಯ ಬೆಲೆ ಸ್ವಲ್ಪ ಜಾಸ್ತಿಯಾಯಿತು

ಎಂದರೆ ಎಲ್ಲಾ ಬಿದ್ದು ಓಡಿ ಹೋಗಿ ಆಮದು ಮಾಡಿಬಿಡುತ್ತಾರೆ. ಬೇರೆ ದೇಶಗಳಿಂದ ಆಮದು ಮಾಡಿ domestic prices suppress ಮಾಡಲಿಕ್ಕೆ ಏನು ಬೇಕೋ ಎಲ್ಲಾ ಮಾಡುತ್ತಾರೆ. ಆದರೆ ಬೇರೆ ಬೆಲೆಗಳು ಜಾಸ್ತಿಯದಾಗ ಏಕೆ ಕ್ರಮ ತೆಗದುಕೊಳ್ಳಬಾರದು, ನಾವು ಕೊರಿಯಾದಿಂದ ಏಕೆ ಸಿಮೆಂಟ್ ತರಿಸಿಕೊಳ್ಳಬಾರದು? ಕೊರಿಯಾದಲ್ಲಿ ಸಾಕಷ್ಟು ಸಿಮೆಂಟ್ ಉತ್ಪಾದನೆಯಾಗುತ್ತದೆ. ಅದು ಮಾತ್ರ ಇವತ್ತು 120 ರೂಪಾಯಿ ಇದ್ದದ್ದು 300 ರೂಪಾಯಿಗೆ ಹೋಗಿದೆ. ಅದಕ್ಕೆ ಕಾರಣವಿಲ್ಲ. ಅದನ್ನು ಮಾತ್ರ ನಾವು ನೋಡಿಕೊಂಡು ಸುಮ್ಮನಿದ್ದೇವೆ. ಆದರೆ ರೈತರ ಬೆಲೆಗಳು ಜಾಸ್ತಿಯಾದರೆ ಮಾತ್ರ ನಮಗೆ ನಿದ್ದೆಗೆಟ್ಟು ಬಿಡುತ್ತದೆ. ಈ ರೀತಿಯ ಪರಿಸ್ಥಿತಿ ಇವತ್ತು ನಿರ್ಮಾಣವಾಗಿರುವುದರಿಂದ, ಹಳ್ಳಿಗಳ ಮಟ್ಟದಲ್ಲಿ ರೈತರು ಸಾಕಷ್ಟು ಜನ ನೇಣಿಗೆ ಶರಣಾಗತಕ್ಕಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗುತ್ತಿದೆ. ಇದರ ಬಗ್ಗೆ ಸ್ವಲ್ಪ ಮಾತನಾಡತಕ್ಕಂಥಾದ್ದು ಇದೆ. ಏಕೆಂದರೆ, ಇವತ್ತು ರೈತರ ಪರವಾದ ಸರ್ಕಾರ ಎಂದು ಹೇಳುತ್ತಿದ್ದಾರೆ. ಮಾತ್ತೆತ್ತಿದರೆ ನಾವು ರೈತರ ಪರವಾಗಿರತಕ್ಕಂತಹ ಸರ್ಕಾರ ಎಂದು ಹೇಳಿಕೊಂಡು ಇವತ್ತು ಆಡಳಿತ ನಡೆಸುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೂ ಅಷ್ಟೇ. ಮಾನ್ಯ ಉಪ ಮುಖ್ಯಮಂತ್ರಿಗಳೂ ಅಷ್ಟೇ. ಹೀಗೆಯೇ ಪ್ರತಿಯೊಬ್ಬರು ಸಹ ಹೇಳುತ್ತಾರೆ. ಇಷ್ಟರ ಮಟ್ಟಿಗೆ ಜನ ನೇಣು ಹಾಕಿಕೊಂಡು ಸಾಯುತ್ತಿದ್ದರೂ ಸಹ ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? 2007ನೇ ಏಪ್ರಿಲ್‌ಗೆ ಅಂತ್ಯವಾದ ವರ್ಷದಲ್ಲಿ ಕಬ್ಬು ಬೆಳೆಗಾರರು ಎಷ್ಟು ಜನ ನೇಣು ಹಾಕಿಕೊಂಡರು, ಆ ನೇಣು ಹಾಕಿಕೊಳ್ಳತಕ್ಕಂತಹ ಅವಶ್ಯಕತೆ ಇತ್ತಾ ಹೇಳಿ. In time ಅವರಿಗೆ ಒಂದು ಟನ್ 100 ರೂಪಾಯಿ extra ಕೊಟ್ಟು ಕ್ರಶ್ ಮಾಡಿ ಎಂದು ಹೇಳದಿದ್ದರೆ ಅ ರೈತರು ನೇಣು ಹಾಕಿಕೊಳ್ಳತಕ್ಕಂತಹ ಪರಿಸ್ಥಿತಿ ಬರುತ್ತಿತ್ತಾ? ಆ ನೂರು ರೂಪಾಯಿ ಮುಖ ನೋಡಿಕೊಂಡು ಸಮಯಕ್ಕೆ ತಕ್ಕ ಹಾಗೆ ನೂರು ರೂಪಾಯಿ ಬೋನಸ್ ಕೊಡುವುದು ಬಿಟ್ಟು, ನೀವು ಅವರನ್ನು ಸತಾಯಿಸಿ, ಕೊನೆಗೆ ಅದಕ್ಕೇ ಸಿಕ್ಕಿ ಹಾಕಿಕೊಂಡು ಎಷ್ಟೋ ಜನ ನೇಣು ಹಾಕಿಕೊಳ್ಳಬೇಕಾಯಿತು. ಅವರು ಪ್ರಾಣ ಕಳೆದುಕೊಂಡರಲ್ಲ, ಅದರ ಜವಾಬ್ದಾರಿ ಸರ್ಕಾರದ ಮೇಲೆ ಇಲ್ಲವಾ? ಮಾನ್ಯ ಅಧ್ಯಕ್ಷರೆ, ಇನ್ನೇನು ಬೇರೆ ಕಾರಣ ಇಲ್ಲ. ಕಬ್ಬನ್ನು ಬೆಳೆದಂತಹವರು ಮಾರುಕಟ್ಟೆಯಲ್ಲಿ ಅವನ್ನು ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ, ಇವನು ತೋಟದಲ್ಲಿ ಕೊಯ್ದು ಹಾಕಿದ್ದಾನೆ, ಅದನ್ನು ಹೊತ್ತುಕೊಂಡು ಅವನು ಎಲ್ಲಿಗೆ ಹೋಗಬೇಕು? ಆರು ತಿಂಗಳು ಸಂಧಾನಗಳು ನಡೆದವು. ಒಂದು ಕಡೆ ರೈತರು, ಒಂದು ಕಡೆ ಸರ್ಕಾರ ಮತ್ತೊಂದು ಕಡೆ ಕಬ್ಬು ಅರೆಯತಕ್ಕಂಥ ಕಾರ್ಖಾನೆಗಳ ಮಧ್ಯೆ. ಆರು ತಿಂಗಳ ಕಾಲ ಸಂಧಾನ

ನಡೆದರೂ ಸಹ ಸಾಕಷ್ಟು ಜನ ರೈತರು ಅಂದರೆ ಬೀದರ್ ಗುಲ್ಬರ್ಗದಲ್ಲಿ ಒಂದೇ ಕಡೆ ಸುಮಾರು ನಾಲ್ಕೈದು ಜನ ರೈತರು ಆತ್ಮಹತ್ಯೆ ಮಾಡಿಕೊಂಡರಲ್ಲ, ಅವರ ನೋವು ಏನಾದರೂ ಈ ಸರ್ಕಾರಕ್ಕೆ ತಟ್ಟಿದೆಯಾ? ನಮ್ಮ ದೇಶದಲ್ಲಿ ಹೆಚ್ಚು ಜನಸಂಖ್ಯೆಯಾಗಿರುವುದರಿಂದ ಒಂದು ಜೀವದ ಬೆಲೆ ಏನು ಎನ್ನುವುದನ್ನೇ ನಾವು ಮರೆತಿದ್ದೇವೆ. ಒಂದು ಲಕ್ಷ ರೂಪಾಯಿಗಳಿಗೆ ತಂದಿಡುತ್ತೇವೆ, ಆದರೆ ನಮ್ಮ ಕುಟುಂಬದಲ್ಲಿಯೇ ಯಾರಾದರೂ ಆ ಪರಿಸ್ಥಿತಿಗೆ ಸಿಕ್ಕಿಹಾಕಿಕೊಂಡರೆ ಆಗ ನಿಜವಾಗಿಯೂ ಆ ರೈತನ ಜೀವದ ಬೆಲೆ ಏನು ಎನ್ನುವುದು ಬಹುಶಃ ಆಗ ಗೊತ್ತಾಗುತ್ತದೆ. ವೃಥಾಕಾರಣ ಒಂದು ಜೀವವನ್ನು ನಾವು ಕಳೆದುಕೊಂಡರೆ ಅದರ ಬೆಲೆ ಏನು ಎನ್ನುವುದು ಬಹುಶಃ ನಮ್ಮ ಕುಟುಂಬದಲ್ಲಿಯೇ ಆ ರೀತಿಯಾದಾಗ ಮಾತ್ರ ನಮಗೆ ಗೊತ್ತಾಗುತ್ತದೆ. ಯಾವೋನೋ ರೈತ ಎಲ್ಲೋ ನೇಣು ಹಾಕಿಕೊಂಡಿದ್ದಾನೆ. ನನಗೇನು ಎನ್ನುವವರೇ ಜಾಸ್ತಿಯಾಗಿದ್ದಾರೆ. ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಇನ್ನು ಮುಂದೆ ಯಾರೇ ರೈತ ಆತ್ಮಹತ್ಯೆ ಮಾಡಿಕೊಂಡರೆ ನಾನು ಅಧಿಕಾರ ತ್ಯಾಗ ಮಾಡಿಬಿಡುತ್ತೇನೆ ಎಂದು ಹೇಳಿದರು. ಅದರ ಬಗ್ಗೆ ನಾನು ಜಾಸ್ತಿ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಇನ್ನು ಕೆಲವರು ಹೇಳಿದರು, ಸತ್ತರೆ ಸಾಯುತ್ತಾರೆ, ನಾವೇನು ಮಾಡುವುದಕ್ಕಾಗುತ್ತದೆಂದು. ಯಾವ ಮಟ್ಟಕ್ಕೆ ಬಂದಿದ್ದೇವೆಂದರೆ,

ಶ್ರೀ ಎಂ.ಟಿ. ಕೃಷ್ಣಪ್ಪ:- ಇದೊಂದೇ ಸರ್ಕಾರದ ಮೇಲೆ ಹೇಳುತ್ತಿದ್ದೀರಲ್ಲ. ನಿಮ್ಮದೇ ಸರ್ಕಾರ ಇದ್ದಾಗ ಸುಮಾರು 1300 ಜನರು ಸತ್ತರಲ್ಲ, ಅವರಿಗೂ ಇದು ಅನ್ವಯಿಸುತ್ತದಲ್ಲವೇ? ರೈತರು ಸತ್ತಿರುವುದು ಇದೊಂದೇ ಸರ್ಕಾರದ ಅವಧಿಯಲ್ಲೇ?

ಶ್ರೀ ಕೃಷ್ಣ ಬೈರೇಗೌಡ:- ನೋಡಿ ನಾವು ಇದರಿಂದಲೇ ಹಾಳಾಗುವುದು. ನಾನು ಯಾವ ಸರ್ಕಾರವನ್ನೂ ಬಿಟ್ಟಿಲ್ಲ. ಇವರಿಗೆ ಕುದುರೆಗೆ ಬ್ಲೈಂಡರ್ಸ್ ಹಾಕುತ್ತಾರಲ್ಲ ಹಾಗೆ, ಇವರಿಗೆ ಕೇವಲ ಪಾರ್ಟಿ ರಾಜಕೀಯವಷ್ಟೇ ಕಾಣುವುದು. ರೈತರ ಬಗ್ಗೆ ನಾನು ಮಾತನಾಡುತ್ತಿದ್ದರೆ ಕನಿಷ್ಠ ಕಾಳಜಿ ವಹಿಸಬೇಕು. ಅದನ್ನು ಬಿಟ್ಟು ಎಲ್ಲದಕ್ಕೂ ಪಾರ್ಟಿ ರಾಜಕೀಯವನ್ನೇ ನೋಡುವುದು. ಕನ್ನಡಕ ಹಾಕಿರುವ ಕಾಮಾಲೆ ರೋಗದವರಿಗೆ ಪ್ರಪಂಚವೆಲ್ಲಾ ಹಳದಿ ಕಾಣುತ್ತದೆ. ಆ ರೀತಿ ಇವರು. ನಾನು ಮಾತನಾಡುವಾಗ ಯಾವ ಸರ್ಕಾರವನ್ನೂ ಬಿಟ್ಟಿಲ್ಲ.

ಶ್ರೀ ಎಂ.ಟಿ. ಕೃಷ್ಣಪ್ಪ:- ಒಂದು ನಿಮಿಷ, ಇಲ್ಲಿ ರೈತರ ವಿರೋಧಿಗಳು ಯಾರೂ ಇಲ್ಲ. ನಾವೆಲ್ಲರೂ ರೈತರ ಪರವಾಗಿರುವವರೇ ಆಗಿದ್ದೇವೆ.

ಶ್ರೀ ಸಿದ್ದು ಸವದಿ:– ಈ ಸರ್ಕಾರ ರೈತರ ಸಾಲದ ಬಡ್ಡಿ ಮನ್ನಾ ಮಾಡಿದೆ. 25 ಸಾವಿರದವರೆಗೂ ಸಾಲ ಮನ್ನಾ ಮಾಡಿದೆ. ನಿಮ್ಮ ಸರ್ಕಾರ ಇದ್ದಾಗ ಇದನ್ನು ಮಾಡಿತ್ತೇನು?

(ಗೊಂದಲ)

ಅಧ್ಯಕ್ಷರು:– ಈಗೇನಾಗಿದೆಯೆಂದರೆ, ಅವರು ಹೇಳಬೇಕಾದ್ದನ್ನು ಅವರು ಹೇಳುತ್ತಾರೆ, ನೀವು ಹೇಳುವುದನ್ನು ನೀವು ಹೇಳುತ್ತೀರಿ, ನಿವು ಹೇಳುವುದೆಲ್ಲವನ್ನೂ ಮಹಾಪ್ರಭುಗಳು ನೋಡಿ ನಿರ್ಣಯ ಮಾಡುತ್ತಾರೆ. ಎಲ್ಲರೂ ಕುಳಿತುಕೊಳ್ಳಿ. ಎಲ್ಲರೂ ಕುಳಿತುಕೊಳ್ಳಿ, ಪದೇ ಪದೇ ಎಲ್ಲರೂ ಎದ್ದುನಿಂತು ಮಾತನಾಡಲು ನಾನು ಅವಕಾಶ ಕೊಡುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಕೃಷ್ಣಬೈರೇಗೌಡರೆ, ತಾವು ಅಂಕಿ ಅಂಶ ಸಮೇತ ರಾಜ್ಯದ ರೈತರ ಸ್ಥಿತಿಗತಿಗಳ ಬಗ್ಗೆ ಚೆನ್ನಾಗಿ ವಿತರಣೆ ಕೊಡುತ್ತಿದ್ದೀರಿ. ಈ ಸಮ್ಮಿಶ್ರ ಸರ್ಕಾರ ಇಷ್ಟೆಲ್ಲಾ ಪ್ರಯತ್ನವನ್ನು ಮಾಡಿದ ಮೇಲೂ ಕೂಡ ರೈತರ ಆತ್ಮಹತ್ಯೆ ಮುಂದುವರೆದಿದೆ. ಪ್ರತಿಯೊಂದು individual ಈ ಆತ್ಮಹತ್ಯೆ ಬಗ್ಗೆ ನಾನು ಅಧಿಕಾರಿಗಳಿಗೆ ಸೂಚನೆ ಕೊಟ್ಟು ಇತ್ತೀಚೆಗೆ ಅಂದರೆ ಕಳೆದ 16 ತಿಂಗಳುಗಳಲ್ಲಿ ಯಾರು ಯಾರು ಈ ರೀತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆ ಬಗ್ಗೆ ಈ ಹಿಂದೆ ಒಂದು ಬಾರಿ ವರದಿಯನ್ನು ತರಿಸಿಕೊಂಡಿದ್ದೇನೆ. ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ವಾಸ್ತವಿಕವಾಗಿ ಆ ರೈತನ ಆತ್ಮಹತ್ಯೆ ಯಾವ ಹಿನ್ನೆಲೆಯಲ್ಲಿ ಆಗಿದೆ ಎಂಬುದನ್ನು ನೋಡಬೇಕಾಗುತ್ತದೆ. ಹಣಕಾಸಿನ ಕಾರಣಕ್ಕಾಗಿ ಆಯಿತೆ, ಸಾಲಸೋಲಗಳಿಗೆ ಸಿಕ್ಕಿಹಾಕಿಕೊಂಡು ಈ ರೀತಿ ಮಾಡಿಕೊಂಡನೆ? ಇನ್ನೇನಾದರೂ ವಿಶೇಷವಾದ ಕಾರಣವಿತ್ತೆ ಎಂಬ ಬಗ್ಗೆ ವರದಿಯನ್ನು ತರಿಸಿಕೊಳ್ಳೋಣ. ಅದರೆ ಸಾವು ಸಾವೇ, ಆತ್ಮಹತ್ಯೆ ಆತ್ಮಹತ್ಯೆಯೇ, ಇದರ ಬಗ್ಗೆ ನಾವು ಸುಧೀರ್ಘವಾಗಿ ಚರ್ಚೆಯನ್ನು ಮಾಡಬೇಕಾಗುತ್ತದೆ. ನಾವು ನೀವೆಲ್ಲರೂ ಚರ್ಚೆ ಮಾಡಿ ಪರಿಹಾರವನ್ನು ಹುಡುಕೋಣ, ಇದರಲ್ಲಿ ಎರಡು ಮಾತಿಲ್ಲ. ನಾನು ಈ ಮನೆಯಲ್ಲಿರುವಂಥ ಎಲ್ಲ ಹಿರಿಯ ಸದಸ್ಯರಲ್ಲಿ ವಿನಂತಿ ಮಾಡುವುದೇನೆಂದರೆ, ನಾವು ಗ್ರಾಮೀಣ ಪ್ರದೇಶದ ರೈತರ ಹಿನ್ನೆಲೆಯಿಂದ ಬಂದು ಇಲ್ಲಿ ಕುಳಿತಿದ್ದೇವೆ. ನಾವು ರೈತರ ಪರವಾಗಿರುವಂಥವರೆ ಎಂದು ಹಲವು ಹತ್ತು ಬಾರಿ ಹಿಂದಿನಿಂದಲೂ ಹೇಳುತ್ತಿದ್ದೇನೆ. ಈಗಲೂ ಕೂಡ ಅದನ್ನೇ ಹೇಳುತ್ತಿದ್ದೇನೆ. ನಾನು ಅನಿರೀಕ್ಷಿತವಾಗಿ ಹಣಕಾಸಿನ ಇಲಾಖೆಯನ್ನು ವಹಿಸಿಕೊಂಡು

ಇಲ್ಲಿ ಕುಳಿತಿದ್ದೇನೆ. ಕಳೆದ 16 ತಿಂಗಳುಗಳಲ್ಲಿ ಎಲ್ಲ ರೀತಿಯ ನಿಷ್ಠುರಗಳನ್ನು ಎದುರಿಸಿ, ರೈತರ ಪ್ರಶ್ನೆ ಬಂದಾಗ 75% ಲಿಫ್ಟ್ ಇರಿಗೇಷನ್‌ಗೆ ಹಣ ಕೊಟ್ಟಿರುವಂಥದ್ದಿರಬಹುದು, ಬಿತ್ತನೆ ಬೀಜಕ್ಕೆ ನಾವು ಕಳೆದ ವರ್ಷ 45 ಕೋಟಿ ಕೊಟ್ಟಿದ್ದನ್ನು ಈಗ 110 ಕೋಟಿಯನ್ನು ಸೇರಿಸಿ ಸಬ್ಸಿಡಿ ಕೊಟ್ಟಿರುವುದರ ಬಗ್ಗೆ ಇರಬಹುದು, ಈ ದೇಶದಲ್ಲಿ ಯಾರೂ ಪ್ರಯತ್ನ ಮಾಡದೇ ಇದ್ದಂಥ 4% ದರದಲ್ಲಿ ಸಹಕಾರಿ ಸಂಘಗಳ ಮೂಲಕ ರೈತರಿಗೆ ಸಾಲ ಕೊಟ್ಟಿದ್ದಿರಬಹುದು, ಇದು ಸಾಲದೆಂದು ಹೇಳಿ ಯಾವುದೇ ರೀತಿಯ ಒತ್ತಾಯ ಇಲ್ಲದಿದ್ದರೂ ಕೂಡ ಈ ಬರಗಾಲ, ಅತಿವೃಷ್ಟಿಯಿಂದ ನೊಂದಂಥ ರೈತರಿಗೆ ಒಂದು ರಿಲೀಫ್ ಸಿಗಲಿ ಎಂದು ನಿರ್ಧಾರ ಮಾಡಿ ಎಲ್ಲ ರೈತರಿಗೂ ಕೂಡ 25 ಸಾವಿರ ರೂ. ಗಳವರೆಗೆ ಸಾಲ ಮನ್ನಾ ಮಾಡಿ ಸುಮಾರು 2300 ಕೋಟಿ ಸರ್ಕಾರದ ಮೇಲೆ ಭಾರವನ್ನು ಹಾಕಿಕೊಂಡಿದ್ದಿರಬಹುದು, ಟ್ರ್ಯಾಕ್ಟರ್‌ಗಳಿಗೆ ಸಬ್ಸಿಡಿ ಕೊಟ್ಟಂಥದ್ದಿರಬಹುದು, ಸಣ್ಣ ರೈತರಿಗೆ ಅನುಕೂಲವಾಗಬೇಕೆಂದು ಎತ್ತು ಗಾಡಿಗಳನ್ನು ಕೊಟ್ಟಂಥದ್ದಿರಬಹುದು. ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ನಾವು ಮಾಡುತ್ತಿದ್ದೇವೆ. ನನಗಿನ್ನೂ ತೃಪ್ತಿಯಿಲ್ಲ. ಏನೋ ಮಾಡಿ ಬಿಟ್ಟಿದ್ದೇವೆ ಎಂದು ನಾನು ಹೇಳುತ್ತಿಲ್ಲ. ರೈತರ ಋಣ ತೀರಿಸಲು ನಾವೆಷ್ಟು ಕೆಲಸವನ್ನು ಅವರ ಪರವಾಗಿ ಮಾಡಿದರೂ ಕೂಡ ಅದು ಕಡಿಮೆಯೇ ಇವತ್ತು ಪರಿಸ್ಥಿತಿ ಎಲ್ಲಿಗೆ ಬಂದು ಮುಟ್ಟಿದೆಯೆಂದರೆ, ನಾನು ಇವತ್ತಿಗೂ ಕೂಡ ಕೃಷಿ ಮಾಡುತ್ತೇನೆ. ಇವತ್ತಿಗೂ ಕೂಡ ಊರು ಕಡೆ ಹೋದರೆ ಒಂದತ್ತು ನಿಮಿಷ ಹೊಲ, ತೋಟಕ್ಕೆ ಹೋಗಿ ಬರುತ್ತೇನೆ. ಆದರೆ ಇವತ್ತು ಅಡಿಕೆ ತೋಟದವರು ಬದುಕುತ್ತಿಲ್ಲ, ಕಾಫಿ ಬೆಳೆಗಾರ ಬದುಕುತ್ತಿಲ್ಲ, ತೆಂಗಿನ ಬೆಳೆಗಾರರೂ ಕೂಡ ಇದೇ ಪರಿಸ್ಥಿತಿಗೆ ಬಂದಿದ್ದಾನೆ. ಇನ್ನು ಭತ್ತ, ರಾಗಿ ಬೆಳೆದವನೂ ಕೂಡ ಬದುಕುವುದಕ್ಕೆ ಆಗದ ಸ್ಥಿತಿಗೆ ಬರುತ್ತಿದ್ದಾನೆ. ಕಬ್ಬು ಬೆಳೆ ನೊಡಿದರೆ, ಬೆಳೆದು ನಿಂತ ಕಬ್ಬನ್ನು ಕೊಳ್ಳುವುದಕ್ಕೆ ನಮ್ಮದೇ ಆದ ವಿಫಲತೆಯಿಂದ ವ್ಯವಸ್ಥೆ ಮಾಡುವುದಕ್ಕೆ ಆಗಲಿಲ್ಲ. ಎಲ್ಲರೂ ಒಂದು ರಿತಿಯಲ್ಲಿ ರೈತನನ್ನು ಸುಲಿಗೆ ಮಾಡುತ್ತಿರುವಂಥ ಈ ಸಂದರ್ಭದಲ್ಲಿ ಒಂದು ಬಾರಿ ಇದರ ಬಗ್ಗೆಯೇ ಚರ್ಚೆ ಮಾಡೋಣ. ಇನ್ನೂ ಯಾವ ಯಾವ ರೀತಿಯಲ್ಲಿ ರೈತನಿಗೆ ನಾವು ನೆರವನ್ನು ಕೊಡಬಹುದು? ರೈತರ ಆತ್ಮಹತ್ಯೆಯನ್ನು ತಡೆಯುವಂಥದ್ದರ ಜೊತೆ ಜೊತೆಯಲ್ಲಿಯೇ ಗ್ರಾಮೀಣ ಪ್ರದೇಶದಲ್ಲಿ ರೈತರು ಅಲ್ಲಿಯೇ ಉಳಿದು ಕೃಷಿಯನ್ನು ಮುಂದುವರೆಸಿ ಉತ್ತಮ ಜೀವನವನ್ನು ನಡೆಸುವಂಥ ವಾತಾವರಣವನ್ನು ಉಂಟು ಮಾಡೋಣ. ಇಂದು ಗ್ರಾಮೀಣ ಪ್ರದೇಶದಲ್ಲಿ ಏನಾಗಿದೆಯೆಂದರೆ ರೈತನ ಮಗನಾದ ಒಬ್ಬ ಯುವಕ ಹಳ್ಳಿಯಲ್ಲಿ ಇರುವುದಕ್ಕೆ ಇಷ್ಟಪಡುತ್ತಿಲ್ಲ. ಏನೋ ರೈತ ತನ್ನ

ತಪ್ಪಿನಿಂದಾಗಿ ಮಗನಿಗೆ ವಿದ್ಯೆ ಕೊಡಿಸುವುದಕ್ಕಾಗಿರಲಿಲ್ಲವೆಂದರೆ ಅಂಥ ಯುವಕರು ಮಾತ್ರ ಹಳ್ಳಿಯಲ್ಲಿಯೇ ಇದ್ದು ಕೃಷಿಯನ್ನು ಮಾಡುತ್ತಿದ್ದಾರೆಯೇ ಹೊರತು ಹೆಚ್ಚು ಕಡಿಮೆ ಮಿಕ್ಕವರೆಲ್ಲರೂ ಈ ಕೃಷಿಯಿಂದ ಬದುಕುವುದಕ್ಕಾಗುವುದಿಲ್ಲವೆನ್ನುವ ತೀರ್ಮಾನಕ್ಕೆ ಬರುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಪಕ್ಷಭೇದ ಮರೆತು ಕೇಂದ್ರ ಹಾಗೂ ರಾಜ್ಯ ಸರ್ಕಾರದಗಳೆರಡೂ ಇದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಏನೋ ಒಂದು ಸ್ವಲ್ಪ ನಮ್ಮ ರಾಜ್ಯ ಸರ್ಕಾರದಿಂದ ಮಾಡಿದ್ದೇವೆ ಎನ್ನುವ ಸಮಾಧಾನ ನಮಗಿದೆಯೇ ಹೊರತು ನಿಜವಾಗಿಯೂ ನೀವು ಹೇಳಿದಂಥ ರೈತನ ಅನೇಕ ಜಲ್ವಂತ ಸಮಸ್ಯೆಗಳಿಗೆ ಪರಿಹಾರವನ್ನು ಕೊಡುವುದಕ್ಕಾಗಲಿಲ್ಲ. ನೀವು ಹೇಳಿದಿರಿ, ಎಲ್ಲ ವಸ್ತುಗಳ ಬೆಲೆ ನಿಗದಿಯಾಗುತ್ತದೆ. ಒಳ್ಳೆಯ ಬೆಲೆ ಕೂಡ ಸಿಗುತ್ತದೆ. ಆದರೆ ರೈತ ಮಾತ್ರ ಬೆಳೆದಂಥ ಬೆಳೆಗೆ ಬೆಲೆ ಇವೊತ್ತಿನವರೆಗೆವಿಗೂ ಯಾವ ಪರಿಸ್ಥಿತಿಯಲ್ಲಿ ಇದೆ ನೋಡಿ. ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರ ಮಾಡುತ್ತದೆ, ನಾವೂ ಕೂಡ ಮಾಡುತ್ತೇವೆ, ಆದರೆ ಮಾರ್ಕೆಟ್ ಬೆಲೆಗೆ ಹೋಲಿಸಿದರೆ ಅಜಗಜಾಂತರ ವ್ಯತ್ಯಾಸವಿರುತ್ತದೆ. ಇದನ್ನು ತುಂಬುವಂಥ ಶಕ್ತಿಯೂ ನಮಗೆ ಇಲ್ಲ. ಈ ಪರಿಸ್ಥಿತಿಯಲ್ಲಿ ನಾವು ಇರಬೇಕಾದರೆ, ಕೃಷ್ಣಬೈರೇಗೌಡರೆ ನಾನು ನಿಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ, ಈ ಸಮ್ಮಿಶ್ರ ಸರ್ಕಾರ ಈ ರೈತರ ಉಳಿವಿನ ದೃಷ್ಟಿಯಿಂದ ಹತ್ತು ಹೆಜ್ಜೆ ಮುಂದೆ ಬಂದಿದೆ. ಇನ್ನೂ ಇಂಥದ್ದು ಆಗಬೇಕು ಎಂದರೆ, ಹಣಕಾಸಿನ ಇತಿಮಿತಿಯೊಳಗೆ ನಾನು ಯಾವುದೇ ರೀತಿಯಿಂದಲೂ ರೈತನ ಪರವಾಗಿ ಕೆಲಸವನ್ನು ಮಾಡುವುದಕ್ಕೆ ಸಿದ್ಧನಿದ್ದೇನೆ. ಇಲ್ಲಿರುವವರೆವಿಗೂ ಹಣಕಾಸಿನ ಸಚಿವನಾಗಿ ರೈತರ ಹಿತದೃಷ್ಟಿಯಿಂದ ಅವರ ಋಣ ತಿಂದು ಬಂದಿರುವಂಥ ನಾವುಗಳು ಅವನಿಗಾಗಿ ಕೆಲಸ ಮಾಡಬೇಕು. ಹಿರಿಯರಾದ ನಿಜಲಿಂಗಪ್ಪನವರ ಕೊನೆ ಕೊನೆಯ ದಿವಸಗಳಲ್ಲಿ ಒಮ್ಮೆ ನಾನು ಅವರ ಮನೆಗೆ ಹೋಗಿದ್ದೆ. ಆಗ ಅವರು ನನಗೆ ಏನು ಹೇಳಿದರೆಂದರೆ, 'ಯಡಿಯೂರಪ್ಪನವರೆ, ನಾನು ಅವತ್ತಿಂದ ಬಡಕೊಂಡೆ, ನೀವು ಕೈಗಾರಿಕೆ, ಕೈಗಾರಿಕೆ ಎಂದು ಎಲ್ಲವನ್ನೂ ಅದಕ್ಕಾಗಿ ಮಾಡುತ್ತಿದ್ದಿರಿ, ಕೃಷಿಗೆ ಹಣ ಕೊಡಿ, ನಮ್ಮ ರೈತನ ಮಕ್ಕಳಿಗೆ ಉದ್ಯೋಗ ಕೊಡಿ, ಅವನ ಹೊಲಕ್ಕೆ ನೀರು ಕೊಡಿ, ಅವನು ಬೆಳೆದಂಥ ಬೆಳೆಗೆ ವೈಜ್ಞಾನಿಕವಾದಂಥ ಬೆಲೆಯನ್ನು ಕೊಡಿ. ಇಷ್ಟನ್ನು ಮಾತ್ರ ನಿಮ್ಮ ಸರ್ಕಾರಗಳಿಂದ ನಾನು ಕೇಳುವುದು ಎಂದು ಅವರು ಹೇಳಿದರು. ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನಮಂತ್ರಿಗಳಾಗಿ ನಿಜಲಿಂಗಪ್ಪನವರ ಹತ್ತಿರ ಅವರ ಮನೆಗೆ ಹೋಗಿ ಮಾತನಾಡಬೇಕಾದಾಗ ಕೂಡ ಇದೇ ಮಾತನ್ನು ಅವರು ಹೇಳಿದರು. ಅವರ ಕೊನೆಯ ದಿವಸಗಳಲ್ಲಿ ನಿಮ್ಮ ಸಂದೇಶ ಏನು ಎಂದು ಕೇಳಿದಾಗ ಕೂಡ ಇದೇ

ಮಾತುಗಳನ್ನು ಅವರು ಹೇಳಿದ್ದರು. ಅವರೊಬ್ರು ಮಾತ್ರ ಈ ರೀತಿ ಹೇಳಿರುವುದು ಎಂದು ನಾನು ಹೇಳುತ್ತಿಲ್ಲ. ರೈತರ ಪರವಾಗಿ ಹೋರಾಟ ಮಾಡಿದ ಬಹಳಷ್ಟು ಹಿರಿಯರೂ ಕೂಡ ಇದೇ ಮಾತನ್ನು ಹೇಳಿದ್ದರು. ಕೃಷ್ಣಬೈರೇಗೌಡರೆ, ನಿಮ್ಮ ತಂದೆಯವರೂ ಕೂಡ ರೈತರ ಪರವಾಗಿ ಮಾತನಾಡಿರುವುದು ದಾಖಲಾಗಿರುವುದನ್ನು ನಾವೆಲ್ಲರೂ ಓದಬೇಕು. ಆದುದರಿಂದ ಈ ಸರ್ಕಾರ ನಾಲ್ಕು ಹೆಜ್ಜೆ ಮುಂದೆ ಹೋಗಿ ಆ ದಿಕ್ಕಿನಲ್ಲಿ ಪ್ರಯತ್ನವನ್ನು ಮಾಡಿದ್ದೇವೆ. ಯಾವುದಾದರೂ ಬೇಡದ್ದಕ್ಕೆ ನಾವು ಹಣ ಕೊಟ್ಟಿದ್ದರೆ ನೀವು ಹೇಳಿ, ಯಡಿಯೂರಪ್ಪನವರೇ ವ್ಯರ್ಥವಾಗಿ ಇಂಥದ್ದಕ್ಕೆ ಹಣವನ್ನು ಕೊಟ್ಟಿದ್ದೀರಿ ಎಂದು ಹೇಳಿ. ಇಲ್ಲಿ ಎಲ್ಲರೂ ಬೊಬ್ಬೆ ಹೊಡೆಯುತ್ತಿದ್ದಾರೆ, ಯಡಿಯೂರಪ್ಪನವರು ದಾನ ಮಾಡಿದರು, ಧರ್ಮ ಮಾಡಿದರು, ಏನು ಈ ಹಣವನ್ನು ಅವರ ಮನೆಯಿಂದ ತಂದರೆ ಎಂದು ಹೇಳಿದರು. ಎಷ್ಟು ಕೊಟ್ಟಿದ್ದೇನೆ ಸ್ವಾಮಿ? 45 ಸಾವಿರ ಕೋಟಿ ರೂಪಾಯಿಗಳಲ್ಲಿ ಒಂದು ನೂರು, ನೂರಿಪ್ಪತ್ತೈದು ಕೋಟಿ ರೂಪಾಯಿಗಳನ್ನು ಎಲ್ಲದಕ್ಕೂ ಸೇರಿ ನಾವು ಕೊಟ್ಟಿರಬಹುದು. ಆದರೆ ಕೃಷಿಕರ ದೃಷ್ಟಿಯಿಂದ ಇನ್ನು ಏನೇನು ಮಾಡಬಹುದು ಎಂಬುದನ್ನು ನೀವು ಹೇಳಿ. ಚರ್ಚೆ ಮಾಡೋಣ, ಇದನ್ನು ಕೇವಲ ಬಜೆಟ್ ಸೆಷನ್‌ದಲ್ಲಿ ಮಾತ್ರ ಚರ್ಚೆ ಮಾಡಬೇಕೆಂದೇನೂ ಇಲ್ಲ. ನೀವು ಸಲಹೆ ಕೊಡಿ. ಏನೇನು ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡುವುದಕ್ಕೆ ನಾವು ಸಿದ್ಧವಿದ್ದೇವೆ. ಈಗೇನು ಇತ್ತೀಚಿನ ದಿವಸಗಳಲ್ಲಿ ರೈತರು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ, ಅದಕ್ಕೆ ಕಾರಣವೇನು, ಹಿನ್ನೆಲೆ ಏನು ಎಂಬ ಬಗ್ಗೆ ವಿವರವಾದಂಥ ಒಂದು ವರದಿಯನ್ನು ಕೊಡುವಂತೆ ನಾನು ಜಿಲ್ಲಾಧಿಕಾರಿಗಳಿಗೆ ಇವತ್ತೇ ಸೂಚನೆ ಕೊಟ್ಟು ಇಡೀ ರಾಜ್ಯದಲ್ಲಿ ನಮ್ಮ ಸರ್ಕಾರ ಬಂದ ಮೇಲೆ ಕಳೆದ 16 ತಿಂಗಳುಗಳಲ್ಲಿ ಏನೇನಾಗಿದೆ ಅದರ ಬಗ್ಗೆ ವರದಿಯನ್ನು ತರಿಸಿಕೊಂಡು ಈ ಮನೆಯಲ್ಲಿ ವಿವರವಾದ ವರದಿಯನ್ನು ನಾನು ಮಂಡನೆ ಮಾಡುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಮಾನ್ಯ ಅಧ್ಯಕ್ಷರೆ, ಯಡಿಯೂರಪ್ಪನವರಿಗೆ ಗೊತ್ತು. ಅವರು ಬಹಳ ವರ್ಷಗಳಿಂದ ಈ ಸದನದಲ್ಲಿದ್ದಾರೆ. ನಾನೂ ಕೂಡ ಈ ಸದನದಲ್ಲಿ ಆ ಕಡೆ, ಈ ಕಡೆ, ತಾವು ಕುಳಿತುಕೊಂಡಿರುವ ಸ್ಥಳದಲ್ಲಿ, ಹೀಗೆ ಎಲ್ಲ ಕಡೆ ಕುಳಿತುಕೊಂಡು ಕೆಲಸವನ್ನು ಮಾಡಿದ್ದೇನೆ. ಯಾವ ಯಾವ ರೀತಿಯಲ್ಲಿ ಕಲಾಪ ನಡೆಯುತ್ತದೆ ಎಂಬುದನ್ನು ನಾನು ನೋಡಿದ್ದೇನೆ. ಕೆಲವರು ಅಧ್ಯಕ್ಷರಿಗೆ ಕಂಡೀಶನ್ ಹಾಕುತ್ತಾರೆ. ಬೆಳಿಗ್ಗೆ ಹೊತ್ತೇ ಕೊಡಬೇಕು, ಮೊದಲ ದಿವಸದಲ್ಲೇ ಕೊಡಬೇಕು, Press ಫುಲ್ ಇದ್ದಾಗಲೇ ಕೊಡಬೇಕು, ಈ ರೀತಿ ಕೇಳುವುದನ್ನೆಲ್ಲಾ ನಾನು ನೋಡಿದ್ದೇನೆ. ಆಮೇಲೆ

ಮಾತನಾಡುವಾಗ ಗ್ಯಾಲರಿಗಳ ಕಡೆ ನೋಡಿಕೊಂಡು ಮಾತನಾಡುವವರನ್ನೂ ನಾನು ನೋಡಿದ್ದೇನೆ. ಈಗ ಮಾತನಾಡುತ್ತಿರುವ ಆತನ ವಯಸ್ಸೆಷ್ಟು, ಅನುಭವ ಎಷ್ಟು, ಪ್ರಾರಂಭದಿಂದ ಆತನ ಮಾತೆಲ್ಲವನ್ನೂ ನಾನು ಗಮನಿಸುತ್ತಿದ್ದೇನೆ, ಆತ ಯಾರನ್ನೂ ಬಿಡಲಿಲ್ಲ. ಎಂ.ಟಿ. ಕೃಷ್ಣಪ್ಪನವರೇಕೋ ಆತುರ ಪಟ್ಟರು. ನೀವು ಇಂಪೋರ್ಟೆಡ್ ಕಾರ್‌ಗಳ ಮೇಲೆ 150% ಟ್ಯಾಕ್ಸ್ ಹಾಕುತ್ತೀರಿ, ಹೊರದೇಶಗಳಿಂದ ಆಹಾರ ಪದಾರ್ಥಗಳನ್ನು ತರಿಸಿಕೊಳ್ಳಬೇಕಾದರೆ ಟ್ಯಾಕ್ಸ್ ಹಾಕಿ ಅವರ ಉತ್ತೇಜನ ಕಡಿಮೆ ಮಾಡಿ, ಸ್ಥಳೀಯವಾಗಿ ಉತ್ಪಾದನೆ ಮಾಡತಕ್ಕಂಥ ಆಹಾರ ಪದಾರ್ಥಗಳಿಗೆ ಒಳ್ಳೆಯ ಬೆಲೆ ಸಿಗಲಿ ಎನ್ನುವಂಥ ಮಾತನ್ನು ಹೇಳಿದ್ದಾರೆ. ಆ ಮಾತು ಕೇಂದ್ರ ಸರ್ಕಾರಕ್ಕೆ ಹೇಳಿದಂತ ಮಾತಲ್ಲವೇ ಆತ ಪಕ್ಷ ವಹಿಸಿಕೊಂಡು ಮಾತನಾಡಿದನೇ ಆತ ತನ್ನ ಇತಿಮಿತಿಯೊಳಗೆ ಎಲ್ಲವನ್ನೂ ಆಲೋಚನೆ ಮಾಡಿ ವಸ್ತು ಸಂಗ್ರಹ ಮಾಡಿಕೊಂಡು ಮಾತನಾಡುತ್ತಾ ಕಡೆಗೆ ಆತ ಎಲ್ಲಿಗೆ ಬಂದು ನಿಂತಿದ್ದನೆಂದರೆ, ಬೀದರ್ ವಿಷಯಕ್ಕೆ ಬಂದಾಗ ಇನ್ನೊಂದು ನೂರು ರೂಪಾಯಿ ಟನ್‌ಗೆ ಜಾಸ್ತಿ ಕೊಟ್ಟು ಕಬ್ಬು ಅರೆಯುವುದಕ್ಕೆ ಬಿಟ್ಟಿದ್ದರೆ ರೈತ ಸಾಯುತ್ತಿರಲಿಲ್ಲವಲ್ಲ, ನಮ್ಮ ಮನೆಯೊಳಗೆ ಸಾವಾದರೆ ನಮಗೆ ಗೊತ್ತಾಗುತ್ತದೆ, ಮತ್ತೆಲ್ಲೋ ಸಾವಾದರೆ ನಮಗೆ ಅದು ಗೊತ್ತಾಗುವುದಿಲ್ಲವೆಂದು ಬಹಳ ಭಾವನಾತ್ಮಕವಾಗಿ ಮಾತನಾಡಿದ್ದಾನೆ. ತಾವು ಕೊಟ್ಟ ಸಲಹೆ ನಾನು ಒಪ್ಪುತ್ತೇನೆ. ಏಕೆಂದರೆ ನಿಮಗೆ ಇರುವ ಇತಿಮಿತಿಯೊಳಗೆ ಸಂಪನ್ಮೂಲಗಳನ್ನು ಕ್ರೂಢೀಕರಿಸಿ ಸಾಕಷ್ಟು ಪ್ರಗತಿ ಪರವಾದ ಹೆಜ್ಜೆಗಳನ್ನು ತೆಗೆದುಕೊಂಡಿದ್ದೀರಲ್ಲ ಎಂದು ಆತ್ಮತೃಪ್ತಿಯಿಂದ ಒಳ್ಳೆಯ ಮಾತುಗಳನ್ನು ಹೇಳಲಿ ಎಂದು ಹೇಳಿದರು. Nothing wrong, ನಾನೂ ಕೂಡ ನಿಮ್ಮ ಸ್ಥಾನದಲ್ಲಿ ಇದ್ದರೂ ಕೂಡ ಅದನ್ನೇ ಬಯಸುತ್ತೇನೆ. ಆದರೆ ವಿರೋಧ ಪಕ್ಷದಲ್ಲಿ ಕುಳಿತು ತನ್ನ ಕೆಲಸವನ್ನು ತಾನು ಮಾಡುವಾಗ he has to do it. ನೋಡೋಣ, ನೀವು ಮಾಡಿರುವಂತಹ ಒಳ್ಳೆಯ ಕೆಲಸಗಳ ಬಗ್ಗೆ ಒಂದೆರಡು ಮಾತುಗಳನ್ನು ಕೂಡ ಆತ ಹೇಳಬಹುದು. ನನಗೆ ಗೊತ್ತಿಲ್ಲ. ಹೇಳಲಿ. ಆದರೆ ನಮ್ಮ ಸ್ನೇಹಿತರುಗಳಿಗೆ ನಾನು appeal ಮಾಡಿಕೊಳ್ಳುತ್ತೇನೆ, ನಮಗಾಗಲಿ, ನಿಮಗಾಗಲಿ ಪಕ್ಷ ಹೆಚ್ಚು ಜ್ಞಾಪಕ ಇರಬಾರದು. ಬೇಕಾದರೆ ಹಳೇ Proceedings ತೆಗೆದುನೋಡಿ. ನಾವು ಪಕ್ಷವನ್ನು ಮರೆತು ಕೆಲಸ ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೆ, ನಾನು ತಮಗೆ ಹೇಳುತ್ತೇನೆ, ಮಾನ್ಯ ಬಣಕಾರ್‌ರವರು ಅಧ್ಯಕ್ಷರಾಗಿದ್ದರು. ರಾಮಬಾವು ಪೋತದಾರ್‌ರವರು ಮಂತ್ರಿಗಳಾಗಿದ್ದರು. G.S. ಆಚಾರ್‌ರವರು ಸದಸ್ಯರು, ಅವರು ಆಗಲೇ ತೀರಿಕೊಂಡರು. ಅವರದು ಒಂದು ಪ್ರಶ್ನೆ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಮಾರಾಟ ಮಾಡುವುದರ ಬಗ್ಗೆ ಇತ್ತು. ರಾಮಬಾವು

ಪೋತದಾರರವರು, ಚುಂಚನಕಟ್ಟೆ ಶ್ರೀರಾಮ ಸಹಕಾರಿ ಸಕ್ಕರೆ ಕಂಪನಿಯನ್ನು ಸರಿಯಾಗಿ ನೋಡಿಕೊಳ್ಳದೇ ಐದು ಲಕ್ಷ ರೂಪಾಯಿಗೆ ಖೋಡೆಯವರಿಗೆ ಮಾರಿದ್ದೇವೆಂದು ಹೇಳಿದರು. ನಾನು ಆಡಳಿತ ಪಕ್ಷದವನು, ನನಗೆ ಸಂಬಂಧವೇ ಇಲ್ಲ. ನಾನು ಆ ಕಡೆಗೆ ಕುಳಿತಿದ್ದೆನು. ಒಂದು ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ನೀವು ಐದು ಲಕ್ಷ ರೂಪಾಯಿಗೆ ಖೋಡೆ ಕಂಪನಿಗೆ ಮಾರುವುದಾದರೆ, ನನಗೆ ಕೊಡಿ ನಾನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದೆ. ಮಾರನೇ ದಿವಸ ದೊಡ್ಡ headlines ಬಂದು partyಯಲೆಲ್ಲಾ ದೊಡ್ಡ ಗಲಾಟೆಯಾಗಿ, ಆಡಳಿತ ಪಕ್ಷದವರು ಇಲ್ಲಿಗೆ ಬಂದು ದೊಡ್ಡ ಗಲಾಟೆ ಆಯಿತು. ದೇಶದ ಪ್ರಶ್ನೆ ಬಂದಾಗ party ಯಾವ ಮಹಾ ವಿಚಾರ? Men of rank do not belong to any party. If at all they belong to any party, they are not only fools but are also slaves. This is said by the greatest politician, none other than, Mahatma Gandhi. you are neither fools nor slaves. Righteously, he is exercising his authority, he is doing his job in an excellent manner. You must encourage. ನಾವು ಈ ಸದನದಲ್ಲಿ ಅಂತಹವರ ಬೆನ್ನು ತಟ್ಟಿ ಇನ್ನೂ ಮಾತನಾಡಿ ಎಂದು ಹೇಳಬೇಕು. ಇವರು ಪಕ್ಷದ ಆಸ್ತಿಯಾಗುವುದಿಲ್ಲ. ಇವರು ತಯಾರಾಗಿ ಬಂದು publicityಗೆ, ಬೇರೆಯದಕ್ಕೆ ಹಾತೊರೆಯದೇ ಯಾರು ಸದನದಲ್ಲಿ ಶ್ರದ್ಧೆಯಿಂದ ಕೆಲಸ ಮಾಡುತ್ತಾರೆ ಅವರು ಸದನದ ಆಸ್ತಿಯಾಗುತ್ತಾರೆ. ನಾನು ಒಪ್ಪುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ: ಮಾನ್ಯ ಉಪಮುಖ್ಯಮಂತ್ರಿಗಳು ಅವರು ಮಾಡಿರತಕ್ಕಂಥ ಕಾರ್ಯಕ್ರಮಗಳ ಬಗ್ಗೆ ಸಹ ಪ್ರಸ್ತಾಪ ಮಾಡಿದರು. ಸಾಲ ಮನ್ನಾ ಮಾಡಿರುವುದನ್ನು ಸ್ವಾಗತ ಮಾಡಿದ್ದೇವೆ. ಅವರು ಬಡ್ಡಿಯನ್ನು 6ರಿಂದ 4ಕ್ಕೆ ಇಳಿಸಿದ್ದೇವೆಂದು ಹೇಳಿದರು. ನಾನು ಮಾನ್ಯ ಕೃಷ್ಣಪ್ಪನವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. 11 ಅಥವಾ 12% ಇದ್ದಂತಹ ಬಡ್ಡಿಯನ್ನು ನಮ್ಮ ಸರ್ಕಾರ 6%ಗೆ ಇಳಿಸಿತ್ತು ಎನ್ನುವುದದನ್ನು ಅವರು ಮರೆತು ಹೋಗಿದ್ದಾರೆ ಎಂದು ಕಾಣುತ್ತದೆ. ಅದಾದನಂತರ ನಮ್ಮ ಕೇಂದ್ರ ಸರ್ಕಾರ, ನಬಾರ್ಡ್‌ನಿಂದ ಬ್ಯಾಂಕುಗಳು ನಮ್ಮ co-operative institutions ಗೆ ಏನು lend ಮಾಡುತ್ತಿತ್ತು. ಅದನು 11% ನಿಂದ 7% ಗೆ ಇಳಿಸಿದ್ದನ್ನು ಸಹ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಒಪ್ಪಿಕೊಳ್ಳುತ್ತಾರೆ, ಹಾಗಾಗಿ ರಾಜ್ಯ ಸರ್ಕಾರದ ಮೇಲೆ ಏನು ಭಾರ ಬೀಳುತ್ತಿತ್ತು. ಅದು ಕೇವಲ 3% ಮಾತ್ರ ಎನ್ನುವುದನ್ನು ಅವರು ಒಪ್ಪಿಕೊಳ್ಳುತ್ತಾರೆ. ಏಕೆಂದರೆ ಯಾವ ಸರ್ಕಾರ

ಏನೂ ಕಡಿಮೆ ಇಲ್ಲ. ನಮ್ಮ ಕೇಂದ್ರ ಸರ್ಕಾರ ಪ್ರಧಾನ ಮಂತ್ರಿಗಳ ನೇತೃತ್ವದಲ್ಲಿ ವಿದರ್ಭ ಪ್ಯಾಕೇಜ್ ಎಂದು ಮಾಡಿ ನಮ್ಮ ರಾಜ್ಯದಲ್ಲಿ ಆರು ಜಿಲ್ಲೆಗಳನ್ನು ತೆಗೆದುಕೊಂಡಿದ್ದಾರೆ. ರಾಷ್ಟ್ರದಲ್ಲಿ ಆಂಧ್ರ, ಕರ್ನಾಟಕ, ಮಹಾರಾಷ್ಟ್ರ ಇಂತಹ ಕಡೆಗಳಲ್ಲಿ ರೈತರು ಏನು ನೇಣು ಹಾಕಿಕೊಂಡು ಶರಣಾಗುತ್ತಿದ್ದರು. ಅಂತಹ ಕಡೆಯೆಲ್ಲಾ ಸುಮಾರು 16,000 ಕೋಟಿ ರೂಪಾಯಿಯಲ್ಲಿ ನಮ್ಮ ರಾಜ್ಯಕ್ಕೆ ಈಗಾಗಲೇ 1,500 ಕೋಟಿ ರೂಪಾಯಿ ಬಂದಿದೆ. ಒಟ್ಟು 2,500 ಕೋಟಿ ರೂಪಾಯಿಯ package ಅನ್ನು ಮಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ.– ಅದು ದುಡ್ಡು ಬಂದಿಲ್ಲ.

ಶ್ರೀ ಕೃಷ್ಣ ಬೈರೇಗೌಡ.– ಅದು ನಮ್ಮ ಬಳಕೆ ಮೇಲೆ ಆಧಾರಿತವಾಗಿರುತ್ತದೆ. ಅದರಲ್ಲಿ ಕೇಂದ್ರ ಸರ್ಕಾರ ಒಂದು ಹೆಜ್ಜೆ ಹಿಂದಕ್ಕೆ ಹೋಗುವಂತಹ ಪ್ರಶ್ನೆಯೇ ಇಲ್ಲ. ಹಾಗಾಗಿ ಪ್ರಧಾನ ಮಂತ್ರಿಗಳು ವಿಶೇಷ ಆಸಕ್ತಿ ತೆಗೆದುಕೊಂಡು ಎಲ್ಲೆಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಅದಕ್ಕೆ ಕೊಟ್ಟಿರುವುದನ್ನು ತಾವು ಒಪ್ಪುತ್ತೀರಿ ಎಂದು ಕಾಣುತ್ತದೆ. ಅದಕ್ಕೂ ತಮ್ಮ ವಿರೋಧ ಇದೆಯೋ ಏನೋ ಗೊತ್ತಿಲ್ಲ. ಹಾಗಾಗಿ ಎಲ್ಲಾ ಸರ್ಕಾರಗಳು ಕೂಡ ಇವತ್ತು ರೈತರ ಪರ ಇವೆ. ಆದರೆ ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಇವತ್ತು ತಾವು ಸಾಕಷ್ಟು ಸಬ್ಸಿಡಿಗಳನ್ನು ಕೊಟ್ಟಿದ್ದೀರಿ. ಶೇಕಡವನ್ನು ಕೂಡ ಕಡಿಮೆ ಮಾಡಿದ್ದೀರಿ, ನಂತರ ತಾವು ಬೇಕಾದಷ್ಟು ಉಪಕರಣಗಳ ಮೇಲೆ ಬೆಲೆ ರಿಯಾಯಿತಿಯನ್ನು ಕೊಟ್ಟಿದ್ದೀರಿ. ಹಾಗೆ ಎತ್ತು, ಗಾಡಿ ಕೂಡ ಕೊಟ್ಟಿದ್ದೇವೆಂದು ಸಹ ಹೇಳುತ್ತಿದ್ದೀರಿ. ನನಗೆ ಗೊತ್ತಿದ್ದ ಹಾಗೆ ಇವೆಲ್ಲವೂ ಸಹ ಕಳೆದ 15 ವರ್ಷದಿಂದ ಮಾಡಿಕೊಂಡು ಬರುತ್ತಿದ್ದೇವೆ. ಅದನ್ನು ತಾವು ಒಪ್ಪುತ್ತೀರೋ ಇಲ್ಲವೋ ನನಗೆ ಗೊತ್ತಿಲ್ಲ. ಸಬ್ಸಿಡಿ, rebate, seeds, drip irrigation ಗೆ ಸಬ್ಸಿಡಿ ಕೊಡುವುದಾಗಲಿ ಇವೆಲ್ಲವನ್ನು ಕೂಡ ನಾವು 15 ವರ್ಷದಿಂದ ಮಾಡುತ್ತಿದ್ದೇವೆ. ಇದರಲ್ಲಿ ಹೊಸದು ಯಾವುದು ಇಲ್ಲ. ಆದರೆ ನೀವು ಇದರಲ್ಲಿ ಕಡಿಮೆ ಮಾಡಿದ್ದೀರಿ ಎಂದು ಹೇಳುತ್ತಿಲ್ಲ. ನೀವು ಸ್ವಲ್ಪ ಸ್ವಲ್ಪ ಹೆಚ್ಚು ಹೆಚ್ಚು ಮಾಡಿರಬಹುದು. ಆದರೆ ಇವೆಲ್ಲ ಮಾಡಿ ನಾವು fail ಆಗಿದ್ದೇವೆಂದರೆ, ಮತ್ತೆ ಅದೇ ದಾರಿಯಲ್ಲಿ ಹೆಜ್ಜೆ ಇಡುವುದರಿಂದ, ನಮಗೆ ಸುಖ ಏನು ? ಈ ವಿಷಯವನ್ನು ಸ್ವಲ್ಪ ಯೋಚನೆ ಮಾಡಬೇಕು. ಇದೆಲ್ಲಾ ಮಾಡಿ ಮಾಡಿ ನಮ್ಮ production ಕಡಿಮೆ ಆಗುತ್ತಿದೆ ಹೊರತು ಜಾಸ್ತಿಯಾಗಲಿಲ್ಲವೆಂದರೆ, ಈ non performing avenues ಏನಿವೆ, ಅದಕ್ಕೆ ಇನ್ನು ಹೆಚ್ಚು ಬಂಡವಾಳ ಹಾಕುತ್ತೇವೆಂದರೆ ನಿಮಗೆ ಅದರಲ್ಲಿ returns ಏನು ಸಿಗುತ್ತದೆ? ಅದರ ಬಗ್ಗೆ ಸ್ವಲ್ಪಮಟ್ಟಿಗೆ ನಾವು ಯೋಚನೆ ಮಾಡಿದರೆ ಉತ್ತರ ಎಲ್ಲೋ ಒಂದು ಕಡೆ

ಕಾಣಬಹುದು ಎಂದು ಅಂದುಕೊಳ್ಳುತ್ತೇನೆ. ಈ ವರ್ಷ ಮಾತ್ರ ಅಲ್ಲ. 15 ವರ್ಷದಿಂದ ಕೊಡುತ್ತಾ ಬಂದಿದ್ದೇವೆ. ಆದರೆ ಕೊಟ್ಟು ಕೊಟ್ಟು ಪ್ರತಿ ವರ್ಷ ಕಡಿಮೆ ಆಗುತ್ತಿದೆಯೇ ಹೊರತು ಜಾಸ್ತಿ ಏನೂ ಆಗಲಿಲ್ಲವಲ್ಲ. ನೀವು ಹೋದ ವರ್ಷ ಬಜೆಟ್‌ನಲ್ಲಿ ಸಾಕಷ್ಟು ಕೊಟ್ಟಿರಿ, seed ಸಬ್ಸಿಡಿಯನ್ನು 75% ಗೆ improve ಮಾಡಿದಿರಿ. ನಾನು ಸಮಯವನ್ನು ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಹೋದ ವರ್ಷದ ಅಂಕಿಸಂಖ್ಯೆಗಳು ನನ್ನ ಹತ್ತಿರ ಇದೆ. ಕೆಲವು ಕಡೆ seeds ಹಿಂದಿನ ವರ್ಷ ಎಷ್ಟು distribute ಆಗಿತ್ತು, ಅಷ್ಟೇ ಆಗಿದೆ. ಆದರೆ production 5% ನಿಂದ 10% ಕಡಿಮೆಯಾಗಿದೆ. ಇದಕ್ಕೆ ಏನು ಹೇಳುತ್ತೀರಿ? ಆದುದರಿಂದ ನೀವು ಹಾಕುತ್ತಿರುವ ಬಂಡವಾಳ ಎಲ್ಲೋ ಒಂದು ಕಡೆ ತಪ್ಪು ದಿಕ್ಕಿನಲ್ಲಿ ಇದೆ ಎಂದು ನಾನು ಹೇಳುತ್ತಿಲ್ಲ, ಇದೆಯೋ ಎಂದು ಯೋಚನೆ ಮಾಡಬೇಕಾದಂತಹ ಪರಿಸ್ಥಿತಿಯಲ್ಲಿ ಇದ್ದೇವೆ.

ಶ್ರೀ ಬಿ.ಆರ್. ಪಾಟೀಲ್.– ಮಾನ್ಯ ಕೃಷ್ಣ ಬೈರೇಗೌಡರೇ. ನಾವು ಬಹಳ ಬಿಚ್ಚು ಮನಸ್ಸಿನಿಂದ ಯೋಚನೆ ಮಾಡಬೇಕಾಗುತ್ತದೆ. ಇಡೀ ಕರ್ನಾಟಕಕ್ಕೆ ಸೀಮಿತವಾಗಿ ರೈತರ ಆತ್ಮಹತ್ಯೆಯನ್ನು ಪರಿಶೀಲಿಸಿದರೆ ಇದು ಸರಿ ಹೋಗಲಿಕ್ಕಿಲ್ಲ. ವಿದರ್ಭದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಹೋಗಿ package ಕೊಟ್ಟು ಎಲ್ಲಾ ಭರವಸೆ ಕೊಟ್ಟ ಮೇಲೂ ಕೂಡ ಇವತ್ತು ದಿನನಿತ್ಯ ವಿದರ್ಭದಲ್ಲಿ ರೈತರ ಆತ್ಮಹತ್ಯೆಗಳು ನಡೆಯುತ್ತಿವೆ. ಇದು Global effect. ನಾವು ಕೇವಲ ಕರ್ನಾಟಕಕ್ಕೆ ಏನೇನು ಸವಲತ್ತುಗಳನ್ನು ಕೊಟ್ಟು ರೈತರನ್ನು ಉಳಿಸುತ್ತೇವೆ ಎಂದು ಏನಾದರೂ ಯೋಚನೆ ಮಾಡಿದರೆ ಅದು ತಪ್ಪಾಗುತ್ತದೆ. ಇದು Global effectನಿಂದ ಆಗುತ್ತಿದೆ, ಭಾರತದಂಥ ಬಡ ರಾಷ್ಟ್ರಗಳು, ಶ್ರೀಮಂತ ರಾಷ್ಟ್ರಗಳ ಕಪಿಮುಷ್ಟಿಯಿಂದ ಪಾರಾಗಿ, ನಮ್ಮಷ್ಟಕ್ಕೆ ನಾವು ಭದ್ರವಾಗಿ ನಿಲ್ಲಬೇಕು ಎನ್ನುವಂತಹ ಇಚ್ಛಾಶಕ್ತಿ ನಮ್ಮ ದೇಶದ ಸರ್ಕಾರಕ್ಕೆ ಬಂದರೆ ಮಾತ್ರ ಇದಕ್ಕೆ ಏನಾದರೂ ಅಡ್ಡಗೋಡೆ ಕಟ್ಟುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ರೈತರ ಆತ್ಮಹತ್ಯೆ ನಿಲ್ಲುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸಮಾಲೋಚನೆ ಮಾಡಿದರು, ಇವರು ಕೆಲವು ಸವಲತ್ತುಗಳನ್ನು ಕೊಟ್ಟರು, ಇಷ್ಟಾದರೂ ಕೂಡ ಏಕೆ ರೈತರ ಆತ್ಮಹತ್ಯೆ ನಿಲ್ಲಲಿಲ್ಲ. ಇದು ಬಹಳ ದೊಡ್ಡ ಪ್ರಶ್ನೆ ಇದೆ.

ಶ್ರೀ ಕೃಷ್ಣ ಬೈರೇಗೌಡ.– ಮಾನ್ಯ ಅಧ್ಯಕ್ಷರೇ, ಮಾನ್ಯ ಬಿ.ಆರ್.ಪಾಟೀಲ್‌ರವರ ಅಭಿಪ್ರಾಯದಲ್ಲಿ ಸಂಪೂರ್ಣವಾಗಿ ಭಾಗಿಯಾಗುವುದಿಲ್ಲ, ಏಕೆಂದರೆ ಇವತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಾಕಷ್ಟು ಅವಕಾಶಗಳು ನಮಗೆ ಇವೆ. ಆ ಅವಕಾಶಗಳನ್ನು ನಾವು ರೈತರಿಗೆ ತಲುಪಿಸುವ ಕೆಲಸದಲ್ಲಿ ನಾವು ವಿಫಲವಾಗಿದ್ದೇವೆ. ಮಾವನ್ನು ರಫ್ತು

ಮಾಡುವುದರ ಬಗ್ಗೆ ನಾನು ಎರಡ್ಮೂರು ಬಾರಿ ಮಾತನಾಡಿದ್ದೇನೆ. ಪದೇ ಪದೇ ಅದನ್ನೇ ಮಾತನಾಡುವುದರಿಂದ ಸುಖ ಇಲ್ಲ. ಅದೇ ರೀತಿ ಬಿಜಾಪುರದಲ್ಲಿ ಒಳ್ಳೆಯ ದಾಳಿಂಬೆ ಮತ್ತು ದ್ರಾಕ್ಷಿ ಬೆಳೆಯುತ್ತಾರೆ. ಅವುಗಳಿಗೆ ನಾವು ಇವತ್ತು ಒಳ್ಳೆಯ ಮಾರುಕಟ್ಟೆ ಕೊಡುವುದಕ್ಕಾಗಿಲ್ಲ. Skimmed milkಗೆ ಇವತ್ತು Europeನಲ್ಲಿ ಒಳ್ಳೆಯ ಬೇಡಿಕೆ ಇದೆ. ನಾವು Skimmed milk ಅನ್ನು Export ಮಾಡುವುದಕ್ಕಾಗುತ್ತಿಲ್ಲ. ಇದು ನಮ್ಮ ವೈಫಲ್ಯವೇ ಹೊರತು ಬೇರೆ ವೈಫಲ್ಯ ಇವೆ, ಅವುಗಳನ್ನು ನಾನು ಅರ್ಧ ಮಟ್ಟಿಗೆ ಒಪ್ಪಿಕೊಳ್ಳುತ್ತೇನೆ. ಅಂತರರಾಷ್ಟ್ರೀಯ ನಿಬಂಧನೆಗಳು ನಮ್ಮ ಮೇಲೆ ಏನಿವೆ, ನಾವು ಅಂತರರಾಷ್ಟ್ರೀಯ ವ್ಯವಸ್ಥೆಗೆ ಸೇರಿಕೊಂಡು ರೈತರಿಗೆ ಅದರಿಂದ ಏನು ತೊಂದರೆಯಾಗುತ್ತಿದೆ, ಅದು ಅರ್ಧ ನಿಜವಾದರೆ, ಅಷ್ಟೇ ಅವಕಾಶಗಳು ಕೂಡ ನಮಗೆ ಒದಗಿ ಬರುತ್ತಿವೆ. ಆ ಅವಕಾಶಗಳನ್ನು ರೈತರಿಗೆ ಒದಗಿಸಿಕೊಡುವಂತಹ ಕೆಲಸ ಯಾರದ್ದು ಎಂದರೆ ಸರ್ಕಾರದ್ದು. ಯಾವುದೇ ಸರ್ಕಾರ ಇರಲಿ, ಆ ಕೆಲಸದಲ್ಲಿ ನಾವು ಖಂಡಿತವಾಗಿ ಕೂಡ failure ಆಗಿದ್ದೇವೆ ಎನ್ನುವುದು ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಒಪ್ಪಿಕೊಳ್ಳಬೇಕೆಂದು ನಾನು ಅವರ ಮುಖಾಂತರ ಮನವಿ ಮಾಡುತ್ತೇನೆ. ಇವತ್ತು ನಾವು ರೈತರ ಸಮಸ್ಯೆಗಳನ್ನು ಅವಲೋಕಿಸಿ ನೋಡಿದಾಗ ಸ್ವಲ್ಪಮಟ್ಟಿಗೆ ನಾವು ನಮಗೆ ಒಂದು ಚೌಕಟ್ಟನ್ನು ಹಾಕಿಕೊಂಡು ಬಿಟ್ಟಿದ್ದೇವೆ. ಹೋದ ವರ್ಷ ಹತ್ತು ಕೋಟಿ ರೂಪಾಯಿ ಕೊಟ್ಟಿದ್ದಾರಾ ? ಈ ವರ್ಷ 12 ಕೋಟಿ ರೂಪಾಯಿ ಕೊಡು, ನಾನು Agriculture Minister ಆಗಿ 12 ಕೋಟಿ ರೂಪಾಯಿ ಕೊಟ್ಟಿದ್ದೇನೆಂದು ಹೇಳಿಕೊಳ್ಳಬೇಕು. ಹೋದ ವರ್ಷ ಎತ್ತು ಗಾಡಿ ಸಾವಿರ ರೂ. ಕೊಟ್ಟಿದ್ದರೆ, ಈ ವರ್ಷ ಎರಡು ಸಾವಿರ ರೂ. ಕೊಡಿ. ನನ್ನ ಸಾಧನೆ ಏನು ಎಂದು ಹೇಳಿದರೆ, ಅದು ಕೊಟ್ಟು ಕೊಟ್ಟು fail ಆಗುತ್ತಿದೆ. ಎತ್ತು ಗಾಡಿಗಳನ್ನು ನಮ್ಮ ಮುಂದೆ ತೆಗೆದುಕೊಂಡು ಬಂದು ನಮಗೆ ತೋರಿಸಿ ನಂತರ ಸಂತೆಯಲ್ಲಿ ಮಾರುತ್ತಿದ್ದರೆ. ಅದು ಗೊತ್ತಿದ್ದರೂ ಸಹ ನಾವು ಅದನ್ನು ಜಾಸ್ತಿ ಮಾಡುವುದೇ ನಮ್ಮ ಸಾಧನೆ. ಹಾಗಾಗಿ ನಮಗೆ ನಾವೇ ಒಂದು ಚೌಕಟ್ಟನ್ನು ಹಾಕಿಕೊಂಡು ಬಿಟ್ಟಿದ್ದೇವೆ. Box ಎಂದು ಹೇಳುತ್ತೇವಲ್ಲ, ಆ box ಒಳಗೆ ಯೋಚನೆ ಮಾಡುತ್ತಿದ್ದೇವೆಯೇ ಹೊರತು, ಆ ಪೆಟ್ಟಿಗೆಯಿಂದ ಹೊರಗೆ ಬಂದು ಯೋಚನೆ ಮಾಡುತ್ತಿಲ್ಲ. ನಮ್ಮ ಮನಸ್ಸಿಗೆ ನಾವು ಪೆಟ್ಟಿಗೆಯನ್ನು ಹಾಕಿಕೊಂಡುಬಿಟ್ಟಿದ್ದೇವೆ. ನಾವು ಮಾನಸಿಕ ಅಂಧತ್ವವೆಂದು ಹೇಳುತ್ತೇವಲ್ಲಾ, ಆ ಮಾನಸಿಕ ಅಂಧತ್ವಕ್ಕೆ ರೈತರ ವಿಷಯದಲ್ಲಿ ಚಿಂತನೆ ಮಾಡಬೇಕಾದರೆ, ಇವತ್ತು ನಾವು ಸಿಕ್ಕಿಹಾಕಿಕೊಂಡಿದ್ದೇವೆ, ಇದು ರೈತರ ವಿಷಯದಲ್ಲಿ ಮಾತ್ರವಲ್ಲ, ಎಲ್ಲಾ ವಿಷಯಗಳಲ್ಲೂ ಅನ್ವಯಿಸುತ್ತದೆ. ರೈತರ ವಿಷಯದಲ್ಲಂತೂ ಇದು ನಿಜ. ಇವತ್ತು out side boxನಲ್ಲಿ

ನಾವು ಇದನ್ನು ಯೋಚನೆ ಮಾಡುವಂಥ ಸಂದರ್ಭ ಒದಗಿ ಬಂದಿದೆ. ನಾವು ಈ ಚೌಕಟ್ಟನ್ನು ಬಿಟ್ಟು ಹೊರಗೆ ಯೋಚನೆ ಮಾಡದೇ ಹೋದರೆ, ಕೊಟ್ಟಿದ್ದಕ್ಕೆ ಇನ್ನಷ್ಟು ಕೊಟ್ಟಿದ್ದೆ ನಮ್ಮ ಸಾಧನೆ ಎಂದು ಹೇಳಿದರೆ, ನಾವು ಇದರ ಬಗ್ಗೆ ಉದಾಹರಣೆಯನ್ನು ಹೇಳುವುದಾದರೆ, ಸಾಲ ಮನ್ನಾದ ಬಗ್ಗೆ, ಬಡ್ಡಿ ಮನ್ನಾದ ಬಗ್ಗೆ, ಸಾಕಷ್ಟು ಮಾತನಾಡಿದ್ದೀರಿ. ಇವತ್ತು ಏನಾಗಿದೆಯೆಂದರೆ, ಈ ವರ್ಷ ಏನೋ ಸ್ವಲ್ಪ relax ಮಾಡಿದ್ದೀರಾ, ಹೋದ ವರ್ಷ ಕೇವಲ 25,000 ರೂಪಾಯಿಗಳ ಸಾಲವನ್ನು ಕೊಡುವುದೆಂದು ಮಾಡಿದರು. ಈ 25,000 ರೂಪಾಯಿಗಳ ಸಾಲದಲ್ಲಿ ಯಾವ ರೈತ ಏನೇನು ಮಾಡುವುದಕ್ಕೆ ಆಗುತ್ತದೆ ? ಟ್ರ್ಯಾಕ್ಟರ್‌ಗೆ ಸಾಲ ಇಲ್ಲ. ಯಾವುದಕ್ಕೂ ಸಾಲ ಇಲ್ಲ. ಅದು 25,000 ರೂಪಾಯಿಗಳಿಗೆ limit ಇಷ್ಟು ಹಣವನ್ನು ತೆಗೆದುಕೊಂಡು ರೈತ ಏನು ಮಾಡುತ್ತಾನೆ ? ನಾವು ಇಲ್ಲಿ ಹೇಳಿಕೊಳ್ಳುವುದಕ್ಕೋಸ್ಕರ ಸಾಲ ಮನ್ನಾ ಎಂದು ಹೇಳುವುದು. Co-operative Institutionsಗೆ ನಾವು ಒದಗಿಸುವಂಥ ಸಾಲದ ಪ್ರಮಾಣವನ್ನು ನಿಯಂತ್ರಣ ಮಾಡುವುದು. ಅದರಿಂದ ರೈತರಿಗೆ ಸಿಗುವಂಥಾ ಪ್ರಮಾಣದಲ್ಲಿ ನಿಯಂತ್ರಣವಾಗಿ, ಕೊನೆಗೆ ವಿಧಿ ಇಲ್ಲದೇ ಲೇವಾದೇವಿ ವ್ಯವಹಾರಗಳನ್ನು ಮಾಡುವವರ ಕೈಗೆ ಸಿಕ್ಕಿಕೊಂಡು, ಆಗಲೇ ಹೇಳಿದ ಹಾಗೆ ಮೀಟರ್ ಬಡ್ಡಿಯನ್ನು ಕಟ್ಟುವುದಕ್ಕೆ ಆಗದೇ, ಕೊನೆಗೆ ಕತ್ತಿಗೆ ದಾರ ಹಾಕಿಕೊಳ್ಳಬೇಕು. ಅದನ್ನು ನಾವು ಮಾಡಿದ್ದೇವೆಯೇ ಹೊರತು, ಇನ್ನೇನನ್ನು ನಾವು ಮಾಡಿಲ್ಲವೆಂಬುದನ್ನು ಅರ್ಥ ಮಾಡಿಕೊಳ್ಳಬೇಕೆಂದು, ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಸದನದ ಗಮನಕ್ಕೆ ತರಬಯಸುತ್ತೇನೆ. ನಾವು out side boxನಲ್ಲಿ ಚಿಂತನೆ ಮಾಡಲಿಲ್ಲವೆಂದರೆ, ನಾನು ಏನೋ ರೈತನಿಗೆ ಮಾಡಿದ್ದೇನೆಂದು ಹೇಳಿ, ನನಗೆ ಸಮಾಧಾನವಾದರೆ ಸಾಕು. ನಾನು ಒಬ್ಬ ರೈತ ನಾಯಕನೆಂದು ಹೇಳಿಕೊಳ್ಳುವುದಕ್ಕೆ, ನಮ್ಮ ಚಟವನ್ನು ತೀರಿಸಿಕೊಳ್ಳುವುದಕ್ಕೆ ಇಂಥ ಕಾರ್ಯಕ್ರಮಗಳನ್ನು ಮಾಡುವುದರಿಂದ ಏನು ಸುಖವಿಲ್ಲವೆಂದು ಹೇಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಕೆ.ಎನ್. ರಾಜಣ್ಣನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಇವತ್ತು ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಬೇಕೆಂದು ಸನ್ಮಾನ್ಯ ಉಪ ಮುಖ್ಯಮಂತ್ರಿಯವರು ಹೇಳಿದರು. ನಾವು ಆ ಚರ್ಚೆಯನ್ನು ಸ್ವಾಗತ ಮಾಡುತ್ತೇವೆ. ಇಲ್ಲಿ ಯಾವ ರೀತಿಯಲ್ಲಾದರೂ ದಿಕ್ಕನ್ನು ಬದಲಾಯಿಸಬೇಕಾದಂಥ ಅವಶ್ಯಕತೆ ಇದೆಯಾ ಎಂಬ ಬಗ್ಗೆಯೂ ನಾವು ಚರ್ಚೆ ಮಾಡೋಣ. ಇದನ್ನು ಬದಲಾಯಿಸಬೇಕೆಂದು ತೀರ್ಮಾನವನ್ನು ಹೇಳುವುದಕ್ಕೆ ನಾನು ಯಾರು ಅಲ್ಲ. ಆದರೆ ಎಲ್ಲೋ ಒಂದು ಕಡೆ ಈ ದಿಕ್ಕನ್ನು ಮಾರ್ಪಾಡು ಮಾಡಿಕೊಳ್ಳದೇ ಹೋದರೆ ಪ್ರಯೋಜನವಾಗುವುದಿಲ್ಲವೆನ್ನುವಂಥ ಯೋಚನೆಯನ್ನು ಅವರ ಮುಂದೆ

ಇಡುತ್ತೇನೆ. ಇದರ ಬಗ್ಗೆ ಚರ್ಚೆಯಾಗಲಿ, ನನ್ನ ಕೆಲವು ಸಲಹೆಗಳು ಏನೆಂದರೆ, ನಮ್ಮ ರಾಜ್ಯದಲ್ಲಿ ಒಂದೊಂದು ಬೆಳೆಯನ್ನು ಪ್ರಮುಖವಾಗಿ ಬೆಳೆಯುತ್ತಾರೆ. ಆ ಬೆಳೆಗಳನ್ನು ನೀವು ಐಡೆಂಟಿಫೈ ಮಾಡಿ, ಕಬ್ಬು ಆಗಬಹುದು, ಬಿಜಾಪುರ ಭಾಗದಲ್ಲಿ ದಾಳಿಂಬೆ, ದ್ರಾಕ್ಷಿಯಾಗಬಹುದು. ಧಾರವಾಡ, ಕೋಲಾರದಲ್ಲಿ ಮಾವು ಆಗಬಹುದು, ಭತ್ತ ಆಗಬಹುದು ಅಥವಾ ಕಾಳುಗಳಾಗಬಹುದು. ಆಯಾ ಬೆಳೆಗಳನ್ನು ಐಡೆಂಟಿಫೈ ಮಾಡಿ, ಆ ಬೆಳೆಗಳ ಮುಖಾಂತರ ರೈತರಿಗೆ ಏನಾದರೂ ಅವರ ಸ್ಥಿತಿ ಗತಿಗಳಲ್ಲಿ ಸುಧಾರಣೆಯಾಗಬೇಕಾದರೆ, ಏನು ಮಾಡಬೇಕೆನ್ನುವ ಬಗ್ಗೆ specific ಆಗಿ ಏನಾದರೂ ಪ್ಲಾನ್ ಮಾಡಿಕೊಂಡರೆ, ಅವುಗಳಲ್ಲಿ ಇವತ್ತು ಏನು ನ್ಯೂನತೆಗಳು ಇವೆ, ಆ ನ್ಯೂನತೆಗಳನ್ನು ಬಗೆಹರಿಸುವಂಥಾದ್ದು ಹೇಗೆಂಬ ಬಗ್ಗೆ specific ಆಗಿ ಪ್ಲಾನ್ ಮಾಡಿದರೆ, crop wise ಏನಾದರೂ ಪ್ಲಾನ್ ಮಾಡಬಹುದೇನೋ ಅನ್ನುವಂಥಾದ್ದು ಒಂದು ಯೋಚನೆ ಇದೆ. ಇನ್ನೊಂದು ವಿಚಾರವೇನೆಂದರೆ ರೈತರಿಗೆ ಇವತ್ತು ಆದಾಯ ಕಡಿಮೆಯಾಗಬೇಕಾದರೆ land holding size ಕೂಡ ಕಾರಣವಾಗಿದೆ. ನಾನು ನಮ್ಮ ಸಿದ್ಧಾಂತ ಏನು ಇದೆ, ಪ್ರತಿಯೊಬ್ಬರಿಗೂ ಸಹ ಕನಿಷ್ಠ ಪ್ರದೇಶವಿರಬೇಕೆನ್ನುವ ಸಿದ್ಧಾಂತವನ್ನು compromise ಮಾಡಿಕೊಳ್ಳಿಯೆಂದು ಹೇಳುತ್ತಾ ಇಲ್ಲ. ಇಲ್ಲಿ ಎಲ್ಲೋ ಒಂದು ಕಡೆ ರೈತರಲ್ಲೇ ಅವರೇ ಕೂಡಿಕೊಂಡು, average farm plot size ಏನು ಇದೆ, ಅದನ್ನು ಅವರು ಜಾಸ್ತಿ ಮಾಡಿಕೊಳ್ಳುವುದಕ್ಕೆ ರೈತರ ಮುಖಾಂತರವೇ ಮಾಡಬೇಕು. ನೀವು Land Reforms Act ಅನ್ನು dilute ಮಾಡಿ, ಬೇರೆಯವರಿಗೆ ಹಸ್ತಾಂತರ ಮಾಡಿಯೆಂದು ಹೇಳುವುದಿಲ್ಲ. ಆದರೆ ನಾವು ರೈತರಿಗೆ ಪ್ರೋತ್ಸಾಹ ಕೊಟ್ಟು, ಅವರ plate size ಅನ್ನು ಜಾಸ್ತಿ ಮಾಡುವುದರಿಂದ ಅವರಿಗೆ productivity improve ಆಗುತ್ತದೆ, savings ಬರುತ್ತದೆ, large scale farming ಮಾಡುವುದರಿಂದ mechanization ಆಗುತ್ತದೆ. ಅದರಿಂದ ಅವರಿಗೆ ಏನಾದರೂ ಅನುಕೂಲವಾಗುತ್ತದಾ ? ಆ ದಿಕ್ಕಿನಲ್ಲೂ ಸಹಿತ ಯೋಚನೆ ಮಾಡುವಂಥ ಅವಶ್ಯಕತೆ ಇದೆ. ಅದೇ ರೀತಿಯಲ್ಲಿ Food processing ಬಗ್ಗೆ ಸುಮಾರು 15 ವರ್ಷಗಳಿಂದ ನಾವೆಲ್ಲಾ ಮಾತನಾಡುತ್ತಲೇ ಇದ್ದೇವೆ. ನಾವು ಮಾತನಾಡಿದ್ದೇ ಮಾತನಾಡುವುದು, ಆದರೆ Food processing ಬಗ್ಗೆ ಮಾನ್ಯ ಆರ್.ವಿ.ದೇಶಪಾಂಡೆಯವರು ಹೇಳಿದರು. ಮಾಲೂರಿನಲ್ಲಿ Food park ಎಂದು ಮಾಡಿ 5 ವರ್ಷಗಳಾಯಿತು. ಇವತ್ತಿನವರೆಗೂ ಅಲ್ಲಿಗೆ ಯಾರು ಬಂದಿದ್ದು ನನಗೆ ಕಾಣಲಿಲ್ಲ. ಇವತ್ತು ನಾವು Food processing ಬಗ್ಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗಿದೆ. ಸರ್ಕಾರ Food processing units ಮಾಡಬೇಕೆಂದು ನಾವು ಹೇಳುವುದಿಲ್ಲ. ನೀವು

ಖಾಸಗಿಯವರನ್ನು ಏನಾದರೂ ಮಾಡಿ ಕರೆದುಕೊಂಡು ಬನ್ನಿ, ಅವರಿಗೆ ಏನು ಸವಲತ್ತುಗಳು ಬೇಕೋ ಅದನ್ನು ನೀವು ಕೊಡಿ. ಅದರಿಂದ ರೈತರಿಗೆ ಅನುಕೂಲವಾಗುತ್ತದೆ. ತಾವು Food processing sector ಬಗ್ಗೆಯೂ ಸಹ ಯೋಚನೆ ಮಾಡುವುದರಿಂದ ಏನಾದರೂ ಅನುಕೂಲವಾಗುತ್ತದಾ ಎನ್ನುವುದನ್ನು ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಇದರ ಜೊತೆಗೆ ಮುಖ್ಯವಾಗಿ Agriculture Department ಇದೆ. ನಾನು ತಾಲ್ಲೂಕು ಪಂಚಾಯತ್‌ನಲ್ಲಿ review ಮಾಡುವಾಗ, ಪ್ರತಿ ಸಾರಿಯೂ ಅವರು ಒಂದೆರಡು programme ಗಳದ್ದು ಮಾತ್ರ details ಅನ್ನು ತಂದು ಕೊಡುತ್ತಿದ್ದರು. ನಾನು ಬೇಜಾರಾಗಿ ಅವರಿಗೆ ನಿಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಏನೇನು ಇದೆ, ಅವೆಲ್ಲವನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದೆ. ಅವರು ಎಲ್ಲವನ್ನು ತಂದು ಕೊಟ್ಟಿದ್ದನ್ನು ನೋಡಿದರೆ, ನಿಮಗೆ ಆಶ್ಚರ್ಯವಾಗುತ್ತದೆ. ಅವರ Heads of account ಅವರ ಯೋಜನೆಗಳು ಬರೀ Heads of account booklet ಮಾಡಿಕೊಂಡು ಬಂದರೆ, ಅದೇ 50 page ಇತ್ತು. ನಮಗೆ ಅನಿಸುವುದೇನೆಂದರೆ, ಟ್ರಾಕ್ಟರ್ ಸಬ್ಸಿಡಿಯನ್ನು ಕೊಡುತ್ತಾರೆ. ಅದು ಒಂದು scheme ಎಂದು, ಆ ಒಂದನ್ನು ಆರು Heads of account ಗೆ distribute ಮಾಡಿದ್ದಾರೆ. ಅದಕ್ಕೆ ಏನೇನೊ ಇದೆ. ಈ Agriculture Departmentನಲ್ಲಿ ಏನು ನಡೆಯುತ್ತಿದೆಯೆಂಬುದೇ ಗೊತ್ತಿಲ್ಲ. ಅದನ್ನು ಅಷ್ಟು complicate ಮಾಡಿ, ಇವತ್ತು ಅದರಿಂದ ರೈತರಿಗೆ ನಿಜವಾಗಿಯೂ ಪ್ರಯೋಜನವಾಗುತ್ತಿಲ್ಲ. ನಾನು ಹೇಳುವುದೇನೆಂದರೆ ಇದನ್ನು ಸರಳೀಕರಣ ಮಾಡಿ, ಇವತ್ತು ಮಾನ್ಯ ಎನ್. ಯೋಗೀಶ್ ಭಟ್‌ರವರ ನೇತೃತ್ವದಲ್ಲಿ ಅದಕ್ಕೆ ಒಂದು ಸಮಿತಿಯನ್ನೇ ಮಾಡಿದ್ದಾರೆ. ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಸರಳೀಕರಣ ಮಾಡಬೇಕೆಂದು, ನಾನು ಅದನ್ನು ಸ್ವಾಗತ ಮಾಡುತ್ತೇನೆ. ತಾವು ಒಳ್ಳೆಯ ಯೋಚನೆಯನ್ನು ಮಾಡಿದ್ದೀರಿ. ಅದೇ ರೀತಿಯಲ್ಲಿ Agriculture Departmentಗೂ ಮೋಕ್ಷ ಕಾಣಿಸಿ, ಇದನ್ನು ಸರಳೀಕರಣ ಮಾಡಿ. ಇದರಲ್ಲಿ ಯಾವ್ಯಾವುದೋ Head of Accountsಗಳಲ್ಲಿ accountಗಳನ್ನು ಕೊಡುವುದರಲ್ಲೇ ಇವರ ಸಮಯವೆಲ್ಲಾ ಹೋಗುತ್ತದೆ. ಇನ್ನು ರೈತರ ಕಷ್ಟಗಳಿಗೆ ಸ್ಪಂದಿಸುವುದು ಯಾವಾಗ ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ.- ಮಾನ್ಯ ಚೇರ್ಮನ್‌ರೆ, ಇಲ್ಲಿ ಕೃಷಿ ಇಲಾಖೆಯೆಂದು ಅಲ್ಲ, ಎಲ್ಲಾ ಇಲಾಖೆಗಳಲ್ಲೂ Head of account ಅನ್ನು ಕಡಿಮೆ ಮಾಡಿ, ಇವರು ನೇರವಾಗಿ ಕೆಲಸವನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದರೆ, ಅಲ್ಲಿ ಎಷ್ಟು ಹಣ ವ್ಯಯವಾಗುತ್ತದೆಂಬುದು ಸರಿಯಾಗಿ ಗೊತ್ತಾಗುತ್ತದೆ. ಒಂದೊಂದು ಹೆಡ್‌ನಲ್ಲಿ ಸ್ವಲ್ಪ

ಹಣವನ್ನು ಕೊಡುವಂಥದ್ದು, ಇಲ್ಲಿ ಹೆಚ್ಚು ಕಾರ್ಯಕ್ರಮಗಳು ಇದ್ದು, implement ಆಗುವಂಥದ್ದು ಕಡಿಮೆ ಇರುತ್ತದೆ. ಅದಕ್ಕಿಂತ ಕಾರ್ಯಕ್ರಮಗಳನ್ನು ಕಡಿಮೆ ಮಾಡಿ, ಜಾಸ್ತಿ implement ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಕೃಷ್ಣ ಬೈರೇಗೌಡ.– ಮಾನ್ಯ ಚೇರ್ಮನ್‌ರೆ, ಇಲ್ಲಿ ಏನಾಗುತ್ತದೆಂದರೆ, ನಾನು ಕೃಷಿ ಮಂತ್ರಿಯಾದರೆ, ನನ್ನದು ಏನೋ ಒಂದು ಆಲೋಚನೆ ಇರುತ್ತದೆ. ನಾನು 5 ಯೋಜನೆಗಳನ್ನು ಆರಂಭ ಮಾಡುತ್ತೇನೆ. ನನ್ನ ಅಧಿಕಾರದ ನಂತರ ಇನ್ನೊಬ್ಬರು ಬರುತ್ತಾರೆ, ಅವರಿಗೆ ಒಂದು ಆಲೋಚನೆಗಳು ಇರುತ್ತವೆ. ನೀವು 10 ಯೋಜನೆಗಳನ್ನು ಮಾಡುತ್ತೀರಿ, ನಂತರ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಬರುತ್ತಾರೆ. ಅವರಿಗೆ 20 ಆಲೋಚನೆಗಳು ಇರುತ್ತದೆ, ಅವರು 20 ಯೋಜನೆಗಳನ್ನು ಮಾಡುತ್ತಾರೆ. ಇದೆಲ್ಲ ಸೇರಿದರೆ 30 ಯೋಜನೆಗಳು ಆದಂತೆ ಆಗುತ್ತದೆ. ಇಲ್ಲಿ ಹಿಂದೆ ಇದ್ದಂಥ ಯೋಜನೆಗಳನ್ನು ಯಾರು cancel ಮಾಡುವುದಿಲ್ಲ. ಅವುಗಳಿಗೆ ಪ್ರತಿ ವರ್ಷ ನಾಮಕಾವಸ್ಥೆಗೆ 5 ಲಕ್ಷ ರೂಪಾಯಿಗಳನ್ನು ಕೊಡುವುದೋ 5 ಕೋಟಿ ರೂಪಾಯಿಗಳನ್ನು ಕೊಡುವುದೋ, ಟೋಕನ್ ಕೊಡುವುದು, Head of Account ಅನ್ನು alive ಇಡುವುದು ಇದನ್ನು ಏಕೆ ಮಾಡುತ್ತಾರೋ ಗೊತ್ತಿಲ್ಲ. ಇದಕ್ಕೆ ಸಣ್ಣ ಉದಾಹರಣೆಯನ್ನು ಕೊಡುವುದಾದರೆ, "ಬೆಳ್ಳಂಬೆಳಕು" ಎಂಬ ಒಂದು ಸ್ಕೀಮ್ ಇದೆ. ಇದು ಏನೆಂದರೆ, ಅತೀ ಹಿಂದುಳಿದ ವರ್ಗಗಳಿಗೆ ಮನೆಗಳನ್ನು ಲೇ-ಔಟ್‌ಗಳನ್ನು ನಿರ್ಮಾಣ ಮಾಡಿಕೊಡುವಂಥದ್ದು. ಅದನ್ನು ಮಾಡಬೇಕೆಂದರೆ, ಒಂದು ವರ್ಷಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಇಲ್ಲಿ ಮನೆಯನ್ನು ಕಟ್ಟಬೇಕೆಂದರೆ, unit cost 5 ವರ್ಷಗಳ ಹಿಂದೆ 25,000 ರೂಪಾಯಿಗಳೂ ಇತ್ತು. ಒಂದು ಊರಿನಲ್ಲಿ "ಬೆಳ್ಳಂಬೆಳಕು" ಯೋಜನೆ ಆಗಬೇಕೆಂದರೆ ಅವರ ಯೋಜನೆಯ ಪ್ರಕಾರವೇ 50 ಲಕ್ಷ ರೂಪಾಯಿಗಳನ್ನು ಕೊಡಬೇಕು. ಅಂಥ ಕಡೆ ಇವರು ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಇದನ್ನು ಯಾರ ಸಾರ್ಥಕಕ್ಕೋಸ್ಕರ ಮಾಡುತ್ತಿದ್ದಾರೋ ಗೊತ್ತಿಲ್ಲ. ಮಾನ್ಯ ಕೆ. ಜಯಪ್ರಕಾಶ್ ಹೆಗ್ಡೆಯವರು ಹೇಳಿದ ಹಾಗೆ ಇದು ಎಲ್ಲಾ ಇಲಾಖೆಗಳಲ್ಲೂ ಇದೆ. ಮಾನ್ಯ ಉಪ ಮುಖ್ಯಮಂತ್ರಿಯವರು ಇಲ್ಲಿ ಇಲ್ಲ. ಅವರು ಇದ್ದಿದ್ದರೆ, ಏನಾದರೂ ಸಲಹೆಗಳು ಇದ್ದರೆ ಕೊಡಿಯೆಂದು ಹೇಳುತ್ತಾ ಇದ್ದರು. ನಾವು ಕೇಳುವಂಥದ್ದು ಅಧಿಕಾರದಲ್ಲಿ ಸರಳೀಕರಣ ಮಾಡಿ, ಇದರಿಂದ ನಿಜವಾಗಿಯೂ ಜನರಿಗೆ ಅನುಕೂಲವಾಗುತ್ತದೆ. ನಾವು ಏನಾದರೂ ಅಪ್ಪಿ ತಪ್ಪಿ Agriculture Department ಅನ್ನು review ಮಾಡುವುದಕ್ಕೆ ಹೊರಟು ಬಿಟ್ಟರೆ, ಏನ್ರಿ ಇಲ್ಲಿ mention ಮಾಡಿದ್ದೀರಾ, ಇದು ಏನ್ರಿ, ಎಂದು ಕೇಳಿದರೆ, ಅವನು "ಇದು

ಅಲ್ಲಿದೆ, ಅಲ್ಲಿ ಕೊಟ್ಟಿದ್ದೇವೆ, ಇಲ್ಲಿ ಕೊಟ್ಟಿದ್ದೇವೆ" ಎಂದು ಹೇಳುತ್ತಾನೆ. ಅದೇ ಯೋಜನೆ ಇನ್ನೊಂದು Head of Account ನಲ್ಲಿ repeat ಆಗುತ್ತದೆ. ಏನ್ರಿ ಇದು ಇಲ್ಲೂ ಇದೆಯೆಂದು ಹೇಳಿದರೆ, ಹೌದು ಸಾರ್, ಇದೆರಡನ್ನು combine ಮಾಡಿ ಮಾಡುತ್ತೇನೆಂದು ಹೇಳುತ್ತಾನೆ. ಆ ರೀತಿ combine ಮಾಡಿದರೆ, ಎಲ್ಲಿ ಹೋಯಿತೆಂದರೆ, ಅದರ ಲೆಕ್ಕವೇ ಸಿಗುವುದಿಲ್ಲ. ನೀವು ಏನಾದರೂ review ಮಾಡಬೇಕೆಂದು ಹೋದರೆ, ನಿಮ್ಮ ತಲೆ ಕೆಟ್ಟು ಹೋಗಿ, ನಮಸ್ಕಾರವೆಂದು ಅವರಿಗೆ ನಮಸ್ಕಾರವನ್ನು ಹಾಕಬೇಕು. ಆ ಮಟ್ಟಕ್ಕೆ ನಮ್ಮನ್ನು ತಂದು ನಿಲ್ಲಿಸಿ ಬಿಡುತ್ತಾರೆ. ಇವತ್ತು ಅಷ್ಟು complicate ಆಗಿದೆ. ಅದು ಏನು Head of accountಗಳೋ, ಅದು ದೇವರಿಗೆ ಅರ್ಥವಾಗಬೇಕು. ಅದೇ ರೀತಿ ಎಲ್ಲದಕ್ಕೂ ಅನ್ವಯಿಸುತ್ತದೆ, ಜೊತೆಗೆ ವಿಶೇಷವಾಗಿ ಕೃಷಿ ಇಲಾಖೆಯನ್ನು ಸರಳೀಕರಣ ಮಾಡಬೇಕು. ಹಿಂದೆ ಇದ್ದಂತಹ ಜುರಾಸಿಕ್ ಯೋಜನೆಯಿಂದ ಅನೇಕ ಕಾರ್ಯಕ್ರಮಗಳು ಹಾಗೆ ನಡೆದುಕೊಂಡು ಬಂದಿದೆ. ಅವುಗಳನ್ನು ಒಂದಷ್ಟು ಕಿತ್ತು ಹಾಕಿ, ಸರಳೀಕರಣ ಮಾಡಿ, ಅವರ Agriculture Department Officialಗೆ burden ಕಡಿಮೆ ಮಾಡಿ, ಅವರು ರೈತರ ಜೊತೆಗೆ ಹೆಚ್ಚು ಸಮಯವನ್ನು ಕಳೆಯುವುದಕ್ಕೆ ಅವರಿಗೂ ಸಾಧ್ಯವಾಗುತ್ತದೆ. ತಾವು ಕೃಷಿ ನೀತಿಯನ್ನು ತಂದಿದ್ದೀರಿ. ಆ ನೀತಿಯನ್ನು ನಾನು ಓದಿ ಬಿಟ್ಟರೆ, ನಿಜವಾಗಿಯೂ ನಾನು ಏನು ಹೇಳಬೇಕೋ ಗೊತ್ತಿಲ್ಲ. ಕೃಷಿ ನೀತಿಯಲ್ಲಿ, ಮಾನ್ಯ ಚೇರ್ಮನ್‌ರೆ, ತಾವು ಈ ವಿಷಯಗಳ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದೀರಿ. ನಾನು ಅದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಕೃಷಿ ನೀತಿಯಲ್ಲಿ ಇವರು A few high lights of the policy ಎಂದು ಹೇಳಿದ್ದಾರೆ. ನನಗೆ ಮಾನ್ಯ ಸಚಿವರ ಬಗ್ಗೆ ಗೌರವವಿದೆ, ಏಕೆಂದರೆ ಒಳ್ಳೆಯ ಉದ್ದೇಶದಿಂದ ಕೃಷಿ ನೀತಿಯನ್ನು ತಂದಿದ್ದಾರೆ. ಆದರೆ ಇದು ಹೇಗೆಂದರೆ "ನಮ್ಮ ಅಪ್ಪ ಹಾಕಿದ ಆಲದ ಮರದ ಕೆಳಗೆ ನಾನು ಜೀವನ ಮಾಡಬೇಕು" ಎನ್ನುವುದಕ್ಕೆ ಇನ್ನೊಂದು ನಿದರ್ಶನವೆಂದರೆ, ಈ ಕೃಷಿ ನೀತಿ, ಇದರಲ್ಲಿ ಏನೂ ಬದಲಾವಣೆ ಇಲ್ಲ. ಹಿಂದೆ ಇದ್ದಂತಹ ವ್ಯವಸ್ಥೆಗೂ ಇವತ್ತಿನ ಕೃಷಿ ನೀತಿಗೂ ಏನೂ ಬದಲಾವಣೆ ಇಲ್ಲ. ಇದರಲ್ಲಿ ಇದ್ದದ್ದರಲ್ಲೇ ಇನ್ನೊಂದು ಸ್ವಲ್ಪ add ಮಾಡುವುದು, deduct ಮಾಡುವುದು, tinkering ಮಾಡುವುದು, ಅಷ್ಟು ಇದೆ. First priority, Agriculture Department is to be renamed as Department of Agriculture and Farmers Welfare. ಕೃಷಿ ನೀತಿಯ ಪ್ರಥಮ ಆದ್ಯತೆ ಏನೆಂದರೆ, ಕೃಷಿ ಇಲಾಖೆಯನ್ನು ಮರು ನಾಮಕರಣ ಮಾಡುವಂಥಾದ್ದು, ತಮಗೆ ಇದು ಸಂತೋಷವೇ? ಮತ್ತೆ target of agricultural growth, 4.5% ಸಂತೋಷ, ಇಲ್ಲಿ 4.5% achieve

ಮಾಡುವುದಕ್ಕೆ ಕೃಷಿ ನೀತಿಯಲ್ಲಿ ಏನು ಇದೆ? ಇದನ್ನು ಹಾಗೆ ಓದುತ್ತಾ ಹೋದರೆ, ಹೇಳಿರುವುದನ್ನೇ ಹೇಳುವುದು. access to credit ಅನ್ನು improve ಮಾಡುವಂಥದ್ದು ನಮ್ಮ ಧ್ಯೇಯ. ಇದರಲ್ಲಿ ಹೊಸದು ಯಾವುದು ? ಎಲ್ಲರೂ ಹಿಂದಿನಿಂದಲೂ access to credit ಬಗ್ಗೆ ಮಾತನಾಡುತ್ತಲೇ ಬಂದಿದ್ದಾರೆ. 10,15,20,30 ವರ್ಷಗಳಿಂದಲೂ ನಮ್ಮ ಧ್ಯೇಯ ಅದೇ ಇದೆ. ಸಹಕಾರ ಬ್ಯಾಂಕ್‌ಗಳನ್ನು ಮಾಡಿದ್ದು, ಭೂ ಬ್ಯಾಂಕ್‌ಗಳನ್ನು ಮಾಡಿದ್ದು, ಎಲ್ಲದರ ಉದ್ದೇಶವೇನು ? ಕೃಷಿ ನೀತಿಯಲ್ಲಿ ನಿಮ್ಮ ಹೊಸ ಉದ್ದೇಶವೇನು? ಇಂಗ್ಲೀಷ್‌ನಲ್ಲಿ ಹೇಳುತ್ತಾರಲ್ಲ ಸ್ವಾಮಿ, ``Old wine in new bottle ಹಾಗಾಗಿದೆ. ಅದಕ್ಕೆ ಇವತ್ತು glossy brochure ಎಲ್ಲ ಮಾಡತಕ್ಕಂಥಾದ್ದು, ಏಕೆಂದರೆ ಇವತ್ತು ನಾವು Global Era ದಲ್ಲಿದ್ದೇವೆ. Global Eraಗೆ ತಕ್ಕ ಹಾಗೆ ತೋರಿಸಲು ನಮ್ಮ ಹತ್ತಿರ glossy brochure ಬೇಕಾಗುತ್ತದೆ. ಹಾಗೆಯೇ 'ರೈತಮಿತ್ರ' ಪುಸ್ತಕ ಹೊರತಕ್ಕಂಥಾದ್ದು ಇನ್ನೊಂದು ಧ್ಯೇಯ. ಏಕೆ ಸ್ವಾಮಿ ಈ ಪುಸ್ತಕ? ಇದನ್ನು ಇಟ್ಟುಕೊಂಡು ಏನು ಮಾಡುತ್ತೀರಿ? ಇದು multi purpose ಪುಸ್ತಕವಂತೆ. ಅದೇನು multi purpose ಪುಸ್ತಕವೋ ಗೊತ್ತಿಲ್ಲ. ಇದರ ಹಿಂದೆ ಮನಸ್ಸು ಒಳ್ಳೆಯದಿದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ನಾನು ಮಾತನಾಡತಕ್ಕಂಥಾದ್ದು ಕಟುವಾಗಿದ್ದರೂ ಸಹ, ಇದರ ಹಿಂದಿರುವ ಅವರ ಉದ್ದೇಶ ಒಳ್ಳೆಯ ಉದ್ದೇಶವಾಗಿದೆ ಎಂದು ಹೇಳುತ್ತೇನೆ. ರೈತರಿಗೆ ಏನಾದರೂ ಮಾಡಬೇಕು ಎನ್ನತಕ್ಕಂಥಾದ್ದು ಆಗಿದೆ. ಆದರೆ, ಅಪ್ಪ ಹಾಕಿದ ಆಲದ ಮರದ ಕೆಳಗೇ ನಾವು ಚಿಂತನೆ ಮಾಡುವುದಾದರೆ, ಆ ಚೌಕಟ್ಟಿನ ಒಳಗೇ ನಾವು ಚಿಂತನೆ ಮಾಡುವುದಾದರೆ, ಏನನ್ನೂ ಸಾಧಿಸುವುದಕ್ಕೆ ಸಾಧ್ಯವೇ ಇಲ್ಲ. ರೈತರ ಪರಿಸ್ಥಿತಿ ವರ್ಷದಿಂದ ವರ್ಷಕ್ಕೆ ಇನ್ನಷ್ಟು ಹಾಳಾಗುತ್ತದೆಯೇ ಹೊರತು ಉದ್ಧಾರವಂತೂ ಆಗಲಿಕ್ಕೆ ಸಾಧ್ಯವೇ ಇಲ್ಲ. ನಾನು ಇದನ್ನು ಯಾವ ಮಟ್ಟಕ್ಕೆ ಬೇಕಾದರೂ ಚಾಲೆಂಜಿಂಗ್ ಆಗಿ ತೆಗೆದುಕೊಳ್ಳಲು ತಯಾರಿದ್ದೇನೆ. ಇಂಥ ಉದ್ದೇಶಗಳಿಂದ, ಇಂಥ ಧ್ಯೇಯ ಧೋರಣೆಗಳಿಂದ ನೀವು ರೈತರನ್ನಂತೂ ಸುಧಾರಿಸಲಿಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಾ ಅದಕ್ಕೆ ಪೂರಕವಾಗಿ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ಕೆಲವು ಒಣ ಭಾಗಗಳಿವೆ, ಕೋಲಾರ, ತುಮಕೂರು, ಚಿತ್ರದುರ್ಗ ಇಂಥ ಕಡೆಗಳಲ್ಲಿ ಸಣ್ಣ ನೀರಾವರಿಗೆ ಆದ್ಯತೆ ಕೊಡಬೇಕು. ನಾವು ನೀರಾವರಿಯಿಂದ ಸಂಪೂರ್ಣವಾಗಿ ವಂಚಿತರಾಗಿರತಕ್ಕಂಥ ಜನ. ಬೃಹತ್ ನೀರಾವರಿಯಿಂದ ನೀವು ನಮ್ಮ ಭಾಗಕ್ಕೆ ನೀರು ತರುವುದಾದರೆ ನಾವು ಸ್ವಾಗತ ಮಾಡುತ್ತೇವೆ. ಆದರೆ ನೀರು ಬರುತ್ತೆ, ಬರುತ್ತೆ ಎಂದು ಹೇಳಿ, ಅಗೋ ಅಲ್ಲಿ, ಅಗೋ ಅಲ್ಲಿ ಎಂದು

ಮರೀಚಿಕೆಯನ್ನು ನೋಡಿಕೊಂಡು ಕೊನೆಗೆ ಅದರಲ್ಲೇ ನಾವು ಉಸಿರು ಕಳೆಯಬೇಕಾಗುತ್ತದೇನೋ. ನಾನು ಹೇಳತಕ್ಕಂಥದ್ದೇನೆಂದರೆ, ಏತನ್ಮಧ್ಯೇ, ಎಲ್ಲಿ ಬೃಹತ್ ನೀರಾವರಿ ಯೋಜನೆಗಳಿಲ್ಲ ಅಂಥ ಕಡೆಗಳಲ್ಲಿ ಸಣ್ಣ ನೀರಾವರಿಗೆ ಹೆಚ್ಚಿಗೆ ಒತ್ತು ಕೊಟ್ಟು ಪ್ರಾಮುಖ್ಯತೆಯನ್ನು ಕೊಟ್ಟರೆ ಅನುಕೂಲವಾಗುತ್ತದೆ. ಸಣ್ಣ ನೀರಾವರಿ ಪರಿಸರಕ್ಕೆ ಯಾವುದೇ ಹಾನಿಯನ್ನು ಮಾಡುವುದಿಲ್ಲ. ಬೃಹತ್ ನೀರಾವರಿ ಯೋಜನೆಗಳಿಂದ ಪರಿಸರಕ್ಕೆ ಸಾಕಷ್ಟು ಹಾನಿಯಾಗುತ್ತದೆ ಎನ್ನತಕ್ಕಂಥಾದ್ದೂ ಇದೆ. ಆದರೂ ನಾವು ಅದನ್ನು ಮಾಡಲೇಬೇಕಾಗುತ್ತದೆ. ಅದು ಬೇರೆ ಪ್ರಶ್ನೆ. ಆದರೆ, ಸಣ್ಣ ನೀರಾವರಿಯಿಂದ ನಮಗೆ ತಕ್ಷಣ ಅನುಕೂಲವೂ ಸಿಗುತ್ತದೆ. ನಮ್ಮಂಥ dry districtಗಳಲ್ಲಿ ಬಿದ್ದಂಥ ನೀರನ್ನು ಅಲ್ಲೇ ತಡೆಹಿಡಿಯತಕ್ಕಂಥ ಕಾರ್ಯಕ್ರಮಗಳಿಗೆ ಇವತ್ತು ಹೆಚ್ಚಿಗೆ ಒತ್ತು ಕೊಡಬೇಕು. ಆ ಹಿನ್ನೆಲೆಯಲ್ಲಿ ಇರಿಗೇಷನ್‌ಗೆ ಈ ಸರ್ಕಾರ ಏನು ಮಾಡಿದೆ. ಹೋದ ವರ್ಷ ಆಯವ್ಯಯದಲ್ಲಿ ಇರಿಗೇಷನ್‌ಗೆ 4,280 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಈ ವರ್ಷ 3,145 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಹೋದ ವರ್ಷ ಅದು plan allocationನಲ್ಲಿ ಶೇಕಡ 26 ರಷ್ಟಿತ್ತು. ಈ ವರ್ಷ ಅದನ್ನು ಶೇಕಡ 17.69ಕ್ಕೆ ಇಳಿಸಿದ್ದೀರಿ. ನಮ್ಮ ರೈತರಿಗೆ ನೀರಾವರಿ ಒದಗಿಸಬೇಕು ಎನ್ನತಕ್ಕಂಥ ಒಂದು ಕಮಿಟ್‌ಮೆಂಟ್ ಏನಾದರೂ ನಿಮಗೆ ನಿಜವಾಗಿ ಇದ್ದಿದ್ದರೆ, ರೈತರ ಬಾಳನ್ನು ಸುಗಮಗೊಳಿಸಬೇಕು, ಅಗ್ಗದ ಪ್ರಚಾರಕ್ಕೆ ಮಾರು ಹೋಗಬಾರದು ಎನ್ನುವ ಕಮಿಟ್‌ಮೆಂಟ್ ಏನಾದರೂ ನಿಮಗಿದ್ದಿದ್ದರೆ, ಈ ವರ್ಷ ನೀವು ನೀರಾವರಿಗೆ ಹಣ ಕಡಿಮೆ ಮಾಡುತ್ತಿದ್ದಿರೇ ಎನ್ನುವುದನ್ನು ನೀವು ಎದೆ ಮುಟ್ಟಿಕೊಂಡು ಹೇಳಿ. ಆಂದ್ರಪ್ರದೇಶದಲ್ಲಿ ನೀರಾವರಿಗೆ 14 ರಿಂದ 16 ಸಾವಿರ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಇವತ್ತು ಆಂದ್ರದಲ್ಲಿ ಎಲ್ಲಿ ನೋಡಿದರೂ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದ್ದಾರೆ. Water tribunalನಲ್ಲಿ ಇದೆಯಲ್ಲ ಎಂದು ಕೇಳಿದರೆ, ಅದು ಆದರೆ ಆಗಲಿ, ಹೋದರೆ ಹೋಗಲಿ, ನಾವು capacityಯನ್ನಂತೂ createಮಾಡುತ್ತೇವೆ, ಅದು ಏನಾಗುತ್ತದೋ ಆದ ಮೇಲೆ ನೋಡೋಣ ಎಂದು ಧೈರ್ಯವಾಗಿ ಹೇಳುತ್ತಾರೆ. ಆ ಧೈರ್ಯ ನಿಮಗೆ ಏಕೆ ಸ್ವಾಮಿ ಬರಲಿಲ್ಲ? ರೈತರ ಬಾಳಿನ ಬಗ್ಗೆ ಇಷ್ಟೆಲ್ಲ ಮಾತನಾಡತಕ್ಕಂಥ ನೀವು ನೀರಾವರಿಗೆ ಸುಮಾರು ಒಂದೂವರೆ ಸಾವಿರ ಕೋಟಿ ರೂಪಾಯಿಗಳನ್ನು ಹೋದ ಬಜೆಟ್‌ಗಿಂತ ಈ ಬಜೆಟ್‌ನಲ್ಲಿ ಖೋತಾ ಮಾಡಿದ್ದೀರಲ್ಲ, ಇದೇನಾ ನಿಮಗೆ ರೈತರ ಬಗ್ಗೆ ಇರತಕ್ಕಂಥ ಕಮಿಟ್‌ಮೆಂಟ್? Technicalಆಗಿ ನೀರಾವರಿಗೆ 26% ಈ ವರ್ಷದ ಬಜೆಟ್‌ನಲ್ಲಿ ಇರಬೇಕಾಗಿದ್ದರೆ ಅದು 4,800 ಕೋಟಿ ರೂಪಾಯಿಗಳಾಗಬೇಕಿತ್ತು.

ಡಾ. ಎ.ಎಸ್. ಆಚಾರ್ಯ.– ಕೃಷ್ಣ ಬೈರೇಗೌಡರಿಗೆ ಗೊತ್ತಿದೆ. Statistics ಗಳನ್ನೆಲ್ಲ study ಮಾಡುವಂಥವರು ಅವರು. ಈ ವರ್ಷ ಬಡ್ಡಿಯ ಅಂಶ ಸುಮಾರು 900 ಕೋಟಿ ರೂಪಾಯಿಗಳು ಕಡಿಮೆಯಾಗಿದೆ. ಹಾಗಾಗಿ ಅದು ನಿಮಗೆ ಕಡಿಮೆ ಎಂದು ಕಾಣುತ್ತಿದೆ. ಆದರೆ ಪ್ರತ್ಯಕ್ಷದಲ್ಲಿ, ನೀರಾವರಿಗೆ execution ಮಾಡುವಂಥ ಕಾಮಗಾರಿಗಳ್ಯಾವುದಕ್ಕೂ ಕಡಿಮೆಯಾಗಲಿಲ್ಲ. ಹೋದ ವರ್ಷಕ್ಕಿಂತ ಸ್ವಲ್ಪ ಜಾಸ್ತಿಯೇ ಇದೆ.

ಶ್ರೀ ಕೃಷ್ಣ ಬೈರೇಗೌಡ.– ಬಡ್ಡಿಯ ಶೇಕಡ ಕಡಿಮೆಯಾಯಿತು, ಸಂತೋಷ, ಆದರೆ, ನೀರಾವರಿಯ ಬೇರೆ ಯೋಜನೆಗಳಿಗೆ ಹೆಚ್ಚಿನ ಹಣ ಕೊಡಬಾರದು, ತ್ವರಿತವಾಗಿ ಕೆಲಸ ಮುಗಿಸಬಾರದು ಎಂದು ಎಲ್ಲಾದರೂ ಇದೆಯೇನು ?

ಡಾ. ಎ.ಎಸ್. ಆಚಾರ್ಯ.– ನೀರಾವರಿಯ Head ನಲ್ಲಿ ಇಟ್ಟಿರುವುದು ಕಡಿಮೆ ಎಂದು ನಿಮಗೆ ಅನ್ನಿಸಬಹುದು. ಆದರೆ ಪ್ರತ್ಯಕ್ಷ ಕಾಮಗಾರಿಗೆ ಕೊಟ್ಟಿರುವುದು ಹೋದ ವರ್ಷಕ್ಕಿಂತಲೂ ಈ ವರ್ಷ ಜಾಸ್ತಿ ಇದೆ. This is the correct position ಅಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್.– Major Irrigation worksಗೆ external agenciesಗಳು ಅಂದರೆ World Bank ಅಥವಾ Central Government ಮೇಲೆ depend ಆಗುತ್ತದೆ. ದಿವಂಗತ ಎನ್.ಟಿ. ರಾವರಾವ್‌ರವರು ಮೊಟ್ಟ ಮೊದಲನೇ ಬಾರಿಗೆ ಆಂದ್ರದಲ್ಲಿ ಮುಖ್ಯಮಂತ್ರಿಯಾಗಿದ್ದಾಗ, ಅವರು ತೆಲಗುಗಂಗಾ ಪ್ರಾಜೆಕ್ಟ್ ತೆಗೆದುಕೊಂಡಾಗ out of state funds, not depending upon the external agencies, ಅದನ್ನು ಒಂದೇ ಛಲದಲ್ಲಿ execute ಮಾಡಿಬಿಟ್ಟರು. Nobody imagined that such a thing was possible. ಒಬ್ಬ ಹೊಸ ಮನುಷ್ಯ ರಾಜಕಾರಣಕ್ಕೆ ಬಂದು, ಆತ ಅದನ್ನು ಮಾಡುತ್ತಾನೆಂದು ಯಾರೂ ನಿರೀಕ್ಷೆಯನ್ನೇ ಮಾಡಿರಲಿಲ್ಲ. Probably, the present Chief Minister of Andhra Pradesh, he has picked a leaf out of it. ಅದನ್ನೇ ಕೃಷ್ಣಬೈರೇಗೌಡರು ಹೇಳಿದ್ದು, ಅಲ್ಲಿ ಅವರು ಏನು ಮಾಡಿದ್ದಾರೆಂದರೆ, ರಾಜ್ಯದ ಸಂಪನ್ಮೂಲಗಳಿಂದಲೇ ಸುಮಾರು 16 ಸಾವಿರ ಕೋಟಿ ರೂಪಾಯಿಗಳನ್ನು, they have reserved it only for major irrigation. They have taken up on a large scale. ಆ ರೀತಿ ನಮ್ಮಲ್ಲಿಯೂ ಮಾಡಬಹುದಲ್ಲ ಎನ್ನುವ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸುತ್ತಿದ್ದಾರೆ.

ಶ್ರೀ ಕೃಷ್ಣ ಬೈರೇಗೌಡ.– ಆ ರೀತಿ ಮಾಡದಿದ್ದರೆ ಇವತ್ತು ನಮಗೆ ಬೇರೆ ವಿಧಿ ಇಲ್ಲ. ರೈತರ ಬಾಳನ್ನು ಸುಗಮಗೊಳಿಸಬೇಕು ಎನ್ನುವುದಾದರೆ, ಆ ಕೆಲಸವನ್ನು ಏಕೆ ನಿಮಗೆ

ಮಾಡುವುದಕ್ಕೆ ಆಗುತ್ತಿಲ್ಲ. ಇವತ್ತು ನನ್ನ ಹತ್ತಿರ ಸಣ್ಣ ನೀರಾವರಿ ಇಲಾಖೆಯ ವಾರ್ಷಿಕ ವರದಿ ಇದೆ. ಅದರಲ್ಲಿರುವ ಕೆಲವನ್ನು ಓದಿ ಹೇಳುತ್ತೇನೆ. ಏನು traget ಇತ್ತೋ ಅದನ್ನೂ achieve ಮಾಡುವುದಕ್ಕೆ ಅವರ ಕೈಯಲ್ಲಿ ಆಗುತ್ತಿಲ್ಲ ಏನು ದುರಾದೃಷ್ಟವಿದು ? ಹೇಳುತ್ತೇನೆ ಕೇಳಿ 2006–07ನೇ ಸಾಲಿನಲ್ಲಿ 299 ಕೆರೆಗಳ ಕಾಮಗಾರಿಯನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ ಅವರು ತೆಗೆದುಕೊಂಡಿರುವುದು ಕೇವಲ 244 ಕೆರೆಗಳು. ಸುಮಾರು 7,358 ಲಕ್ಷ ರೂಪಾಯಿಗಳನ್ನು ಕಾದಿರಿಸಲಾಗಿದ್ದರೆ, ಅವರು ಖರ್ಚು ಮಾಡಿರುವುದು ಕೇವಲ 5,190 ಲಕ್ಷ ರೂಪಾಯಿಗಳು. ಹಾಗೆಯೇ ಕೆರೆಗಳ ಆಧುನೀಕರಣಕ್ಕೆ 2,500 ಲಕ್ಷ ರೂಪಾಯಿಗಳನ್ನು ಇಟ್ಟಿದ್ದರೆ, ಅದರಲ್ಲಿ ಖರ್ಚು ಮಾಡಿರುವುದು 1,700 ಲಕ್ಷ ರೂಪಾಯಿಗಳು. ಏತ ನೀರಾವರಿ ಯೋಜನೆಗಳಿಗೆ 2,630 ಲಕ್ಷ ರೂಪಾಯಿಗಳನ್ನಿಟ್ಟಿದ್ದರೆ, ಅದರಲ್ಲಿ ಖರ್ಚು ಮಾಡಿರುವುದು 1,165 ಲಕ್ಷ ರೂಪಾಯಿಗಳು. ಹೊಸ ಕೆರೆಗಳ ನಿರ್ಮಾಣಕ್ಕೆ 2,647 ಲಕ್ಷ ರೂಪಾಯಿಗಳನ್ನು ಇಟ್ಟಿದ್ದರೆ, ಖರ್ಚು ಮಾಡಿರುವುದು 1,833 ಲಕ್ಷ ರೂಪಾಯಿಗಳು. ಕೆರೆಗಳ ಪುನರುಜ್ಜೀವನ ಮತ್ತು ಹೂಳು ತೆಗೆಯುವುದಕ್ಕೆ ಕಾದಿರಿಸಿದ ಅನುದಾನ 2,204 ಲಕ್ಷ ರೂಪಾಯಿಗಳಾಗಿದ್ದರೆ, ಖರ್ಚು ಮಾಡಿರುವುದು 187 ಲಕ್ಷ ರೂಪಾಯಿಗಳು ಮಾತ್ರ. ಏಕಿಷ್ಟು ಕಡಿಮೆ ಖರ್ಚಾಗಿದೆ? ಯಾವ ಕೆರೆಗಳೂ ಹೂಳು ತುಂಬಿಕೊಂಡಿಲ್ಲವೇ? ಅಥವಾ ಕೆರೆಗಳ ಹೂಳೆತ್ತತಕ್ಕಂಥ ಕೆಲಸದ ಅವಶ್ಯಕತೆಯಿಲ್ಲವೇ? ಅದರಿಂದ ರೈತರಿಗೆ ಅನುಕೂಲವಾಗುವುದಿಲ್ಲವೇ? ಮಳೆ ನೀರು ಪೋಲಾಗಿ ಹರಿದು ಹೋಗುವುದನ್ನು ತಡೆಯುವುದಿಲ್ಲವೇ? ಈಗ ಹೇಳಿ ತಾವು, ಕೊಟ್ಟಿರತಕ್ಕಂಥ ಹಣವನ್ನೇ ಖರ್ಚು ಮಾಡತಕ್ಕಂಥ ಸಾಮರ್ಥ್ಯ ನಿಮಗಿಲ್ಲ. ಅದನ್ನು ಖರ್ಚು ಮಾಡಿಸತಕ್ಕಂಥ ಜವಾಬ್ದಾರಿಯನ್ನೂ ಇವತ್ತು ಸರ್ಕಾರ ತೆಗೆದುಕೊಂಡಿಲ್ಲ. ಇಟ್ಟಿದ್ದೇವೆ ಎಂದು ಸುಮ್ಮನೆ ತೋರಿಸುವುದು, ಆಮೇಲೆ ವರ್ಷದ ಕೊನೆಯಲ್ಲಿ, ಖರ್ಚಾಗಲಿಲ್ಲ ಎಂದು ಹೇಳಿ ಅದನ್ನು ಬೇರೆ ಕಡೆಗೆ divert ಮಾಡುವುದು ಆಗುತ್ತದೆ. ವರ್ಷದ ಕೊನೆಯಲ್ಲಿ ಮಂತ್ರಿಗಳು, ಪ್ರಭಾವಿಗಳು ಅವರವರ ಕ್ಷೇತ್ರಗಳಿಗೆ ಈ ಹಣವನ್ನು ತೆಗೆದುಕೊಂಡು ಹೋಗಿ ಹಾಕಿಕೊಳ್ಳುವುದು ಆಗುತ್ತದೆ. ಅದೇ ರೀತಿ ಇನ್ನೂ ಬೇಕಾದಷ್ಟು ಇದೆ. ಹೇಳುತ್ತೇನೆ ಕೇಳಿ, ಏತ ನೀರಾವರಿಗೆ 2,320 ಲಕ್ಷ ರೂಪಾಯಿಗಳಿದ್ದರೆ, ಖರ್ಚಾಗಿರುವುದು 730 ಲಕ್ಷ ರೂಪಾಯಿಗಳು. ಹೀಗೆ ಹೇಳುತ್ತಾ ಹೋದರೆ ಸಾಕಷ್ಟು ಇದೆ. ಹಾಗಾಗಿ ಎಲ್ಲಿದೆ ಸ್ವಾಮಿ ತಮ್ಮ ರೈತ ಪರವಾದಂಥ ಧೋರಣೆ? ಸಣ್ಣ ನೀರಾವರಿ ಇಲಾಖೆ ಯಾರಿಗೋಸ್ಕರ ಇರುವುದು? ಅದನ್ನು ಸಮರ್ಪಕವಾಗಿ ನಡೆಸುವುದಕ್ಕೆ ತಮಗೆ ಆಸಕ್ತಿ ಇಲ್ಲ, ಕಮಿಟ್‌ಮೆಂಟ್ ಇಲ್ಲವೆಂದರೆ ತಾವು ಇನ್ನು ಯಾವುದನ್ನು ನಡೆಸುತ್ತೀರಿ? ಬೃಹತ್ ನೀರಾವರಿ ಯೋಜನೆಗಳು

ಅದೆಷ್ಟು ವರ್ಷಗಳಿಂದ ಕಾಲು ಎಳೆಯುತ್ತಿವೆಯೋ ಗೊತ್ತಿಲ್ಲ. ನಾನು Assurance Committee ಯಲ್ಲಿ ನೋಡುತ್ತಿರುವ ಹಾಗೆ 6 ವರ್ಷ, 7 ವರ್ಷ, 10 ವರ್ಷ, 15 ವರ್ಷಗಳ ಹಿಂದೆ ಮಂಜೂರಾದ ಕೆಲಸಗಳು ಇನ್ನೂ ನಡೆಯುತ್ತಿವೆ ಎಂದರೆ ನಮಗೆಲ್ಲರಿಗೂ ಇದು ನಾಚಿಕೆ ಪಡಬೇಕಾದ ವಿಷಯವಲ್ಲವೇ? ರೈತರ ಹೆಸರನ್ನು ಹೇಳಿಕೊಂಡು ನಾವೇನು ಕಡಿಮೆ ಮಾಡಿಲ್ಲ ಎಂದು ಸನ್ಮಾನ್ಯ ಹಿರಿಯ ಮಂತ್ರಿಗಳು ಹೇಳುತ್ತಾರೆ. ಆದರೆ, ಜಾಸ್ತಿ ಮಾಡುವುದಕ್ಕೆ ತಮಗೆ ಏನು ಅಡ್ಡ ಬಂದಿತ್ತು? ಹೆಚ್ಚು ಹಣವನ್ನು ಖರ್ಚು ಮಾಡಿ, ನೀರಾವರಿಗಳನ್ನು ಯೋಜನೆಗಳನ್ನು ತ್ವರಿತವಾಗಿ ಮುಗಿಸಿ, ನಾಲ್ಕು ಜನ ರೈತರಿಗೆ ನೀರಾದರೂ ಸಿಗುತ್ತದೆ. ಯಾವ ಭಾಗದಲ್ಲಾದರೂ ಸಿಗಲಿ. ನಾವು ಆ ಭಾಗ ಈ ಭಾಗ ಎಂದು ಹೇಳುವುದಿಲ್ಲ. ನಮ್ಮ ಕೋಲಾರಕ್ಕಂತೂ ಏನೂ ಸಿಗುವುದಿಲ್ಲವೆಂದು ನಮಗೆ ಗೊತ್ತೇ ಇದೆ. ಯಾವ ಭಾಗದಲ್ಲಾದರೂ ರೈತನಿಗೆ ಸಿಕ್ಕಿದರೆ ನಮಗೆ ಸಂತೋಷವಾಗುತ್ತದೆ. ರೈತರಿಗೆ ತಮ್ಮ commitment ಎಲ್ಲಿ ಸ್ವಾಮಿ? ಹಾಗಾಗಿ ನಾನು ಸರ್ಕಾರದಲ್ಲಿ ಮನವಿ ಮಾಡುವುದೇನೆಂದರೆ, ಸಣ್ಣ ನೀರಾವರಿ ಇಲಾಖೆಯನ್ನು ಇನ್ನಷ್ಟು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕು. ಅದರಲ್ಲೂ ವಿಶೇಷವಾಗಿ ಮಳೆ ಕಡಿಮೆ ಬೀಳುವ ಜಿಲ್ಲೆಗಳು ಶಾಶ್ವತ ನೀರಾವರಿ ಯೋಜನೆಗಳಿಂದ ವಂಚಿತವಾದ ಜಿಲ್ಲೆಗಳಲ್ಲಿ ಸಣ್ಣ ನೀರಾವರಿ ಇಲಾಖೆಗೆ ಅತ್ಯಧಿಕ ಆದ್ಯತೆಯನ್ನು ಕೊಟ್ಟು ಅತ್ಯಧಿಕ ಅನುದಾನವನ್ನು ಸಹ ಕೊಟ್ಟು ಆ ಭಾಗದಲ್ಲಿ ಏನಾದರೂ ನೀವು ಕಾಮಗಾರಿಗಳನ್ನು ತೆಗೆದುಕೊಳ್ಳದೇ ಹೋದರೆ ಕೋಲಾರ ಆಗಬಹುದು, ತುಮಕೂರು ಆಗಬಹುದು, ನಾವೆಲ್ಲ ಬೆಂಗಳೂರಿಗೆ ಗುಳೆ ಹೋಗಬೇಕಾಗುತ್ತದೆ. ಆ ಪರಿಸ್ಥಿತಿ ಬರುವುದಕ್ಕೆ ಜಾಸ್ತಿ ದೂರವಿಲ್ಲ.

ಶ್ರೀ ಎಸ್.ಎಸ್. ಪಾಟೀಲ್.- ಮಾನ್ಯ ಛೇರ್ಮನ್‌ರವರೆ, ಸಣ್ಣ ನೀರಾವರಿ ಇಲಾಖೆ ಬಹಳ ಮಹತ್ವದ ಇಲಾಖೆಯಾಗಿದೆ. ಬಹುಶಃ ಅದರಲ್ಲಿ major irrigation ಗಿಂತ ಹೆಚ್ಚು ನೀರಾವರಿ ಮಾಡಬಹುದು, ಭೂ ಜಲ ಹೆಚ್ಚಾಗುತ್ತದೆ. ದುರ್ದೈವದಿಂದ ಇವರು ಈ ಇಲಾಖೆಯನ್ನು ಹೇಗೆ ಇಟ್ಟಿದ್ದಾರೆಂದರೆ, ಅದಕ್ಕೆ ಹಣಕಾಸಿನ ಲಭ್ಯತೆ ಇಲ್ಲ, ಇದ್ದದ್ದನ್ನು ನಮ್ಮ ಮಾನ್ಯ ಶಾಸಕರು ಹೇಳಿದ ಹಾಗೆ ಅದನ್ನೂ ಖರ್ಚು ಮಾಡುವುದಿಲ್ಲ, ಆ ಹಣವನ್ನು ಸರ್ಕಾರದಿಂದ ಬಿಡುಗಡೆ ಕೂಡ ಮಾಡುವುದಿಲ್ಲ. ಇನ್ನು ಯಾರಿಗಾದರೂ ಹೇಳಿ ಏನು ಮಾಡುವುದು, ಮಾನ್ಯ ಛೇರ್ಮನ್‌ರವರು ಮೇಲೆ ಕುಳಿತಿದ್ದಾರೆ, ಅವರಿಗೆ ಹೇಳುತ್ತೇವೆ, ಯಾರೋ ಇಬ್ಬರು ಮೂವರು ಬರೆದುಕೊಳ್ಳುತ್ತಾರೋ ಬಿಡುತ್ತಾರೋ ದೇವರಿಗೆ ಗೊತ್ತು. ಈ ಇಲಾಖೆಯನ್ನು ಈ ರೀತಿ ನಡೆಸಬಾರದು. ನಿಜವಾಗಿ ನೋವು ಅನಿಸುತ್ತದೆ. ನಾವು

ಮೊನ್ನೆಯಿಂದ ಸಹ ಹೇಳಿದ್ದೇವೆ. ಬೇಡಿಕೆ ಮೇಲೆ ಚರ್ಚೆಯಾಗುವಾಗ ಸದನದಲ್ಲಿ ಇದಕ್ಕೆ ಸಂಬಂಧಪಟ್ಟ ಮಂತ್ರಿ ಇಲ್ಲದೇ ಅಥವಾ ಬಹಳಷ್ಟು ಮಂತ್ರಿಗಳು ಇಲ್ಲದೇ ಸದನ ನಡೆಸುವುದರ ಬದಲು adjourn ಮಾಡಿಬಿಡುವುದು ಒಳ್ಳೆಯದು. ಸುಮ್ಮನೆ ಈ ರೀತಿ ನಡೆಸುವುದರಲ್ಲಿ ಯಾವ ಅರ್ಥವೂ ಇಲ್ಲ. ನಮ್ಮಲ್ಲಿ ಈ ಸಲ ಮಳೆಯಾಗಿ ಸಣ್ಣ ಸಣ್ಣ ಕೆರೆಗಳಿಗೆ ನೀರು ಬಂದಿದೆ. ಆ ನೀರು ಬಿಡಬೇಕೆಂದರೆ ಕಾಲುವೆ ಇಲ್ಲ. ಇದ್ದ ಕಾಲುವೆ ಒಳಗಡೆ ಜಾಲಿ ಗಿಡಗಳು ಬೆಳೆದಿವೆ. ಅದರಲ್ಲಿ ನೀರು ಬಿಟ್ಟರೆ ಎಲ್ಲ waste ಆಗಿ ಹೋಗುತ್ತದೆ. ಇದು ನಮ್ಮ ಪರಿಸ್ಥಿತಿಯಾಗಿದೆ. ನಮ್ಮಲ್ಲೆಲ್ಲ ಕೇವಲ ಸಣ್ಣ ಸಣ್ಣ ಕೆರೆಗಳಿವೆ. Lift irrigation ಇವೆ ಆ lift irrigation ನಲ್ಲಿ ಮಳೆ ಬಂದಾಗ machine ಕೆಟ್ಟು ಹೋಗಿದೆ ಎಂದು ಹೇಳುತ್ತಾರೆ. ನೀರು ಇಲ್ಲದಿದ್ದಾಗ ಆ machine ಚೆನ್ನಾಗಿರುತ್ತದೆ, machine ಅನ್ನು ಸರಿಮಾಡಿರುತ್ತಾರೆ. ಇದು ನಡೆಯುತ್ತಿರುವ ಸಂಗತಿ. ನನ್ನ ಕ್ಷೇತ್ರದಲ್ಲಿ ಸಿಗಟಾಲೂರು lift irrigation ನಿಂದ 5000 ಎಕರೆ ಪ್ರದೇಶದಲ್ಲಿ ನೀರಾವರಿಯಾಗಬೇಕಾಗಿತ್ತು. ಆದರೆ 50 ಎಕರೆ ಸಹ ನೀರಾವರಿಯಾಗುತ್ತಿಲ್ಲ. ಸುಮ್ಮನೆ ಇಲ್ಲಿ ಲೆಕ್ಕ ತೋರಿಸುತ್ತಾರೆ. ಆ ದೃಷ್ಟಿಯಿಂದ ಸಣ್ಣ ನೀರಾವರಿ ಇಲಾಖೆ ಖಂಡಿತವಾಗಿಯೂ ಅದು ಸರಿಯಾಗಿ ಕೆಲಸ ಮಾಡಿದಿದ್ದರೆ ರೈತರಿಗೆ ಬಹಳ ತೊಂದರೆಯಾಗುತ್ತದೆ.

ಶ್ರೀ ಕೃಷ್ಣ ಬೈರೇಗೌಡ.– ಸಣ್ಣ ನೀರಾವರಿ ಇಲಾಖೆ ಏನಿದೆ, ಕೆಲವು ಜಿಲ್ಲೆಗಳಲ್ಲಿ ಎಲ್ಲಿ ನೀರಿನ ಅವಶ್ಯಕತೆ ಅತ್ಯಾವಶ್ಯಕವಿದೆ, ಅಂಥ ಭಾಗಗಳಿಗೆ ತ್ವರಿತವಾಗಿ, ಪರಿಣಾಮಕಾರಿಯಾಗಿ ಅವರಿಗೇನಾದರೂ ನೀವು ಸಹಾಯ ಮಾಡಬೇಕಾದರೆ ಸಣ್ಣ ನೀರಾವರಿ ಇಲಾಖೆಯನ್ನು ಸಣ್ಣ ಇಲಾಖೆಯಾಗಿ ಮಾಡಬೇಡಿ. ಮಾನ್ಯ ಪಾಟೀಲ್ ಸಾಹೇಬರು ಹೇಳಿದಂತೆ ಅದಕ್ಕೆ ತನ್ನದೇ ಆದಂತ ಶಕ್ತಿ ಇದೆ. ಆ ಶಕ್ತಿಯನ್ನು ಅದಕ್ಕೆ ಕೊಡಿ, ಒಣ ಭೂಮಿಗಳಲ್ಲಿ ಅದರಿಂದ ಸಾಕಷ್ಟು ನೀವು ಸುಧಾರಣೆಯನ್ನು ತರುವುದಕ್ಕಾಗುತ್ತದೆನ್ನುವ ಮಾತನ್ನು ಹೇಳುತ್ತಾ, ಇನ್ನು ಶಿಕ್ಷಣದ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗುತ್ತದೆ. ಈ ಸರ್ಕಾರ ಏನಾದರೂ ಒಳ್ಳೆಯ ಕೆಲಸವನ್ನು ಮಾಡಿದರೆ ಸ್ವಾಗತ ಮಾಡಿ ಎಂದು ಮೊನ್ನೆ ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದರು. ನಾನು ಸ್ವಾಗತ ಮಾಡುತ್ತೇನೆ. ಎಂದೂ ಇಲ್ಲದಷ್ಟು ಸಂಖ್ಯೆಯಲ್ಲಿ ತಾವು ಪದವಿ ಪೂರ್ವ ಕಾಲೇಜುಗಳನ್ನು ಕೊಟ್ಟಿದ್ದೀರಿ, ಪದವಿ ಕಾಲೇಜುಗಳನ್ನು ಇವತ್ತು ಮಂಜೂರು ಮಾಡಿದ್ದೀರಿ, high school ಗಳನ್ನು ಮಂಜೂರು ಮಾಡಿದ್ದೀರಿ, ಹೀಗೆ ಇವೆಲ್ಲವನ್ನು ಮಾಡಿದ್ದೀರಿ. ಸಂತೋಷ ಸ್ವಾಗತವನ್ನೂ ಮಾಡುತ್ತೇವೆ. ಮೊನ್ನೆ ಮಾನ್ಯ ಮಾಧುಸ್ವಾಮಿಯವರು ಮಾತನಾಡುತ್ತಾ, ಲೋಕೋಪಯೋಗಿ ಇಲಾಖೆ ಬಗ್ಗೆ

ಮಾತನಾಡಿದರು. ಇವತ್ತು ಶಿಕ್ಷಣ ಇಲಾಖೆಯಲ್ಲಿ ಏನಾಗುತ್ತಿದೆ ಎನ್ನುವುದನ್ನು ತಾವು ಸ್ವಲ್ಪ ಅವಲೋಕನ ಮಾಡಬೇಕಾಗುತ್ತದೆ. ಮಾತೆತ್ತಿದರೆ ನಂಜುಂಡಪ್ಪ ವರದಿ ಎಂದು ಹೇಳುತ್ತಾರೆ. ನಂಜುಂಡಪ್ಪ ವರದಿಯ ಆಧಾರದ ಪ್ರಕಾರ ಹಿಂದುಳಿದ ಜಿಲ್ಲೆಗಳಲ್ಲಿ ಕೋಲಾರ ಜಿಲ್ಲೆ ಕೂಡ ಒಂದಾಗಿದೆ. ಜೊತೆಗೆ ಶಿಕ್ಷಣದಲ್ಲಿ ಕೂಡ ನಮ್ಮ ಪರಿಸ್ಥಿತಿ ಏನಿದೆ ಎನ್ನುವುದನ್ನು ಕೂಡ ಹಿಂದೆ ನಾನು ಪದೇ ಪದೇ ಬಿಡಿಸಿ ಬಿಡಿಸಿ ಹೇಳಿದ್ದೇನೆ. ಕೋಲಾರ ಜಿಲ್ಲೆಯ ನಮ್ಮ ಪ್ರೌಢಶಾಲೆಗಳಲ್ಲಿ pass ಆಗತಕ್ಕಂಥ ಶೇಕಡಾವಾರು ನೋಡಿದರೆ ಕೊನೆಯ 2ನೇ ಸ್ಥಾನವನ್ನು ಸದಾಕಾಲ ಖಾಯಂ ಮಾಡಿ ಇಟ್ಟುಕೊಂಡಿದ್ದಾರೆ: Reserve ಮಾಡಿ ಇಟ್ಟುಕೊಂಡಿದ್ದಾರೆ. ಅದು ನಮ್ಮ ಹಕ್ಕು ಎಂದು ನಾವು ತಿಳಿದುಕೊಂಡು ಬಿಟ್ಟಿದ್ದೇವೆ. ಅದನ್ನು ಬಿಟ್ಟು ನಾವು ಕದಲುವುದೇ ಇಲ್ಲ. ಅದು ಕೆಳಕ್ಕೆ ಹೋಗುತ್ತಿಲ್ಲ, ನಮ್ಮ ಕೆಳಗಿರುವವರು ಅವರು ಖಾಯಂ ಮಾಡಿಕೊಂಡಿದ್ದಾರೆ. ಆದ್ದರಿಂದ ನಾನು ಹಿಂದೆ ಸಹ ಇದೇ ಶಿಕ್ಷಣ ಸಚಿವರಿಗೆ ಹೋಗಿ ಕೇಳಿದೆ, 'ಏನು ಸ್ವಾಮಿ, ನಮ್ಮ ಜಿಲ್ಲೆಯಲ್ಲಿ ಇಂಥ ಪರಿಸ್ಥಿತಿ ಇದೆ, ಇದರ ಬಗ್ಗೆ ಏನಾದರೊಂದು ವಿಶೇಷ ಕಾರ್ಯಕ್ರಮ ಹಾಕಿಕೊಳ್ಳಬೇಕೋ ಬೇಡವೋ ಎಂದು ಕೇಳಿದಾಗ ಹಾಕಿಕೊಳ್ಳುತ್ತೇವೆಂದು' ಹೇಳಿದರು. ಪರಿಶೀಲಿಸಲಾಗುವುದು ಎಂದು ಉತ್ತರ ಕೊಟ್ಟಿದ್ದಾರೆ. ಏನು ಸ್ವಾಮಿ ಪರಿಶೀಲನೆ ಮಾಡಿರುವುದು? ನಾನು ಪ್ರಶ್ನೆ ಕೇಳಿ ಒಂದು ವರ್ಷಕ್ಕಿಂತ ಹೆಚ್ಚಾಯಿತು. ಕಳೆದ ಬಾರಿ SSLC result ಬಂದಾಗ ಕೇಳಿದ ಪ್ರಶ್ನೆ. ಕಳೆದ ವರ್ಷ ಅದೇನೋ ಸ್ವಲ್ಪ ಮೇಲಕ್ಕೆ ಹೋಗಿತ್ತು. ಅದ್ಯಾರೋ ಕಂಡುಕೊಂಡುಬಿಟ್ಟಿದ್ದಾರೆ. ಇವರು ಹೇಗೆ ಮೇಲಕ್ಕೆ ಬಂದರು ಎಂದು ಮತ್ತೆ ಈ ವರ್ಷ ಅದೇ ಜಾಗಕ್ಕೆ ನಮ್ಮನ್ನು ಒದ್ದಿದ್ದಾರೆ. ನೀವು ಏನೇನು ಪರಿಶೀಲನೆ ಮಾಡುತ್ತೀರಿ? ಇದು ನಿಜವಾಗಲು ನಮಗೆ ಗೊತ್ತಾಗುವುದಿಲ್ಲ. ಯಾವ್ಯಾವ ಜಿಲ್ಲೆಗಳಲ್ಲಿ SSLC percentage ತುಂಬಾ ಕಡಿಮೆ ಬರುತ್ತಿದೆ, ಅವುಗಳನ್ನು ಅಧ್ಯಯನ. ಮಾಡಿ ಕಾರಣಗಳೇನು? ಇವುಗಳನ್ನು ಮೇಲಕ್ಕೆತ್ತುವುದಕ್ಕೆ ಏನಾದರೂ ಮಾಡಬೇಕೆನ್ನುವಂಥ ಒಂದು ಯೋಜನೆ ಸರ್ಕಾರಕ್ಕೆ ಇಲ್ಲವೇ? ಇದರ ಹಿಂದೆ ದೊಡ್ಡ ಸಮಸ್ಯೆ ಇದೆ. ಆ ಸಮಸ್ಯೆ ಏನು ಎನ್ನುವುದನ್ನು ಹೇಳುತ್ತೇನೆ. ನಮ್ಮ ಕೋಲಾರ ಜಿಲ್ಲೆಯಲ್ಲಿ SSLC exam ನಲ್ಲಿ ಸರಾಸರಿ ಶೇಕಡ 50ರಷ್ಟು fail ಆಗುತ್ತಾರೆ. ಈ ವರ್ಷ ಸ್ವಲ್ಪ ಹೆಚ್ಚು ಎಂದು 55% pass ಆಗಿದ್ದಾರೆ. ಆ fail ಆದವರಲ್ಲಿ ಶೇಕಡ 5ರಷ್ಟು ಬಿಟ್ಟರೆ ಉಳಿದವರು ಪುನಃ ವಿದ್ಯಾವ್ಯವಸ್ಥೆಗೆ ವಾಪಸ್ಸು ಬರುವುದಿಲ್ಲ. ಅವನಿಗೆ ಜೀವನ ಪರ್ಯಂತ ಅಷ್ಟೇ ವಿದ್ಯಾಭ್ಯಾಸ. ಅವನು SSLC ಯಲ್ಲಿ Pass ಆದರೆ PUC ಗೆ ಹೋಗುತ್ತಾನೆ. PUC ಯಲ್ಲಿ pass ಆದರೆ ಮುಂದೆ ಏನೋ ಉದ್ಯೋಗಾವಕಾಶ ಸಿಗುತ್ತದೆ. ಇದರಿಂದ ಜೀವನದಲ್ಲಿ ತನ್ನ

ಸ್ವಂತ ಕಾಲ ಮೇಲೆ ತಾನು ನಿಲ್ಲುತ್ತಾನೆ. ಆದರೆ, ಆ fail ಆದವರಲ್ಲಿ ಶೇಕಡ 80ರಷ್ಟು ವಿದ್ಯಾರ್ಥಿಗಳು ವಿದ್ಯಾ ವ್ಯವಸ್ಥೆಗೆ ವಾಪಸ್ಸು ಬರುವುದಿಲ್ಲ. ಅವರೇ ನಾಳೆ ಸಮಾಜದಲ್ಲಿ ಸಮಾಜ ಘಾತುಕ ಶಕ್ತಿಗಳಾಗತಕ್ಕಂಥ ವಾತಾವರಣ ನಿರ್ಮಾಣವಾಗುತ್ತದೆ. ಅವರಿಗೆ ಉದ್ಯೋಗ ಸಿಗುವುದಿಲ್ಲ "ಇವತ್ತು ಶೇಕಡ 70ರಷ್ಟು ಗ್ರಾಮೀಣ ಯುವಕರು ಕೃಷಿ ಮಾಡುವುದಕ್ಕೆ ತಯಾರಿಲ್ಲ" ಎಂದು ಆಗಲೇ ಮಾನ್ಯ ಯಡಿಯೂರಪ್ಪನವರೇ ಹೇಳಿದರು. ಅವರು ಕೃಷಿ ಮಾಡುವುದಕ್ಕೆ ತಯಾರಿಲ್ಲವೆಂದಾಗ 10ನೇ ತರಗತಿ fail ಆದರೆ ಅವರಿಗೆ ಉದ್ಯೋಗ ಯಾರು ಕೊಡುತ್ತಾರೆ? ಸಮಾಜದ ಮೇಲೆ ನಾಳೆ ಅದೇ ಹುಡುಗರು ತಿರುಗಿ ಬೀಳತಕ್ಕಂಥದ್ದು ಆಗುತ್ತದೆ. ಇಷ್ಟೆಲ್ಲ ಅದರಿಂದ ಸಮಸ್ಯೆ ಅಡಗಿದೆ ಎಂದು ನಾವು ಪದೇ ಪದೇ ಸರ್ಕಾರದ ಗಮನಕ್ಕೆ ತಂದರೂ ಸಹ ಶೈಕ್ಷಣಿಕವಾಗಿ ಹಿಂದುಳಿದಂಥ ಜಿಲ್ಲೆಗಳಲ್ಲಿ ಸಮಸ್ಯೆ ಏನು ಎನ್ನುವುದನ್ನಾದರೂ ಅಧ್ಯಯನ ಮಾಡಬೇಕಲ್ಲವೇ? ಕೆಲವರು ಭಾಗ್ಯವಂತರು ಇದ್ದಾರೆ, ಕರಾವಳಿ ಜಿಲ್ಲೆಯವರು, ಮಲೆನಾಡು ಜಿಲ್ಲೆಗಳವರು, ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳಿಂದ ಸ್ವಲ್ಪ ಅಲ್ಲಿಗೆ ಕಳುಹಿಸಿ, ಅಲ್ಲಿಂದ ಇಲ್ಲಿಗೆ ಕರೆಸಿ ಏನೋ ಒಂದು ಮಾಡಿಯಪ್ಪ ಎಂದು ನಾನು ಹೇಳಿದೆ. ಹೀಗೆ ಪ್ರತೀ ವರ್ಷ ನಾವು ಇದೇ ಗತಿಯಲ್ಲಿ ಏಕೆ ಇದ್ದೇವೆನ್ನುವುದನ್ನು ಸರ್ಕಾರ ವಿಶ್ಲೇಷಣೆಯಾದರೂ ಮಾಡಬೇಕಲ್ಲವೇ? ಆ ಕನಿಷ್ಠ ಗೋಜಿಗೂ ಸಹಾ ಸರ್ಕಾರ ಹೋಗಿಲ್ಲ. ನಂತರ, High Schools, College ಗಳನ್ನು ರಾಜ್ಯದಲ್ಲಿ ಮಂಜೂರು ಮಾಡಿದ್ದಾರೆ. ಇದನ್ನೆಲ್ಲ ಯಾವ ಆಧಾರದ ಮೇಲೆ ಮಂಜೂರು ಮಾಡಿದ್ದೀರಿ ಎಂಬುದನ್ನು ನಾನು ಕೇಳಬಯಸುತ್ತೇನೆ. ನಂಜುಂಡಪ್ಪ ವರದಿ ಆಧಾರದ ಮೇಲೆ ಎಂದು ಹೇಳುತ್ತೀರಿ. ಚಿಂತಾಮಣಿ ತಾಲ್ಲೂಕು ನನ್ನ ಕ್ಷೇತ್ರಕ್ಕೆ ಸೇರಿದೆ. ಅದು ನಂಜುಂಡಪ್ಪ ವರದಿಯಲ್ಲಿ ಹಿಂದುಳಿದ ತಾಲ್ಲೂಕು ಎಂದು ಹೇಳಿದೆ. ಆದರೆ, ಅಲ್ಲಿಗೆ ಶಾಲಾ ಕಾಲೇಜುಗಳನ್ನು ಮಂಜೂರು ಮಾಡುವುದಿಲ್ಲ. ತಮಗೆ ಬೇಕಾದ ಕಡೆಗೆ ಒಂದೊಂದು ಸಾಲಿನಲ್ಲಿ 7–8 ಶಾಲಾ ಕಾಲೇಜುಗಳನ್ನು ಮಂಜೂರು ಮಾಡುತ್ತೀರಿ. ಅದೇ ತಾಲ್ಲೂಕಿಗೆ ಕಳೆದ ವರ್ಷ 5–6 ಕೊಟ್ಟಿದ್ದೀರಿ. ಇದಕ್ಕೆ ಆಧಾರ ಯಾವುದು ಸ್ವಾಮಿ ? ಆ ಮಕ್ಕಳು ವರ್ಷ ವರ್ಷ fail ಆಗುತ್ತಿದ್ದಾರಲ್ಲಾ, ಅವರನ್ನು ಉದ್ಧಾರ ಮಾಡುವುದಕ್ಕೆ ನಿಮ್ಮ commitment ಇದೇನಾ? ನಂಜುಂಡಪ್ಪ ವರದಿಯಲ್ಲೂ ನಾವು ಶಾಲಾ ಕಾಲೇಜುಗಳನ್ನು ಪಡೆದುಕೊಳ್ಳುವುದಕ್ಕೆ eligible ಇದ್ದೇವೆ, ಹಾಗೂ ಶೈಕ್ಷಣಿಕವಾಗಿ ಕೊನೆಯ ಸ್ಥಾನದಲ್ಲಿ ನಾವಿದ್ದೇವೆ. ನಮಗೆ ನೀವು high school ಗಳನ್ನು ಮಂಜೂರು ಮಾಡುವುದಿಲ್ಲ, ಕಳೆದ ಒಂದೂವರೆ ವರ್ಷಗಳಿಂದ ನಮಗೆ high school ಗಳನ್ನು junior college ಗಳನ್ನು ಕೊಡಿ ಎಂದು ನಾವು ಪದೇ

ಪದೇ ಅರ್ಜಿಗಳನ್ನು ಹಾಕುತ್ತಲೇ ಇದ್ದೇವೆ. ಈಗ, ಆಗ, ಮುಂದಿನ ಪಟ್ಟಿಯಲ್ಲಿ, ಅದರ ಮುಂದಿನ ಪಟ್ಟಿಯಲ್ಲಿ ಎಂದು ಹೇಳುತ್ತಲೇ ಇದ್ದಾರೆ. ಇವತ್ತು ಆ ಜನ ಏನು ತಪ್ಪು ಮಾಡಿದ್ದಾರೆ? ನಮಗೆ ಓಟು ಹಾಕಿ ಅವರು ತಪ್ಪು ಮಾಡಿದ್ದು, ನಾವು ಬೇರೆ ಪಕ್ಷದಲ್ಲಿದ್ದೇವಲ್ಲಾ, ಅಲ್ಲಿ ನಮ್ಮ ಜನ ತಪ್ಪು ಮಾಡಿರುವುದು. ಏನು ಹೇಳಬೇಕೋ ನನಗಂತೂ ಅರ್ಥವಾಗುತ್ತಿಲ್ಲ. ಏನೋ ಆಡಳಿತ ಪಕ್ಷದಲ್ಲಿರುವವರಿಗೆ ಸ್ವಲ್ಪ ಮಟ್ಟಿಗೆ ಅವರ ವಿವೇಚನೆಯಲ್ಲಿ ಹೆಚ್ಚಿಗೆ ತೆಗೆದುಕೊಳ್ಳಲಿ, ನಾವು ಬೇಡವೆಂದು ಯಾವತ್ತೂ ಹೇಳುವುದಕ್ಕಾಗುವುದಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತ ನಡೆಸುವಾಗ ಅವರು ಮಾಡಲೇಬೇಕಾಗುತ್ತದೆ. ಆದರೆ ಸಾರಾಸಗಟಾಗಿ ಈ ತರಹ ಮಕ್ಕಳಿಗೆ ನಮಗೆ ಅನ್ಯಾಯ ಮಾಡುವುದು ಏನಿಲ್ಲ, ಇದರಲ್ಲಿ ಜನರಿಗೆ ಅನ್ಯಾಯ ಮಾಡುತ್ತಿದ್ದಾರೆನ್ನುವುದನ್ನು ಸರ್ಕಾರ ತಿಳಿದುಕೊಳ್ಳಬೇಕಾಗುತ್ತದೆ. ಇಂಥ ಒಂದು ಆ ಬಡ ರೈತರ ಮೇಲೆ, ಬಡ ಗ್ರಾಮಾಂತರ ಯುವಕರ ಮೇಲೆ ನೀವು ಕೆಟ್ಟ ಆಲೋಚನೆಯನ್ನು ಇಟ್ಟುಕೊಂಡಿದ್ದೀರಲ್ಲಾ, ಇದು ನಿಮಗೆ ನಿಜವಾಗಿ ಒಳ್ಳೆಯದಾಗತಕ್ಕಂಥದಲ್ಲ. ಕೇವಲ high school ಮಂಜೂರು ಮಾಡುವುದರಲ್ಲಿ ಮಾತ್ರವಲ್ಲ. ಆ school rooms ಕೊಡುವುದರಲ್ಲೂ ರಾಜಕೀಯ ಇದೆ. ನಮ್ಮ ಕ್ಷೇತ್ರಕ್ಕೆ ಪ್ರೌಢಶಾಲೆಯ ಒಂದು ಕೊಠಡಿ ಕಟ್ಟುವುದಕ್ಕೆ 4 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ, ಪಕ್ಕದ ಬೇರೆ ಕ್ಷೇತ್ರಗಳಿಗೆ 120 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಮ್ಮ ಕ್ಷೇತ್ರದಲ್ಲಿರುವ ವಿದ್ಯಾರ್ಥಿಗಳಿಗೆ ಅವರು schoolನಲ್ಲಿ ಕುಳಿತುಕೊಳ್ಳುವುದಕ್ಕೆ chair ಬೇಕಾಗಿಲ್ಲ, ಮೇಜು ಬೇಕಾಗಿಲ್ಲ. ಕೊಠಡಿಯೂ ಬೇಕಾಗಿಲ್ಲ, ಅಲ್ಲವೇ? ಆದರೆ, ಬೇರೆ ಕಡೆ ಇರತಕ್ಕಂಥವರು ಯಾರು ಅವರವರ ಪಕ್ಷಗಳಿಗೆ ಮತ ಹಾಕಿದ್ದಾರೆ, ಅಲ್ಲಿ ಮಾತ್ರ ಕೊಠಡಿಗಳನ್ನು ಕೊಡತಕ್ಕಂಥ ಸರ್ಕಾರದ ಕ್ರಮವೇನಿದೆ, ಇದು ನಿಜವಾಗಿಯೂ ಸಹ ಕೊನೆಯ ಪಕ್ಷ ಶಿಕ್ಷಣದಲ್ಲಿ ರಾಜಕೀಯ ಮಾಡುವ ಕೀಳು ಮಟ್ಟಕ್ಕೆ ಹೋಗಬಾರದಾಗಿತ್ತು ಎಂದು ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಹಿಂದೆ ನಾನು ಆಯವ್ಯಯದ ಮೇಲೆ ಮಾತನಾಡುವ ಸಂದರ್ಭದಲ್ಲಿ ಒಂದು ಅಂಶವನ್ನು ಮಾನ್ಯ ಯಡಿಯೂರಪ್ಪನವರ ಗಮನಕ್ಕೆ ತರಲಿಕ್ಕೆ ಬಯಸಿದ್ದೆ. ಆಗ ಅವರೂ ಸಹ ಅದನ್ನು ಗುರುತು ಹಾಕಿಕೊಂಡಿದ್ದರು. ನಂತರ, ಇದುವರೆಗೆ ಏನೂ ಸ್ಪಷ್ಟೀಕರಣ ಬಂದಿಲ್ಲ. ಇವತ್ತು 10ನೇ ತರಗತಿಯವರೆಗೆ ತಾವು ಬಿಸಿಯೂಟ ಕಾರ್ಯಕ್ರಮವನ್ನು ವಿಸ್ತರಿಸಿದ್ದೀರೆ. ಹಾಸ್ಟೆಲ್‌ನಲ್ಲೂ ಸಹ ಮಧ್ಯಾಹ್ನದ ಬಿಸಿಯೂಟದ ಕಾರ್ಯಕ್ರಮವನ್ನು ನಡೆಸುತ್ತಿದ್ದೀರಿ. ಆ ಬಗ್ಗೆ ಇವತ್ತು ನಾನು ಇಲ್ಲೇ ಕುಳಿತುಕೊಂಡು ಲೆಕ್ಕ ಹಾಕಿದೆ. ಹಿಂದೆ ಸ್ವಲ್ಪ ಜಾಸ್ತಿ ಹಣ ಹೇಳಿದ್ದೆ. ಆದರೆ, ಇವತ್ತು ಕಡಿಮೆ ಇದೆ. SC/ST, BCM, ಅನುದಾನ ಹೊಂದಿರುವ

ಎಲ್ಲಾ ಹಾಸ್ಟೆಲ್‌ಗಳು ಸೇರಿದರೆ 1 ಲಕ್ಷದ 63 ಸಾವಿರದ 578 ಮಕ್ಕಳು ಹಾಸ್ಟೆಲ್‌ಗಳಲ್ಲಿದ್ದಾರೆ. Pre-metric ಮಾತ್ರ Post-metric ಬಿಟ್ಟು, ಅವರಿಗೆ ಒಂದು ದಿನಕ್ಕೆ ಒಂದೂವರೆ ರೂಪಾಯಿಯಂತೆ ಊಟದ ವೆಚ್ಚವನ್ನು ಹಾಕಿದರೂ ಸಹ ದಿನಕ್ಕೆ ಸುಮಾರು 24 ಲಕ್ಷ ಚಿಲ್ಲರೆ ರೂಪಾಯಿ ಆಗುತ್ತದೆ. 25 ದಿನಗಳಿಗೆ 61 ಲಕ್ಷ ರೂಪಾಯಿಗಳಾಗುತ್ತದೆ. 9 ತಿಂಗಳಿಗಾದರೆ ಸುಮಾರು ಐದೂವರೆ ಕೋಟಿ ರೂಪಾಯಿಗಳಾಗುತ್ತದೆ. ಬಹುಶಃ ಈ ಐದೂವರೆ ಕೋಟಿ ರೂಪಾಯಿಗಳಿಗಿಂತ ಇನ್ನೂ ಜಾಸ್ತಿ ಇದೆ. ಏಕೆಂದರೆ, ಇದು 2005-06ನೇ ಸಾಲಿನ ವಿಚಾರ ಕಳೆದ 2 ವರ್ಷಗಳಲ್ಲಿ ತಾವು ಹೊಸ ಹಾಸ್ಟೆಲ್‌ಗಳನ್ನು ಕೊಟ್ಟಿದ್ದೀರಿ. ಬಹುಶಃ ಏನಿಲ್ಲವೆಂದರೂ 10 ಕೋಟಿ ರೂಪಾಯಿಗಳಾಗುತ್ತದೆ. ಈ 10 ಕೋಟಿ ರೂಪಾಯಿ ಶಿಕ್ಷಣ ಇಲಾಖೆಯಲ್ಲಿಯೂ ಬಿಲ್ ಆಗುತ್ತಿದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿಯೂ ಬಿಲ್ ಆಗುತ್ತಿದೆ. ಆದರೆ, ಮಗು ಮಾತ್ರ ಒಂದೇ, ಒಂದೇ ಮಗು ಎರಡೆರಡು ಕಡೆ ಊಟ ಮಾಡುತ್ತಿದೆಯೇ? ಹಿಂದೆ ಇದರ ಬಗ್ಗೆ ಸನ್ಮಾನ್ಯ ಹಣಕಾಸು ಸಚಿವರ ಗಮನಕ್ಕೆ ತಂದಿದ್ದೆ. ಆದರೆ, ನನಗೆ ನಂಬಿಕೆ ಇದೆ. ಅದರ ಬಗ್ಗೆ ಬಹುಶಃ ಅವರು ಕ್ರಮ ವಹಿಸಿ ಈ ಹಣ ಏನು ಪೋಲಾಗುತ್ತಿದೆ, ಅದು ತಪ್ಪು ಅರ್ಥವಾಗಿರಬಹುದು, ಮಧ್ಯಾಹ್ನ ಹಾಸ್ಟೆಲ್‌ನಲ್ಲೂ ಅದೇ ಮಗುವಿನ ಹೆಸರಿನಲ್ಲಿ ಬಿಲ್ ಆಗುತ್ತಿದೆ, ಅದೇ ಮಗುವಿನ ಹೆಸರಿನಲ್ಲಿ ಸ್ಕೂಲ್‌ನಲ್ಲೂ ಬಿಲ್ ಆಗುತ್ತಿದೆ. ಆ ಮಗು ಇನ್ನೆಷ್ಟು ದಷ್ಟ ಪುಷ್ಟವಾಗಿರಬೇಕು? ಎಂದು ನಾವು, ನೀವು ಊಹೆ ಮಾಡಿಕೊಳ್ಳಬೇಕಾಗುತ್ತದೆಂದು ಕಾಣುತ್ತದೆ ಅಥವಾ ಯಾರು ದಷ್ಟ ಪುಷ್ಟವಾಗಿದ್ದಾರೆ ಎನ್ನುವುದು ತಮಗೆ ಗೊತ್ತಿದೆ ಎಂದು ಕಾಣುತ್ತದೆ. ಹಾಗಾಗಿ, ಇದರ ಬಗ್ಗೆ ಗಮನ ಹರಿಸಬೇಕು. ಶಿಕ್ಷಣದಲ್ಲಿ ರಾಜಕೀಯ ಮಾಡತಕ್ಕಂಥದ್ದೇನು ಮಾಡುತ್ತಿದ್ದಾರೆ, ದಯವಿಟ್ಟು ಇದು ಸರಿಯಲ್ಲ. ನೀವು ಯಾವುದರಲ್ಲಿಯಾದರು ರಾಜಕೀಯ ಮಾಡಿ, ಆ ಮಕ್ಕಳು ನಿಮಗೇನು ತಪ್ಪು ಮಾಡಿದರು? ಹೋಗಲಿ next time ನೀವು ಯಾವ ಪಾರ್ಟಿಗೆ ಎಂದು ಹೇಳಿದರೆ, ಆ ಪಾರ್ಟಿಗೆ vote ಹಾಕಲು ಹೇಳಿ ಬಿಡುತ್ತೇವೆ. ಇದು ಸರಿಯಲ್ಲ, ನಮಗೆ ಭಾರೀ ನೋವಾಗುತ್ತದೆ. ನಾವು 2 ವರ್ಷಗಳಿಂದ High School, P.U. College ಕೊಡಿ ಎಂದು ಕೇಳುತ್ತಿದ್ದೇವೆ. ಎಲ್ಲದರಲ್ಲೂ ನಮ್ಮನ್ನು ಈ ತರಹ ಕಡೆಗಣಿಸಿದರೆ ಹೇಗೆ? ಯಾವುದೇ ರಸ್ತೆ ಇಲ್ಲದಿದ್ದರೂ ಹೋಗಬಹುದು. ತಾವು ಒಪ್ಪುತ್ತೀರಾ ಎಂದು ಕಾಣುತ್ತದೆ. ಆ ಮಕ್ಕಳಿಗೆ ನಾವು ವಿದ್ಯಾಭ್ಯಾಸದಿಂದ ವಂಚನೆ ಮಾಡಿದರೆ ಈ ಸರ್ಕಾರಕ್ಕೆ ಶ್ರೇಯಸ್ಸು ಬರುತ್ತದೆಯೇ ಎಂಬುದನ್ನು ಅವರು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು).- ಕೃಷ್ಣ ಬೈರೇಗೌಡರು ಶಿಕ್ಷಣ ಕ್ಷೇತ್ರದಲ್ಲಿ ನಾವು ರಾಜಕೀಯ ಮಾಡುತ್ತೇವೆಂದು ಹೇಳಿದರು. ನಾವು ಶಿಕ್ಷಣ ಕ್ಷೇತ್ರದಲ್ಲಿ ರಾಜಕೀಯ ಮಾಡುತ್ತಿಲ್ಲ. ಏಕೆಂದರೆ, ಮೊನ್ನೆ ಸದನದಲ್ಲಿ ಇಲ್ಲದಿರುವ ಸಂದರ್ಭದಲ್ಲಿ, ರೇವಣ್ಣನವರು ಕೊಟ್ಟಿದ್ದಾರೆ ಎಂಬ ಆಪಾದನೆಯನ್ನು ನನ್ನ ಮೇಲೆ ಮಾಡಿದರು. ರಾಯರೆಡ್ಡಿಯವರು ಕೂಗುತ್ತಿದ್ದರು. ರಾಯರೆಡ್ಡಿಯವರ ಕ್ಷೇತ್ರದಲ್ಲಿ ಎಷ್ಟಾಯಿತು ಕೇಳಿ? ಈ ಸರ್ಕಾರದಲ್ಲಿ 12 High School ಮಾಡಿದ್ದಾರೆ. ಅವರ ತಾಲ್ಲೂಕಿನಲ್ಲಿ 50 High School ಆಗಿವೆ. ಬೇಕಾದರೆ check ಮಾಡಲಿ. ಅಂಥ ಸಮಸ್ಯೆ ಏನಾದರೂ ಇದ್ದರೆ ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ. ಯಾವ ತಾಲ್ಲೂಕಿಗೆ ಅನ್ಯಾಯವಾಗಿದೆ ಅದನ್ನು ಸರಿಪಡಿಸುತ್ತೇನೆಂದು ಮೊನ್ನೆ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳೂ ಹೇಳಿದ್ದಾರೆ. ನಿನ್ನೆಯೂ ಸಹ ಮಾನ್ಯ ಧರ್ಮಸಿಂಗ್ ಖರ್ಗೆಯವರಿಗೆ ಸಹ ನಿಮ್ಮ ಪಾರ್ಟಿಯವರದು ಯಾವುದಾದರೂ ಇದ್ದರೆ ಕೊಡಿ ಎಂದು ಹೇಳಿದ್ದಾರೆ. ನಿನ್ನೆ ಏನು ಆರ್ಡರ್ ಆಯಿತು, ಅದನ್ನು ಮಾನ್ಯ ಮುಖ್ಯಮಂತ್ರಿಗಳೇ ತಡೆಹಿಡಿದಿದ್ದಾರೆ, ಅದರಲ್ಲಿ ಕೆಲವು ಕಡೆ ಹೆಚ್ಚು ಕಡಿಮೇ 5 ರಿಂದ 10 high schools ಆಗಿದ್ದರೆ ಅದನ್ನು ಸರಿಪಡಿಸುವ ಪ್ರಾಮಾಣಿಕ ಪ್ರಯತ್ನವನ್ನು ಉಪ ಮುಖ್ಯಮಂತ್ರಿಗಳು ಮತ್ತು ಹೊರಟ್ಟಿಯವರು ಮಾಡುತ್ತಾರೆ.

ಶ್ರೀ ಎನ್.ಎಸ್. ಬೋಸರಾಜು.- ರಾಯರೆಡ್ಡಿಯವರ ಉದಾಹರಣೆ ಕೊಟ್ಟಿರಿ, ಅದೇ ರೀತಿ ಎಲ್ಲ ಕಾಲದಲ್ಲಿಯೂ ಎಲ್ಲದರಲ್ಲೂ ಆಗುವುದಿಲ್ಲ. ನಾವು ಹೇಳುವುದೇನೆಂದರೆ ವೈಜ್ಞಾನಿಕವಾಗಿ ನಂಜುಂಡಪ್ಪ ವರದಿಯನ್ನು ಹಿಂದಿನ ಯಾವುದೇ ಸರ್ಕಾರ implement ಮಾಡಿಲ್ಲ, ನಾವು implement ಮಾಡುತ್ತಿದ್ದೇವೆಂದು ಹೇಳುವ ತಮ್ಮ ಸರ್ಕಾರದವರು ಸರಿಯಾದ ರೀತಿಯಲ್ಲಿ ರಾಯಚೂರು, ಗುಲಬರ್ಗಾ, ಕೋಲಾರ ಜಿಲ್ಲೆಗಳಲ್ಲಿ ಶಿಕ್ಷಣಕ್ಕೆ ತೊಂದರೆಯಾಗುತ್ತದೆ. ಅದರ ಬಗ್ಗೆ ಗಮನಹರಿಸಬೇಕು. ಈಗಾಗಲೇ record ನಲ್ಲಿದೆ. ಆ ಜಿಲ್ಲೆಗಳಲ್ಲಿ ಯಾವ ರೀತಿ ಇದನ್ನು ಸರಿಪಡಿಸಬೇಕು. ಅತ್ಯಂತ ಹಿಂದುಳಿದ ತಾಲ್ಲೂಕುಗಳನ್ನು ನಾವು ಯಾವ ರೀತಿಯಾಗಿ support ಮಾಡಬೇಕೆಂದು ಯೋಚಿಸುವುದು ಬಿಟ್ಟು degree college ಅನ್ನು ಮಂಜೂರು ಮಾಡಿದೆವು ಎಂದು ಹೇಳಿದರೆ ಹೇಗೆ. ಈಗ ನೋಡಿದರೆ ನೀವು ಮೊದಲು ಮಂಜೂರು ಮಾಡಿದ ತಾಲ್ಲೂಕುಗಳಿಗೆ ಪುನಃ ಮಂಜೂರು ಮಾಡಿದ್ದೀರಿ. ಈ ವರ್ಷದಲ್ಲಿ ಸಿಂಧನೂರಿಗೆ ಒಂದೂ ಸಹ ಶಾಲೆ ಮಂಜೂರು ಮಾಡಿಲ್ಲ. ಮಾನ್ವಿಯಲ್ಲೂ ಒಂದೂ ಕೊಟ್ಟಿಲ್ಲ. ನಮ್ಮ ಕಡೆಗೂ ಮಂಜೂರು ಮಾಡಬೇಕೆಂದು ನಾವೂ ಸಹ ಕೇಳಿದ್ದೆವು,

ಸಾವಿರಾರು ಮಕ್ಕಳು ಇವತ್ತು ಕಲಿಯಲಿಕ್ಕೆ ಜಾಗವಿಲ್ಲದೇ ಬೀದಿಯಲ್ಲಿದ್ದಾರೆ, Degree college ನಲ್ಲಿ ಓದಲಿಕ್ಕೆ ಜಾಗವಿಲ್ಲದೇ 30 ಕಿ.ಮೀ.ನಷ್ಟು ದೂರವಿರುವ ಕಾಲೇಜುಗಳಲ್ಲಿ ಓದುತ್ತಿದ್ದಾರೆ. ಒಂದು ತಿಂಗಳ ಹಿಂದೆ ಮಂಜೂರು ಮಾಡಿದ್ದಂಥ ತಾಲ್ಲೂಕಿಗೆ ಪುನಃ ಮಂಜೂರು ಮಾಡಿದ್ದಾರೆ. ರಾಯರೆಡ್ಡಿಯವರದು ಹೇಳಿದರೆ ರೇವಣ್ಣನವರದೂ ಹೇಳಬೇಕಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ.– ನಾನು ಬಜೆಟ್ ಮಂಡನೆ ಆದ ತಕ್ಷಣವೇ ಶಿವಮೊಗ್ಗದಲ್ಲಿ ಪತ್ರಿಕಾ ಸ್ನೇಹಿತರು ನನ್ನನ್ನು ಕೇಳಿದಂಥ ಸಂದರ್ಭದಲ್ಲಿ ನನ್ನ ವೈಯಕ್ತಿಕ ಅಭಿಪ್ರಾಯವನ್ನು ಹೇಳಿದೆ. ಶಿಕ್ಷಣ ಇಲಾಖೆಗೆ ಇವತ್ತು ಹೆಚ್ಚು ಒತ್ತನ್ನು ರಾಜ್ಯದಲ್ಲಿ ಕೊಡಬೇಕು. ಬೇಕಾದರೆ, ಯಾವುದೇ ಇಲಾಖೆಗೆ ಒತ್ತು ಕೊಡದಿದ್ದರೂ ಬೇಕಾದರೆ ನನ್ನ ಇಲಾಖೆಯಿಂದಲೇ 10% ಹಣವನ್ನು ಕಡಿತ ಮಾಡಿ ಶಿಕ್ಷಣಕ್ಕೆ ಕೊಡಿ. ಬೆಳಗ್ಗೆ ಮಾನ್ಯ ಮಹದೇವಣ್ಣನವರು ಮಾತನಾಡುತ್ತಾ ಪರಿಶಿಷ್ಟ ಸಮಾಜಕ್ಕೆ ಇಂಜಿನಿಯರಿಂಗ್, ಮೆಡಿಕಲ್ ಸೀಟ್ ಸಿಗುವುದಿಲ್ಲವೆಂದು ಹೇಳಿದರು. ಉದಾಹರಣೆಗೆ ಹೇಳುವುದಾದರೆ, 1934ನೇ ಇಸವಿಯಲ್ಲಿ ಮೈಸೂರು ಮಹಾರಾಜರು ಕೃಷ್ಣರಾಜೇಂದ್ರ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸಿದ್ದರು. ಆ ಇಂಜಿನಿಯರಿಂಗ್ ಕಾಲೇಜಿನಲ್ಲಿ textile, design engineering, survey ಈ ಮೂರು course ಗಳಿದ್ದವು. ಆ ಮೂರು course ಗಳಿಗೂ ಯಾರೂ ಸೇರಬಾರದೆನ್ನುವ course ಗಳು ಅವಾಗಿದ್ದವು. ಇಲ್ಲಿಯವರೆಗೆ, Technical ಇಲಾಖೆಯಲ್ಲಿ ಸುಮಾರು 170 ಕೋಟಿ ರೂಪಾಯಿಗಳನ್ನು ಯಾವ್ಯಾವುದಕ್ಕೆ ಕೊಟ್ಟಿದ್ದಾರೆನ್ನುವುದನ್ನು ಪರಿಶೀಲನೆ ಮಾಡಬಹುದು. ಆದರೆ, ಆ ಸರ್ಕಾರಿ ಕಾಲೇಜಿಗೆ 10 ರೂ. ಸಹ ಕೊಟ್ಟಿಲ್ಲ. ಅಂದರೆ, ಯಾವ ಪರಿಸ್ಥಿತಿ ಇದೆ ಎಂಬುದನ್ನು ಲೆಕ್ಕ ಹಾಕಿ. ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ನಮ್ಮ Higher Education Minister ಸೇರಿ ಮೊನ್ನೆ 9 Engineering college ಮತ್ತು ಕೃಷ್ಣರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿಗೆ 14 ಹೊಸ course ಗಳನ್ನು ಕೊಡಿಸುತ್ತಿದ್ದೇವೆ. ಕಟ್ಟಡಗೋಸ್ಕರ ಮಾನ್ಯ ಉಪ ಮುಖ್ಯಮಂತ್ರಿಗಳು ಈ ವರ್ಷ ಸುಮಾರು 45 ಕೋಟಿ ರೂ.ಗಳಷ್ಟು ಹಣವನ್ನು ಮಂಜೂರಾತಿ ಮಾಡಿದ್ದಾರೆ. ಏಕೆಂದರೆ, ಶಿಕ್ಷಣ ಇಲಾಖೆಗೆ ಸರ್ಕಾರ ಯಾವ ರೀತಿ ಒತ್ತು ಕೊಡುತ್ತಿದೆ ಎಂಬುದನ್ನು ಹೇಳುತ್ತಿದ್ದೇನೆ. 1000 ಪ್ರೌಢ ಶಾಲೆಗಳನ್ನು ಮಂಜೂರು ಮಾಡುತ್ತಿದ್ದೇವೆ. 104 ಕಾಲೇಜುಗಳಲ್ಲಿ ಸುಮಾರು 60 ಕ್ಷೇತ್ರಗಳು ಕಾಂಗ್ರೆಸ್ ಕ್ಷೇತ್ರಗಳಲ್ಲೇ ಬರುತ್ತವೆ. ಬೋಸರಾಜುರವರು ಹೇಳುತ್ತಿದ್ದಾರೆ, ಆ ಕ್ಷೇತ್ರ, ಈ ಕ್ಷೇತ್ರ ಎಂದಲ್ಲ. ನಿನ್ನೆ ವಿಧಾನ ಪರಿಷತ್ತಿನಲ್ಲಿ ಶತಮಾನ ಸಂಭ್ರಮ ಆಚರಿಸಿದರು. ವಿಧಾನ ಸಭೆಗೂ 100

ವರ್ಷವಾಗುತ್ತದೆ ಎಂದು ಮೊನ್ನೆ ಮೀಟಿಂಗ್‌ನಲ್ಲಿ ರಮೇಶ್ ಕುಮಾರ್, ಖರ್ಗೆಯವರು ಹೇಳಿದರು. ಉಪ ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತೇನೆ. ಯಾವ್ಯಾವ ಊರಿನಲ್ಲಿ, ತಾಲ್ಲೂಕಿನಲ್ಲಿ ಎಲ್ಲಿ ನಿಜವಾಗಿ admission ಇದೆ, P.U.C. ಯಿಂದ BA, BSc., B.Com.ಗೆ ನಮ್ಮಲ್ಲಿ 11% admission ಇದೆ. ಹಳ್ಳಿಯ ರೈತರ ಮಕ್ಕಳು ಖಾಸಗಿಯವರ ಜೊತೆ ವಿದ್ಯಾಭ್ಯಾಸ ಮಾಡುವುದಕ್ಕಾಗುತ್ತಿಲ್ಲ. ಒಂದು B.A. seat ತೆಗೆದುಕೊಳ್ಳಬೇಕಾದರೆ 15000 ರೂ. ಕೊಡಬೇಕು. BBM seat ತೆಗೆದುಕೊಳ್ಳಬೇಕಾದರೆ 1 ಲಕ್ಷ ರೂ. ಕೊಡಬೇಕು. MBA seat ತೆಗೆದುಕೊಳ್ಳಬೇಕಾದರೆ 2 ಲಕ್ಷ ರೂ. ಕೊಡಬೇಕು. ಆ ಪರಿಸ್ಥಿತಿ ಇದೆ. ಕೃಷ್ಣ ಬೈರೇಗೌಡರು ನಿಜಕ್ಕೂ ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಆ ಬಗ್ಗೆ ನಾನು ಸನ್ಮಾನ್ಯ ಉಪ ಮುಖ್ಯಮಂತ್ರಿಗಳಿಗೆ, ಮುಖ್ಯಮಂತ್ರಿಗಳಿಗೂ, ಶಿಕ್ಷಣ ಸಚಿವರಿಗೆ ಮನವಿ ಮಾಡುತ್ತೇನೆ. ಈ ರಾಜ್ಯದಲ್ಲಿ ಒಂದು ಸಲ ಬೇಕಾದರೆ ಎಲ್ಲಾ ಇಲಾಖೆಯಲ್ಲೂ 10% ಹಣವನ್ನು ಕಡಿತ ಮಾಡಿ, Higher education ಸಲುವಾಗಿ 100 ಕಾಲೇಜು ಕೊಡುವಾಗ 50 ಕೋಟಿ ರೂ.ಗಳನ್ನು ನಮ್ಮ ಲೋಕೋಪಯೋಗಿ ಇಲಾಖೆಯಲ್ಲಿ ಕಡಿತ ಮಾಡುತ್ತೇವೆಂದರು. ನಾನು ಮಾಡಿ ಎಂದು ಹೇಳಿದೆ. ಕೃಷ್ಣ ಬೈರೇಗೌಡರು ಏನು ಹೇಳುತ್ತಿದ್ದಾರೆ, ಅದನ್ನು ಸರಿಪಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಪಡುತ್ತೇನೆ.

ಶ್ರೀ ಎನ್.ಎಸ್. ಬೋಸರಾಜು.– ಎಲ್ಲಾ ಕಡೆ ಪರಿಸ್ಥಿತಿ ಸುಧಾರಿಸಬೇಕಾದರೆ, ವೈಜ್ಞಾನಿಕವಾಗಿ 224 ಕ್ಷೇತ್ರಗಳಲ್ಲೂ ನೋಡಿ ಮಾಡಬೇಕಾಗುತ್ತದೆ. ಯಾರೋ ಕೇಳಿದ್ದಾರೆ ಅವರಿಗೆ ಮಾತ್ರ ಮಂಜೂರು ಮಾಡೋಣವೆಂದರೆ ಆಗುವುದಿಲ್ಲ. ರಾಜ್ಯದ ಪರಿಸ್ಥಿತಿ ನೋಡಬೇಕಾಗುತ್ತದೆ.

(ಗೊಂದಲ)

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್.– ಕೇವಲ ರಾಯರೆಡ್ಡಿಯವರ ಸಮಸ್ಯೆ ನೋಡುವುದಲ್ಲ, ಗುಲ್ಬರ್ಗ ಕಡೆಗೂ ಸ್ವಲ್ಪ ಗಮನಹರಿಸಿ.

(ಗೊಂದಲ)

ಶ್ರೀ ಎನ್.ಎಸ್. ಬೋಸರಾಜು.– ಇದನ್ನು ಸರಿಪಡಿಸಬೇಕಾದರೆ ವೈಜ್ಞಾನಿಕವಾಗಿ ಮಾಡಬೇಕಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ.– 224 ಕ್ಷೇತ್ರಗಳಿಗೂ ಮಾಡಿ, ನಮ್ಮದೇನೂ ಅಭ್ಯಂತರವಿಲ್ಲ. ಉದಾಹರಣೆಗೆ ಹೇಳುವುದಾದರೆ, ನಿನ್ನೆ ರಾಯರೆಡ್ಡಿಯವರು ಭಾಷಣ ಮಾಡುತ್ತಿದ್ದರು. ನಾನು ಕೇಳಿದೆ. ವಾಟಾಳ್ ನಾಗರಾಜ್‌ರವರೆ, ರಮೇಶ್ ಕುಮಾರ್‌ರವರೆ, ಆ ತಾಲ್ಲೂಕಿನಲ್ಲಿ

ಒಂದು ಹಳ್ಳಿಯಲ್ಲೂ ಟಾರ್ ಹಾಕಬೇಕಾದ PWD road ಯಾವುದೂ ಇಲ್ಲ. ಈಗ ಐದೂವರೆ ಮೀಟರ್ ಅಗಲ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಈಗ ಅಗಲ ಮಾಡಿಸುತ್ತಿದ್ದೇವೆ. ಅಗಲ ಮಾಡುವುದಕ್ಕೆ ಹಣ ಕೊಡಬೇಕು. ಬೇಕಾದರೆ ಒಂದು ಸದನ ಸಮಿತಿಯನ್ನು ಕಳುಹಿಸಿ. ರಾಯರೆಡ್ಡಿಯವರ ಕ್ಷೇತ್ರದಲ್ಲಿ ಒಂದು ಕಿ.ಮೀ. ಟಾರ್ ಹಾಕುವ ರಸ್ತೆ ಉಳಿದಿದ್ದರೆ ಹೇಳಿ.

(ಗೊಂದಲ)

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್.– ರೇವಣ್ಣನವರು ಕೇವಲ ರಾಯರೆಡ್ಡಿಯವರ ಬಗ್ಗೆ ನೋಡಬಾರದು. ಇಲ್ಲಿ ಬೇರೆ ಕ್ಷೇತ್ರಗಳು ಕೂಡ ಇವೆ. ಅಲ್ಲಿ road up gradation ಇಲ್ಲ, high school, college ಇಲ್ಲ ಏನೂ ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.– ರಾಯರೆಡ್ಡಿಯವರ ಕ್ಷೇತ್ರ ನೋಡಿ ಒಂದು ಅಂಗುಲ ಅಲ್ಲಿ ಏನಾದರೂ ಟಾರ್ ಹಾಕದ ರಸ್ತೆ ಇಲ್ಲ ಎಂದು ಹೇಳುತ್ತಿದ್ದಾರೆ. ರಸ್ತೆಗೆಲ್ಲ ಟಾರ್ ಹಾಕಿಸಿದ್ದೇವೆಂದು ಹೇಳಿದರು. ಆದರೆ, ನಮ್ಮ ಪರಿಸ್ಥಿತಿ ಏನು? ನಾವು ಸುಮ್ಮನೆ ಕುಳಿತಿದ್ದೇವೆಂದು ನಮ್ಮ ಕ್ಷೇತ್ರಗಳತ್ತ ನೋಡದಿರುವುದು ನ್ಯಾಯವೇ? ಇದು ಸರಿಯಾದ ಕ್ರಮವಲ್ಲ. ನೀವು ಸ್ಪಷ್ಟವಾಗಿ ಎಲ್ಲಾ ಕ್ಷೇತ್ರಗಳನ್ನೂ ಒಂದೇ ರೀತಿ ನೋಡಬೇಕು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ.– ಚಾಮರಾಜನಗರ ನಂಜುಂಡಪ್ಪ ವರದಿ ಪ್ರಕಾರ ಹಿಂದುಳಿದ ತಾಲ್ಲೂಕು ಅಲ್ಲ. ಚಾಮರಾಜನಗರ ನಂಜುಂಡಪ್ಪ ವರದಿಯಲ್ಲಿ ಸೇರಿಲ್ಲ. ಅದಕ್ಕೋಸ್ಕರ ಅಲ್ಲಿ ಮಾಡಲಿಕ್ಕೆ ಆಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್.– ಚಾಮರಾಜನಗರ ನಂಜುಂಡಪ್ಪ ವರದಿಯಲ್ಲಿ ಸೇರಿದೆ. ಅದು ನಂಜುಂಡಪ್ಪ ವರದಿಗೆ ಸೇರಿದರೂ ಅಷ್ಟೆ, ಬೊಮ್ಮಪ್ಪನವರ ವರದಿಗೂ ಸೇರಿದರೂ ಅಷ್ಟೆ. ಏನಾದರೂ ರೇವಣ್ಣನವರ ವರದಿಗೆ ಸೇರಿದರೆ ಅನುಕೂಲವಾಗಬಹುದು.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್.– ಮಾನ್ಯ ರೇವಣ್ಣನವರು ಬಹಳ ಉದಾರವಾದಿಗಳಾಗಿ ಇವತ್ತು ಬಂದಿದ್ದಾರೆ, ಅದಕ್ಕೆ ಸಂತೋಷ, ಮಾನ್ಯ ಹೊರಟ್ಟಿಯವರ ಹತ್ತಿರ ಮಾತನಾಡುವಂಥ ಸಂದರ್ಭದಲ್ಲಿ ನಮಗೆ ಏಕೆ ಹೈಸ್ಕೂಲ್ ಕೊಟ್ಟಿಲ್ಲವೆಂದರೆ, ರೇವಣ್ಣನವರು ಮಾಡಿದರು ನಾನೇನು ಮಾಡಲಿ ಎಂದು ಹೇಳುತ್ತಾರೆ. ನಾನೇನು ಹೇಳುತ್ತಿಲ್ಲ, ನಿಮ್ಮ ಸರ್ಕಾರದಲ್ಲಿರುವ

ಒಬ್ಬ ಮಂತ್ರಿಗಳು ಈ ಮಾತನ್ನು ಹೇಳಬೇಕಾಗಿದ್ದರೆ, ನಾವು ನಂಬಬಾರದೇ ರೇವಣ್ಣನವರೇ ಮಾಡಿದರು ಎಂದು ಹೇಳುತ್ತಾರೆ. ಸದನದಲ್ಲಿ ಅವರು ಹೇಳಿಲ್ಲ ಅವರು ನಮಗೆ ಖಾಸಗಿಯಾಗಿ ಹೇಳಿದ್ದಾರೆ.

ಚೇರ್ಮನ್.– ಈ ಬಗ್ಗೆ ಚರ್ಚೆ ಬೇಡ. ಮತ್ತೊಂದು ಸಲ ಇದರ ಬಗ್ಗೆ ಮಾತನಾಡೋಣ ಅವರಿಗೆ ತಮ್ಮ ಭಾಷಣ ಮುಗಿಸಲಿಕ್ಕೆ ಅವಕಾಶ ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ.– ನಾನು ಇದರ ಬಗ್ಗೆ ವಿವರಣೆ ಕೊಡಬೇಕಾಗುತ್ತದೆ.

ಶ್ರೀ ಬಿ.ಆರ್. ಪಾಟೀಲ್.– ರೆಕಾರ್ಡ್‌ನಲ್ಲಿರಲಿ.

ಶ್ರೀ ಹೆಚ್.ಸಿ. ಬಾಲಕೃಷ್ಣ.– ಪಾಟೀಲರೆ ಸುಮ್ಮನೆ ಆಪಾದನೆ ಮಾಡಬಾರದು, ಎಲ್ಲೋ ಬೀದಿಯಲ್ಲಿ ನಿಂತುಕೊಂಡು ಅವರು ಹೇಳಿದರು, ಇವರು ಹೇಳಿದರು ಎಂದು ಅಸೆಂಬ್ಲಿಯಲ್ಲಿ ಹೇಳುವುದು ಚೆನ್ನಾಗಿರುವುದಿಲ್ಲ. ಅವರು ಹಿರಿಯ ಸದಸ್ಯರು ಇದ್ದಾರೆ, ಹೀಗಾಗಿ ಆ ರೀತಿ ಹೇಳುವುದು ಗೌರವ ತರುವುದಿಲ್ಲ.

ಶ್ರೀ ಬಿ.ಆರ್. ಪಾಟೀಲ್.– ಹಾಗಿದ್ದರೆ, ತಾವು ಸೀನಿಯರ್ ಮಿನಿಸ್ಟರ್ ಆಗಿ ಸರ್ಕಾರದ ಪರವಾಗಿ ಬಹಳ ಸ್ಪಷ್ಟವಾದ ಉತ್ತರವನ್ನು ಕೊಡುತ್ತಿದ್ದೀರಿ. ನಾವು ಎಲ್ಲಾ ಕಡೆ ಸರಿಪಡಿಸುತ್ತೇವೆ. ಎಲ್ಲೆಲ್ಲಿ ಕೊಟ್ಟಿಲ್ಲ ಆ ಕಡೆಗೆ ಕೊಡುತ್ತೇವೆ. ಅಂದರೆ ಆ ಜವಾಬ್ದಾರಿ ತಮಗೆ ಇದೆ ಎಂದು ಅರ್ಥವಾಯಿತಲ್ಲವೆ? ಹೀಗಾಗಿ ಸರಿಪಡಿಸುತ್ತೇನೆಂದು ಹೇಳಿದಿರಿ, ಸರಿಪಡಿಸಿ.

ಡಾ. ಎಂ.ಸಿ. ಸುಧಾಕರ್.– ಮುಂದೆ ಕುಳಿತವರು ಮಾತ್ರ ಮಾತನಾಡಬೇಕೇ ಹಿಂದೆ ಕುಳಿತವರಿಗೆ ಅವಕಾಶವಿಲ್ಲವೇ.

ಶ್ರೀ ಹೆಚ್.ಡಿ. ರೇವಣ್ಣ.– ಬಿ.ಆರ್. ಪಾಟೀಲ್‌ರವರು ನಾನೇನು ಮಾಡಿದೆನೆಂದು ಒಂದು ಮಾತು ಹೇಳಿದರು. ನಾನು ಆ ರೀತಿ ಏನು ಮಾಡಿಲ್ಲ, ಏಕೆಂದರೆ, ಶಾಲೆ ಕೊಡಬೇಕಾದರೆ, ನನಗೂ ಅದಕ್ಕೂ ಸಂಬಂಧವಿಲ್ಲ, ಶಿಕ್ಷಣ ಸಚಿವರು ಇದ್ದಾರೆ, ಅವರು ಕೊಡುತ್ತಾರೆ. ಹೈಯರ್ ಎಜುಕೇಷನ್ ಇರಬಹುದು. ನನ್ನ ವಾದ ಏನೆಂದರೆ, ಈ ರಾಜ್ಯದಲ್ಲಿ ಕಳೆದ 15 ವರ್ಷಗಳಿಂದ ಶಾಲಾ–ಕಾಲೇಜುಗಳನ್ನು ಕೊಟ್ಟಿಲ್ಲ. ಅದನ್ನು ಕೊಡಿ ಎನ್ನುವ ವಾದ ಬಿಟ್ಟರೆ, ಆ ಕ್ಷೇತ್ರ, ಈ ಕ್ಷೇತ್ರ ಎಂದಲ್ಲ. ಎಲ್ಲಾ 224 ಕ್ಷೇತ್ರಗಳಲ್ಲಿ ನಮ್ಮ ಮಕ್ಕಳು ವಿದ್ಯಾಭ್ಯಾಸ ಕಲಿಯಬೇಕೆನ್ನುವುದು ಬಿಟ್ಟರೆ, ಬೇರೆ ಏನೂ ಇಲ್ಲ. ಅವರು ಮಂತ್ರಿಗಳು ಆ ರೀತಿ ಹೇಳುತ್ತಾರೆಂದು ಹೇಳಿದರು. ಮಂತ್ರಿಗಳು ಸದನದಲ್ಲಿ ಹೇಳಿ ಒಪ್ಪಿದ್ದರೆ ನಾನು ಹೇಳುತ್ತಿದ್ದೆ. ಹೀಗಾಗಿ ಮಾನ್ಯ ಬಿ.ಆರ್. ಪಾಟೀಲ್‌ರವರು ಆ ರೀತಿ

ಹೇಳುವುದು ತಪ್ಪು, ದಯಮಾಡಿ ಅದನ್ನು ಕಡತದಿಂದ ತೆಗೆಸಬೇಕೆಂದು ಮನವಿ ಮಾಡುತ್ತೇನೆ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್.– ಬೇರೆ ಬೇರೆ ಸಚಿವರು ಕೂಡ ಈ ವಿಷಯಗಳನ್ನು ಹೇಳಿದ್ದಾರೆ.

ಚೇರ್ಮನ್.– ಅವರು ಮುಗಿಸಲಿ ಬಿಡಿ, ಕುಳಿತುಕೊಳ್ಳಿ. ನಿಮ್ಮ ಹೆಸರು ಇಲ್ಲಿ ಇದೆ, ನಂತರ ನೀವು ಮಾತನಾಡುವಾಗ ಹೇಳಬೇಕು.

ಡಾ|| ಎಂ.ಸಿ. ಸುಧಾಕರ್.– ಸನ್ಮಾನ್ಯ ಸದಸ್ಯರುಗಳು, ಸಚಿವರು ರೇವಣ್ಣನವರ ಮೇಲೆ ಹೇಳಿದರು, ಅವರು ಇವರ ಮೇಲೆ ಹೇಳಿದರು ಎಂದು ಇಲ್ಲಿ ಬಹಳಷ್ಟು ಚರ್ಚೆಯಾಗುತ್ತಿದೆ. ನಾನು ತಮ್ಮಲ್ಲಿ ವಿನಂತಿ ಮಾಡುವುದು ಇಷ್ಟೆ, ಸರ್ಕಾರಕ್ಕೆ 2005ಕ್ಕಿಂತ ಮುಂಚೆ ಯಾವ್ಯಾವ ಕ್ಷೇತ್ರದಲ್ಲಿ ಎಷ್ಟೆಷ್ಟು ಹೈಸ್ಕೂಲ್ ಇತ್ತು, ಕಾಲೇಜ್ ಇತ್ತು ಎನ್ನುವುದರ ಮಾಹಿತಿ ಕೊಡಬೇಕು. ನಂತರ 2005–06 ರಲ್ಲಿ ಯಾವ್ಯಾವ ಕ್ಷೇತ್ರಕ್ಕೆ ಕೊಟ್ಟಿದ್ದಾರೆ, ನಂತರ 2006–07 ರಲ್ಲಿ ಎಷ್ಟೆಷ್ಟು ಕೊಟ್ಟಿದ್ದಾರೆ, 2007–08 ರಲ್ಲಿ ಎಷ್ಟು ಕೊಟ್ಟಿದ್ದಾರೆನ್ನುವ ಮಾಹಿತಿಯನ್ನು ದಯವಿಟ್ಟು ಮಂಡಿಸಲಿ. ಇವತ್ತು ಪ್ರತಿಯೊಂದಕ್ಕೂ ನಂಜುಂಡಪ್ಪನವರ ವರದಿ ಎಂದು ಹೇಳುತ್ತಾರೆ, ನಾನು ಪಟ್ಟಿಗಳನ್ನು ಗಮನಿಸಿದ್ದೇನೆ. ನಮ್ಮ ಕ್ಷೇತ್ರದಲ್ಲಿ ವಿದ್ಯಾಭ್ಯಾಸ ಮಾಡುವ ಹುಡುಗರು ಯಾರು ಇಲ್ಲವೆ ? ನಮ್ಮ ಕ್ಷೇತ್ರದಲ್ಲಿ ಇರುವುದು ಕೇವಲ 6–7 ಹೈಸ್ಕೂಲ್ ಮಾತ್ರ. ಕೆಲವು ಕ್ಷೇತ್ರದಲ್ಲಿ 20–30 ಇವೆ. ಮಾತನಾಡಿದರೆ ನಂಜುಂಡಪ್ಪನವರ ವರದಿ ಎಂದು ಹೇಳುತ್ತಾರೆ. ಇದಕ್ಕೆ ಅರ್ಥವಿಲ್ಲವೇ ? ದಯವಿಟ್ಟು, ಎಲ್ಲಾ ಸದಸ್ಯರಿಗೆ ಇದರ ಬಗ್ಗೆ ಮಾಹಿತಿ ಕೊಡಬೇಕು. ನಾವು ಸುಮ್ಮನೆ ಇದ್ದೇವೆಂದು ಅವರು ಇಷ್ಟ ಬಂದ ಹಾಗೆ ಮಾಡುವುದಲ್ಲ.

ಚೇರ್ಮನ್ :– ಆಯಿತು ಬಿಡಿ, ನೀವು ಮಾತನಾಡುವಾಗ ಹೇಳಿ. ಕಾರಜೋಳ್ ರವರೆ, ತಾವು ಮುಗಿಸಿ.

ಶ್ರೀ ಗೋವಿಂದ ಎಂ. ಕಾರಜೋಳ್ :– ಮಾನ್ಯ ಬೋಸರಾಜುರವರು ಧರ್ಮಸಿಂಗ್ ರವರ ಸರ್ಕಾರದಲ್ಲಿ ಪೊಲಿಟಿಕಲ್ ಸೆಕ್ರೆಟರಿಯಾಗಿದ್ದರು. ಇವತ್ತು ಅವರು ಮಾತನಾಡುವಾಗ ಹೇಳಿದರು. ಉತ್ತರ ಕರ್ನಾಟಕದ ಅಭಿವೃದ್ಧಿಯಾಗಿಲ್ಲ, ನಂಜುಂಡಪ್ಪನವರ ವರದಿಯಾಧಾರದ ಮೇಲೆ ಇವತ್ತು ನೀವು ಮಾಡಿಲ್ಲ ಎಂದರು. ಬಹಳ ಸಂತೋಷದ ಸಂಗತಿ. ಏಕೆಂದರೆ, ಇವತ್ತು ಅವರು ಇಷ್ಟೊಂದು ಕಳಕಳಿಯನ್ನು ವ್ಯಕ್ತ ಮಾಡಿದ್ದಕ್ಕೆ ಅವರಿಗೆ ಧನ್ಯವಾದಗಳನ್ನು

ಅರ್ಪಿಸುತ್ತೇನೆ. 2004-05 ಮತ್ತು 2005-06ನೇ ಸಾಲಿನಲ್ಲಿ ಸರ್ಕಾರಿ ಹೈಸ್ಕೂಲ್‌ಗಳನ್ನು ಮಂಜೂರು ಮಾಡಿದರು. ಸರ್ಕಾರಿ ವಸತಿ ನಿಲಯಗಳನ್ನು ಮಂಜೂರು ಮಾಡಿದರು. ನಾನು ಆವತ್ತು ಪ್ರತಿಪಕ್ಷದಲ್ಲಿದ್ದೆ. ಮಾನ್ಯ ಯಡಿಯೂರಪ್ಪನವರು ಪ್ರತಿಪಕ್ಷದ ನಾಯಕರು, ನಾನು ಉಪ ನಾಯಕನಾಗಿದ್ದೆ. ನಾನೊಂದು ಹತ್ತು ಸಾರಿ ಪತ್ರ ಕೊಟ್ಟಿರಬಹುದು. ಒಂದು ಹೈಸ್ಕೂಲ್ ಕೊಡಿ, ಒಂದು ಹಾಸ್ಟೆಲ್ ಕೊಡಿ, ಎಂದು ಕೇಳಿದ್ದಕ್ಕೆ ಅವರೂ ಒಂದನ್ನೂ ಮಂಜೂರು ಮಾಡಲಿಲ್ಲ. ನಾನು ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಾಗ ಮಂಜೂರು ಮಾಡಿ ಎಂದು ಬರೆದು ಸಹಿ ಮಾಡಿದ್ದನ್ನು ತೆಗೆದುಕೊಂಡು ಹೋಗಿ ಬೋಸರಾಜುರವರ ಕೈಯಲ್ಲಿ ಕೊಟ್ಟೆ. ಆದರೆ ಒಂದೂ ಅಗಲಿಲ್ಲ. ಏಕೆ ಈ ಮಾತುಗಳನ್ನು ಹೇಳುತ್ತೇನೆಂದರೆ, ಎಲ್ಲಾ ಸಂದರ್ಭದಲ್ಲಿ ಎಲ್ಲರೂ ಆಡಳಿತ ನಡೆಸಿದಂಥವರು ಪಕ್ಷಪಾತ ಮಾಡಿದ್ದಾರೆ. ಅದಕ್ಕೆ ಬೋಸರಾಜುರವರಿಗೆ ನಾನೇನು ನೆನಪು ಮಾಡಿಕೊಡುತ್ತೇನೆಂದರೆ, ನಾನು ಎಷ್ಟು ಸಾರಿ ಅವರನ್ನು ಭೇಟಿಯಾಗಿದ್ದೆ ಎನ್ನುವುದನ್ನು ನೆನಪು ಮಾಡಿಕೊಡಲಿಕ್ಕೆ ಹೇಳಿದೆ.

(ಗೊಂದಲ)

ಚೇರ್ಮನ್ :- ಆಯಿತು ಬಿಡಿ ಸಾರ್, ಕೃಷ್ಣ ಬೈರೇಗೌಡರವರೆ ತಾವು ಮುಗಿಸಿ.

(ಗೊಂದಲ)

ಶ್ರೀ ಸಿದ್ದು ಕಲ್ಲಪ್ಪ ಸಾವದಿ :- ಕಾಂಗ್ರೆಸ್‌ನವರು ಕೊಟ್ಟಿಲ್ಲ, ಕೊಟ್ಟಷ್ಟು ಅವರೇ ತೆಗೆದುಕೊಂಡಿದ್ದಾರೆ. ಬೇರೆಯವರದ್ದು ಒಂದೂ ಅವರು ಕೊಟ್ಟಿಲ್ಲ.

(ಗೊಂದಲ)

ಚೇರ್ಮನ್ :- ಸಾಕು ಎಲ್ಲರೂ ಕುಳಿತುಕೊಳ್ಳಿ, ನೀವು ಮುಗಿಸಿ. ನೀವು ಯಾರಿಗೂ ಯೀಲ್ಡ್ ಆಗುವುದಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ :- ಶಿಕ್ಷಣ ವಿಷಯದಲ್ಲಿ ಈ ರೀತಿಯಾಗಿ ತಾರತಮ್ಯ ಮಾಡುವುದು ಸರಿಯಲ್ಲ. ಹೀಗಾಗಿ ಇದರಲ್ಲಿ ಏನು ತಾರತಮ್ಯವಾಗಿದೆ, ಮೊನ್ನೆ ಕೂಡ ಈ ಅಧಿವೇಶನ ಆರಂಭವಾದಾಗ ಸರಿಪಡಿಸುತ್ತೇವೆಂದು ಭರವಸೆ ಕೊಟ್ಟಿದ್ದರು. ನಿನ್ನೆ

ಒಂದು ಪಟ್ಟಿ ಬಂದಿದೆ, ಅದರಲ್ಲಿಯೂ ನಮ್ಮದು ಇದೇ ಗೋಳು. ಒಂದು ಪಿಯು ಕಾಲೇಜ್ ಕೊಟ್ಟಿಲ್ಲ. ರಾಜ್ಯದ ಇತರೆಡೆಗೆ ಪಿಯು ಕಾಲೇಜ್ ಕೊಡುವುದಕ್ಕಾಗುತ್ತದೆ, ನಮ್ಮ ಕ್ಷೇತ್ರದಲ್ಲಿ ಒಂದು ಪಿಯು ಕಾಲೇಜ್ ಕೊಡಲಿಕ್ಕೆ ಆಗುವುದಿಲ್ಲವೆಂದರೆ ಏನು ನ್ಯಾಯ ಸ್ವಾಮಿ? ಹೀಗಾಗಿ ಶಿಕ್ಷಣದಲ್ಲಿ ಈ ರೀತಿ ಮಾಡುವುದು ಸರಿಯಲ್ಲ ಎನ್ನುವ ಮಾತನ್ನು ಹೇಳುತ್ತಾ, ವಿಶೇಷವಾಗಿ ಮೂಲಭೂತ ಸೌಲಭ್ಯಗಳ ಬಗ್ಗೆ ಹೇಳಬೇಕಾಗಿದೆ. ಏಕೆಂದರೆ, ಮೂಲಭೂತ ಸೌಲಭ್ಯಗಳಿಗಾಗಿಯೇ ಒಂದು ಇಲಾಖೆಯಿದೆ. Infrastructure Development ಎಂದು ಇದೆ. ಈಗಾಗಲೇ ಮಾನ್ಯ ದೇಶಪಾಂಡೆಯವರು ಕೆಲವೊಂದು ಅಂಶಗಳನ್ನು ಅದರಲ್ಲಿ ಟಚ್ ಮಾಡಿದರು, ಉಳಿದಂಥ ಕೆಲವು ಅಂಶಗಳನ್ನು ಟಚ್ ಮಾಡಲಿಕ್ಕೆ ಬಯಸುತ್ತೇನೆ. ಬೆಂಗಳೂರು ಯಾವ ವೇಗದಲ್ಲಿ ಇವತ್ತು ಬೆಳೆಯುತ್ತಿದೆ ಎಂದರೆ ನಮ್ಮ ಎಲ್ಲಾ ನಿರೀಕ್ಷೆಗೂ ಮೀರಿ ಬೆಳೆಯುತ್ತಿದೆ. ಯಾವ ರೀತಿ ನಾವು ಈ ಬೆಂಗಳೂರನ್ನು ನಡೆಸಿಕೊಂಡು ಹೋಗುತ್ತಿರುವುದನ್ನು ಸ್ವಲ್ಪ ಅವಲೋಕಿಸದರೆ ನಿಜವಾಗಲೂ it is a disiaster in waiting. ಈಗಾಗಲೇ ಮಳೆಗಾಲದಲ್ಲಿ disaster ಆಗುತ್ತಿದೆ. ಇಲ್ಲಿ ಬರುವ ಬಂಡವಾಳ ಹೂಡಿಕೆದಾರರು, ಇತರರು, ಬೆಂಗಳೂರು ಬಿಟ್ಟು ಬೇರೆ ಕಡೆಗೆ ಹೋಗುತ್ತಿದ್ದಾರೆ. ಆದರೆ ಮುಂದೆ Bangalore is going to get choked. ಇದು ಒಂದು halt ಆಗಿ ಬಿಡುತ್ತದೆ, It will come to halt. ಅಂಥ ಪರಿಸ್ಥಿತಿಗೆ ನಾವು ಹೋಗುತ್ತಿದ್ದೇವೆ. ಒಂದು ಸಣ್ಣ ಉದಾಹರಣೆ ಹೇಳುವುದಾದರೆ, ಇವತ್ತು ಬೆಂಗಳೂರಿನಲ್ಲಿ ಸಂಚಾರ ವ್ಯವಸ್ಥೆ ಯಾವ ಮಟ್ಟಕ್ಕೆ ಬಂದಿದೆ ಎನ್ನುವುದನ್ನು ನಾವೆಲ್ಲರೂ ಅನುಭವಿಸುತ್ತೇವೆ. ಬೆಂಗಳೂರಿನಲ್ಲಿ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗಬೇಕಾದರೆ, ಎಷ್ಟು ಕಷ್ಟಕರವಾದ ಪರಿಸ್ಥಿತಿ ಇದೆ. ತಮ್ಮ ದೂರಾಲೋಚನೆ ಎಲ್ಲಿ ಹೋಗಿದೆ ಸ್ವಾಮಿ ? ನಮ್ಮ ಬೆಂಗಳೂರು ಬೆಳೆಯುತ್ತಿದೆ ಎನ್ನುವುದನ್ನು ನೋಡುತ್ತಿದ್ದೇವೆ, ಮಾಡುತ್ತಿದ್ದೇವೆ, ಈಗಾಗಲೇ ಕೃಷಿಯ ಬಗ್ಗೆ ಮಾತನಾಡುವಾಗ ಹೇಳಿದೆ. ಏನಿದ್ದರೂ ನಾವು ಆ ಚೌಕಟ್ಟಿನೊಳಗೆ ಯೋಚಿಸುತ್ತೇವೆಯೇ ಹೊರತು ಆ ಚೌಕಟ್ಟು ಬಿಟ್ಟು ಹೇಗೆ ಬೆಂಗಳೂರಿನಲ್ಲಿ ಸೌಲಭ್ಯಗಳನ್ನು ಅಭಿವೃದ್ಧಿಡಿಸಬೇಕಾದರೆ, ಸಂಚಾರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬೇಕಾದರೆ, ಏನು ಮಾಡಬೇಕು ಎಂಬುದರ ಬಗ್ಗೆ ನಿಜವಾಗಲೂ ಯಾರು ಚಿಂತಿಸುತ್ತಿಲ್ಲ. ನಾನು ಇವತ್ತು ಗೃಹ ಮಂತ್ರಿಗಳಿಗೆ ಬೆಂಗಳೂರು ಸಂಚಾರದ ಬಗ್ಗೆ ಒಂದು ಪ್ರಶ್ನೆ ಹಾಕಿದ್ದೆ. ಬೆಂಗಳೂರು ಸಂಚಾರ ಇಷ್ಟು ದುಸ್ಥಿತಿಗೆ ಬಂದಿದೆ, ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗಬೇಕಾದರೆ ಸಾಕು ಸಾಕಾಗಿ ಹೋಗುತ್ತದೆ. ಇದರ ಬಗ್ಗೆ ಏನಾದರೂ ಯೋಚನೆ ಮಾಡಿ, ಮುಂದಿನ ದೂರ ದೃಷ್ಟಿಯಿಂದ ಇದನ್ನು ಸುಧಾರಿಸುವುದಕ್ಕೆ ಏನಾದರೂ ಕಾರ್ಯಕ್ರಮ

ಹಾಕಿ ಕೊಂಡಿದ್ದೀರಾ ? ಉತ್ತರಗಳ ಕಡತವನ್ನು ನೋಡಿದರೆ ಅದರಲ್ಲಿ ಈ ಉತ್ತರ ಬಂದಿಲ್ಲ. ಹೀಗಾಗಿ ಸರ್ಕಾರದ ಯೋಚನೆ ಏನು ಇದೆ ಎಂಬುದು ಸಹ ನಮಗೆ ಗೊತ್ತಿಲ್ಲ. ನಾನು ಅವರಿಗೆ ಸಲಹೆ ಮಾಡುವುದು, ಬೆಂಗಳೂರು ಸಂಚಾರಕ್ಕೆ ಸೀಮಿತವಾಗಿ ಒಂದು ಸಲಹೆ ಕೊಡುತ್ತೇನೆ. ಬೆಂಗಳೂರು ಎಲ್ಲಾ ಕಡೆ ಕೆಡುತ್ತಿದೆ, ಅದು ಬೇರೆ ವಿಷಯ, ಸಂಚಾರಕ್ಕೆ ಸೀಮಿತವಾಗಿ ಹೇಳುವುದಾದರೆ, ಇದಕ್ಕೆ ಸಪರೇಟಾಗಿ ಟಾಸ್ಕ್ ಫೋರ್ಸ್‌ನ್ನು ಮಾಡಿ. ಈಗ ಏನಾಗಿದೆ, ಪೊಲೀಸ್‌ನವರಿಗೆ ಜವಾಬ್ದಾರಿ ಇದೆ. ಸಂಚಾರಿ ಪೊಲೀಸ್‌ನವರು ಸಂಚಾರಿ ಕಾನೂನನ್ನು ಅಲ್ಲಿ ಅಳವಡಿಸುವುದು ಅವರ ಜವಾಬ್ದಾರಿಯೇ ಹೊರತು ಸಂಚಾರಿ ವ್ಯವಸ್ಥೆಯನ್ನು ಪ್ಲಾನ್ ಮಾಡತಕ್ಕಂಥ ಕೆಪಾಸಿಟಿ ಅವರಿಗಿಲ್ಲ. ಅಥವಾ ನಾವು ಅವರಿಗೆ ಯಾವತ್ತು mandate ಕೊಟ್ಟಿಲ್ಲ. ಆದರೆ, ಇವತ್ತಿನ ಪರಿಸ್ಥಿತಿಯಲ್ಲಿ ಸಂಚಾರದ ಬಗ್ಗೆಯೇ ನಾವು ಆಲೋಚನೆ ಮಾಡುವ ಅವಶ್ಯಕತೆಯಿದೆ. ಹೀಗಾಗಿ multi disciplinary approach ತೆಗೆದುಕೊಳ್ಳಿ. ಪೊಲೀಸ್‌ನವರನ್ನು ಅದರಲ್ಲಿ ಸೇರಿಸಿಕೊಳ್ಳಿ. ಕಾರ್ಪೊರೇಷನ್ ಮತ್ತು ಬಿಡಿಎ ರವರನ್ನು ಸೇರಿಸಿಕೊಳ್ಳಿ, ಎಲ್ಲದಕ್ಕಿಂತ ಮುಖ್ಯವಾಗಿ ಈ ಚೌಕಟ್ಟಿನ ಹೊರಗೆ ನಾವು ಯೋಚಿಸಬೇಕಾದರೆ ಉತ್ತಮವಾದ, ನಮ್ಮ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ consultants ನ್ನು ತಾವು hire ಮಾಡಿ. ಇಲ್ಲವೆಂದರೆ, ನಮ್ಮ ಪೊಲೀಸ್‌ನವರಿಗೆ ಹೇಳಿದರೆ ಅವರು ಅದೇ ತಂದೆ ಹಾಕಿದ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು ಇಟ್ಟು ಅವರು ಅಷ್ಟನ್ನೇ ಯೋಚನೆ ಮಾಡುವುದು ಆಗುತ್ತದೆಯೇ ಹೊರತು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅವರಿಂದ ಆಗುವುದಿಲ್ಲ. ಒಬ್ಬ ಹಿರಿಯ ಸಂಚಾರಿ ಪೊಲೀಸ್ ಅಧಿಕಾರಿ ನನ್ನ ಹತ್ತಿರ ಮಾತನಾಡುತ್ತಿರುವಾಗ ಖಾಸಗಿಯಾಗಿ ಒಂದು ಮಾತನ್ನು ಹೇಳಿದರು. ಅದೇನೆಂದರೆ, ನಮಗೆ ಯಾವತ್ತೂ ಕೂಡ ಈ ರೀತಿಯಾದ mandate ಇರಲಿಲ್ಲ. ಸಂಚಾರಿ ವ್ಯವಸ್ಥೆಯನ್ನು ಡಿಸೈನ್ ಮಾಡತಕ್ಕಂಥದ್ದು ನಮ್ಮ ಜವಾಬ್ದಾರಿಯಲ್ಲ. We don't have technical capacity to do it ಎಂದು ಅವರೇ ಹೇಳಿದರು. ಆದ್ದರಿಂದ, ನಾನು ಹೇಳುವುದೇನೆಂದರೆ, ಎಲ್ಲರನ್ನು ಕರೆಸಿ ಅವರಿಂದ multi disciplinary approach ತೆಗೆದುಕೊಂಡು ಅದಕ್ಕೆ separate ಆಗಿ ಒಂದು ಸಂಸ್ಥೆಯನ್ನು ಮಾಡಿ ಬೆಂಗಳೂರಿನಲ್ಲಿರುವ ಸಂಚಾರದ ವ್ಯವಸ್ಥೆಯನ್ನು ಸುಗಮವಾಗಿ ಮಾಡುವುದಕ್ಕೆ ಇದರಿಂದ ಏನಾದರೂ ಸಾಧನೆಯಾಗಬಹುದೆಂಬ ಮಾತನ್ನು ಹೇಳುತ್ತಾ ಇದರ ಜೊತೆಗೆ ಮೂಲಭೂತ ಸೌಕರ್ಯಗಳ ಬಗ್ಗೆ ಮಾತನಾಡುವುದಕ್ಕೆ ಬಯಸುತ್ತೇನೆ. International Airport ಬಗ್ಗೆ ಇವತ್ತಿನ ದಿವಸ ಪ್ರಶ್ನೆ ಕೇಳಿದ್ದೆ. ನಮ್ಮ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇವತ್ತಿನ ದಿವಸ ಎಷ್ಟು ಜನ ಪ್ಯಾಸೆಂಜರ್ ಉಪಯೋಗ ಮಾಡಿದ್ದಾರೆಂದು ಕೇಳಿದ್ದೆ. ಇವತ್ತು infrastrucuture Department ನವರು

ವಾರ್ಷಿಕ ವರದಿಯನ್ನು ಕೊಟ್ಟಿದ್ದಾರೆ. ಅವರು ಕೊಟ್ಟಿರುವ ವರದಿಯಲ್ಲಿ ಒಂದು ವಾಕ್ಯವನ್ನು ಓದಿ ಹೇಳುತ್ತೇನೆ. BIAL under took redesign of the initial phase of Airport project by enhancing capacity from 4 million passengers. ಅಂದರೆ, initial ಆಗಿ 4 ಮಿಲಿಯನ್ ಪ್ಯಾಸೆಂಜರ್‌ಗೆ BIAL ಡಿಸೈನ್ ಮಾಡಲಾಗಿತ್ತು. ನಂತರ it was increased to 8.4 million passengers expected by year 2010. Infrastructure Department ಅಂದಾಜಿನ ಪ್ರಕಾರ 8.4 ಮಿಲಿಯನ್ ಪ್ಯಾಸೆಂಜರ್ಸ್ ಅನ್ನು 2010ನೇ ಇಸವಿಗೆ ಇವರು ನಿರೀಕ್ಷೆ ಮಾಡಿದ್ದರು. With marginal additional investment on the Airside facilities capacity could be increased to 11.4 million passengers, which is expected by 2015, 2015ನೇ ಇಸವಿಗೆ ಇವರ ನಿರೀಕ್ಷೆ ಏನು ಎಂಬುದರ ಬಗ್ಗೆ ಈ ಸಾರಿ ಅಧಿವೇಶನದಲ್ಲಿ ಅವರು ಕೊಟ್ಟಿರತಕ್ಕಂಥ ವರದಿ. Infrastructure Departmentನ ನಿರೀಕ್ಷೆ ಪ್ರಕಾರ 2015ನೇ ಇಸವಿಗೆ 11.4 ಮಿಲಿಯನ್ ಪ್ಯಾಸೆಂಜರ್ಸ್ ಅನ್ನು ನಿರೀಕ್ಷೆ ಮಾಡುತ್ತಿದ್ದಾರೆ. ಈ ವಿಷಯಕ್ಕೆ ಸಂಬಂಧಿಪಟ್ಟಂತೆ ನಾನು ಈ ಸಾರಿಯ ಅಧಿವೇಶನದಲ್ಲಿ ಒಂದು ಪ್ರಶ್ನೆಯನ್ನು ಸಹ ಕೇಳಿದ್ದೆ. ಆ ಪ್ರಶ್ನೆಗೆ ಇವತ್ತು ಉತ್ತರ ಕೊಟ್ಟಿದ್ದಾರೆ. ಉತ್ತರದಲ್ಲಿ ಏನು ಹೇಳಿದ್ದಾರೆಂದರೆ, 2006-07ನೇ ಸಾಲಿನಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಎಷ್ಟು ಜನ ಪ್ಯಾಸೆಂಜರ್ ಉಪಯೋಗಿಸಿದ್ದಾರೆ ಎಂಬ ಪ್ರಶ್ನೆಗೆ ಸರ್ಕಾರದಿಂದ ಬಂದಿರುವ ಉತ್ತರ ಏನೆಂದರೆ, 81,24,983 ಜನ ಪ್ಯಾಸೆಂಜರ್ ಎಂದು ಹೇಳಿದ್ದಾರೆ. ಅಂದರೆ, 8.1 million passengers have already used International Airport, Bangalore. ನನ್ನ ವಿಷಯುವನ್ನು ತಾವು ಅರ್ಥಮಾಡಿಕೊಂಡಿದ್ದೀರೆಂದು ನಾನು ಭಾವಿಸಿಕೊಂಡಿದ್ದೇನೆ. ಇವರು 2010ನೇ ಇಸವಿಗೆ 8.4 ಮಿಲಿಯನ್ ಪ್ಯಾಸೆಂಜರ್ಸ್‌ನ್ನು ನಿರೀಕ್ಷೆ ಮಾಡಿದ್ದರು. ಕಳೆದ ವರ್ಷ ಅಂದರೆ, 2006-07ನೇ ಸಾಲಿನಲ್ಲಿ ಈಗಾಗಲೇ ಅವರ ನಿರೀಕ್ಷೆಯನ್ನು ಮೀರಿ ಇವತ್ತು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಪ್ಯಾಸೆಂಜರ್ಸ್ ಉಪಯೋಗಿಸಿಕೊಂಡಿದ್ದಾರೆ. ಮತ್ತೆ 2005-06 ಮತ್ತು 2006-07ನೇ ಸಾಲಿನಲ್ಲಿ ಪ್ಯಾಸೆಂಜರ್ ಟ್ರಾಫಿಕ್ growth ಎಷ್ಟೆಂದು ಕೇಳಿದ್ದಕ್ಕೆ ಶೇಕಡ 44ರಷ್ಟೆಂದು ಉತ್ತರ ಕೊಟ್ಟಿದ್ದಾರೆ. 2006-07ನೇ ಸಾಲಿನಲ್ಲಿ 8.1 ಮಿಲಿಯನ್ ಪ್ಯಾಸೆಂಜರ್ಸ್ ಉಪಯೋಗಿಸಿಕೊಂಡಿರುವ ಬಗ್ಗೆ ಹೇಳಲಾಗಿದೆ. ಮತ್ತೆ 2007-08ನೇ ಸಾಲಿನಲ್ಲಿ Conservative estimate ಪ್ರಕಾರ 44% ನಷ್ಟು ಎಂದು ಹೇಳಿದ್ದಾರೆ. ಆದರೆ, ಹಾಲಿ ವರ್ಷವೇ 11.6 million passengers will be using Bangalore Airport. ಆದರೆ, ಇವರ ನಿರೀಕ್ಷೆ ಏನಿದೆ ಎಂದರೆ, 2015ನೇ ಇಸವಿಗೆ 11.4

ಮಿಲಿಯನ್ ಪ್ಯಾಸೆಂಜರ್ ಉಪಯೋಗಿಸುತ್ತಾರೆಂದು ಅವರು ಕೊಟ್ಟಿರುವ ವರದಿಯಲ್ಲಿದೆ. ಆದರೆ, ಇವತ್ತಿನ ದಿವಸ ನನಗೆ ಕೊಟ್ಟಿರುವ ಉತ್ತರದಲ್ಲಿ ಏನು ಹೇಳಿದ್ದಾರೆಂದರೆ, ಅವರು ಕೊಟ್ಟಿರುವ ಉತ್ತರದ ಪ್ರಕಾರ ನಾನು 44% ಲೆಕ್ಕ ಹಾಕಿ ನೋಡಿದರೆ, ಈ ವರ್ಷದ ಕೊನೆಗೆ 11.6 million passengers would have used Bangalore International Airport. ಅದಕ್ಕೆ ಸಂಬಂಧಪಟ್ಟಂತೆ ನಾನು ಇವತ್ತು ಒಂದು ಪ್ರಶ್ನೆಯನ್ನು ಕೇಳಿದ್ದೆ. ಅದೇನೆಂದರೆ, ಇಂಥ ಬೃಹತ್ Infrastructures project ಗಳನ್ನು ಹಾಕಿಕೊಳ್ಳುವಾಗ 20–30 ವರ್ಷಗಳ ದೂರದೃಷ್ಟಿ ಇಟ್ಟುಕೊಂಡು ಮಾಡಬೇಕಲ್ಲವೇ ಎನ್ನತಕ್ಕಂಥ ಪ್ರಶ್ನೆಯನ್ನು ನಾನು ಕೇಳಿದ್ದೆ. ಇದಕ್ಕೆ ಉತ್ತರದಲ್ಲಿ ಏನು ಹೇಳಿದ್ದಾರೆಂದರೆ, ವಿಮಾನ ನಿಲ್ದಾಣದಂಥ ಬೃಹತ್ ಮೂಲಭೂತ ಸೌಕರ್ಯ ಯೋಜನೆಗಳಿಗೆ ಸಾಮಾನ್ಯವಾಗಿ 20 ರಿಂದ 30 ವರ್ಷಗಳ ಅವಶ್ಯಕತೆಗೆ ಅನುಗುಣವಾಗಿ ಸಮಗ್ರ ಅಭಿವೃದ್ಧಿ ರೂಪರೇಷೆಗಳಿಗೆ ತಕ್ಕಂತೆ ಮಾಸ್ಟರ್ ಪ್ಲಾನ್ ತಯಾರಿಸಿ ಯೋಜನೆಯನ್ನು ಹಂತ ಹಂತವಾಗಿ ಕಾರ್ಯ ನಿರ್ವಹಿಸಲಾಗುವುದೆಂದು ಹೇಳಿದ್ದಾರೆ. ನಿಮ್ಮ 20 ರಿಂದ 30 ವರ್ಷದ ದೂರದೃಷ್ಟಿ ಯೋಜನೆ ಎಲ್ಲಿ ಸ್ವಾಮಿ ? ಮಾಸ್ಟರ್ ಪ್ಲಾನ್ ಎಲ್ಲಿದೆ ? 2ನೇ ತಾರೀಖು ಏಪ್ರಿಲ್ 2008ಕ್ಕೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಾರ್ಯ ಆರಂಭವಾಗುತ್ತದೆಂದು ಹೇಳಿರುವ ವಿಷಯ ಒಂದು ವರ್ಷದಿಂದ ಪತ್ರಿಕೆಗಳಲ್ಲಿ ಸಾಕಷ್ಟು ವರದಿಯಾಗುತ್ತಿದೆ. ಆದರೆ, ನಾನು ಚಾಲೆಂಜ್ ಮಾಡುವುದೇನೆಂದರೆ, passenger traffic from Bangalore Airport will be more than 12 million passengers. ಆದರೆ, ಅದರ ಕೆಪಾಸಿಟಿ ಕೇವಲ 11.5 million passengers. ಈಗ ಕಟ್ಟುತ್ತಿರುವ ವಿಮಾನ ನಿಲ್ದಾಣ ಪ್ರಾರಂಭವಾಗುವಷ್ಟರೊಳಗೆ ಕೆಪಾಸಿಟಿಗಿಂಥ ಹೆಚ್ಚು ಪ್ಯಾಸೆಂಜರ್ಸ್ ಡಿಮ್ಯಾಂಡ್ ಆಗುತ್ತದೆ. ಮತ್ತೆ ಇದರಲ್ಲಿ ಏನು ಹೇಳುತ್ತಾರೆಂದರೆ, International Air services are also reported to be seeking reciprocal arrangements to increase their flights and they have been held back due to inadequate support system. ಈಗ ಇರತಕ್ಕಂಥ ಹಾಲಿ ಏರ್‌ಪೋರ್ಟ್‌ನಲ್ಲೆಂದು ಹೇಳಿದ್ದಾರೆ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 1/3 ಕೆಪಾಸಿಟಿಯಷ್ಟು ಅಡಿಷನಲ್ ಡಿಮ್ಯಾಂಡ್ ಇವತ್ತಿನ ದಿವಸ ಇದೆ. ನಮ್ಮಲ್ಲಿ ಯಾವ ರೀತಿಯಾದ ದೂರದೃಷ್ಟಿ ಇಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆಂದರೆ, ಇದಕ್ಕಿಂಥ ನಿದರ್ಶನ ಇನ್ನೊಂದು ಬೇಕಾಗಿಲ್ಲವೆಂದು ನನಗೆ ಕಾಣುತ್ತದೆ.. ಇದಕ್ಕೆ ಪೂರಕವಾಗಿ ನನ್ನ ಹತ್ತಿರ ಸಾಕಷ್ಟು ಅಂಕಿ–ಅಂಶಗಳಿವೆ, ಅದನ್ನು ನಾನು ಕೊಡಬಹುದು. ಅವರು ಇನ್ನೊಂದು ಟರ್ಮಿನಲ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ, ಈಗ ಕಟ್ಟುತ್ತಿರುವ ಏರ್‌ಪೋರ್ಟ್ ಪ್ರಾರಂಭವಾಗುವುದಕ್ಕಿಂಥ ಮೊದಲೇ ಅದರ ಕೆಪಾಸಿಟಿ

ಸಾಕಾಗುವುದಿಲ್ಲವೆಂದರೆ ನಾವು ಎಷ್ಟರಮಟ್ಟಿಗೆ ಮೂಲಭೂತ ಸೌಕರ್ಯಗಳನ್ನು ದೂರದೃಷ್ಟಿ ಇಟ್ಟುಕೊಂಡು ನಮ್ಮ ರಾಜ್ಯದಲ್ಲಿ ನಿರ್ವಹಿಸುತ್ತಿದ್ದೇವೆ ಎನ್ನತಕ್ಕಂಥದ್ದಕ್ಕೆ ಇದಕ್ಕಿಂಥ ಬೇರೆ ನಿದರ್ಶನ ಬೇಕಾಗಿಲ್ಲ. ನೀರಾವರಿಗೂ ಸಹ ಇದೇ ಅನ್ವಯಿಸುತ್ತದೆ. ಆಂಧ್ರಪ್ರದೇಶದವರು 14 ಸಾವಿರ ಕೋಟಿ ರೂಪಾಯಿ ಕೊಟ್ಟರೆ ನಾವು 3145 ಕೋಟಿ ರೂಪಾಯಿ ಕೊಡುತ್ತಿದ್ದೇವೆ. ಇದು ನಾವು ಮೂಲಭೂತ ಸೌಲಭ್ಯಗಳಿಗೆ ಕೊಡುತ್ತಿರುವ ಆದ್ಯತೆ. ಇಷ್ಟೆಲ್ಲಾ ಹೇಳುತ್ತಾ ಮುಖ್ಯವಾದ ಸಾರಾಂಶ ಏನೆಂದರೆ, ನಮಗೆ ಇವತ್ತಿನ ದಿವಸ ದೂರದೃಷ್ಟಿ ಇಲ್ಲ. ಹಿಂದೆ ಏನು ಮಾಡಿಕೊಂಡು ಬಂದಿದ್ದಾರೆಯೋ ಆ ಒಂದು ಚೌಕಟ್ಟಿನೊಳಗೆ ಅಂದರೆ, within the box ನಮ್ಮ ಯೋಚನಾ ಶಕ್ತಿಯಲ್ಲಾ ಅದರೊಳಗೆ ಸೀಮಿತವಾಗಿದೆ. ಹಿಂದಿನ ಸರ್ಕಾರ 10 ಹಾಸ್ಟೆಲ್ ಕೊಟ್ಟರೆ ನಾನು 20 ಕೊಡುವುದು, ಹಿಂದಿನ ಸರ್ಕಾರ ಹೈಸ್ಕೂಲ್ ಮತ್ತು ಎತ್ತಿನಗಾಡಿ ಇಷ್ಟು ಕೊಟ್ಟರೆ ನಾನು ಅಷ್ಟು ಕೊಟ್ಟಿದ್ದೇವೆಂದು ಹೇಳುವುದರಲ್ಲಿಯೇ ಕಾಲ ಕಳೆಯುತ್ತಿದ್ದೇವೆಯೇ ಹೊರತು ನಿಜವಾಗಿ ಮೂಲಭೂತ ಸೌಕರ್ಯಗಳ ಬಗ್ಗೆಯಾಗಲಿ ಅಥವಾ ರೈತರ ಸಮಸ್ಯೆಗಳ ಬಗ್ಗೆಯಾಗಲಿ ನಮ್ಮ ಸಮಯವನ್ನು ಸ್ವಲ್ಪ ಮುಡುಪಾಗಿಟ್ಟು ಚಿಂತನೆ ಮಾಡಿ ಆ ಸಮಸ್ಯೆಗಳನ್ನು ಬಗೆಹರಿಸತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತಿಲ್ಲ. ರೈತರ ಬಗ್ಗೆ ಕಮಿಟ್‌ಮೆಂಟ್ ಇರಬಹುದು, ರೈತರ ಬಗ್ಗೆ ಕಮಿಟ್‌ಮೆಂಟ್ ಇದ್ದರೆ ಅದನ್ನು ಬಗೆಹರಿಸುವಂಥ ದಿಕ್ಕಿನಲ್ಲಿ ತಾವೇನು ಮಾಡಿಲ್ಲ. ತಮ್ಮ ಸಮಾಧಾನಕ್ಕೋಸ್ಕರ ತಾವು ಏನೋ ಸ್ವಲ್ಪ ಹಣ ಜಾಸ್ತಿ ಕೊಟ್ಟುಕೊಂಡಿರಬಹುದಷ್ಟೆ ಹೊರತು ಮತ್ತೆ ನೀವು ಕೊಟ್ಟಿರುವಂಥ ಹಣದಿಂದ ಕೂಡ ಸಮಸ್ಯೆಯೇನು ಬಗೆಹರಿಯುವುದಿಲ್ಲ. ಎಲ್ಲಿಯವರೆಗೆ ನಾವು ದೂರದೃಷ್ಟಿ ಇಟ್ಟುಕೊಂಡು ಕೆಲಸ ಮಾಡುವುದಿಲ್ಲವೋ ಈ ಸಮಸ್ಯೆಗಳು ಬಗೆಹರಿಯುವುದಿಲ್ಲವೆಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಅಗ್ಗದ ಪ್ರಚಾರಕ್ಕೋಸ್ಕರ ಈ ಬೇಡಿಕೆಗಳನ್ನೆಲ್ಲಾ ತಂದಿಟ್ಟಿದ್ದಾರೆ. ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಬರತಕ್ಕಂಥ ನಮ್ಮ ಆದಾಯಕ್ಕೆ ಈ ಅಗ್ಗದ ಪ್ರಚಾರದಿಂದ ಬರತಕ್ಕಂಥ ಆದಾಯಕ್ಕೆ ಹೊಡೆತ ಬೀಳುತ್ತದೆ. ಆದ್ದರಿಂದ, ರಾಜ್ಯದ ಹಿತದೃಷ್ಟಿಯಿಂದ ತಂದಿರತಕ್ಕಂಥ ಬೇಡಿಕೆಗಳಲ್ಲ. ರಾಜ್ಯಕ್ಕೆ ಇದರಿಂದ ಅನುಕೂಲವಾಗುವುದಿಲ್ಲ ಮತ್ತೆ ರೈತರ ಸಮಸ್ಯೆ ಕೂಡ ಬಗೆಹರಿಯುವುದಿಲ್ಲ. ಆದ್ದರಿಂದ, ಈ ಬೇಡಿಕೆಗಳನ್ನು ನಾವು ಧಿಕ್ಕರಿಸಬೇಕಾಗುತ್ತದೆ ಮತ್ತು ಇದಕ್ಕೆ ನಮ್ಮ ಸಹಕಾರವನ್ನು ಕೊಡಲಿಕ್ಕೆ ಸಾಧ್ಯವಿಲ್ಲವೆಂಬ ಮಾತನ್ನು ಹೇಳಿ ಇಷ್ಟು ಸಮಯಾವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.